ವಿತ್ತೀಯ ಕಾರ್ಯಕಲಾಪಗಳು

೧೯೮೮-೮೯ನೇ ಸಾಲಿನ ಬೇಡಿಕೆಗಳ ಮಂಡನೆ ಮತ್ತು ಚರ್ಚೆ

ಬೇಡಿಕೆಗಳ ಕ್ರ. ಸ. ೧೭—, ೧೮—, ೧೯—, ೨೦—, ೨೨—, ೩೯—, ೪೦—, ೪೧—, ೪೨—, ೪೩—, ೨೭—, ೫೩— ವರಮಾನ ತೆರಿಗೆ, ವೃತ್ತಿಗಳು, ವ್ಯಾಪಾರ ಮತ್ತು ಇತರ ಸೇವೆಗಳು ವಿಮೆ, ಖಜಾನೆ ಮತ್ತು ಲೆಕ್ಕ ಇಲಾಖೆಗಳ ಆಡಳಿತ ವಿಶ್ರಾಂತಿ ವೇತನ ಮತ್ತಿತರ ನಿವೃತ್ತಿ ಸೌಲಭ್ಯಗಳು ಸರ್ಕಾರಿ ನೌಕರರಿಗೆ ಸಾಲಗಳು ಮತ್ತು ವಿವಿಧ ಸಾಲಗಳು ಇತರ ವಿವಿಧ ಸೇವೆಗಳು ಚುನಾವಣೆಗಳು ರಾಜ್ಯಪಾಲರು, ಮಂತ್ರಿಗಳು ಮತ್ತು ಲೋಕಸೇವಾ ಆಯೋಗ ಸಚಿವಾಲಯ ಜಿಲ್ಲಾಡಳಿತ ಮುಖ್ಯಮಂತ್ರಿಯವರ ವಿವಿಧ ಅಭಿಯೋಜನೆ ಪೊಲೀಸ್ ಮತ್ತು ಅಗ್ನಿ ಶಾಮಕ ಸೇವೆ ವಕ್ಫ್

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರ ಮಂತ್ರಿಯವರು).—ಅಧ್ಯಕ್ಷರೇ, "ರಾಜ್ಯಪಾಲರ ಶಿಫಾರಸಿನ ಮೇರೆಗೆ ೩೧-೩-೧೯೮೯ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಯವರಿಗೆ ಸೇರಿದ ಅಭಿಯೋಜನೆ ಕ್ರಮಾಂಕ ೧೭, ೧೮, ೧೯ ೨೦, ೨೨, ೩೯, ೪೦, ೪೧, ೪೨. ೪೩, ೨೭, ಮತ್ತು ೫೩ಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ಬಂಡವಾಳ ಖಾತೆಯಲ್ಲಿ ನಮೂದಾದ ಮೊತ್ತ ಮತ್ತು ಲೇಖಾನು ದಾನದದ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು ಮಂಡಿಸಲು ನಾನು ಬಿನ್ನವಿಸಿ ಕೊಳ್ಳುತ್ತೇನೆ."

ಪ್ರಸ್ತಾವಗಳನ್ನು ಮಂಡಿಸಲಾಯಿತು.

ಅಧ್ಯಕ್ಷರು.—ಬೇಡಿಕೆಗಳನ್ನು ಮಂಡಿಸಲಾಯಿತು. ಈಗ ಚರ್ಚೆ ವಿರೋಧ ಪಕ್ಷದ ನಾಯಕಿಯವರು ಪ್ರಾರಂಭಮಾಡಬೇಕು.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಅಧ್ಯಕ್ಷರೇ, ಇಂದು ನನಗೆ ಕುಳಿತೇ ಮಾತನಾಡಲು ಅನುಮತಿ ನೀಡಬೇಕು.

ಅಧ್ಯಕ್ಷರು.—ಆಗಬಹುದು.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಅಧ್ಯಕ್ಷರೇ, ನಮ್ಮ ಮುಂದೆ ಮುಖ್ಯಮಂತ್ರಿಗಳಿಗೆ ಸೇರಿದ ಹಾಗೆ ೧೩ ಡಿಮಾಂಡ್‌ಗಳನ್ನು ಮಂಡಿಸಿದ್ದಾರೆ. ಮುಖ್ಯಮಂತ್ರಿಗಳು ಬರುತ್ತಾರೆಂದು ಹೇಳಿದರು. ಏನು ಕಾರಣವೋ ಬಂದಿದೆ, ಬರುತ್ತಾರೊ ಇಲ್ಲವೋ ಅದೂ ಗೊತ್ತಿಲ್ಲ. ಆದರೆ ನಮ್ಮ ಸರ್ವತ್ರಮೂರ್ತಿಯವರೇ ಇರುವುದರಿಂದ ಅವರು ಸರ್ವ ಡಿಮಾಂಡ್‌ಗಳನ್ನೂ ಆಲಿಸಿ ಅದಕ್ಕೆ ಉತ್ತರ ಕೊಟ್ಟು ತೃಪ್ತಿಪಡುತ್ತಾರೆಂದು ತಿಳಿದುಕೊಂಡಿದ್ದೇನೆ. ಇಲ್ಲಿ ಅಸೆಂಬ್ಲಿ ನಡೆಯುತ್ತಿರುವಾಗ ಅಲ್ಲಿ ಅಲಹಾಬಾದಿಗೆ ಏಕೆ ಹೋದರೋ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಕೌಂಟಿಂಗ್ ಆದ ಮೇಲೆ ಬರುತ್ತಾರೇನೋ ?

ಶ್ರೀ ಎ. ಲಕ್ಷ್ಮೀಸಾಗರ್.—ಮತಗಳೆಲ್ಲಾ ಪೆಟ್ಟಿಗೆಯಲ್ಲಿ ಭದ್ರವಾಗಿವೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಅಲ್ಲಿ ಪಾಸಾಗಲಿ, ಫೇಲಾಗಲಿ ನಮಗ್ಯಾಕೆ ಬೇಕು ? ಅಷ್ಟೊಂದು ಉತ್ಸಾಹವಾಗಲಿ ನಿರುತ್ಸಾಹವಾಗಲೀ ಬೇಕಾಗಿಲ್ಲ. ಅದರ ಬಗ್ಗೆ ನಿಮಗ್ಯಾಕೆ ಹೊಟ್ಟೆ ಕಿಚ್ಚು. ಅಧ್ಯಕ್ಷರೇ, ಈ ಮಿನಿಸ್ಟ್ರಿ ಬಂದ ಮೇಲೆ ಇದು ಸೇರಿ ಮುಖ್ಯಮಂತ್ರಿಗಳು ೬ ಬಜೆಟನ್ನು ಇಟ್ಟಿದ್ದಾರೆ. ಅವರು ಇಟ್ಟಿದ್ದು ಸರಿಯೋ ತಪ್ಪೋ, ಜಸ್ಟಿಫೈಯೋ ಅನ್‌ಜಸ್ಟಿಫೈಯೋ

ಯಾವುದನ್ನೂ ಯೋಚನೆ ಮಾಡದೆ ಅವರು ಹೋದಲ್ಲೆಲ್ಲಾ ತಾವು ಖರ್ಚು ಮಾಡುವುದನ್ನು ಎಲ್ಲರೂ ಒಪ್ಪಿಕೊಳ್ಳಬೇಕೆಂದು ಅಭಿಪ್ರಾಯ ಹೇರುವ ಕೆಲಸ ಮಾಡಿದ್ದಾರೆ. ಅದು ಕಾಂಪೆನ್‌ಸೇಷನ್ ಇರಬಹುದು, ಪಾಪ್ಯುಲಿಸ್ಟ್ ಪ್ರೋಗ್ರಾಂ ಇರಬಹುದು ಅಥವಾ ಜನೋತ್ಸವದಂಥ ಸ್ಟಂಟ್ ಪ್ರೋಗ್ರಾಂ ಇರಬಹುದು, ಏನೇ ಇದ್ದರೂ ತಾವು ಸ್ಟಂಟ್ ಮಾಡಿರುವುದಕೆಲ್ಲಾ ಅರ್ಥವಿದೆ, ಅದಕ್ಕೆ ಜನ ಒಪ್ಪಿಗೆಯಿತ್ತಿದ್ದಾರೆ, ಜನರಿಗೋಸ್ಕರವೇ ತಾವು ಸ್ಟಂಟ್ ಮಾಡಿದ್ದೀವೆಂದು ಹೇಳಿಕೊಂಡು ಬಂದಿದ್ದಾರೆ. ಅವರಲ್ಲಿ ಯಾವಾಗಲೂ ಜನರಲ್ಲಿಗೆ ಹೋಗುತ್ತೇನೆ. ಎಂದು ಹೇಳುವ ಒಂದು ನಮೂನೆಯಾದ ಇದೆ. ನಾವೂ ಸಹ ಜನಗಳ ಪ್ರತಿನಿಧಿಗಳು ಎಂದು ಅವರು ಪರಿಗಣಿಸಿದ್ದಾರೋ ಇಲ್ಲವೋ ಗೊತ್ತಿಲ್ಲ ಅನಿಸುತ್ತದೆ, ನಾವು ನಿಮ್ಮ ಮಕ್ಕಳಲ್ಲವೇ, ನಾವು ಮಾಡುವುದು ಸರಿಯಿಲ್ಲವೇ, ನಾವು ಮಾಡಿದ್ದು ನಿಮಗೋಸ್ಕರವಲ್ಲವೇ ಎಂದು ಹೇಳುತ್ತಾರೆ. ಬಹುಶಃ ಇವರೆಲ್ಲಾ ಜನಗಳ ಮಕ್ಕಳೇ ಏನೋ ? What sort of a son he is ? He is a prodingal son, aspend-thrift son. ಪ್ರೋಗ್ರಾಂ ಇಲ್ಲದೆ ಪಾಲಿಸಿ ಇಲ್ಲದೆ ಸರ್ಕಾರದ ದುಡ್ಡನ್ನು ಖರ್ಚು ಮಾಡುವ a prodigal son he is. ಏನು ತಪ್ಪು ಮಾಡಿದರೂ ಅದಕ್ಕೆಲ್ಲಾ ಎನ್‌ಕ್ವರಿ ಮಾಡಿಸುತ್ತೇನೆ, ಕಮಿಷನ್ ನೇಮಿಸುತ್ತೇನೆ ಎನ್ನುತ್ತಾರೆ. ಆರೋಪಿಗಳು ಮಕ್ಕಳಾಗಿರಲಿ, ಫ್ರೆಂಡ್ಸಾಗಿರಲಿ ಎಲ್ಲರ ಬಗ್ಗೆಯೂ ಎನ್‌ಕ್ವಯರಿ ಮಾಡಿಸುತ್ತೇನೆ ಎನ್ನುತ್ತಾರೆ. ಆ ರೀತಿ ಎನ್‌ಕ್ವರಿ ಮಾಡಿದ ಬಗ್ಗೆ ಎಷ್ಟು ರಿಪೋರ್ಟ್‌ಗಳು ಬಂದಿವೆ, ಯಾವ್ಯಾವವುದಕ್ಕೆ ಪನಿಷ್‌ಮೆಂಟ್ ಕೊಟ್ಟಿದ್ದೀರಿ, ಅದು ಏನೂ ಇಲ್ಲ, ರಿಪೋರ್ಟ್ಸ್ ಇಲ್ಲ, ಪನಿಷ್ ಮಾಡಬೇಕೆಂಬ ಉದ್ದೇಶವೂ ಇಲ್ಲ. ಅವನ್ನು ಕನ್‌ಸಿಡರ್ ಮಾಡುತ್ತಾರೋ ಡಿಸ್ ಅಲೋ ಮಾಡುತ್ತಾರೋ ಎಂಬುದು ಈ ಸಭೆಯಲ್ಲಿರತಕ್ಕ ನಮಗೆ ಒಂದೂ ಗೊತ್ತಾಗುವುದಿಲ್ಲ. ಎಲ್ಲವನ್ನೂ ವೇಸ್ಟ್ ಪೇಪರ್ ಬ್ಯಾಸ್ಕೆಟ್‌ಗೆ ಹಾಕಿಬಿಟ್ಟರು. ಸುಮ್ಮನೆ ಏಕೆ ಎನರ್ಜಿ ವೇಸ್ಟ್ ಮಾಡಬೇಕು ? ಎನ್‌ಕ್ವಯರಿ ಆಫೀಸರ್‌ಗಳಿಗೆ ಟಿ. ಎ ಡಿ. ಎ. ಎಲ್ಲಾ ಬರೀ ವೇಸ್ಟ್. ಇದೆಂಥಾ ಆಡಳಿತ ಎಂದು ನಾನು ಕೇಳುವುದಕ್ಕೆ ಬಯಸುತ್ತೇನೆ.

ಅಧ್ಯಕ್ಷರೇ.—ಫೈನಾನ್ಸ್ ವಿಚಾರವನ್ನೇ ನೋಡಿ. ಏನು ಹೇಳಲಿ. ಎಲ್ಲದರಲ್ಲೂ ಬರೀ ಮಿಸ್‌ಮ್ಯಾನೇಜ್‌ಮೆಂಟ್, ಸ್ಕೇರ್ಸಿಟಿಗೆಂದು ೨೭ ಕೋಟಿ ಬಂತು, ೬ ಕೋಟಿಗೆ ಲೆಕ್ಕ ಇಲ್ಲ, ಮಂಗಳ ಮಾಯ ಆಗಿಹೋಯ್ತು. ಎಷ್ಟೋ ಟೀಚರ್‌ಗಳಿಗೆ ಸಂಬಳ ಕೊಟ್ಟಿಲ್ಲ. ಓಲ್ಡ್ ಏಜ್ ಪೆನ್‌ಷನ್ ೫ ತಿಂಗಳಿಂದ ಕೊಟ್ಟಿಲ್ಲ. ಸ್ಟೇಟ್ ಪೂರ್ತಿ ಕಂಪ್ಲೇಂಟ್ಸ್ ಬರುತ್ತದೆ. ಇಂಡಿ ಇಂದ ಒಂದು ಕಂಪ್ಲೇಂಟ್ ಬಂದಿದೆ, ಜನವರಿ, ಫೆಬ್ರುವರಿ ಮತ್ತು ಮಾರ್ಚಿ ತಿಂಗಳ ಸಂಬಳವನ್ನು ಟೀಚರ್ಸ್‌ಗೆ ೨೯ನೇ ತಾರೀಖು ಕೊಟ್ಟಿದ್ದಾರೆ. ಮೇ ತಿಂಗಳಿದನ್ನು ಇನ್ನೂ ಕೊಟ್ಟಿಲ್ಲ. ಅಗ್ರಿಕಲ್ಚರ್ ಯೂನಿವರ್ಸಿಟಿಯಲ್ಲಿ ಅರ್ಧ ಗಿರ್ಧ ಸಂಬಳ ಕೊಡುತ್ತಿದ್ದಾರೆ. ಟ್ರೆಜರಿಗೆ ಇನ್‌ಸ್ಟ್ರಕ್ಷನ್ ಹೋಗಿದೆ. ಚೀಫ್ ಸೆಕ್ರೆಟರಿಯಿಂದ ಸ್ಪೆಷಲಾಗಿ ಇನ್‌ಸ್ಟ್ರಕ್ಷನ್ ಕೊಡುವವರಿಗೆ ಯಾವ ಚೆಕನ್ನೂ ಆನರ್ ಮಾಡಬಾರದೆಂದು. ರಾಯಚೂರು ಡಿಸ್ಟ್ರಿಕ್ಟಿನಿಂದ ಮುನಿಸಿಪಲ್ ಕಂಟ್ರಾಕ್ಟರ್ ಒಬ್ಬರು ಟ್ರೆಜರಿಗೆ ಹೋದರೆ ದುಡ್ಡು ಕೊಡಲಿಲ್ಲ. ಇದೇ ತರಹದ ಕಂಪ್ಲೇಂಟ್ ಹೆಚ್. ಡಿ. ಕೋಟೆಯಿಂದ ಬಂದಿದೆ. ಬೋರ್‌ವೆಲ್ ರಿಪೇರಿ ಮಾಡುವುದಕ್ಕೆ ಸ್ಪೇರ್ ಪಾರ್ಟ್ಸ್ ಕೊಳ್ಳುವುದಕ್ಕೆ ದುಡ್ಡಿಲ್ಲ. ಸಧ್ಯ ಈ ಸಲ ದೇವರದಯೆಯಿಂದ ಮಳೆ ಬಂತು. ಸಿಕ್ಕಾಪಟ್ಟೆ ದುಂದು ವೆಚ್ಚ ಮಾಡಿ ಬೊಕ್ಕಸವನ್ನು ಖಾಲಿ ಮಾಡಿಟ್ಟಿದ್ದಾರೆ. ಇವರು ರಿಸೋರ್ಸಸ್ ಮೊಬಿಲೈಜೇಷನ್‌ನಲ್ಲಿ ಯಾವರೀತಿ ಆಸಕ್ತಿ ತೋರಿಸಬೇಕಾಗಿತ್ತು, ಹೇಗೆ ಕರ್ತವ್ಯ ನಿರ್ವಹಿಸಲಿಲ್ಲ ಎಂಬುದನ್ನು ತೋರಿಸಲು ಪಿಎಸಿ ಮತ್ತು ಪಿ. ಎ. ಯು. ಸಿ. ರಿಪೋರ್ಟ್‌ಗಳು ಬೇಕಾದಷ್ಟು ಬಿದ್ದಿವೆ. ಯಾವುದರ ಮೇಲಾದರೂ ಕ್ರಮ ಕೈಗೊಂಡಿದ್ದಾರಾ ? ಅವನ್ನು ಓದಲು ಅವರಿಗೆ ಟೈಮೇ ಇಲ್ಲ. ಪಿಎಸಿ ಮತ್ತು ಪಿಯುಸಿ ಮೆಂಬರ್ಸ್‌ಗೆ ಬೇರೆ ಕೆಲಸ ಇಲ್ಲದೆ ಮಾಡಿದ್ದಾರೆಂದು ಕೊಂಡಿದ್ದಾರೆ. ಆ ರಿಪೋರ್ಟ್‌ಗಳ ಬಗ್ಗೆ ಯಾರಿಗೂ ನಿಗಾ ಇಲ್ಲ. ಎಕ್ಸೈಜ್ ಡಿಪಾರ್ಟ್‌ಮೆಂಟಿನಲ್ಲಿ ಇರೆಗ್ಯುಲರ್ ಮತ್ತು ಅನಾಥರೈಸ್ಡ್ ಅಕೌಂಟ್ಸಿನಿಂದ ೫೫ ಕೋಟಿ ಬಾಕಿ ನಿಂತು ಹಾಳಾಗಿದೆ ಎಂದು ವರದಿ ಬಂದಿದೆ ೩೦೦ ಕೋಟಿ ಪಬ್ಲಿಕ್ ಅಂಡರ್ ಟೇಕಿಂಗ್‌ಗಳಿಂದ ಲಾಸ್. Recovery of Government dues : Excise dues - 120 crore rupees; Sales tax dues Rs. 150 crore. About three lakh people have not been properly assessed. ಇವರಿಗೆ ಒಣ ಜಂಬ ಇದೆ. ರೆಕವರಿ ಅಷ್ಟು ಮಾಡಿದ್ದೀವೆ ಇಷ್ಟು ಮಾಡಿದ್ದೀವೆಂದು ಹೇಳಿದ್ದೇ ಹೇಳಿದ್ದು. ಮಾನ್ಯ ಸಿಂಧ್ಯರವರು ಕೇಳಬೇಕು. ಈ ಎಕ್ಸೈಸ್ ಟ್ಯಾಕ್ಸ್‌ನಲ್ಲಿ ಅಪರಧೂ ಇದೆ, ಎರಡು ಕಾಲಿನ ವಾಹನ ಮೂರು ಕಾಲಿನ ವಾಹನ ಎಲ್ಲಕ್ಕೂ ಲೈಫ್ ಟೈಮ್ ಟ್ಯಾಕ್ಸ್ ಹಾಕಿದರು. ಈ ಕಲೆಕ್ಷನ್ ಅನ್ನು ತೋರಿಸಿ ನೋಡಿ ನಾವು ಕಲೆಕ್ಟ್ ಮಾಡಿದ್ದೇವೆಂದು ಹೇಳುತ್ತೀರಿ. ಈ ಕಲೆಕ್ಷನ್ ಟಾರ್ಗೆಟ್ ಎಷ್ಟು ಎಂದರೆ...

ಶ್ರೀ ಡಿ. ಬಿ. ಇನಾಂದಾರ್.—೧೨೦ ಕೋಟಿ ರೂಪಾಯಿ ಡ್ಯೂಸ್ ಇಲ್ಲ. ಎಕ್ಸೈಸ್ ಡ್ಯೂಸ್ ಹೋದ ವರ್ಷ ಇದ್ದದ್ದು ೫೦ ಕೋಟಿ ಆನಷ್ಟು ವಸೂಲಾಗಿದೆ. ಇನ್ನು ಕೆಲವು ಕೋರ್ಟ್‌ನಲ್ಲಿ ಇದೆ, ಸುಪ್ರೀಂ ಕೋರ್ಟ್‌ನಲ್ಲಿ ಇದೆ ಅದನ್ನು ವೆಕೇಟ್ ಮಾಡಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಎಷ್ಟು ಕೇಸುಗಳು ಇವೆ ಅದರ ಮೊತ್ತ ಎಷ್ಟು ?

ಶ್ರೀ ಡಿ. ಬಿ. ಇನಾಂದಾರ್.—೩೨ ಕೋಟಿಯಷ್ಟು ಸ್ಟೇ ಇದೆ ೧೬–೧೮ ಕೋಟಿಯಷ್ಟು ರೆವಿನ್ಯೂ ರೆಕವರಿ ಮಾಡಬೇಕೆಂದು ಮಾಡಿದ್ದೇವೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಇನ್ನೂ ಆರು ತಿಂಗಳಿಗೆ ಮುಖ ನೋಡುತ್ತೇವೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಮೋಟಾರ್ ವೆಹಿಕಲ್ ಟ್ಯಾಕ್ಸ್, ಲೈಫ್ ಟೈಂ ಟ್ಯಾಕ್ಸ್ ಬಗ್ಗೆ ತಾವು ಹೇಳಿದಿರಿ. ೧೯೮೬–೮೭ ರಲ್ಲಿ ಲೈಫ್ ಟೈಂ ಟ್ಯಾಕ್ಸ್ ಅನ್ನು ಕಲೆಕ್ಟ್ ಮಾಡಿರತಕ್ಕಂಥಾದ್ದು. ೧೯೮೭–೮೮ರಲ್ಲಿ ಕಲೆಕ್ಟ್ ಮಾಡಿಲ್ಲ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಅಡ್ವಾನ್ಸ್ ಟ್ಯಾಕ್ಸ್, ಲೈಫ್ ಟೈಂ ಟ್ಯಾಕ್ಸ್ ಎಲ್ಲಾ ಸೇರಿಸಿ ರೆಕವರಿಯಾಗಿದೆ ಎಂದು ಹೇಳುತ್ತಿದ್ದಾರೆ. ಅವರ ಫಿಗರ್ಸ್ ಅನ್ನು ಹೇಳುತ್ತೇನೆ. ೧೯೮೩–೮೪ ರಲ್ಲಿ ಕಲೆಕ್ಟ್ ಆಗಬೇಕಾದದ್ದು ೩೭೪.೨೧ ಕೋಟಿ ಕಲೆಕ್ಟ್ ಆಗಿರುವುದು ೩೨೭.೭೪ ಕೋಟಿ ೧೯೮೪–೮೫ರಲ್ಲಿ ೪೪೮.೬೪ ಕೋಟಿ ಕಲೆಕ್ಟ್ ಆಗಬೇಕಾಗಿರುವುದು ಕಲೆಕ್ಟ್ ಆಗಿದ್ದು ೧೮೮.೯೯ ಕೋಟಿ, ೧೯೮೫-೮೬ರಲ್ಲಿ ಕಲೆಕ್ಟ್ ಆಗಬೇಕಾಗಿರುವುದು ೩೪೫.೪೧ ಕೋಟಿ ಕಲೆಕ್ಟ್ ಆಗಿರುವುದು ೧೬೦.೬೩ ಕೋಟಿ ೧೯೮೬-೮೭ ರಲ್ಲಿ ಕಲೆಕ್ಟ್ ಆಗಬೇಕಾಗಿರುವುದು ೫೪೬.೯೩ ಕೋಟಿ ಕಲೆಕ್ಟ್ ಆಗಿರುವುದು ೨೫೦.೩೪ ಕೋಟಿ, ೧೯೮೭–೮೮ರಲ್ಲಿ ಕಲೆಕ್ಟ್ ಆಗಬೇಕಾಗಿರುವುದು ೫೦೨.೭೪ ಕೋಟಿ ಕಲೆಕ್ಟ್ ಆಗಿರುವುದು ೩೪೯ ಕೋಟಿ. ಇದನ್ನು ತಮ್ಮಗಳ ಲೆಕ್ಕದಲ್ಲೇ ಕೊಟ್ಟಿರುವುದು. ಈ ರೀತಿ ರಿಸೋರ್ಸಸ್ ಮೊಬಿಲೈಸೇಷನ್ ಇದೆ. ಮಾನ್ಯ ಮುಖ್ಯಮಂತ್ರಿಯವರೇ ಇದನ್ನು ಅಡ್ಮಿಟ್ ಮಾಡಿಕೊಂಡಿದ್ದಾರೆ. ಇದನ್ನೆಲ್ಲಾ ಸುಧಾರಿಸದೇ ಯಾವಾಗ ನೋಡಿದರೂ ಕೂಡ ಕೇಂದ್ರದ ಕಡೆಗೆ ಬೊಟ್ಟು ಮಾಡಿ ತೋರಿಸುವುದು ಇದು ಎಲ್ಲರಿಗೂ ಹ್ಯಾಬಿಟ್ ಆಗಿ ಹೋಗಿದೆ. ಡೆಲ್ಲಿಯವರು ಹಾಗೇ ಹೀಗೆ ಯಾವಾಗಲೂ ಮಲತಾಯಿ ಧೋರಣೆ ತೋರಿಸುತ್ತಾರೆ, ಅದು ಕೊಡಲಿಲ್ಲ ಇದು ಕೊಡಲಿಲ್ಲ ಪೆಪ್ಪರ್‌ಮೆಂಟ್ ಕೊಡಲಿಲ್ಲ, ಚಾಕಲೇಟ್, ಬಿಸ್ಕತ್ ಕೊಡಲಿಲ್ಲ ಯಾವಾಗಲೂ ಇದೇ ಉಪ್ಪಕ್ಕೂ ಅವರ ಕಡೆ ತೋರಿಸುವುದು ಮಲತಾಯಿ ಧೋರಣೆ ಮಾಡುತ್ತಾರೆಂದು ಹೇಳುವುದು. ನಿಮ್ಮ ದುಡ್ಡನ್ನು ವಸೂಲಿ ಮಾಡಿಕೊಳ್ಳುವ ಶಕ್ತಿ ಇಲ್ಲ. ಅವರು ಕೊಡಲಿಲ್ಲವೆಂದು ಹೇಳುವುದು ಅವರು ಕೊಟ್ಟಿದ್ದನ್ನೆಲ್ಲಾ ಸ್ವೇಚ್ಛಾಚಾರವಾಗಿ ಖರ್ಚು ಮಾಡಿಕೊಳ್ಳುವುದು. ಹಾಸಿಗೆ ಇದಷ್ಟು ಕಾಲು ಚಾಚುವುದಕ್ಕೆ ನಿಮಗೆ ಯಾರೂ ಕಲಿಸಿಕೊಟ್ಟಿಲ್ಲ. ಇನ್ನು ಯಾವಾಗ ಇವರು ಸುಧಾರಿಸುವುದು ? ಬರೀ ಮಾತನಾಡುವುದು ಒಣ ಜಂಬ ಜನರು ಎಷ್ಟು ದಿವಸ ? ಇದನ್ನು ನಂಬಿಕೊಂಡು ಕೂತುಕೊಂಡಿರಬೇಕು ನನಗಂತೂ ಗೊತ್ತಿಲ್ಲ. ಅಭಿವೃದ್ಧಿ ಕೆಲಸದ ಕಡೆಗೆ ಸ್ವಲ್ಪ ತಿರುಗಿ ನೋಡಿದರೆ ಒಂದಾದರೂ ಅಭಿವೃದ್ಧಿ ಕೆಲಸ ನಡೆಯುತ್ತಿದೆಯೇ ಎಂದರೆ ಒಂದು ಕೂಡ ಆಗಿಲ್ಲ. ರೋಡ್ ಕೆಲಸವಾಗಲೀ, ಮನೆ, ನೀರಿನ ಕಡೆಗೋ, ಸೇತುವೆಯೋ ಇಲ್ಲವೇ ಕಾಮಗಾರಿ ಕೆಲಸವೋ ಯಾವ ಕೆಲಸ ನೋಡಿದರೂ ಕೂಡ ಸ್ಥಗಿತವಾಗಿ ಕೂತುಕೊಂಡಿದೆ. ಇದನ್ನು ಯಾವ ರೀತಿ ಸರಿ ಮಾಡುತ್ತೀರಿ. ಯಾವುದಾದರೂ ದಾರಿಯನ್ನು ನಿರ್ಮಿಸಿದ್ದೀರಾ ? ಕೇಂದ್ರ ಸರಕಾರದವರು ಕುಡಿಯುವ ನೀರಿಗೆ ೨೩.೪ ಕೋಟಿ ಕೊಟ್ಟಿದ್ದಾರೆ. ಗ್ರಾಮ ನೈರ್ಮಲ್ಯಕ್ಕೆ ೯೮.೮೮ ಕೋಟಿ, ಐ.ಆರ್.ಡಿ.ಪಿ.ಗೆ ೧೪.೨೧ ಕೋಟಿ ಎನ್.ಆರ್.ಇ.ಪಿ.ಗೆ ೧೭.೨೩ ಕೋಟಿ ಕೊಟ್ಟಿದ್ದಾರೆ. ಮತ್ತು ಬೇಕಾದಷ್ಟು ಅಕ್ಕಿ ಗೋಧಿ ಎಲ್ಲಾ ಕೊಟ್ಟಿದ್ದಾರೆ. ಅವರು ಕೊಟ್ಟಿದ್ದನ್ನು ತಿಂದುಕೊಂಡು ಅದು ಸಾಲದೇ ಅಕ್ಕಿ, ಗೋಧಿ ಎಲ್ಲವನ್ನು ಮಾರಿಕೊಂಡು ತಿನ್ನುವುದು. ಈ ರೀತಿ ನಡೆದರೆ ಕೆಲಸ ಕಾರ್ಯಗಳು ಸುಭೀಕ್ಷವಾಗಿ ನಡೆಯುವುದಕ್ಕೆ ಸಾಧ್ಯವೇ? ಇನ್ನು ಅಡ್ಮಿನಿಸ್ಟ್ರೇಷನ್ ಎಂದು ಏನು ಕರೆಯುತ್ತೇವೆ ಈ ಅಡ್ಮಿನಿಸ್ಟ್ರೇಷನ್ ಸ್ಟೇಷನ್ ವಿಚಾರ ಬಂದರೆ ಎಲ್ಲರೂ ಕೂಡ ಎದ್ದು ನಿಲ್ಲುತ್ತಾರೆ. ನಾನು ಅವತ್ತು ಮಾತನಾಡಿದಾಗ ಕುಣಿದು ಬಿಟ್ಟರು ಹಾಗೇ ಹೀಗೆ ಎಂದು ಹೇಳಿದರು. ಆದರಲ್ಲೂ ಮೊದಲು ಮಾನ್ಯ ಲಕ್ಷ್ಮೀಸಾಗರ್‌ರವರು ಎದ್ದು ಥೈ ಥೈ ಎಂದು ಕುಣಿದು ಬಿಟ್ಟರು. ಏತಕ್ಕೆ ಈ ರೀತಿ ಮಾಡುತ್ತೀರಿ ? ನಿಮ್ಮ ಮುಖ್ಯಮಂತ್ರಿಗಳೇ ದೊಡ್ಡ ದೊಡ್ಡ ಸರ್ಟಿಫಿಕೇಟನ್ನು ಕೊಟ್ಟಿದ್ದಾರೆ. My ministers are corruptly my legislators are corrupt, ಇವರೆಲ್ಲರೂ ಬ್ರಿಗೇಡ್ ರೋಡ್‌ನಲ್ಲಿ ತಿರುಗಾಡಿಕೊಂಡಿದ್ದಾರೆ, ಇವರಿಗೆ ಯಾವ ತರಹದ ಕೆಲಸವೂ ಇಲ್ಲ, ಇವರ ಕ್ಷೇತ್ರದಲ್ಲಿ ಎಂದು

ನಿಮ್ಮ ಮುಖ್ಯಮಂತ್ರಿಗಳೇ ಹೇಳಿದ್ದಾರೆ. ಆ ರೀತಿಯಲ್ಲಿ ಹೇಳಿ ದೊಡ್ಡ ಸರ್ಟಿಫಿಕೇಟನ್ನು ಕೊಟ್ಟಿರುವಾಗ ಏತಕ್ಕೆ ಕುಣಿದಾಡಬೇಕು. ನಿಮ್ಮ ಮುಖ್ಯಮಂತ್ರಿಗಳೇ ಈ ರೀತಿ ಲೆಟರನ್ನು ಕೊಟ್ಟಿರುವಾಗ ಕುಣಿದಾಡತಕ್ಕಂಥ ವಿಚಾರ ಇಲ್ಲ. ಈ ಟ್ರಾನ್ಸ್‌ಫರ್‌ಗಳಿಗೆ ಒಂದು ಮೆಥೆಡ್ ಇಲ್ಲ. ಒಂದು ರೀಜನ್ ಇಲ್ಲ ಎಲ್ಲವನ್ನು ಬಿಟ್ಟು ಟ್ರಾನ್ಸ್‌ಫರ್ ಮಾಡವುದು. ಈ ಅಡ್ಮಿನಿಸ್ಟ್ರೇಟಿವ್ ವಿಚಾರದಲ್ಲಿ ಇಂಟರ್‌ಫಿಯರೆನ್ಸ್ ಲೆಕ್ಕಾಚಾರವೇ ಇಲ್ಲ. ಯಾವುದಾದರೂ ಸಿನ್‌ಸಿಯರ್ ಆಗಿದೆಯೋ ? ಯಾರಾದರೂ ಹಾನೆಸ್ಟ್ ಆಫೀಸರ್‌ಗಳು ಸಿನ್‌ಸಿಯರ್ ಆಫೀಸರ್‌ಗಳು ಇವರಿಗೆ ಕೈಮುಗಿದು ಕೇಳಿಕೊಳ್ಳುತ್ತಾರೆ, ದಯವಾಡಿ ಕಾಪಾಡಿ ನಾವು ಹೆಲ್ಪ್‌ಲೆಸ್ ಆಗಿದ್ದೇವೆ ಎಂದು ಕೇಳಿಕೊಳ್ಳುವ ಎಷ್ಟೋ ಕಂಪ್ಲೇಂಟ್‌ಗಳು ಬಂದಿವೆ ಛೇರ್ಮನ್‌ಗಳ ಮೇಲೆ ಕಂಪ್ಲೇಂಟ್ ರೆಕ್ರೂಟ್‌ಮೆಂಟ್ ಕಮಿಟಿ ಮೇಲೆ ಕಂಪ್ಲೇಂಟ್. ಅಧಿಕಾರಿಗಳ ಮೇಲೆ ಕಂಪ್ಲೇಂಟ್. ಈ ಕಂಪ್ಲೇಂಟ್‌ಗಳನ್ನೆಲ್ಲಾ ನಾನು ಕೊಟ್ಟು ಕಳುಹಿಸಿದ್ದೇನೆ. ಬೇರೆ ಬೇರೆ ಇಲಾಖೆಗಳಿಗೆ, ಸಿ. ಎಂ, ಆಫೀಸ್‌ಗೆ ಇವುಗಳನ್ನೆಲ್ಲಾ ಕೊಟ್ಟು ಕಳುಹಿಸಿದ್ದೇನೆ. ಅದನ್ನು ಯಾರಾದರೂ ವಿಚಾರಿಸಿದ್ದೀರಾ ? ಇದರ ಬಗ್ಗೆ ವಿಚಾರಣೆಯನ್ನು ಮಾಡಿದ್ದಾರಾ ಎಂದು ಹೇಳಲಿ. ನಮ್ಮ ಮಾನ್ಯ ಮುಖ್ಯಮಂತ್ರಿಗಳ ಪೆಟ್ ಲೋಕಾಯುಕ್ತ ಏನು ಇದೆ, ಅದು ಒಂದು ರೀತಿಯಲ್ಲಿ ''ಬೆಟ್ಟ ಅಗೆದು ಇಲಿ ತೆಗೆದ ಹಾಗೆ ಇದೆ'' ಕರಪ್ಷನ್ ಎರಾಡಿಕೇಟ್ ಮಾಡುವ ಮೊದಲು ಸಿಸ್ಟಂನ್ನು ಡಿ–ಸೆಂಟ್ರಲೈಸ್ ಮಾಡಿಬಿಟ್ಟು ಮೇಯುವವರಿಗೆ ಅನುಕೂಲ ಮಾಡಿಕೊಟ್ಟಿದ್ದೀರಿ. ಈ ರೀತಿ ನೂರಾರು ಕಂಪ್ಲೇಂಟ್ಸ್. ಇವುಗಳನೆಲ್ಲಾ ಹೆಡ್ ಆಫ್ ದಿ ಡಿಪಾರ್ಟ್‌ಮೆಂಟ್ ಮತ್ತು ಸಿ. ಎಂ. ಆಫೀಸಿಗೂ ಕೂಡಾ ಕಳುಹಿಸಿದ್ದೇನೆ. ರೆಕ್ರೂಟ್‌ಮೆಂಟ್ ಪಾಲಿಸಿ It has become a mess. ೧೫೦ ಜನ ವಿಲೇಜ್ ಅಕೌಂಟೆಂಟ್‌ಗಳನ್ನು ಮೈಸೂರಿನಲ್ಲಿ ಮತ್ತು ಬೆಂಗಳೂರಿನಲ್ಲಿ ಅವರನ್ನು ಸೆಲೆಕ್ಟ್ ಮಾಡಿ ಗೆಜೆಟ್‌ನಲ್ಲಿ ಕೂಡಾ ಪ್ರಕಟಿಸಿದರು ಇಷ್ಟು ಅಪ್ಲಿಕೇಷನ್ ಅವರದೇ ನೋಡಿ ಇದು. ಯಾವಾಗ ಮಾಡುತ್ತೀರಿ ? ಇಷ್ಟನ್ನು ಕೂಡಾ ಕಳುಹಿಸಿಕೊಡುತ್ತೇನೆ. ನಮ್ಮನ್ನು ಸೆಲೆಕ್ಟ್ ಮಾಡಿದ್ದೀರಿ, ನಮ್ಮಗಳಿಗೆ ಏಜ್‌ಬಾರ್ ಆಗಿದೆ, ನಮ್ಮ ಹೊಟ್ಟೆಯ ಮೇಲೆ ಹೊಡೆಯಬೇಡಿ, ನಾವು ಸೆಲೆಕ್ಟ್ ಆಗಿದ್ದರೂ ಹಾಗೆಯೇ ಮನೆಯಲ್ಲಿ ಕುಳಿತು ಕೊಂಡಿದ್ದೇವೆ ಎಂದು ಹೇಳಿದ್ದಾರೆ. ನಮಗೆ ಒಂದು ಗತಿಯನ್ನು ಕಾಣಿಸಿರಿ ಈ ರೀತಿಯಲ್ಲೆಲ್ಲಾ ಕೇಳಿಕೊಂಡಿದ್ದಾರೆ. ಸಬ್–ಇನ್ಸ್‌ಪೆಕ್ಟರ್‌ಗಳನ್ನು ೧೯೮೫ರಲ್ಲಿ ಇನ್‌ಟರ್‌ವ್ಯೂ ಮಾಡಿ ಸೆಲೆಕ್ಟ್ ಮಾಡಿದ್ದರೂ ಕೂಡ ಅವರುಗಳು ಹಾಗೆಯೇ ಮನೆಯಲ್ಲಿ ಇದ್ದಾರೆ, ಟೀಚರ್ಸ್, ಡಾಕ್ಟರ್ಸ್, ಸ್ಟೆನೋಗ್ರಾಫರ್ಸ್, ಕಂಡಕ್ಟರ್ಸ್, ಡ್ರೈವರ್ಸ್, ಇಂಜಿನಿಯರ್ಸ್ ಎಲ್ಲರೂ ಪಿ. ಎಸ್. ಸಿ. ಯಿಂದ ಬೇರೆ ಬೇರೆ ರೆಕ್ರೂಟ್‌ಮೆಂಟ್‌ನಿಂದ ಸೆಲೆಕ್ಟ್ ಆಗಿದ್ದರೂ ಹಾಗೆಯೇ ಕುಳಿತುಕೊಂಡಿದ್ದಾರೆ. ಇದನ್ನು ಯಾವ ಪುರುಷಾರ್ಥಕ್ಕಾಗಿ ಈ ರೀತಿ ಮಾಡುತ್ತೀರಿ ? ಈ ರೀತಿ ಸೆಲೆಕ್ಟ್ ಏತಕ್ಕೆ ಮಾಡಬೇಕು ? ಈ ರೀತಿ ರೆಕ್ರೂಟ್‌ಮೆಂಟ್ ಕಮಿಟಿಗಳನ್ನು ಏತಕ್ಕೆ ಮಾಡಬೇಕು ? ಅವರ ಪೇಮೆಂಟ್‌ಗೋಸ್ಕರವಾಗಿ ಈ ರೀತಿ ಏನಾದರೂ ಮಾಡುತ್ತಿದ್ದೀರಾ ? ಅವರ ಟಿ. ಎ. ಮತ್ತು ಡಿ. ಎ. ಗೆ ಈ ರೀತಿಯಲ್ಲಿ ಮಾಡುತ್ತಿದ್ದೀರಾ ? ಆ ಹುಡುಗರನ್ನು ಏತಕ್ಕೆ ಕರೆಯಬೇಕು ? ಆ ಹುಡುಗರಿಗೆ ಏತಕ್ಕೆ ಈ ರೀತಿಯಲ್ಲಿ ಮಾಡುತ್ತೀರಿ ? ಆ ಹುಡುಗರಿಗೆ ಬೇಕಾದರೆ ಗುದ್ದಲಿ ತೆಗೆದುಕೊಂಡು ಹೋಗಿ ಹೊಲದಲ್ಲಿ ಕೆಲಸ ಮಾಡಿ ಹಾರೆ ತೆಗೆದುಕೊಂಡು ಅಗೆಯಿರಿ ಎಂದು ಹೇಳಿ. ಅದನ್ನು ಬಿಟ್ಟು ಜಾಬ್ ಕೊಡುತ್ತೇವೆ, ಜಾಬ್ ಕೊಡುತ್ತೇವೆ ಎಂದು ಕಮಿಟಿಯನ್ನು ಮಾಡುತ್ತೀರಿ. ಆ ಕಮಿಟಿಯವರಿಗೆ ದುಡ್ಡನ್ನು ಕೊಟ್ಟುಕೊಂಡು ಸುಮ್ಮನೆ ಸಲೆಕ್ಟ್ ಮಾಡಿಕೊಂಡು ಆ ಹುಡುಗರ ಹೊಟ್ಟೆಯನ್ನು ಏತಕ್ಕೆ ಉರಿಸುತ್ತೀರಿ ? ಈ ರೀತಿ ಕ್ರಿಮಿನಲ್ ವೇಸ್ಟ್ ಏತಕ್ಕೆ ಮಾಡಬೇಕು ? ಪ್ರತಿಯೊಂದು ಕನ್‌ಫ್ಯೂಷನ್. ಎಷ್ಟು ಜನ ಕೋರ್ಟ್‌ಗೆ ಹೋಗಿ ಕುಳಿತುಕೊಂಡಿದ್ದಾರೆ. ಆ ಲಾಯರ್‌ಗಳಿಗೆ ಕೋರ್ಟ್‌ಗಳಿಗೆ ಕೆಲಸ ಆಗಬೇಕು ಎಂದು ಹೇಳಿದರೆ ಬೇರೆ ವ್ಯವಸ್ಥೆ ಮಾಡಿ. ಹೊಟ್ಟೆಗೆ ಇಲ್ಲದೇ ಇರತಕ್ಕಂಥ ಆ ಹುಡುಗರನ್ನು ಏತಕ್ಕೆ ಈ ರೀತಿ ಉರಿಸುತ್ತೀರಿ ? ಕೋರ್ಟ್ ಬಗ್ಗೆ ಏನಾದರೂ ಬೆಲೆ ಇದೆಯಾ ? ರೋಸ್ಟರ್ ಸಿಸ್ಟಂನ್ನು ಫಾಲೋ ಮಾಡುತ್ತಿದ್ದೀರಾ ? ಸೀನಿಯಾರಿಟಿ ಲಿಸ್ಟನ್ನು ಮೆಯಿನ್‌ಟೈನ್ ಮಾಡುತ್ತಿದ್ದೀರಾ ? ಈ ಮನೆಗಳಲ್ಲಿ ಭರವಸೆಗಳನ್ನು ಕೊಡುತ್ತೀರಿ, ಅದನ್ನು ಹಾಗೆ ಏನಾದರೂ ಉಳಿಸಿಕೊಂಡಿದ್ದೀರಾ ? ಎಲ್ಲದಕ್ಕೂ ರಿವ್ಯೂ ಮಾಡುವುದೇ ಕೆಲಸ. ರಿವ್ಯೂ ಮಾಡುವ ಕೆಲಸಕ್ಕೆ ಎಲ್ಲಾ ಮಂತ್ರಿಗಳು ಕುಳಿತುಕೊಂಡಿದ್ದಾರೆ. ಇನ್ನು ಸ್ಟ್ಯಾಟಿಸ್ಟಿಕ್ಸ್. This is cooked up product ಏನು ಮಾತನಾಡಿದರೂ ಆ ಸ್ಟೇಟ್‌ನಲ್ಲಿ ಹಾಗೆ. ಈ ಸ್ಟೇಟ್‌ನಲ್ಲಿ ಹೀಗೆ, ಆ ಡಿಸ್ಟ್ರಿಕ್ಟ್‌ನಲ್ಲಿ ಹಾಗೆ, ಈ ಡಿಸ್ಟ್ರಿಕ್ಟ್‌ನಲ್ಲಿ ಹೀಗೆ ಈ ರೀತಿ ಕಂಪಾರಿಷನ್ ಮಾಡಿಕೊಂಡು ಇದರಲ್ಲೇ ಹೊಟ್ಟೆತುಂಬಿಹೋಯಿತು. ಏನು ಸಂತೋಷ ಬಂದುಬಿಡ್ತು ? ಕಂಪಾರಿಷನ್ ಮಾಡಿಕೊಂಡು ಬೋಗಸ್ ಫಿಗರ್ಸ್ exhibt ಮಾಡಿಕೊಂಡು ಇದರಲ್ಲಿ ಕ್ರೆಡಿಟ್ ತೆಗೆದುಕೊಳ್ಳಬೇಕು ಎಂದು ಇದ್ದಾರೆ. ನಾವು ಹೇಳುವಂಥದನ್ನು ನೋಡಿ ಏನಾದರೂ ರಿವ್ಯೂ ಮಾಡುತ್ತಾರಾ ? ಇಲ್ಲಿ ನಿಮ್ಮ ಮುಖ್ಯಮಂತ್ರಿಗಳು ಇಲ್ಲ, ಆ ಇಲ್ಲ, ಮಂತ್ರಿಗಳು ಚಿಕ್ಕಂದ ಹೊಡೆಯುತ್ತಿದ್ದಾರೆ ಮೂರು ಜನರೂ ಸೇರಿಕೊಂಡು,

೧೨-೦೦ NOON

ನೋಡಿ ಚಕ್ಕಂದ ಹೊಡೆಯುತ್ತಿದ್ದಾರೆ. ದೂರ ದೂರ ಕುಳಿತುಕೊಳ್ಳಿ ಎಂದು ಹೇಳಿ. ಇಷ್ಟು ಅಲಕ್ಷ್ಯವಾಗಿದ್ದರೆ ನಾನು ಮಾತನಾಡುವುದಿಲ್ಲ ಬಿಡಿ. ಅವರು ಹಾಸ್ಯ ಮಾಡಿಕೊಂಡು ನಗುತ್ತಿದ್ದರೆ ನಾನು ಮಾತನಾಡುವುದಿಲ್ಲ. ಇದು ಹಾಸ್ಯ ಮಾಡುವಂತಹ ಮನೆ ಅಲ್ಲ ನಾವುಗಳು ಕಷ್ಟಪಟ್ಟು ಓದಿ ಮಾಡಿ ಬರೆದುಕೊಂಡು ಬರುತ್ತೇವೆ. ಮಧ್ಯೆ ಮಧ್ಯೆ ನಿಮ್ಮ ಹಾಗೆ ಎದ್ದು ತಿಂತುಕೊಂಡು ಮಾತನಾಡುವ ಅಭ್ಯಾಸ ನಮಗಿಲ್ಲ. ನಿಮಗೆ ಸಹಾಯ ಮಾಡುವುದಕ್ಕೋಸ್ಕರ ಮಾತನಾಡುತ್ತೇವೆಯೇ ಹೊರತು ಸುಮ್ಮನೆ ಮಾತನಾಡುವುದಿಲ್ಲ. I need not be at anybody's mercy. Let it be known. ಹಾಸ್ಯ ಮಾಡಿಕೊಂಡು ನಗುವ ಹಾಗಿದ್ದರೆ ನಾನು ಮಾತನಾಡುವುದಿಲ್ಲ.

ಶ್ರೀ ಬಿ. ರಾಚಯ್ಯ. -ನಾವು ಸೀರಿಯಸ್ ಆಗಿ ಕೇಳುತ್ತಿದ್ದೇವೆ ದಯಮಾಡಿ ತಮ್ಮ ಭಾಷಣವನ್ನು ಮುಂದುವರೆಸಿ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.---ನಾನು ಇಷ್ಟೆಲ್ಲಾ ಹೇಳುತ್ತಿದ್ದರೂ ಜೋಕ್ ಮಾಡುತ್ತಿದ್ದೀರಾ ? ಎಕ್ಸಿಕ್ಯೂಟೀವ್‌ನಲ್ಲಿ ಬಿಗಿ ತೆಗೆದುಕೊಳ್ಳದೇ ಹೋದರೆ ಬೊಕ್ಕಸದ ದುಡ್ಡನ್ನು ಈ ರೀತಿ ಖರ್ಚು ಮಾಡುತ್ತಾ ಹೋದರೆ ಎಷ್ಟು ದಿವಸ ಸರಕಾರವನ್ನು ನಡೆಸುವುದಕ್ಕೆ ಸಾಧ್ಯ ? ಮನಸ್ಸು ನೊಂದು ನಾನು ಕಳಕಳಿಯಿಂದ ಹೇಳುತ್ತಿದ್ದೇನೆಯೇ ಹೊರತು ಸುಮ್ಮನೆ ಅಲ್ಲ. ನಾನು ಇಲ್ಲಿ ೩೫ ವರ್ಷದಿಂದ ಕುಳಿತುಕೊಂಡಿದ್ದೇನೆ ನಿನ್ನೆ ಮೊನ್ನೆ ಬಂದವಳಲ್ಲ. ಅವತ್ತಿನಿಂದ ಇವತ್ತಿನವರೆಗೂ ನೋಡುತ್ತಿದ್ದೇನೆ, ಒಂದೊಂದು ದಿವಸ ಕಣ್ಣೆದುರಿಗೆ ಪಿಕ್ಚರ್ ಬರುತ್ತದೆ ಅಂಥಾದ್ದರಲ್ಲಿ ಬಹಳ ನೋವಿನಿಂದ ನಾನು ಹೀಗೆ ಹೇಳುತ್ತಿದ್ದೆನೆಯೇ ಹೊರತು ತಮಾಷೆಗಾಗಿ ಹೇಳುತ್ತಿಲ್ಲ. ಮಾನ್ಯ ಮುಖ್ಯ ಮಂತ್ರಿಗಳಿಗೆ ಈ ರೀತಿಯಾಗುತ್ತಿದೆ, ಕಂಪ್ಯೂಟರೈಸ್ ಮಾಡಿ ಇಷ್ಟು ಬ್ಲಾಕ್‌ಗಳಲ್ಲಿ ಎಲ್ಲಾ ಸ್ಟೇಷನ್ಸ್‌ಗಳಲ್ಲಿ ಆಗುತ್ತಿದೆ ದಯಮಾಡಿ ಇದನ್ನು ಕಂಪ್ಯೂಟರೈಸ್ ಆದರೂ ಮಾಡಿ ಎಂದು ಪತ್ರ ಬರೆದೆ. ಇನ್ನು ಡಿಸ್ಟ್ರಿಕ್ಟ್ ಅಡ್ಮಿನಿಸ್ಟ್ರೇಷನ್ ಬಗ್ಗೆ ಹೇಳುವುದಾದರೆ, ಅಧಿಕಾರವನ್ನು ಡೀಸೆಂಟ್ರಲೈಸೇಷನ್ ಮಾಡಿದ್ದೇವೆ, ಎಲ್ಲಾ ಮಂಡಲ ಪಂಚಾಯಿತಿಗೆ, ಜಿಲ್ಲಾಪರಿಷತ್ತಿಗೆ ಅಧಿಕಾರವನ್ನು ಕೊಟ್ಟಿದ್ದೇವೆಂದು ಹೇಳುತ್ತಾರೆ ಆದರೆ ಅಲ್ಲಿ ವಿಷ ತೆಗೆದುಕೊಳ್ಳುವುದಕ್ಕೂ ಮೂರುಕಾಸು ಇಲ್ಲ. ಬರುವ ದುಡ್ಡಿನಲ್ಲಿ ೭೦ ಪರ್ಸೆಂಟ್ ಸ್ಯಾಲರಿಗೆ ಹೋಗುತ್ತಿದೆ. ಇನ್ನು ಅಧಿಕಾರಿಗಳ ಪಾಡಂತೂ ಹೇಳುವುದಕ್ಕೇ ಆಗುವುದಿಲ್ಲ. ಎಲ್ಲಾ ಸದಸ್ಯರೂ ಅವರ ಕತ್ತಿನ ಮೇಲೆ ಕುಳಿತುಕೊಳುತ್ತಾರೆ. ಅದರಲ್ಲೂ ಅವರಿಗೆ ಸಪೋರ್ಟ್ ಇದ್ದರೆ ಸಾಕು ಅವರ ತಲೆಯ ಮೇಲೆ ಕುಳಿತುಕೊಂಡು ನಾನು ಮಂತ್ರಿಗಳಿಗೆ ಹೇಳುತ್ತೇನೆ ಇದನ್ನು ಮಾಡಿಕೊಡಿ ಎಂದು ಹೆದರಿಸುತ್ತಾರೆ. ಐ. ಎ. ಎಸ್, ಐ. ಪಿ. ಎಸ್. ಅಧಿಕಾರಿಗಳು ನಮ್ಮನ್ನು ಇಲ್ಲಿಂದ ಟ್ರಾನ್ಸ್‌ಫರ್ ಮಾಡಿಸಿಕೊಡಿ ಈ ಕೆಲಸ ಮಾಡುವುದಕ್ಕಾಗುವುದಿಲ್ಲವೆಂದು ಹೇಳುತ್ತಾರೆ. ಮಂಡಲ ಪಂಚಾಯಿತಿಯಲ್ಲಿ ಎಲ್ಲಾ ಸದಸ್ಯರೂ ಅವರ ರಿಲೇಟೀವ್ಸ್ ಮುಂತಾದವರಿಗೆ ಫೇರ್ ಪ್ರೈಸ್ ಷಾಪ್ ಬೇಕು ಅಲ್ಲಿ ಸೊಸೈಟಿ ಇರಲೀ ಇಲ್ಲದಿರಲಿ ಆ ಸೊಸೈಟಿಯನ್ನು ಮುಚ್ಚಿಸಿ ಕಡಿಮೆ ಹಣಕ್ಕೆ ಕೊಡಿಸುತ್ತಾರೆ. ಎಷ್ಟೋ ಸೊಸೈಟಿಗಳು ಇವತ್ತು ಕೋರ್ಟಿಗೆ ಹೋಗಿವೆ. ಶಿವಮೊಗ್ಗದ ಸಾಸಿವೆಹಳ್ಳಿಯಲ್ಲಿ ಸಂತೆ ಹರಾಜು ಮಾಡಿ ಆ ಹರಾಜನ್ನು ಅವರ ಅಣ್ಣನ ಮಗನಿಗೇ ಬಿಡ್ ಮಾಡಿಸಿ ಕಡಿಮೆ ದರಕ್ಕೆ ನಿಲ್ಲಿಸಿದ್ದಾರೆ. ಹಾಸನ ಜಿಲ್ಲೆಯಲ್ಲಿ ಅಪ್ಪಹಳ್ಳಿಯಿಂದ ಕೋಡಿ ಹಳ್ಳಿಗೆ ಮಂಡಲ ಪಂಚಾಯಿತಿ ಕೇಂದ್ರ ಸ್ಥಾನ ಬದಲಾವಣೆಗೆ ಹೊರಟಿದ್ದಾರೆ. ತುರುವೇಕೆರೆಯ ತಾಳೆಕೆರೆ ಮಂಡಲ ಪಂಚಾಯಿತಿಯ ಸದಸ್ಯರು ಒಬ್ಬರು ಐ. ಆರ್. ಡಿ. ಪಿ. ಲೋನ್, ಲೋ ಕಾಸ್ಟ್ ಹೌಸ್, ಫ್ರೀ ಕೋಕನಟ್ ಸೀಡ್‌ಲಿಂಗ್ ತೆಗೆದುಕೊಂಡು ಜಾಸ್ತಿ ಬೆಲೆಗೆ ಮಾರಿಕೊಳ್ಳುವುದು ಎಲ್ಲಾ ನಡೆಯುತ್ತಿದೆ. ಎಲ್ಲಾ ಬೆನಿಫಿಟ್‌ಗಳೂ ಕೂಡ ಅವನಿಗೇ. ಹಳಿಯಾಳದಲ್ಲಿ ಬಂಚಿರ ಹೆಂಚಸಹಳ್ಳಿ ಮಂಡಲದಲ್ಲಿ ಆಗಿರುವ ಸೇವಾ ಸಹಕಾರಿ ಸಂಘದ ಅನ್ಯಾಯವನ್ನು ಪೋಲೀಸರಿಗೆ ತಿಳಿಸಿದಾಗ ಅಲ್ಲಿ ಪಾಲಿಟಿಕ್ಸ್ ಮಾಡಿ ಕಂಪ್ಲೈಂಟ್ ಕೊಟ್ಟವರಿಗೇ ಹಿಡಿದು ಹೊಡೆದು ಅವನನ್ನು ಚೆನ್ನಾಗಿ ಬಡಿದು ಲಾಕಪ್‌ಗೆ ಹಾಕಿದರು ಚಿಕ್ಕತಿರುಪತಿಯ ಮಂಡಲ ಮಾಲೂರು ತಾಲ್ಲೂಕಿನ ಪ್ರಧಾನರು ೫೦,೦೦೦ ರೂಪಾಯಿ ಬೆಲೆಬಾಳುವ ಟಿಂಬರ್ ಅನ್ನು ೧೧ ಸಾವಿರಕ್ಕೆ ಮಾರಿದ್ದಾರೆ. ಇವರ ಬಗ್ಗೆ ಬೇಕಾದಷ್ಟು ಅರ್ಜಿಗಳನ್ನು ಸಲ್ಲಿಸಿದ್ದಾರೆ. ನನ್ನ ಹತ್ತಿರ ಅರ್ಜಿಗಳು ಕೂತುಕೊಂಡಿದೆ. ಬೆಂಗಳೂರು ಜಿಲ್ಲೆಯ ಮಾಗಡಿತಾಲ್ಲೂಕು ಬೆಣಿವಾಡು ಮಂಡಲ ಪಂಚಾಯಿತಿಯಲ್ಲಿ forged resignation papers ತೆಗೆದುಕೊಂಡು ಡಿಸ್‌ಕ್ವಾಲಿಫೈ ಮಾಡಲು ಪ್ರಯತ್ನಪಟ್ಟರು. ಅದೆಲ್ಲಾ ಕೋರ್ಟಿನಲ್ಲಿ ಇದೆ. ಮೈಸೂರು ಜಿಲ್ಲೆಯ ಜಿಲ್ಲಾಪರಿಷತ್ ಬಗ್ಗೆ ಹೇಳುತ್ತೇನೆ. ಮಾನ್ಯ ರಾಚಯ್ಯನವರು ಇದ್ದಾರೆ ಅವರೂ ಕೇಳಿಸಿಕೊಳ್ಳಬೇಕು. ಅಲ್ಲಿ ಕಾಂಗ್ರೆಸ್‌ನವರು ನೋ ಕಾನ್‌ಫಿಡೆನ್ಸ್ ಮೂವ್ ಮಾಡಿದರೆ ನಿಮ್ಮ ಪಾರ್ಟಿಯವರಿಗೆ ಏನು ಕೆಲಸವಿತ್ತು ಅದನ್ನು ಸಪೋರ್ಟ್ ಮಾಡುವುದಕ್ಕೆ

ಸಪೋರ್ಟ್ ಮಾಡಿ ಪ್ರಸಿಡೆಂಟ್, ವೈಸ್ ಪ್ರಸಿಡೆಂಟ್ ನಿಂದ ರೆಸಿಗ್ನೇಷನ್ ತೆಗೆದುಕೊಂಡು ಅಲ್ಲಿ ಇದ್ದ ಬದ್ದ ದುಡ್ಡನ್ನು ಹಾಳುಮಾಡಿದಂತಹ ಎಪಿಸೋಡ್ ಅಲ್ಲಿ ನಡೆದಿದೆ. ಇನ್ನು ಜಿಲ್ಲಾಪರಿಷತ್‌ಗಳು ಅಸ್ತಿತ್ವಕ್ಕೆ ಬಂದಮೇಲೆ ಜಿಲ್ಲಾ ಅಭಿವೃದ್ಧಿ ಕಾರ್ಯಗಳಿಗೆ ಹೆಚ್ಚು ಹಣ ಸಿಗುತ್ತದೆಂದು ಎಲ್ಲರಿಗೂ ಬಹಳ ಖುಷಿ ಆಗಿತ್ತು. ಇವುಗಳಿಗೆ ೬೦೦ ಕೋಟಿ ರೂಪಾಯಿಗಳನ್ನು ಕೊಡುತ್ತೇವೆಂದು ಸರ್ಕಾರದವರೇ ಹೇಳಿದರು. ಆದರೆ ಈಗ ಅಲ್ಲಿ ನಡೆಯುತ್ತಿರುವುದಾದರೂ ಏನು ? ನೀವು ಕೊಡುವ ಹಣದಲ್ಲಿ ಶೇಕಡಾ ೬೦ ರಷ್ಟು ಹಣ ಅಲ್ಲಿ ಕೆಲಸ ಮಾಡುವವರ ಸಂಬಳಕ್ಕೆ, ಟಿ. ಎ. ಮತ್ತು ಡಿ. ಎ. ಗೆ ಹಾಗೂ ಅಲ್ಲಿರುವಂತಹ ಮುರುಕಲು ವೆಹಿಕಲ್ಸ್‌ನ ಮೆನ್‌ಟೆನೆನ್ಸ್‌ಗೆ ಹೋಗುತ್ತಿದೆ. ಇನ್ನು ಅಭಿವೃದ್ಧಿ ಕೆಲಸಗಳನ್ನು ಯಾವರೀತಿ ಮಾಡುವುದು? ಇವು ಅಸ್ತಿತ್ವಕ್ಕೆ ಬರುವುದಕ್ಕೆ ಮೊದಲು ರಾಜ್ಯದಲ್ಲಿ ಪ್ರತಿವರ್ಷ ಹೊಸದಾಗಿ ೫೦೦ ಸ್ಕೂಲ್‌ಗಳು ಮಂಜೂರಾಗುತ್ತಿದ್ದವು. ಹತ್ತಿಪ್ಪತ್ತು ಆಸ್ಪತ್ರೆಗಳು ಹತ್ತಿಪ್ಪತ್ತು ವೆಟರ್ನರಿ ಆಸ್ಪತ್ರೆಗಳು ಮಂಜೂರಾಗುತ್ತಿದ್ದವು; ಸಾವಿರಾರು ಬಾವಿಗಳನ್ನು ತೋಡಿಸಲಾಗುತ್ತಿತ್ತು; ಆದರೆ ಈಗ ಯಾವ ಅಭಿವೃದ್ಧಿ ಕೆಲಸಗಳೂ ಆಗುತ್ತಿಲ್ಲ. ಬಾವಿ ತೆಗೆಸುವ ಕೆಲಸ, ರಸ್ತೆ ಕೆಲಸ ಹಾಗೂ ಬೀದಿ ದೀಪಗಳನ್ನು ಹಾಕಿಸುವ ಕೆಲಸ ಹೀಗೆ ಯಾವ ಕೆಲಸಗಳೂ ಸರಿಯಾಗಿ ಆಗುತ್ತಿಲ್ಲ. ಜಿಲ್ಲಾಪರಿಷತ್‌ಗಳ ಅಧ್ಯಕ್ಷರು ಮತ್ತು ಉಪಾಧ್ಯಕ್ಷರುಗಳಿಗೆ ತಿರುಗಾಡಲು ವಾಹನಗಳನ್ನು ಕೊಟ್ಟಿದ್ದೀರಿ. ನೀವು ಕೊಡುವ ಹಣ ಅವರ ಸಂಬಳಕ್ಕೆ ಹಾಗೂ ಅವರ ಟಿ. ಎ. ಮತ್ತು ಡಿ. ಎ. ಗೆ ಖರ್ಚಾಗಿ ಬಿಡುತ್ತದೆ. ನೀವು ಕೊಡುವ ದುಡ್ಡೆಲ್ಲಾ ಇದಕ್ಕೇ ಚೊಕ್ಕಟವಾದರೆ ಇನ್ನು ಅಭಿವೃದ್ಧಿ ಕೆಲಸಗಳು ಯಾವ ರೀತಿ ಆಗಬೇಕು ? ಇದರಲ್ಲಿ ನಿಮ್ಮ ಅಚೀವ್‌ಮೆಂಟ್ ಏನಿದೆ ? ನಿಮ್ಮ ಪ್ಲಾನ್ ಪ್ರಕಾರ ಪ್ರತಿ ಮಂಡಲ್ ಪಂಚಾಯತ್ ವರ್ಷದಲ್ಲಿ ಒಂದೂವರೆ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಬೇಕು. ಆದರೆ ೫ ಸಾವಿರ ರೂಪಾಯಿಗಳ ಮೇಲೆ ಖರ್ಚು ಮಾಡಬಾರದೆಂದು ನೀವು ಹೇಳಿದ್ದೀರಿ. ಈ ರೀತಿ ಹೇಳಿದರೆ ಅಲ್ಲಿ ಅಭಿವೃದ್ಧಿ ಕಾರ್ಯಗಳು ಯಾವ ರೀತಿ ಆಗುತ್ತವೆ ? ನಿಮ್ಮ ಈಗಿನ ಪೊಲಿಟಿಕಲ್ ಪಾಲಿಸಿಯನ್ನು ಬದಲಾವಣೆ ಮಾಡದೇ ಹೋದರೆ ಮೂರು ಕಾಸಿನ ಅಭಿವೃದ್ಧಿಕಾರ್ಯಗಳು ಆಗುವುದಿಲ್ಲವೆಂದು ಹೇಳುವುದಕ್ಕೆ ಇಷ್ಟಪಡುತ್ತಿದ್ದೇನೆ. ಈ ಜಿಲ್ಲಾಪರಿಷತ್‌ಗಳು ಬಂದಮೇಲೆ ಮುನಿಸಿಪಾಲಿಟಿಗಳನ್ನು ಬಹಳವಾಗಿ ನೆಗ್ಲೆಕ್ಟ್ ಮಾಡಲಾಗಿದೆ. ಈಗ ಡೆವಲಪ್‌ಮೆಂಟ್ ವರ್ಕ್ಸ್ ಆಗಲೀ, ವೆಲ್‌ಫೇರ್ ವರ್ಕ್ಸ್ ಆಗಲೀ ನಡೆಯುತ್ತಿಲ್ಲ.

ಇನ್ನು ಗೃಹ ಇಲಾಖೆಗೆ ಬಂದರೆ, ಈ ಇಲಾಖೆಯಲ್ಲಿ ದಕ್ಷತೆ ಎಂಬುದು ಸಂಪೂರ್ಣವಾಗಿ ಹೊರಟು ಹೋಗಿದೆ. ಈ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವ ಪೋಲೀಸರ ಮೇಲೆಯೇ ಸಾಕಷ್ಟು ದೂರುಗಳು ಇವೆ. ಪೋಲೀಸ್ ಅಧಿಕಾರಿಗಳ ಮೇಲೆ ದೂರುಗಳಿವೆ. ಆದರೆ ಕ್ರಮ ತೆಗೆದುಕೊಂಡಿಲ್ಲ. ಮುಖ್ಯಮಂತ್ರಿಗಳ ಕಾರಿನ ಮೇಲೆಯೇ ಕಲ್ಲು ಬಿದ್ದು ಅದರ ಗಾಜನ್ನು ಹೊಡೆದು ಹಾಕಿದ್ದನ್ನು ನೋಡಿದರೆ, ಇದೂ ಒಂದು ತರಹ ಈ ಇಲಾಖೆಯ ಎಫಿಷಿಯೆನ್ಸಿ ಎಂದೇ ಹೇಳಬಹುದು. ಈ ರಾಜ್ಯದ ಹರಿಜನ ಹೆಣ್ಣು ಮಕ್ಕಳ ಮೇಲೆ ಅಟ್ರಾಸಿಟೀಸ್ ನಡೆಯುತ್ತಿದೆ, ಡೌರಿ ಡೆತ್ಸ್ ಜಾಸ್ತಿ ಆಗಿದೆ, ಲಾಕಪ್‌ನಲ್ಲಿಯೇ ಡೆತ್ಸ್ ಆಗುತ್ತಿದೆ, ಕಾರಣ ಕೇಳಿದರೆ ಕಂಬಳಿ ಸುತ್ತಿಕೊಂಡು ನೇಣು ಹಾಕಿಕೊಂಡರೆಂದು ಹೇಳುತ್ತಾರೆ. ಇದೂ ಸಹ ಒಂದು ತರಹದ ಎಫಿಷಿಯೆನ್ಸಿ. ಏತಕ್ಕೆ ಈ ರೀತಿಯೆಲ್ಲಾ ಆಗುತ್ತಿದೆ ? ಇದಕ್ಕೆ ಮುಖ್ಯವಾದ ಕಾರಣವೆಂದರೆ, ಎಲ್ಲಿ ಹೆಚ್ಚಿನ ಎಫಿಷಿಯೆನ್ಸಿ ಇರಬೇಕೋ ಅಂತಹ ಕಡೆಗಳಿಗೆ ಇನ್-ಎಫಿಷಿಯೆನ್ಸಿ ಜನರನ್ನು ಹಾಕಿದ್ದಾರೆ. ಈ ಇಲಾಖೆಯಲ್ಲಿ ಜವಾಬ್ದಾರಿ ತೆಗೆದುಕೊಳ್ಳುವವರೇ ಇಲ್ಲ. ಈ ಇಲಾಖೆಯಲ್ಲಿ ಯಾವ ತರಹದ ಮೊರೇಲ್ ಉಳಿಯದ ಹಾಗೆ ಮಾಡಿದ್ದಾರೆ. ಶಿವಮೊಗ್ಗ ಜಿಲ್ಲೆಯಲ್ಲಿ ರೇಂಜ್ ಫಾರೆಸ್ಟ್ ಆಫೀಸರ್ ಒಬ್ಬರ ಕೊಲೆ ನಡೆಯಿತು ? ಇದಕ್ಕೆ ಕಾರಣವೇನು ? ಇವರು ಗೂಂಡಾಗಳಿಗೆ ಎನ್‌ಕರೇಜ್ ಮಾಡಿ ಮಾಡಿ ಈ ರೀತಿಯೆಲ್ಲಾ ಆಗುತ್ತಿದೆ. ಶ್ರೀನಿವಾಸಪುರದ ಸರ್ಕಲ್ ಇನ್ಸ್‌ಪೆಕ್ಟರ್ ಅವರ ಮೇಲೆ ದೂರು ಬಂದ ಮೇಲೆ ತನಿಖೆ ನಡೆಯಿತು. ಅವರು ತಪ್ಪು ಮಾಡಿದ್ದಾರೆಂಬುದು ತನಿಖೆಯಿಂದ ಕಂಡು ಬಂದ ಮೇಲೂ ಸಹ ಅವರನ್ನು ಅಲ್ಲಿಯೇ ಮುಂದುವರಿಸಿದ್ದಾರೆ. ಹೊಳೆನರಸೀಪುರದ ಸಬ್-ಇನ್ಸ್‌ಪೆಕ್ಟರ್ ಮೇಲೆ ದೂರುಗಳಿದ್ದರೂ ಸಹ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಹುಬ್ಬಳ್ಳಿಯ ರೂರಲ್‌ನಲ್ಲಿ ಕೆಲಸ ಮಾಡುತ್ತಿರುವ ಸಬ್-ಇನ್ಸ್‌ಪೆಕ್ಟರ್ ಮೇಲೆ ಬಂದ ದೂರಿನ ಮೇಲೆ ಸಸ್ಪೆಂಡ್ ಮಾಡಲಾಗಿತ್ತು. ಆದರೆ ಈಗ ಅವರನ್ನು ಅಲ್ಲಿಯೇ ಮುಂದುವರಿಸಿರುವುದರಿಂದ, ನೀವು ನನ್ನ ಮೇಲೆ ಏನು ಮಾಡುವುದಕ್ಕೆ ಸಾಧ್ಯ ಎಂದು ಜನರ ಹತ್ತಿರ ಹೇಳಿಕೊಂಡು ತಿರುಗಾಡುತ್ತಿದ್ದಾರೆ. ಇದನ್ನೆಲ್ಲಾ ನೋಡಿದಾಗ ಈ ರಾಜ್ಯದಲ್ಲಿ ಏನು ನಡೆದಿದೆ ಎಂದರೆ, 'ರಾಯ ಹೇಳಿಂದ, ಭೂಪ ಕೇಳಿಂದ' ಎಂಬ ರೀತಿಯಲ್ಲಿ ದರ್ಬಾರ್ ನಡೆದಿದೆ. ಇದೇ ತರದಲ್ಲಿ ಎಷ್ಟು ದಿವಸಗಳ ಕಾಲ ರಾಜ್ಯಭಾರ ಮಾಡುತ್ತೀರಿ ? ಈಗ ಮುಖ್ಯಮಂತ್ರಿಗಳು ಸಭೆಯಲ್ಲಿ ಇಲ್ಲ. ಅವರು ಇದ್ದಿದ್ದರೆ ರಾಜೀನಾಮೆ ಕೊಡಿ ಎಂದು ನಾನು ಕೇಳುತ್ತಿರಲಿಲ್ಲ, ಇದನ್ನೆಲ್ಲಾ ನೋಡಿ ನಿಮಗೆ ಬೇಸರ ಬಂದಿಲ್ಲವೇ ಎಂದು ಅವರನ್ನು ಕೇಳಬೇಕಾಗಿದೆ ?

'ರಾಯ ಹೇಳಿಂದ, ಭೂಪ ಕೇಳಿಂದ' ಎಂಬ ದರ್ಬಾರು ಇನ್ನು ಎಷ್ಟು ದಿವಸಗಳ ಕಾಲ ನಡೆಯಬೇಕು ? ಇದು ಎಂತಹ ಅಡ್ಮಿನಿಸ್ಟ್ರೇಷನ್ ? ಕೊಟ್ಟ ದುಡ್ಡು ಸರಿಯಾಗಿ ವಿನಿಯೋಗ ಆಗುತ್ತಿದೆಯೇ ಎಂಬುದನ್ನು ನೋಡುವಂತಹ ಜವಾಬ್ದಾರಿ ತಮಗೆ ಬೇಡವೇ ? ನಾವೇನಾದರು ಹೇಳಿದರೆ ದೆಹಲಿ ಕಡೆಗೆ ಕೈ ತೋರಿಸುತ್ತೀರಿ ? ಇದೇ ರೀತಿ ಇನ್ನು ಎಷ್ಟು ದಿವಸ ಹೇಳುತ್ತೀರಿ ? ಇವರ ಕೈಯಲ್ಲಿ ಇಷ್ಟು ಕೋಟಿ ಕೋಟಿ ಬರುವ ದುಡ್ಡನ್ನು, ಎಲ್ಲರನ್ನೂ ಹೊಡೆದು ಬಡಿದು, ಮಡಿಕೆ ಕುಡಿಕೆ ಎಲ್ಲವನ್ನೂ ಏಕಾಂತಯ್ಯನವರು ಪ್ಯಾರಾಫರ್ನೇಲಿಯ ಮಾಡಿಸಿ ಎಲ್ಲಾ ತೆಗೆದುಕೊಂಡು ಬಂದು ಕೊಡುವ ದುಡ್ಡನ್ನು ಕೊಟ್ಟು ಹೀಗೆ ಸಿಕ್ಕಾಪಟ್ಟೆ ಇವರು ದುಡ್ಡನ್ನು ಖರ್ಚು ಮಾಡಿದರೆ ಇದು ನ್ಯಾಯವೇ, ಇವರ ಕೈಯಲ್ಲಿ ದುಡ್ಡು ಕೊಡುವುದು ಸರಿಯೇ, ಒಂದು ದಮ್ಮಡಿ ಕೊಟ್ಟರೂ ಸರಿಯಾಗಿ ಖರ್ಚು ಮಾಡುವುದಿಲ್ಲ. ಆದುದರಿಂದ ಈ ಡಿಮ್ಯಾಂಡ್‌ಗಳಿಗೆ ದುಡ್ಡು ಕೊಡುವುದು ಬಹಳ ತಪ್ಪು. ಮಾನ್ಯ ಮುಖ್ಯಮಂತ್ರಿಗಳಿಗೆ ಒಂದು ವಿಷಯವನ್ನು ಹೇಳಬೇಕು ಎಂದು ಇದ್ದೆ ನಾವು ಏನಾದರೂ ಟೂರ್ ಹೋದಾಗ, ಎಲ್ಲಾದರೂ ಹೋಗಿ ಆಫೀಸರನ್ನು ಕರೆಪಬೇಕು, ಏನು ವಿಚಾರ ತಿಳಿದುಕೊಳ್ಳೋಣ ಅಂದರೆ, ಇವರಲ್ಲಿ ಸೀಕ್ರೆಟ್ ಸರ್ಕ್ಯುಲರ್ ಕಳಿಸುತ್ತಾರೆ, ಅವರು ಬಂದಾಗ ಹೋಗಿ ನೋಡಬೇಡಿ, ಅವರಿಗೆ ಹೇಳಬೇಡಿ ಎಂದು. ಸರ್ವಜ್ಞಮೂರ್ತಿಯಂತೂ ನನ್ನ ಫೋಟೋ ಅಚ್ಚು ಹಾಕಿಸಿ ಪ್ರೆಸ್‌ನಲ್ಲಿ ಕೊಡುತ್ತಾರೆ. ಅವರನ್ನು ಕೇಳಿದರೆ ಇವರಿಗೆ ಅವಮಾನವಾಗುತ್ತದೆಯಂತೆ. ಏಕಪ್ಪ, ಅದಕ್ಕೆ ಏನು ಅವಮಾನ ಆಗಬೇಕು, ನಾನು ಏನಾದರೂ ಅವರನ್ನು ಕಮಿಷನ್ ಕೇಳುತ್ತಾ ಇದ್ದೇನಾ, ಅವರನ್ನು ಏನಾದರೂ ಲಂಚ ಕೊಡಿ ಎಂದು ಕೇಳುತ್ತೀನಾ, ಇರುವ ವಿಚಾರ ನನಗೆ ತಿಳಿಸಿ ಎಂದು ಕೇಳುವುದಕ್ಕೆ ಹೋದರೆ ಅವರಿಗೆ ಅವಮಾನವಾಗುತ್ತಂತೆ, ಏಕೆ ಅವಮಾನ ಆಗುತ್ತದೆ. ನಾನು ಅದೇ ವಿಚಾರವನ್ನು ಚೀಫ್ ಮಿನಿಸ್ಟರಿಗೆ ಹೇಳಬೇಕು ಎಂದು ಇದ್ದೆ. ನಾನು ಅಂತಹ ಅವಮಾನ ಮಾಡುವ ಕೆಲಸ ಯಾವಾಗಲೂ ಮಾಡುವುದಿಲ್ಲ. ನಾನು ಹೋಗಿ ಆಫೀಸರನ್ನು ಕೇಳದೇ ಬೀದಿಯಲ್ಲಿ ನಿಂತಿರುವವರೆಲ್ಲರನ್ನೂ ಕೇಳಿಕೊಂಡು ಬಂದು ಇಲ್ಲಿ ಅಸೆಂಬ್ಲಿಯಲ್ಲಿ ಮಾತನಾಡುವುದಕ್ಕೆ ಆಗುತ್ತದೆಯೇ, ನಾನು ಏಕೆ ಈ ಸ್ಥಳದಲ್ಲಿ ಕೂತಿರುವುದು, ನನಗೆ ಏಕೆ ಸಂಬಳ ಕೊಡುವುದು, ನನಗೆ ಏಕೆ ನೀವು ವೆಹಿಕಲ್ ಕೊಟ್ಟಿರುವುದು. ನಾನು ಹೋಗಿ ಕೇಳಿದಾಗ ಆಫೀಸರ್ಸ್ ಬಂದು ಹೇಳದೇ ಇದ್ದರೆ ನಾನು ಬೀದಿಯಲ್ಲಿ ನಿಂತಿರುವವರ ಹತ್ತಿರ ಹೇಳುವುದಕ್ಕೆ ಸಾಧ್ಯವೇ. ಅದನ್ನು ಬಿಟ್ಟು ಸ್ಟ್ರಿಕ್ಟಾಗಿ ಒಂದು ಆರ್ಡರ್ ಮಾಡಿ, ಏನಾದರೂ ಕರೆಸಿ ಕೇಳಿದಾಗ ನನಗೆ ಇನ್‌ಫರ್ಮೇಷನ್ ಕೊಡಬೇಕು ಎಂದು. ಆ ರೀತಿ ಕೊಟ್ಟಿದ್ದನ್ನು ನಾನು ಸಹಾಯಕವಾಗಿ ಅಡ್ಮಿನಿಸ್ಟ್ರೇಷನ್‌ನಲ್ಲಿ ಹೀಗೀಗೆ ಇದೆ ಎಂದು ಹೇಳುವುದಕ್ಕೆ ಆಗುತ್ತದೆ. ಇವರು ಹೋಗಿ ಇನ್ಸ್‌ಪೆಕ್ಟ್ ಮಾಡುವುದಿಲ್ಲ, ಇವರ ಆಫೀಸರ್ಸ್‌ನ್ನು ಇನ್ಸ್‌ಪೆಕ್ಟ್ ಮಾಡುವುದಿಲ್ಲ, ಅವರಿಗೆ ಏನೇನೂ ಗೊತ್ತಾಗುವುದಿಲ್ಲ, ಯಾರೂ ಮಿನಿಸ್ಟರಿಗೆ ತಿಳಿಸುವುದಿಲ್ಲ. ಅದನ್ನು ಬಿಟ್ಟು ಆ ಕೆಲಸ ನಾವು ಮಾಡಿತು ಅಂದರೆ ಅದಕ್ಕೆ ಇವರು ಬೆಟ್ಟು ತೋರಿಸಿ ಅದು ಮಾಡಬೇಡಿ, ಇದು ಮಾಡಬೇಡಿ ಅಂದರೆ ಇವರುಗಳಿಗೆ ಏನಾಗಿದೆ ಎನ್ನುವುದೇ ನನಗೆ ಗೊತ್ತಾಗುವುದಿಲ್ಲ, ಇವರಿಗೆ ಏನಾದರೂ ಅರ್ಥ ಗಿರ್ಥ ಗೊತ್ತಿದೆಯೇ, ಕೆಲಸ ಮಾಡಿ ಅನುಭವ ಇದೆಯೆ ಎನ್ನುವುದು ನನಗೆ ಗೊತ್ತಿಲ್ಲ. ಈ ರೀತಿ ಇವರು ಮಾಡಬಾರದು ಎಂದು ನಾನು ಮುಖ್ಯ ಮಂತ್ರಿಯವರಿಗೆ ಹೇಳಬೇಕು ಎಂದು ಇದ್ದೆ. ನನ್ನ ದುರದೃಷ್ಟವಶಾತ್ತೋ, ಅವರ ದುರದೃಷ್ಟವಶಾತ್ತೋ ಅವರು ಬರಲಿಲ್ಲ. ಆದುದರಿಂದ ಅವರ ಸ್ಪೋಕ್‌ಮನ್ ಇರತಕ್ಕಂಥ ತಾವು ನಾನು ಮಾತನಾಡಿರುವುದೆಲ್ಲಾ ದಯಮಾಡಿ ಅವರಿಗೆ ತಿಳಿಸಬೇಕು ಎಂದು ಕೇಳಿಕೊಂಡು, ನನಗೆ ಇಷ್ಟು ಹೊತ್ತು ಟೈಂ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ, ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಶ್ರೀ ಡಿ.ಟಿ. ಜಯಕುಮಾರ್ ಆಬ್ಸೆಂಟ್. ಈಗ ಮಾನ್ಯ ಶ್ರೀ ವೆಂಕಟರಾಮಯ್ಯನವರು ಮಾತನಾಡಲಿ.

† ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಲ್).—ಸನ್ಮಾನ್ಯ ಅಧ್ಯಕ್ಷರೆ, ನಾನು ಮೊದಲು ಪೋಲೀಸ್ ಡಿಪಾರ್ಟ್‌ಮೆಂಟ್ ಬಗ್ಗೆ ಮಾತನಾಡಲು ಇಚ್ಛೆಪಡುತ್ತೇನೆ. ನಾನು ಹೋದ ಸಾರಿ ಕೂಡ ಹೇಳಿದೆ. ಪೋಲೀಸ್ ಡಿಪಾರ್ಟ್‌ಮೆಂಟ್ ಬಗ್ಗೆ ಒಂದು ವಿಷಯವನ್ನು ಸ್ಪಷ್ಟವಾಗಿ ಹೇಳಬೇಕು. ಪೋಲೀಸ್ ಡಿಪಾರ್ಟ್‌ಮೆಂಟ್‌ನಲ್ಲಿ ಈ ಪೋಲೀಸ್ ಕಾನ್‌ಸ್ಟೇಬಲ್ಸ್ ಮತ್ತು ಹೆಡ್ ಕಾನ್‌ಸ್ಟೇಬಲ್ಸ್ ಸೆಕ್ಷನ್ ಏನಿದೆ ಇವರಿಗೆ ಸ್ವಲ್ಪ ಹೆಚ್ಚಿಗೆ ಸೌಲಭ್ಯಗಳನ್ನು ತಾವು ಒದಗಿಸಬೇಕು. ಅವರಿಗೆ ೮ ಗಂಟೆ ಕೆಲಸದ ರೂಲ್ ಇಲ್ಲವೇ ಇಲ್ಲ. ಅವರು ೧೬ ಗಂಟೆ ೨೦ ಗಂಟೆ ಕೆಲಸ ಮಾಡಿ, ಅವರನ್ನು ನಾವು ರಾಕ್ಷಸರನ್ನಾಗಿ ಮಾಡಿಟ್ಟಿದ್ದೇವೆ. ಈಗಲೂ ಕೂಡ ಡಿಪಾರ್ಟ್‌ಮೆಂಟ್‌ನಲ್ಲಿ ಸ್ವತಂತ್ರವಂತೂ ಬಂದಿಲ್ಲ,

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

೮ ಗಂಟೆ ಕೆಲಸವಂತೂ ಇಲ್ಲವೇ ಇಲ್ಲ. ಈಗಲೂ ಪ್ರತಿಯೊಬ್ಬ ಆಫೀಸರ್ ಮನೆಯಲ್ಲಿ ೪ ಜನ, ೫ ಜನ ಆರ್ಡರ್ಲೀಸ್, ಬ್ಯಾಗ್ ಹೊಲಿಯುವವರು, ಬಟ್ಟೆ ಒಗೆಯುವವರು ಇದ್ದೇ ಇರುತ್ತಾರೆ, ಅದು ತಪ್ಪಬೇಕು ಎಂದು ಅನೇಕ ಸಾರಿ ಹೇಳಿದ್ದೆ. ಆದರೆ ದುರದೃಷ್ಟವಶಾತ್ ಅದು ಇನ್ನೂ ತಪ್ಪಿಲ್ಲ. ಈಗ ಈ ಬಗ್ಗೆ ಈಗಲಾದರೂ ಮಾನ್ಯ ಮಂತ್ರಿಗಳು ಗಮನಹರಿಸಿ ಅವರಿಗೆ ಸ್ವಲ್ಪ ಸಹಾಯ ಮಾಡಬೇಕು. ಇಲ್ಲಿ ಅಸೆಂಬ್ಲಿ ಅಧಿವೇಶನ ಇದ್ದರೆ ಅವರು ೯ ಗಂಟೆಗೆ ಬರುತ್ತಾರೆ, ನಾವು ರಾತ್ರಿ ೧೦–೧೧ ಗಂಟೆಗೆ ಹೋದರೆ ಅವರು ಕಾದೇ ಇರುತ್ತಾರೆ. ನಮ್ಮ ಗತಿ ನೋಡಿ, ರಾತ್ರಿ ೧೦ ಗಂಟೆಗೆ ಹೋಗುತ್ತೇವೆ, ಬೆಳಿಗ್ಗೆ ೮ ಗಂಟೆಗೆ ಬರುತ್ತೇವೆ ಎಂದು, ಅವರು ಹೇಳುತ್ತಾರೆ. ಈ ಒಂದು ಪರಿಸ್ಥಿತಿ ಇದೆ ಅವರಿಗೆ ಒ.ಟಿ. ಯಂತೂ ಇಲ್ಲವೇ ಇಲ್ಲ. ಆದುದರಿಂದ ಪೋಲೀಸ್ ಕಾನ್‌ಸ್ಟೇಬಲ್ಸ್ ಮತ್ತು ಹೆಡ್ ಕಾನ್‌ಸ್ಟೇಬಲ್ಸ್ ಬಗ್ಗೆ ಏನು ಒಂದು ನಿಕೃಷ್ಟ ಮನೋಭಾವನೆ ಇದೆ ಅದು ಹೋಗಬೇಕು ಎಂದು ತಮ್ಮ ಮುಖಾಂತರ ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾನು ಮನವಿ ಮಾಡಿಕೊಳ್ಳುತ್ತೇನೆ. ಎರಡನೆಯದು ಕರ್ನಾಟಕದಲ್ಲಿ ಪೋಲೀಸ್ ವ್ಯವಸ್ಥೆ ಸರಿ ಹೋಗುತ್ತೋ, ಸರಿ ಹೋಗುವುದಿಲ್ಲವೋ ಎನ್ನುವ ಅನುಮಾನ ನನಗೆ ಇದೆ. ಇತ್ತೀಚೆಗೆ ನಮ್ಮ ಅದೃಷ್ಟಕ್ಕೆ ಢಕಾಯಿತಿ ಇಲ್ಲ. ನೂರಾರು ಢಕಾಯಿತಿಗಳು ಬೆಂಗಳೂರು ಹೊರವಲಯದಲ್ಲಿ, ಕೆ.ಜಿ.ಎಫ್. ನಲ್ಲಿ, ಕೋಲಾರ ಹೊರವಲಯದಲ್ಲಿ ನಡೆದಿವೆ. ಒಂದು ಢಕಾಯಿತಿಯನ್ನೂ ಇವರು ಹಿಡಿದಿಲ್ಲ. ಇದನ್ನು ನೋಡಿದರೆ ಪೋಲೀಸ್ ವ್ಯವಸ್ಥೆಯಲ್ಲಿ ಏನೋ ಮಿಸ್ಟೇಕ್ ಇದೆ. ಸರಿಯಾದ ರೀತಿಯಲ್ಲಿ ಪತ್ತೆ ಹಚ್ಚತಕ್ಕ ಕಾರ್ಯಗಳನ್ನು ಮಾಡುತ್ತಿಲ್ಲ. ಢಕಾಯಿತಿಗಳನ್ನು ಪತ್ತೆ ಹಚ್ಚುವುದಕ್ಕೆ ಹೋದರೆ, ಜೊತೆಗೆ ನಾಯಿಗಳನ್ನು ಕರೆದುಕೊಂಡು ಹೋಗುತ್ತಾರೆ. ಅದು ಒಂದು ಮೈಲಿ ದೂರದವರೆಗೆ ಹೋಗಿ, ಮೂಸಿನೋಡಿಕೊಂಡು ನಿಂತುಬಿಡುತ್ತದೆ. ಇವರು ಅದಕ್ಕೆ ಸಲಾಂ ಹೊಡೆದು ವಾಪಸ್ಸು ಬರುತ್ತಾರೆ. ಇವತ್ತು ಆ ನಾಯಿಗಳು ಎಸ್.ಪಿ. ಗಿಂತ ಮೇಲಿವೆ. ಹೆಡ್ ಆಫ್ ದಿ ಡಿಪಾರ್ಟ್‌ಮೆಂಟ್ ಅವೇ ಆಗಿವೆ. ಇವತ್ತು ಇವರು ತಮ್ಮ ಸ್ವಂತ ಬುದ್ಧಿಯನ್ನು ಬಿಟ್ಟು, ನಾಯಿ ಬುದ್ಧಿಗೆ ಬೆಲೆ ಕೊಡುತ್ತಿದ್ದಾರೆ. ಅದನ್ನು ಬಿಟ್ಟು ಸ್ವಂತ ಬುದ್ಧಿ ಉಪಯೋಗಿಸಲಿ ಎಂದು ಹೇಳುತ್ತೇನೆ. ಹಳೇ ಹೆಡ್ ಕಾನ್‌ಸ್ಟೇಬಲ್, ಕಾನ್‌ಸ್ಟೇಬಲ್‌ಗಳು ಒಳ್ಳೆಯವರಿದ್ದಾರೆ. ಅವರಿಗೆ ಅವಕಾಶ ಸಿಕ್ಕಿದರೆ ಢಕಾಯಿತರನ್ನು ಹಿಡಿಯುತ್ತಾರೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಹೋದಸಾರಿ ಇವರು ಮಾತನಾಡುವಾಗ ಒಳ್ಳೊಳ್ಳೆಯ ನಾಯಿಗಳನ್ನು ಕರೆದುಕೊಂಡು ಬನ್ನಿ ಎಂದು ಸಲಹೆ ಕೊಟ್ಟಿದ್ದರು.

ಶ್ರೀ ಆರ್. ವೆಂಕಟರಾಮಯ್ಯ.—ನಾನು ಕೊಟ್ಟಿಲ್ಲ. ಎಕ್ಸ್‌ಪೀರಿಯನ್ಸ್ ಪೋಲೀಸ್ ಅಧಿಕಾರಿಗಳು ಇದ್ದಾರೆ, ಅವರಿಗೆ ವಹಿಸಲಿ. ನಾಯಿಗಳ ಮೇಲೆ ಡಿಪೆಂಡ್ ಆಗುವುದು ಬೇಡ. ಗುಡಿಸಲುಗಳ ಹತ್ತಿರ ಏನಾದರೂ ನಾಯಿ ಹೋದರೆ, ಎಂಟು ದಿವಸಗಳ ಕಾಲ ಅವರ ಮೇಲೆ ಲಾಠಿ ಚಾರ್ಜ್ ಮಾಡಿ, ಚರ್ಮ ಸುಲಿದು ಹಾಕುತ್ತಾರೆ. ಪೋಲೀಸ್‌ನವರೇ ಸ್ವತಃ ಢಕಾಯಿತಿಯನ್ನು ಕಂಟ್ರೋಲ್ ಮಾಡಬೇಕು. ಇವತ್ತು ಕಮ್ಯೂನಲ್ ಡಿಸ್ಟರ್‌ಬೆನ್ಸ್ ವಿಚಾರದಲ್ಲಿ ಹೇಳುವುದಾದರೆ, ಶಿಡ್ಲಘಟ್ಟದಲ್ಲಿ ದಿನವಿಡೀ ಗಲಾಟೆ ಆಗುತ್ತಿದೆ. ಇವತ್ತು ಶಿಡ್ಲಘಟ್ಟ ನಗರಕ್ಕೆ ಸೀಮಿತವಾಗದೆ, ಅಕ್ಕಪಕ್ಕದ ಹಳ್ಳಿಗಳಲ್ಲಿಯೂ ಪೀಸ್ ಕಮಿಟಿ ಮಾಡಿದ್ದಾರೆ. ಆದರೂ ಇದರಿಂದ ಪ್ರಯೋಜನವಾಗಿಲ್ಲ. ಹಳ್ಳಿ ಹಳ್ಳಿಗಳಿಗೆ ಇದು ಸ್ಪ್ರೆಡ್ ಆಗುತ್ತಿದೆ. ಹೋಬಳಿ ಕೇಂದ್ರಗಳಲ್ಲಿಯೂ ಪೀಸ್ ಕಮಿಟಿಗಳನ್ನು ಮಾಡಲಾಗಿದೆ. ಕಮ್ಯುನಲ್ ಡಿಸ್ಟರ್‌ಬೆನ್ಸ್‌ಗೆ ಯಾರು ಕಾರಣರಾಗಿದ್ದಾರೆ, ಅವರ ಮೇಲೆ ಇನ್ನೂ ಕ್ರಮ ಜರುಗಿಸಿಲ್ಲ. ಆಂಟಿ ಗೂಂಡಾ ಆಕ್ಟ್ ಚಲಾಯಿಸಿ, ೧೦ ಜನರನ್ನು ನಿರ್ದಾಕ್ಷಿಣ್ಯವಾಗಿ ಒಳಗೆ ಹಾಕಿದ್ದರೆ ಇದು ಕಂಟ್ರೋಲ್‌ಗೆ ಬರುತ್ತಿತ್ತು. ಕೋಲಾರ ಜಿಲ್ಲೆ ವಕ್ಕಲೇರಿಯಲ್ಲಿ ವಿಗ್ರಹವನ್ನು ಒಡೆದರು. ಆ ದೇವರು ಕೂಡ ಕಣ್ಣು ಮುಚ್ಚಿಕೊಂಡು ಇತ್ತು. ಮತ್ತೆ ನನ್ನ ತಾಲ್ಲೂಕಿನ ಅವನಿಯಲ್ಲಿ ವಿಗ್ರಹವನ್ನು ಒಡೆದರು. ಅದರ ಬಗ್ಗೆ ೨೧ನೇ ತಾರೀಖು ಮೆರವಣಿಗೆ ಇದೆ. ಅದನ್ನು ಯಾರು ಒಡೆದು ಹಾಕಿದರು ಎನ್ನುವುದನ್ನು ಇನ್ನೂ ಪತ್ತೆ ಮಾಡುವುದಕ್ಕಾಗಿಲ್ಲ. ಬೆಟ್ಟದ ಮೇಲೆ ಇದೆ, ಅಲ್ಲಿ ಯಾರೂ ಇರುವುದಿಲ್ಲ, ನಿರ್ಜನ ಪ್ರದೇಶ. ವರ್ಷಕ್ಕೆ ೮ ದಿವಸ ಪೂಜೆ, ಜಾತ್ರೆ ನಡೆಯುತ್ತದೆ. ಅಲ್ಲಿ ದೊಡ್ಡದಾಗಿ ಗಲಾಟೆಯಾಗುತ್ತಿದೆ. ಅದನ್ನು ಹೊಡೆದು ೧೫ ದಿವಸಗಳಾಗಿದ್ದರೂ ಯಾವ ಕ್ರಮವನ್ನು ತೆಗೆದುಕೊಂಡಿಲ್ಲ, ಸುಮ್ಮನೆ ತಿರುಗಾಡುತ್ತಿದ್ದಾರೆ. ಗಲಾಟೆ ಆದರೆ, ೧೦ ಜನ ಸಬ್ ಇನ್ಸ್‌ಪೆಕ್ಟರುಗಳನ್ನು ಕರೆಸಿ, ಸರ್ಕಾರದ ದುಡ್ಡನ್ನು ಪೋಲು ಮಾಡುತ್ತಾರೆ. ಈ ಒಂದು ವ್ಯವಸ್ಥೆ ನಿಜವಾಗಿಯೂ ಇದೆಯೋ, ಫೇಲಾಗಿದೆಯೋ ಎಂದು ಕೇಳುತ್ತೇನೆ. ನಾನು ಸ್ಪಷ್ಟವಾಗಿ ಮೊದಲನೆಯದಾಗಿ ಕೇಳುತ್ತೇನೆ. ಇವೊತ್ತಿನ ದಿವಸ ಅನೇಕ ಕಮಿಷನ್ ರಿಪೋರ್ಟ್ ಇದೆ. ಇವೊತ್ತು ಕಾರ್ಮಿಕರ ಗಲಾಟೆ ಆಗಲಿ, ಕೃಷಿ ಕಾರ್ಮಿಕರ ಗಲಾಟೆ ಆಗಲಿ ಅವರ ಮೇಲೆ ಲಾಠಿ ಚಾರ್ಜ್ ಮಾಡಬೇಡಿ ಎಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದಾರೆ. ಇವೊತ್ತು ಏನಾಗಿದೆ,

ಧಾರವಾಡ ಜಿಲ್ಲೆಯಲ್ಲಿ ನಮಗೆ ಹತ್ತಿ ಬೀಜ ಬೇಕು ಅಂದರೆ ಲಾಠಿ ಚಾರ್ಜ್ ಮಾಡುತ್ತಾರೆ. ಇಂತಹದ್ದು ಆಗಬಾರದಾಗಿತ್ತು. ಐ.ಟಿ.ಸಿ. ಕಾರ್ಮಿಕರ ಮೇಲೂ ಮಾಡಿದರು. ರೈತರು, ಕೃಷಿ ಕಾರ್ಮಿಕರು ನ್ಯಾಯಯುತವಾಗಿ ತಮ್ಮ ಬೇಡಿಕೆಗಳನ್ನು ಇಟ್ಟು ಚಳುವಳಿ ಮಾಡಿದರೆ ಅವರ ಮೇಲೆ ಲಾಠಿ ಚಾರ್ಜ್ ಮಾಡಬೇಡಿ ಎಂದು ಮುಖ್ಯ ಮಂತ್ರಿಗಳು ಹೇಳಿದ್ದರೂ ಸಹ ಈ ಪೋಲೀಸರು ಅವರ ಮೇಲೆ ಹೊಡೆಯಲಿಕ್ಕೆ ಹೋಗುತ್ತಿದ್ದಾರೆ, ಇದು ಬಹಳ ಅನ್ಯಾಯ. ಇನ್ನು ನಮ್ಮ ಪೋಲೀಸ್ ಸೆಟ್‌ಅಪ್ ನೋಡಿದರೆ ಮೊದಲಿಗೂ ಈಗ ಇರುವುದಕ್ಕೂ ಬಹಳ ಹೆಚ್ಚು ಕಡಿಮೆ ಇದೆ. ಮೊದಲು ಒಬ್ಬರು ಡಿ.ಜಿ.ಪಿ. ಇರುತ್ತಿದ್ದರು. ಈಗ ಮೂರು ಡಿ.ಜಿ.ಪಿ., ೧೯ ಜನ ಡಿ.ಐ.ಜಿ. ಇನ್ನು ಎಸ್.ಪಿ. ಲೆಕ್ಕವಿಲ್ಲದಷ್ಟು ಇದ್ದಾರೆ. ಏತಕ್ಕೆ ಈ ವ್ಯವಸ್ಥೆಯಲ್ಲಿ ಅನ್ಯಾಯವಾಗುತ್ತಿದೆ ಎನ್ನುವುದನ್ನು ಗಮನಿಸಬೇಕು. ಇದರ ಬಗ್ಗೆ ನನ್ನ ಸಲಹೆ ಏನೆಂದರೆ, ಹಳೆಯ ಮೈಸೂರಿನಲ್ಲಿ ಒಂದು ರೂಲ್ ಇತ್ತು. ಹಿಂದೆ ಎಸ್.ಪಿ ಅಥವಾ ಡಿ.ಸಿ. ಮಾಡಬೇಕೆಂದರೆ, ಏಳು ವರ್ಷ ಆದರೂ ಅವರಿಗೆ ಅನುಭವ ಬರಲಿ. ಆ ಅನುಭವ ಬಂದಮೇಲೆ ಈ ಪ್ರಪಂಚದ ಆಗುಹೋಗುಗಳು ಅವರಿಗೆ ಅರ್ಥವಾಗುತ್ತದೆ ಅದು ಆದಮೇಲೆ ಅವರಿಗೆ ಡಿಸ್ಟ್ರಿಕ್ಟ್ ಚಾರ್ಜ್ ಕೊಡಬೇಕೆಂದು ಇತ್ತು. ಇವೊತ್ತು ಐ.ಪಿ.ಎಸ್. ಅಂದರೆ ಇವರು ದೇವಲೋಕದಿಂದ ಬಂದಿದ್ದಾರೆ ಏನು ಅಥವಾ ಡೈರೆಕ್ಟ್ ಆಗಿ ಸ್ವರ್ಗ ಲೋಕದಿಂದ ಬಂದಿರುವವರೇನೂ ಅಲ್ಲ. ಅನೇಕ ಜನ ಎಫಿಷಿಯೆಂಟ್ ಐ.ಎ.ಎಸ್., ಐ.ಪಿ.ಎಸ್ ಅಧಿಕಾರಿಗಳು ಇದ್ದಾರೆ. ಆದರೂ ಸಹ ಅವರಿಗೂ ಪ್ರಪಂಚದ ಅನುಭವ ಆಗಬೇಕು. ಇವೊತ್ತು ಏನಾಗಿದೆ ಅಂದರೆ ನಾಲ್ಕು ಜನರಿಗೆ ಹೊಡೆದುಬಿಟ್ಟು ಜಬರ್‌ದಸ್ತಿ ಮಾಡುವ ವ್ಯವಸ್ಥೆ ಇಟ್ಟುಕೊಂಡಿದ್ದಾರೆ. ಹೋಗಲಿ ಇವರು ಸರಿಯಾಗಿ ಕಂಟ್ರೋಲ್ ಮಾಡುತ್ತಿದ್ದಾರೆಯೋ ಅಂದರೆ ಅದನ್ನೂ ಮಾಡುತ್ತಿಲ್ಲ. ಆದ್ದರಿಂದ, ದಯಮಾಡಿ ಏಳು ವರ್ಷಗಳ ಅನುಭವ ಆಗುವವರೆಗೂ ಯಾರಿಗೂ ಡಿಸ್ಟ್ರಿಕ್ಟ್ ಚಾರ್ಜ್ ಕೊಡುವುದು ಬೇಡ. ಏಳು ವರ್ಷ ಕಂಪ್ಲೀಟ್ ಸರ್ವೀಸ್ ಆಗಬೇಕು, ಡಿಸ್ಟ್ರಿಕ್ಟ್ ಚಾರ್ಜ್ ಕೊಡಬೇಕಾದರೆ ಎನ್ನುವ ಒಂದು ನಿಯಮ ಹಿಂದೆ ಇತ್ತು ಎಂದು ಕಾಣುತ್ತದೆ. ತಾವು ದಯವಿಟ್ಟು ಅದನ್ನು ಪೂರ್ತಿಯಾಗಿ ಇಂಪ್ಲಿಮೆಂಟ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಐ.ಎ.ಎಸ್. ಮತ್ತು ಐ.ಪಿ.ಎಸ್. ಅವರಿಗೆ ಡಿಸ್ಟ್ರಿಕ್ಟ್ ಚಾರ್ಜ್ ಮಾಡಲೇಬೇಕೆಂದು ಏನೂ ಇಲ್ಲ. ಈ ಐ.ಎ.ಎಸ್. ಮತ್ತು ಐ.ಪಿ.ಎಸ್. ಅಂದರೆ ಅವರದೇ ಒಂದು ಗುಂಪು. ಇದು ಹೇಗೆ ಇದೆ ಅಂದರೆ ಹಳೆಯ ಮೈಸೂರಿನಲ್ಲಿದ್ದ ಪಟೇಲರು, ಶ್ಯಾನುಭೋಗರು ಇದ್ದಹಾಗೆ. ಪಟೇಲರು ರೆವಿನ್ಯೂ ಕೇಡರ್ ಐ.ಎ.ಎಸ್. ಇದ್ದಹಾಗೆ. ಶ್ಯಾನುಭೋಗರು ಐ.ಪಿ.ಎಸ್. ಇದ್ದಹಾಗೆ. ಇವರನ್ನು ಬಿಟ್ಟು ಯಾವುದೂ ನಡೆಯುವುದಿಲ್ಲ. ಈ ಐ.ಪಿ.ಎಸ್. ಅವರ ಲಾಬಿ ಏನು ಇದೆ ಅಂದರೆ ಏನಾದರೂ ಮಾಡಿ ಈ ಕೆ.ಪಿ.ಎಸ್. ಅವರನ್ನು ಕೆಳಗೆ ತಳ್ಳಿ ಐ.ಪಿ.ಎಸ್. ಅವರು ಡಿಸ್ಟ್ರಿಕ್ಟ್ ಚಾರ್ಜ್‌ಗೆ ಬರಬೇಕು. ನಿಜವಾದ ಎಫಿಷಿಯೆನ್ಸಿ ಇರತಕ್ಕ ಐ.ಪಿ.ಎಸ್. ಆಫೀಸರ್ ಡಿಸ್ಟ್ರಿಕ್ಟ್ ಚಾರ್ಜ್‌ಗೆ ಬಂದಿದ್ದರೆ ಅವರು ಮಾಮೂಲಿ ಪೋಲೀಸ್‌ನಲ್ಲಿರುವ ತರಹ ಮಾಮೂಲಿ ಲಂಚ ತೆಗೆದುಕೊಳ್ಳುವ ವ್ಯವಸ್ಥೆಗೆ ಬಂದಿರುವುದಿಲ್ಲ. ಈಗ ನನಗೆ ತಿಳಿದಮಟ್ಟಿಗೆ ಏನಾಗಿದೆ ಅಂದರೆ ಅನೇಕ ಜನ ಐ.ಪಿ.ಎಸ್. ಅವರು ಇದಕ್ಕೂ ಸಹ ಕೈ ಹಾಕಿದ್ದಾರೆಂದು ಹೇಳುವುದು ಇದೆ. ಆದರೆ ಜಾಸ್ತಿ ಜನರು ಈ ತರಹ ಮಾಡುವುದಿಲ್ಲ. ಇವೊತ್ತು ಐ.ಪಿ.ಎಸ್. ಅಂದರೆ ಅವರಿಗೆ ಒಂದು ಕಿರೀಟ ಇದೆ ಎಂದು ಹೇಳುವುದು ಅಲ್ಲ, ಅವರಿಗೆ ಅನುಭವ ಇಲ್ಲದೇ ಇದ್ದರೆ ಅವರನ್ನು ಡಿಸ್ಟ್ರಿಕ್ಟ್ ಚಾರ್ಜ್‌ಗೆ ಹಾಕಬೇಡಿ ಕೆ.ಪಿ.ಎಸ್. ಅವರನ್ನೇ ಹಾಕಿ. ಏಕೆಂದರೆ ಸರ್ವೀಸಸ್‌ನಲ್ಲಿ ಬಹಳ ಎಫಿಷಿಯೆನ್ಸಿ ಬರಬೇಕಾಗುತ್ತದೆ. ಅಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಗಳು ಇದ್ದಿದ್ದರೆ ಬಹಳ ಒಳ್ಳೆಯದಿತ್ತು. ಅವರು ಏತಕ್ಕೆ ಇಲ್ಲ ಎಂಬುದು ನನಗೆ ಗೊತ್ತಿಲ್ಲ. ಮಾನ್ಯ ಲಕ್ಷ್ಮೀಸಾಗರ್ ಅವರು ಇದನ್ನೆಲ್ಲಾ ಕೇಳಿಕೊಂಡು ಉತ್ತರ ಹೇಳಿದರೆ ಒಳ್ಳೆಯದು.

ಪ್ರೊ॥ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರ ಫೀಲಿಂಗ್ಸ್ ಚೆನ್ನಾಗಿ ಅರ್ಥವಾಗಿದೆ. ಅರ್ಥವನ್ನು ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಆರ್. ವೆಂಕಟರಾಮಯ್ಯ.—ಅಧ್ಯಕ್ಷರೆ, ಇವರು ಸರ್ವಜ್ಞಮೂರ್ತಿಗಳು. ಎಲ್ಲಾ ಅರ್ಥ ಮಾಡಿಕೊಳ್ಳುತ್ತಾರೆ. ಆದರೆ ಇವರು ಏನಾದರೂ obstruction ಮಾಡುತ್ತಿರುತ್ತಾರೆ. ಸ್ವಾಮಿ, ತಾವು ಐ.ಪಿ.ಎಸ್. ಆಫೀಸರ್‌ಗಳನ್ನು ಡಿಸ್ಟ್ರಿಕ್ಟ್ ಛಾರ್ಜ್‌ಗೆ ಹಾಕುವಾಗ ಅವರ ಎಫಿಷಿಯನ್ಸಿಯನ್ನು ಸ್ಕ್ರುಟಿನಿ ಮಾಡಿ ಅವರು ಹಿಂದೆ ಎಷ್ಟು ಕೇಸ್‌ಗಳನ್ನು ಡಿಟೆಕ್ಟ್ ಮಾಡಿದ್ದಾರೆಂಬುದನ್ನು ನೋಡಬೇಕು. ಇಲ್ಲಿ ಒಂದು ದುರಾದೃಷ್ಟ ಎಂದರೆ, ತಾವು ಕೇಸನ್ನು ಹಾಕಿದರೆ ಅಲ್ಲಿಗೆ ತಮ್ಮ ಜವಾಬ್ದಾರಿ ಮುಗಿಯಿತು, ಕೋರ್ಟಿನಲ್ಲಿ ಏನು ಬೇಕಾದರೂ ತೀರ್ಮಾನವಾಗಲಿ ಎಂದು ತಿಳಿದುಕೊಂಡು ಮಾಡುತ್ತಾರೆ. ಕೇಸುಗಳನ್ನು ಹಾಕುವುದು ಬಹಳ ಸುಲಭ. ಯಾರು ಬೇಕಾದರೂ ೕಸುಗಳನ್ನು ಹಾಕಬಹುದು. ಪೋಲೀಸ್ ಸ್ಟೇಷನ್‌ನಲ್ಲಿ ಕ್ರೈಂನ್ನು ಎಷ್ಟು ಬೇಕಾದರೂ ರಿಜಿಸ್ಟರ್

ಮಾಡಬಹುದು. ಇಲ್ಲದಿದ್ದರೆ ಎನ್.ಸಿ.ಆರ್. ಎಂದು ರಸೀಟ್‌ನ್ನು ಬೇಕಾದರೂ ಕೊಟ್ಟು ಕಳುಹಿಸಬಹುದು. ಇದು ಸರಿಯಲ್ಲ. ಕೇಸು ರಿಜಿಸ್ಟರ್ ಆದಮೇಲೆ ಎಷ್ಟು ಡಿಟೆಕ್ಷನ್ ಆಗಿದೆ, ಎಷ್ಟು ಕೇಸಿನಲ್ಲಿ ಕನ್ವಿಕ್ಷನ್ ಆಗಿದೆ ಎಂಬ ಆ್ಯಸ್ಪೆಕ್ಟ್‌ನ್ನು ಇವರು ಪೂರ್ತಿಯಾಗಿ ಮರೆತಿದ್ದಾರೆ. ಮಾನ್ಯ ಅಧ್ಯಕ್ಷರೆ, ನಾನು ಏತಕ್ಕೆ ಇದನ್ನು ಹೇಳುತ್ತಿದ್ದೇನೆಂದರೆ, ಮಾನ್ಯ ಲಕ್ಷ್ಮೀಸಾಗರ್‌ರವರಿಗೂ ಇದು ಗೊತ್ತಿದೆ. ಉದಾಹರಣೆಗೆ ಹೇಳುವುದಾದರೆ, ೪ ಜನ ವಿಟ್‌ನೆಸ್ ಇದ್ದರೆ ೪ ಜನರನ್ನೂ ವಿಚಾರಣೆ ಮಾಡಿ ಸಾಕ್ಷ್ಯ ತೆಗೆದುಕೊಳ್ಳಬೇಕು. ಒಂದುವೇಳೆ ಇಬ್ಬರಿಂದ ಸಾಕ್ಷಿ ತೆಗೆದುಕೊಂಡು ಇನ್ನಿಬ್ಬರಿಂದ ತೆಗೆದುಕೊಳ್ಳದಿದ್ದರೆ, ಆ ಕೇಸ್ ಫೇಲ್ ಆದರೆ ಇಂಥ ಕಾರಣಕ್ಕಾಗಿ ಕೇಸು ಫೇಲ್ ಆಯಿತು ಎಂದು ಬರೆಯುತ್ತಿದ್ದರು. ವಿಚಾರಣೆ ಆದಮೇಲೆ ಅಕ್ವಿಟಲ್ ಆರ್ ಕನ್ವಿಕ್ಷನ್ ಆಗುವುದು ಬೇರೆ. ಹಿಂದೆ ಕೋರ್ಟ್‌ನಲ್ಲಿ ಸ್ಟ್ರಿಕ್ಚರ್ಸ್‌ನ್ನು ಪಾಸ್ ಮಾಡುತ್ತಿದ್ದರು. ಹಿಂದೆ ಕೋರ್ಟ್‌ನ ಸ್ಟ್ರಿಕ್ಚರ್ಸ್‌ಗೆ ಬಹಳ ಗೌರವ ಇತ್ತು. ಈಗ ಅದನ್ನು ಪೂರ್ತಿಯಾಗಿ ಮರೆತಿದ್ದಾರೆ. ಹಿಂದೆ ಜಡ್ಜ್‌ಮೆಂಟ್‌ನ್ನು ತೆಗೆದು ಕೊಂಡುಬಂದು ಪರ್ಸೂ ಮಾಡಿ ಅದರಮೇಲೆ ಡಿಸಿಪ್ಲಿನರಿ ಆ್ಯಕ್ಷನ್‌ನ್ನು ತೆಗೆದುಕೊಳ್ಳುತ್ತಿದ್ದರು. ಆದರೆ ಈಗ ಅದು ಇಲ್ಲ.....

ಪ್ರೊ॥ ಎ. ಲಕ್ಷ್ಮೀಸಾಗರ್.—ಕೆಳಗಿನ ಕೋರ್ಟ್‌ಗಳಲ್ಲಿ ಅಂದರೆ ಡಿಸ್ಟ್ರಿಕ್ಟ್ ಕೋರ್ಟ್, ಸೆಷನ್ಸ್ ಕೋರ್ಟ್, ಮ್ಯಾಜಿಸ್ಟ್ರೇಟ್ ಕೋರ್ಟ್‌ನವರಿಗೆ ನನ್ನ ವರದಿಯಲ್ಲಿ ಏನು ತಿಳಿಸಿದ್ದೇನೆ ಎಂಬುದನ್ನು ತಾವು ನೋಡಬಹುದು. ನೂರಕ್ಕೆ ೮೦ಕ್ಕಿಂತ ಹೆಚ್ಚಿಗೆ ಕೇಸುಗಳಲ್ಲಿ ಕನ್ವಿಕ್ಷನ್ ಆಗಿದೆ. ಇದು ೮೬-೮೭ರ ಪರ್‌ಫಾರ್ಮೆನ್ಸ್.

ಶ್ರೀ ಆರ್. ವೆಂಕಟರಾಮಯ್ಯ.—ಸ್ವಾಮಿ ನನಗೂ ಗೊತ್ತಿದೆ. ನೀವೂ ಲಾಯರು ನಾನೂ ಲಾಯರ್. ಕೇಸುಗಳನ್ನು ಹಾಕಿದ್ದರಲ್ಲಿ ಕನ್ವಿಕ್ಷನ್ ಆಗತಕ್ಕದ್ದು ಎರಡು ರೀತಿಯಲ್ಲಿ ಇರುತ್ತದೆ. ಪ್ಲೀ ಆಫ್ ಗಿಲ್ಟಿ ಎಂದು ಇರುತ್ತದೆ. ಈ ಬೆಂಗಳೂರಿನಲ್ಲಿ ಸಾಮಾನ್ಯವಾಗಿ ಟ್ರ್ಯಾಫಿಕ್ ಅಫೆನ್ಸಸ್ ಎಂದು ಇರುತ್ತವೆ....

ಪ್ರೊ॥ ಎ. ಲಕ್ಷ್ಮೀಸಾಗರ್.—ಅಂಥಾದ್ದು ಎಷ್ಟಿದೆ? ನಾನೂ ಲೆಕ್ಕ ಹಾಕಿದ್ದೇನೆ. ಅಂಥಾದ್ದು ೧೦ ಪರ್ಸೆಂಟ್‌ನ ಮೇಲಿಲ್ಲ. ಟ್ರಯಲ್ ಆಗಿ ಕೇಸು ನಡೆದು ಸಾಕ್ಷಿಯ ವಿಚಾರಣೆ ಸರಿಯಾಗಿ ಕಾನೂನುಬದ್ಧವಾಗಿ ನಡೆದು ಎಲ್ಲಾ ರೀತಿಯಲ್ಲೂ ಅಪರಾಧಿಯಾದವನಿಗೆ ಅವಕಾಶವನ್ನು ಮಾಡಿಕೊಟ್ಟ ಮೇಲೆ ತೀರ್ಮಾನವಾಗಿರತಕ್ಕದ್ದು ಗಿಲ್ಟಿಯಾಗಿರತಕ್ಕದ್ದು ಇದೆ. ಇದು ನನಗೆ ಗೊತ್ತು. ಇದರಲ್ಲಿ ಟ್ರ್ಯಾಫಿಕ್ ಕೇಸುಗಳನ್ನು ಸೇರಿಸಿಕೊಂಡಿಲ್ಲ. ತಾವು ವಿಷಯಾಂತರವನ್ನು ಮಾಡುವುದಕ್ಕೆ ಹೋಗ ಬೇಡಿ. ಅಂಕಿಅಂಶಗಳನ್ನು, ವಾಸ್ತವಾಂಶವನ್ನು ಗಮನದಲ್ಲಿಟ್ಟುಕೊಂಡು ಟೀಕೆ ಮಾಡಿ. ತಾವು ಟೀಕೆ ಮಾಡುವುದನ್ನು ನಾನು ಬೇಡವೆಂದು ಹೇಳುವುದಿಲ್ಲ, ಅಥವಾ ತಪ್ಪು ಎಂದು ಹೇಳುವುದಿಲ್ಲ. ಆದರೆ ಟೀಕೆ ಆರೋಗ್ಯಕರವಾಗಿರಬೇಕು. ವಿಷಯದ ಆಧಾರದಮೇಲೆ ನಿಮ್ಮ ಟೀಕೆ ಇರಬೇಕು....

ಶ್ರೀ ಆರ್. ವೆಂಕಟರಾಮಯ್ಯ.—ಕಂಟೆಸ್ಟ್ ಆಗಿರತಕ್ಕ ಐ.ಪಿ.ಸಿ. ಕೇಸ್‌ನಲ್ಲಿ ನೂರಕ್ಕೆ ೭೦-೮೦ ಕನ್ವಿಕ್ಷನ್ ಆಗುವುದಿಲ್ಲ. ಪ್ರಾಪರ್ಟಿ ಅಫೆನ್ಸಸ್ ಕೇಸ್‌ನಲ್ಲಿ ಪ್ಲೀ ಆಫ್ ಗಿಲ್ಟಿ ಕೇಸಸ್‌ನಲ್ಲಿ ನೂರಕ್ಕೆ ೭೫ರಷ್ಟು ಅಕ್ವಿಟ್ ಆಗಿದೆ. ಸಬ್ಜೆಕ್ಟ್ ಟು ಕರೆಕ್ಷನ್ . ...

ಪ್ರೊ॥ ಎ. ಲಕ್ಷ್ಮೀಸಾಗರ್.—ಡೈರೆಕ್ಟೊರೇಟ್ ಆಫ್ ಪ್ರಾಸಿಕ್ಯೂಷನ್ ಇಲಾಖೆ ನೇರವಾಗಿ ನಮ್ಮ ಕಾನೂನು ಸಚಿವರ ಆಡಳಿತ ವ್ಯವಸ್ಥೆಯ ಅಡಿಯಲ್ಲಿ ಬರುವುದರಿಂದ ಪ್ರತಿವರ್ಷವೂ ಪೋಲೀಸರು ಎಷ್ಟು ಕೇಸುಗಳನ್ನು ರಿಜಿಸ್ಟರ್ ಮಾಡಿದ್ದಾರೆ, ಎಷ್ಟು ಕೇಸುಗಳಲ್ಲಿ ಛಾರ್ಜ್‌ಷೀಟನ್ನು ಹಾಕಿದ್ದಾರೆ ಮುಂತಾದ ವಿಚಾರಗಳನ್ನು ಕನಿಷ್ಠ ಒಂದು ವರ್ಷದಲ್ಲಿ ೨-೩ ಸಾರಿಯಾದರೂ ವಿಚಾರ ಮಾಡುತ್ತೇನೆ. ಇದರ ಪ್ರಕಾರವೇ ಕೋರ್ಟಿನಲ್ಲಿ ಎಷ್ಟು ಕೇಸುಗಳನ್ನು ಹಾಕಲಾಗಿದೆ, ಎಷ್ಟು ಕನ್ವಿಕ್ಷನ್ ಆಗಿದೆ, ಎಷ್ಟು ಅಕ್ವಿಟಲ್ ಆಗಿದೆ ಎಂಬುದನ್ನು ನನ್ನ ವರದಿಯಲ್ಲಿ ಸ್ಪಷ್ಟವಾಗಿ ಕೊಟ್ಟಿದ್ದೇನೆ. ತಾವು ಅದನ್ನು ನೋಡಿದರೆ ಗೊತ್ತಾಗುತ್ತದೆ. ಅದು ಬಿಟ್ಟು ಕೇವಲ ಟೀಕೆ ಮಾಡುವುದು ಸರಿಯಲ್ಲ. ಟೀಕೆ ಮಾಡಬೇಕಾದರೂ ಅಂಕಿಅಂಶಗಳ ಆಧಾರವನ್ನಿಟ್ಟುಕೊಂಡು ಮಾಡಬೇಕು. ಟೀಕೆ ಮಾಡುವುದು ತಪ್ಪು ಎಂದು ನಾನು ಹೇಳುವುದಿಲ್ಲ. ನಾವು ಎಲ್ಲಾದರೂ ತಪ್ಪು ಮಾಡಿದ್ದರೆ ಅದನ್ನು ಎತ್ತಿ ತೋರಿಸಿ ಟೀಕೆ ಮಾಡಿದರೆ ಅದನ್ನು ನಾವು ಸರಿಪಡಿಸಿಕೊಳ್ಳುತ್ತೇವೆ.

ಶ್ರೀ ಆರ್. ವೆಂಕಟರಾಮಯ್ಯ.—ಓಲ್ಡ್ ಸೆಟಪ್‌ನಲ್ಲಿ ಎ.ಪಿ.ಪಿ. ಗಳು ಇರಲಿಲ್ಲ. ಆಗ ಸಬ್ ಇನ್‌ಸ್ಪೆಕ್ಟರ್‌ಗಳು ಎಂದು ಇದ್ದರು. ಅವರು ಡೈರಿಯನ್ನು ಬರೆಯುತ್ತಿದ್ದರು, ಆ ಡೈರಿ ಯಲ್ಲಿ ಸಚ್ ಅಂಡ್ ಸಚ್ ಎ ವಿಟ್ನೆಸ್ ಈಸ್ ಎಕ್ಸಾಮಿನ್ಡ್ ಎಂದು ಬರೆಯುತ್ತಿದ್ದರು. ಪೋಲೀಸರು

ಕೇವಲ ಕೇಸನ್ನು ಹಾಕುವುದು ಮಾತ್ರವಲ್ಲ, ಅದನ್ನು ಫಾಲೋ ಅಪ್ ಕೂಡ ಮಾಡಬೇಕು. ಎಸ್.ಪಿ. ಗಳು ಮತ್ತು ಸುಪೀರಿಯರ್ ಆಫೀಸರ್‌ಗಳು ಯಾರಿದ್ದಾರೆ ಅವರೆಲ್ಲರೂ ತಮ್ಮ ಇಲಾಖೆಯಲ್ಲಿ ನಡೆಯತಕ್ಕ ಪ್ರತಿಯೊಂದು ವ್ಯವಹಾರದಲ್ಲೂನಿಗಾ ಇಟ್ಟಿರಬೇಕು. ಎಲ್ಲೆಲ್ಲಿ ಲ್ಯಾಪ್ಸಸ್ ಇರುತ್ತದೆ ಅದರಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕು.

೧೨-೩೦ ಪಿ.ಎಂ.

ಆಮೇಲೆ ಈ ಪೋಲೀಸ್ ಆಫೀಸರ್‌ಗಳ ವ್ಯವಸ್ಥೆ ಪೂರ್ತಿಯಾಗಿ ಬದಲಾವಣೆಯಾಗಬೇಕು. ಈ ವ್ಯವಸ್ಥೆ ಎಷ್ಟು ಕೆಟ್ಟದಿದೆ ಎಂದರೆ, ಕಂಪ್ಲೇಂಟ್ ಕೊಟ್ಟವರು ಪೋಲೀಸ್ ಸ್ಟೇಷನ್‌ಗೆ ಹೋಗಬೇಕೆಂದರೆ ಭಯ ಪಡುತ್ತಾರೆ. ಕಳ್ಳತನವಾಗಿದ್ದರೂ ಒಡವೇ ವಸ್ತುಗಳು ಹೋಗಿದ್ದರೂ ಅವು ಹೋದರೂ ಹೋಗಲಿ ನಾವು ಕಂಪ್ಲೇಂಟ್ ಕೊಟ್ಟು ಪೋಲೀಸ್ ಸ್ಟೇಷನ್‌ಗೆ ಹೋಗಿ ಏತಕ್ಕೆ ಸಿಕ್ಕಿಹಾಕಿಕೊಳ್ಳಬೇಕು ಎನ್ನುವಷ್ಟರಮಟ್ಟಿಗೆ ಈ ಪೋಲೀಸ್ ಸ್ಟೇಷನ್‌ಗಳ ವ್ಯವಸ್ಥೆಯಾಗಿಬಿಟ್ಟಿದೆ. ಕಂಪ್ಲೇಂಟ್ ಕೊಟ್ಟರೆ ಕಳ್ಳತನವಾದ ಮಾಲುಗಳನ್ನು ಹುಡುಕಿ ಕೊಡುವುದಿರಲಿ ಕಂಪ್ಲೇಂಟ್ ಕೊಟ್ಟವರನ್ನೇ ಪೋಲೀಸ್ ಸ್ಟೇಷನ್‌ಗೆ ಕರೆಸಿ ಹೆರಾಸ್‌ಮೆಂಟ್ ಮಾಡುತ್ತಾರೆನ್ನುವ ಭಾವನೆ ಜನರಲ್ಲಿ ಏನು ಇರುತ್ತದೋ ಅದು ಹೋಗಬೇಕು. ಪೋಲೀಸ್‌ನವರು ಎಂದರೆ ರಕ್ಷಣೆ ಮಾಡತಕ್ಕವರು ಎಂಬ ಸದಭಿಪ್ರಾಯ ಜನರಲ್ಲಿ ಬರಬೇಕು. ಈ ಇಲಾಖೆ ಇರುವುದು ಕಷ್ಟಬಂದಾಗ ಅವರು ನಮಗೆ ಸಹಾಯಕ್ಕೆ ಬರುತ್ತಾರೆ ಎನ್ನುವ ಮನೋಭಾವ ಬರಬೇಕು. ಅಂಥ ಮನೋಭಾವ ಏತಕ್ಕೆ ಇಲ್ಲವೆಂದರೆ ಪೋಲೀಸ್‌ನವರು ಜನರ ಸಂಪರ್ಕವನ್ನು ಇಟ್ಟುಕೊಂಡಿರುವುದಿಲ್ಲ. ಅದಕ್ಕಾಗಿ ಈ ರೀತಿ, ಅವರು ಜನರ ಸಂಪರ್ಕ ಇಟ್ಟುಕೊಂಡು ಮೀಟಿಂಗ್ ಮಾಡಿ ಮಂಡಲ್ ಪಂಚಾಯತ್‌ನಲ್ಲೋ, ತಾಲ್ಲೂಕು ಲೆವಲ್‌ನಲ್ಲೋ ತಿಂಗಳಿಗೆ, ಆರು ತಿಂಗಳಿಗೆ, ಮೂರು ತಿಂಗಳಿಗೆ ಜನರನ್ನು ಕರೆಸಿ ಜನರೊಂದಿಗೆ ಬೆರೆತು ಮಾತನಾಡಿದರೆ, ಅವರ ಕಷ್ಟಸುಖಗಳನ್ನು ತಿಳಿದುಕೊಂಡರೆ ಬಹಳ ಒಳ್ಳೆಯದು. ಈ ರೀತಿ ಪೋಲೀಸ್ ವ್ಯವಸ್ಥೆಯಲ್ಲಿ ಒಂದು ಬದಲಾವಣೆಯಾಗಬೇಕು. ಈ ವ್ಯವಸ್ಥೆಯಲ್ಲಿ ಬದಲಾವಣೆಯಾಗದಿದ್ದರೆ ಪ್ರತಿಯೊಬ್ಬರೂ ಭಯಪಡುವಂಥ ಸಂದರ್ಭಗಳೇ ಜಾಸ್ತಿಯಾಗುತ್ತದೆ. ಕಂಪ್ಲೇಂಟ್ ಕೊಟ್ಟವರೇ ಪೋಲೀಸ್ ಸ್ಟೇಷನ್‌ಗೆ ಹೋಗಲು ಭಯ ಪಡುತ್ತಾರೆ. ಹೀಗಾಗಬಾರದು. ಏತಕ್ಕೆಂದರೆ ಅವರ ಹತ್ತಿರ ನಾಲ್ಕಾರು ದಿವಸಗಳು ಹೋಗಬೇಕಾಗುತ್ತದೆ. ಪೋಲೀಸ್ ಸ್ಟೇಷನ್‌ಗೆ ಅವರನ್ನು ಕರೆಸಿಕೊಳ್ಳ ಬೇಕಾಗುತ್ತದೆ. ಅವರು ಹೋಗಿ ಪೋಲೀಸ್‌ನವರಿಗೆ ಸಹಾಯ ಮಾಡದಿದ್ದರೆ ಯಾವ ಕೇಸ್‌ನ್ನೂ ಡಿಟೆಕ್ಟ್ ಮಾಡುವುದಕ್ಕಾಗುವುದಿಲ್ಲ. ನಿಜವಾಗಿಯೂ ಜನರಿಗೆ ಅನುಕೂಲವಾಗುವುದಿಲ್ಲ. ದಯವಿಟ್ಟು ಜನರ ಕಷ್ಟದ ಬಗ್ಗೆ ಪೋಲೀಸ್‌ನವರು ಸ್ಪಂದಿಸಬೇಕು. ಪೋಲೀಸ್‌ನವರೆಂದರೆ ರಕ್ಷಕ ರಾಗಿರಬೇಕೇ ಹೊರತು ಭಕ್ಷಕರಾಗಿರಬಾರದು. ನಾವು ಜನರಿಗೆ ರಕ್ಷಣೆ ಕೊಡತಕ್ಕಂಥವರು ಎನ್ನುವ ಭಾವನೆ ಬರುವಂತೆ ಮಾಡಬೇಕು. ಅದರ ಬಗ್ಗೆ ಹೆಚ್ಚಿನ ಗಮನವನ್ನು ಕೊಡಬೇಕು. ನಾನು ತಿಳಿದುಕೊಂಡಿದ್ದೇನೆ ಈ ಪೋಲೀಸ್ ವ್ಯವಸ್ಥೆಯಿಂದ ಅನುಕೂಲವಾಗುತ್ತದೆಂದು ನಂಬಲೇಬಾರದು. ನಾನು ಎಂ.ಎಲ್.ಎ. ಆಗಿ ಈ ಮಾತನ್ನು ಹೇಳಬಾರದು, ಆದರೂ ವಿಧಿಯಿಲ್ಲದೆ ಹೇಳಬೇಕಾಗಿದೆ. ಜೊತೆಗೆ ಏನಾಗಿದೆ ಎಂದರೆ ಇದು ಯಾವ ವ್ಯವಸ್ಥೆಯೋ ಏನೋ ನಾನು ಸ್ಪಷ್ಟವಾಗಿ ಕೇಳಿಕೊಳ್ಳು ತ್ತೇನೆ, ಅವರಿಗೆ ಸಂಬಳ ಜಾಸ್ತಿಮಾಡಿ ಅದರ ಬಗ್ಗೆ ನಾನು ಕೇಳುವುದಿಲ್ಲ. ಈ ಲಂಚ ಮಾಮೂಲಿ ಯಾಗಿ ತುಂಬಿತುಳುಕಾಡುತ್ತಿದೆ. ಇದನ್ನು ಯಾರಾದರೂ ಒಪ್ಪಿಕೊಳ್ಳಲೇಬೇಕು. ದುರಾದೃಷ್ಟ ವಶಾತ್ ಸಬ್‌ಇನ್‌ಸ್ಪೆಕ್ಟರ್‌ರವರುಗಳು ಸರ್ಕಲ್ ಇನ್‌ಸ್ಪೆಕ್ಟರ್‌ರವರಿಗೆ ಮಾಮೂಲು ಕೊಡಬೇಕು, ಸರ್ಕಲ್ ಇನ್ಸ್‌ಸ್ಪೆಕ್ಟರಿಂದ ಡಿ.ಎಸ್.ಪಿ. ಯವರಿಗೆ ಮಾಮೂಲು, ಡಿ.ಎಸ್.ಪಿ. ಯಿಂದ ಎಸ್.ಪಿ.ಗೆ ಮಾಮೂಲು ಈ ರೀತಿ ರೇಟುಗಳು ಫಿಕ್ಸ್ ಆಗಿದೆ. ದಯವಿಟ್ಟು ಇದನ್ನು ತಪ್ಪಿಸಬೇಕೆಂದು ಸ್ಪಷ್ಟ ವಾಗಿ ಹೇಳುತ್ತೇನೆ. ನನ್ನ ಅಭಿಪ್ರಾಯದಲ್ಲಿ ಈ ವ್ಯವಸ್ಥೆ ಹೇಗೆ ಬಂತೋ ಗೊತ್ತಿಲ್ಲ. ಈಗ ಇವರುಗಳ ಸಂಬಳ ಜಾಸ್ತಿಯಾಗಿದೆ. ಆದರೂ ಈ ಮಾಮೂಲು ಕ್ರಮ ಏನಿದೆ ಇದನ್ನು ಖಂಡಿತ ವಾಗಿಯೂ ತಪ್ಪಿಸುವುದಕ್ಕೆ ಪ್ರಯತ್ನ ಮಾಡಬೇಕು. ಇಲ್ಲದಿದ್ದರೆ ಪ್ರತಿಯೊಂದಕ್ಕೂ ಕೈಹಾಕು ವುದನ್ನು ನಿಲ್ಲಿಸಲು ಸಾಧ್ಯವಿಲ್ಲ. ಈ ಮಾಮೂಲಿ ಕಾರ್ಯದಿಂದ ಯಾರಿಗೂ ಗೌರವ ತರುವುದಿಲ್ಲ. ಲೋಕಲ್ ಕಂಟ್ರೋಲ್ ಇರುವುದಿಲ್ಲ. ಆದ್ದರಿಂದ ಜನರ ಸೇವೆ ಮಾಡಲು ಸರ್ಕಾರಕ್ಕೆ ಒಳ್ಳೆಯ ಹೆಸರು ತರಲು ಪೋಲೀಸ್ ಅಧಿಕಾರಿಗಳು ಒಳ್ಳೆಯ ಕೆಲಸಗಳನ್ನು ಮಾಡಬೇಕೆಂದು ಪ್ರಾರ್ಥಿಸಿ ಕೊಳ್ಳುತ್ತೇನೆ.

ಶ್ರೀ ಎಂ. ಪಿ. ಪ್ರಕಾಶ್.—ಚಿತ್ರಮಂದಿರದ ಮಾಲೀಕರು ಏನು ಇದ್ದಾರೆ ಅವರು ಪೋಲೀಸ್ ನವರನ್ನು ಕೈಗೆ ಹಾಕಿಕೊಳ್ಳುತ್ತಾರೆ. ಕಾನೂನು ಪರಿಪಾಲನೆ ಮಾಡುವುದಿಲ್ಲ. ಇದು ಬಹಳ ಅಸಹಾಯಕ ಪ್ರವೃತ್ತಿಯಾಗುತ್ತದೆ.

ಶ್ರೀ ಆರ್. ವೆಂಕಟರಾಮಯ್ಯ.—ಸಿನೇಮಾದಲ್ಲಿ ಎಲ್ಲೋ ಒಂದು ಭಾಗ ಇದೆ, ಅದರ ಬಗ್ಗೆಯೇ ಬಹಳ ಹೇಳುತ್ತಾರೆ. ಮಂತ್ರಿಗಳ ಆಸ್ತಿಯಲ್ಲಿ ಒಂದು ಭಾಗ ಆಸ್ತಿ ನನಗೆ ಇಲ್ಲ. ನನ್ನ ಆಸ್ತಿಯನ್ನು ಬೇಕಾದರೆ ಬರೆದುಕೊಡುತ್ತೇನೆ, ಅವರ ಆಸ್ತಿಯನ್ನು ಕೊಡಲಿ. ಒಬ್ಬೊಬ್ಬ ಮಂತ್ರಿ ಏನೇನು ಮಾಡಿದ್ದಾರೆಂಬುದು ನನಗೆ ಗೊತ್ತು. ನಾನು ಒಬ್ಬ ವಕೀಲನೇ ಹೊರತು ವ್ಯಾಪಾರಿ ಅಲ್ಲ. ನನಗೂ ಅಷ್ಟೋ ಇಷ್ಟೋ ವರಮಾನ ಇದೆ. ಮಾನ್ಯ ವೆಂಕಟರಾಮಯ್ಯನವರಿಗೆ ಸಿನೇಮಾ ಇದೆ, ಬಸ್ಸು ಇದೆ ಎಂಬುದು ಒಂದು ರೋಗವಾಗಿದೆ. ಇದು ಹೋಗಬೇಕು.

ಉಪಾಧ್ಯಕ್ಷರು.—ಅವರು ಬೇರೆ ಅರ್ಥದಲ್ಲಿ ಹೇಳಿದ್ದಾರೆ.

ಶ್ರೀ ಆರ್. ವೆಂಕಟರಾಮಯ್ಯ.—ಪೋಲೀಸ್ ಕಾನ್‌ಸ್ಟೇಬಲ್ ಬಗ್ಗೆ ಮೊದಲೇ ಹೇಳಿದೆ. ಮೊನ್ನೆ ಬಡ್ಜೆಟ್ ಭಾಷಣದಲ್ಲಿ ಪೋಲೀಸ್ ಕಾನ್‌ಸ್ಟೇಬಲ್‌ಗಳಿಗೆ ಮತ್ತು ಹೆಡ್ ಕಾನ್‌ಸ್ಟೇಬಲ್‌ಗಳಿಗೆ ಸಬ್ಸಿಡೈಸ್ಡ್ ರೇಟಿನಲ್ಲಿ ಆಹಾರ ಧಾನ್ಯ ಕೊಡುತ್ತೇವೆಂದು ಹೇಳಿದ್ದಾರೆ. ಈ ಮೊದಲು ಒಂದು ಸಾರಿ ಏತಕ್ಕೆ ಇದುವರೆಗೆ ಕೊಡಲಿಲ್ಲವೆಂದು ಕೇಳಿದ್ದೆ. ಅದಕ್ಕೆ ರಿಪೋರ್ಟ್ ಬಂದಿಲ್ಲವೆಂದು ಹೇಳಿದರು. ಸರ್ಕಾರ ಇಷ್ಟೊಂದು ಇನ್‌ಎಫಿಷಿಯಂಟ್ ಸರ್ಕಾರವೇ? ನೀವೇ ಪುಲ್‌ಅಪ್ ಮಾಡಿ ಇಂಥ ರಿಪೋರ್ಟನ್ನು ಸಬ್‌ಮಿಟ್ ಮಾಡಿ ಎಂದು ಹೇಳುವುದಕ್ಕಾಗುವುದಿಲ್ಲವೆ? ಒಂದು ರಿಪೋರ್ಟ್ ತರಿಸುವುದಕ್ಕೆ ಶಕ್ತಿ ಇಲ್ಲವೆ? ಏನೋ ಅನುಕೂಲ ಮಾಡಿಕೊಟ್ಟಿದ್ದೀರಿ, ಆದರೆ ರಿಪೋರ್ಟ್ ಏತಕ್ಕೆ ತರಿಸಲಿಲ್ಲ? ಏತಕ್ಕೆ ಇಂಥ ಅನ್ಯಾಯ ಮಾಡಿದ್ದೀರಿ? ಈ ರೀತಿ ಅನೌನ್ಸ್ ಮಾಡಿದರೆ ಪೋಲೀಸರು ಏನು ಅಂದುಕೊಳ್ಳುತ್ತಾರೆ? ಇಂಥ ದಿನದಿಂದ ನಮಗೆ ಆಹಾರ ಪದಾರ್ಥಗಳನ್ನು ಸಬ್ಸಿಡೈಸ್ಡ್ ರೇಟಿನಲ್ಲಿ ಕೊಡುತ್ತಾರೆಂಬ ಆಸೆ ಇಟ್ಟುಕೊಂಡಿರುತ್ತಾರೆ. ನೀವು ಅನೌನ್ಸ್ ಮಾಡಿ ೩ ತಿಂಗಳಾದರೂ ಏನೂ ಅನುಕೂಲ ಮಾಡಿಕೊಟ್ಟಿಲ್ಲ. ೩–೪–೫ ಸ್ಟಾರ್‌ಗಳು ಇರತಕ್ಕ ಐ.ಪಿ.ಎಸ್. ಅಧಿಕಾರಿಗಳಿಗೇನು ಕೊಟ್ಟಿಲ್ಲ, ಸ್ಟಾರ್ ಇಲ್ಲದವರಿಗೆ ಕೊಟ್ಟಿದ್ದೀರಿ. ಆದರೆ ಒಂದು ರಿಪೋರ್ಟ್ ತರಿಸಿಕೊಳ್ಳಲಿಕ್ಕೆ ಆಗಲಿಲ್ಲವೆ? ಹೋದಸಾರಿ ಅಸೆಂಬ್ಲಿಯಲ್ಲಿ ರಿಪೋರ್ಟ್ ಬಂದಿಲ್ಲವೆಂದು ಪ್ರಸ್ತಾಪ ಮಾಡಿದ್ದೇನೆ. ನೀವು ಏತಕ್ಕೆ ಈ ದಿಸೆಯಲ್ಲಿ ಕೈಯೆತ್ತಿದ್ದೀರಿ? ಅದೇ ಐ.ಪಿ.ಎಸ್. ಅಧಿಕಾರಿಗಳಿಗೆ ಕೊಟ್ಟಿದ್ದರೆ ಹಣಕಾಸಿನ ಇಲಾಖೆಗೆ ಹೋಗಿ ಕೇವಲ ೮ ದಿನಗಳಲ್ಲಿ ಕೆಲಸ ಮಾಡಿಸಿಕೊಂಡು ಬರುತ್ತಿರಲಿಲ್ಲವೆ? ಕೆಳಮಟ್ಟದ ಅಧಿಕಾರಿಗಳಿಗೆ ಅನುಕೂಲ ಮಾಡಿಕೊಡಿ. ಬಡ್ಜೆಟ್ಟಿನಲ್ಲಿ ಏನು ಅನುಕೂಲ ಮಾಡಿಕೊಟ್ಟಿದ್ದೀರಿ ಅದನ್ನು ತಕ್ಷಣ ಕೊಡಿಸಿಕೊಡಬೇಕೆಂದು ಪ್ರಾರ್ಥಿಸುತ್ತೇನೆ. ಇನ್ನು ಹಣಕಾಸಿನ ಇಲಾಖೆಯ ಬಗ್ಗೆ ಸ್ವಲ್ಪ ಹೇಳುತ್ತೇನೆ. ವಿರೋಧ ಪಕ್ಷದ ನಾಯಕಿಯವರು ಬಹಳ ಹೊತ್ತು ಚೆನ್ನಾಗಿ ಹೇಳಿದರು. ಸರ್ಕಾರದ ಬಗ್ಗೆ ಯಾರು ಏನಾದರೂ ಹೇಳಲಿ, ನಾನು ಒಂದು ಮೀಟಿಂಗಿಗೆ ಹೋಗಿದ್ದೆ, ಅಲ್ಲಿ ಕೂಡ ಸರ್ಕಾರದ ಬಗ್ಗೆ ಹೇಳುತ್ತಿದ್ದರು. ಯಾರನ್ನು ನೋಡಿದರೂ ಒಂದು ಮಾತು ಹೇಳುತ್ತಾರೆ, ಸರ್ಕಾರ ಪಾಪರ್ ಆಗಿದೆ, ಇದು ಪಾಪರ್ ಸರ್ಕಾರ ಎಂದು. ಇದು ಏಕೆ ಬಂತೋ ಗೊತ್ತಿಲ್ಲ. ಈ ಒಂದು ಇಂಪ್ರೆಷನ್ ಎಲ್ಲರಲ್ಲೂ ಬಂದುಬಿಟ್ಟಿದೆ. ಚೆಕ್ ಡಿಸ್ ಆನರ್ ಎಂಬುದು ಏನಿದೆ ಇದನ್ನು ಅಮೇರಿಕಾದಲ್ಲಿ ದೊಡ್ಡ ಅಫೆನ್ಸ್ ಅನ್ನುತ್ತಾರೆ. ನಮ್ಮಲ್ಲಿ ನೂರಾರು ಚೆಕ್‌ಗಳು ಡಿಸ್ ಆನರ್ ಆಗಿ ಯಾರನ್ನು ಕೇಳಿದರೂ ಪಾಪರ್ ಸರ್ಕಾರ, ಈ ಸರ್ಕಾರದಿಂದ ಏನೂ ಸಾಧಿಸುವುದಕ್ಕಾಗುವುದಿಲ್ಲವೆಂಬ ಅಭಿಪ್ರಾಯ ಬಂದಿದೆ. ಈ ಅಭಿಪ್ರಾಯ ಹೋಗುವ ಹಾಗೆ ಮಾಡುವುದಕ್ಕೆ ನಮ್ಮ ಸರ್ಕಾರದವರು ಏನೇನು ಕ್ರಮಗಳನ್ನು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳಬೇಕು. ಚೆಕ್ ಕೊಡುವುದೇ ಬೇಡ. ಚೆಕ್ ಕೊಟ್ಟ ಮೇಲೆ ಆನರ್ ಆಗಬೇಕು. ಚೆಕ್ ಕೊಡುವುದು ಎಕ್ಸೆಪ್ಷನ್ ಆದಮೇಲೆಯು. ಹಣ ಖರ್ಚು ಮಾಡುವುದಕ್ಕೆ ಬೇಕಾದಷ್ಟು ಅಡ್ಡಿ ಆತಂಕಗಳು ಉಂಟು. ಅಷ್ಟು ಸುಲಭವಾಗಿ ಸರ್ಕಾರದವರು ದುಡ್ಡು ಕೊಡುವುದಿಲ್ಲ. ಚೆಕ್ ಕೊಟ್ಟಮೇಲೆ ಅದು ಡಿಸ್ ಆನರ್ ಆದರೆ ನಮಗೂ ಅವಮಾನ, ಸರ್ಕಾರಕ್ಕೂ ಅವಮಾನ. ಇನ್ನು ಮುಂದಾದರೂ ದಯವಿಟ್ಟು ಅಂಥ ಪರಿಸ್ಥಿತಿಗೆ ಅವಕಾಶ ಕೊಡಬಾರದು. ಇನ್ನೊಂದು ವಿಷಯವನ್ನು ಪುನರುಚ್ಚಾರ ಮಾಡಬೇಕಾಗಿದೆ. ಹೋದಸಾರಿ ಬಡ್ಜೆಟ್ಟಿನಲ್ಲಿ ಸ್ಪಷ್ಟವಾಗಿ ಹೇಳಿದ್ದೆ. ಸೆಕೆಂಡ್ಸ್ ಸೇಲ್ಸ್ ಏನಾಗಿದೆ ಅದು ನನಗೆ ತಿಳಿದ ಹಾಗೆ ಜನತಾ ಪಾರ್ಟಿ ಪಾರ್ಲಿಮೆಂಟರಿ ಸಭೆಯಲ್ಲಿ ಕೂಡ ಬಂದಿದೆ. ಪತ್ರಿಕೆಯಲ್ಲಿ ಕೂಡ ಓದಿದ್ದೇನೆ. ಸೆಕೆಂಡ್ಸ್ ಸೇಲ್ಸ್‌ನಿಂದ ದಿನಕ್ಕೆ ಒಂದು ಕೋಟಿ ರೂಪಾಯಿ ಸೋರಿಕೆ ಆಗುತ್ತಿದೆ ಎಂದು ಕೇಳಿದ್ದೇನೆ. ಇದನ್ನು ಸರಿಪಡಿಸಬೇಕಾದರೆ ತಕ್ಕ ಕ್ರಮ ಕೈಗೊಳ್ಳಬೇಕು. ಸುಮ್ಮನೆ ಈ ರೀತಿ ಅನ್ಯಾಯವಾಗುತ್ತದೆ. ಇದನ್ನು ಸರಿಪಡಿಸುವುದಕ್ಕೆ ಸೂಕ್ತ ಕ್ರಮ ಕೈಗೊಳ್ಳಬೇಕು. ದಯವಿಟ್ಟು ಈ ಬಗ್ಗೆ ಹೆಚ್ಚಿನ ಗಮನ ಕೊಡಿ. ವಿಪರೀತ ಸೋರಿಕೆಯಾಗುತ್ತಿದೆ. ಆದ್ದರಿಂದ ಇದರ ಬಗ್ಗೆ ಗಮನ ಕೊಡಬೇಕು. ಎರಡನೇಯದು, ಸ್ಪಿರಿಟ್ ಬಗ್ಗೆ ಮಾನ್ಯ ಕೆ. ಎಚ್. ಶ್ರೀನಿವಾಸ್ ಅವರೂ ಹೇಳಿದರು, ನಾನೂ ಹೇಳಿದೆ. ಒಬ್ಬ ಅಶೋಕ್ ಡೈಸ್ ಅಂತ ಇದ್ದಾನೆ. ಅವನೊಬ್ಬನೇ

೧ ಕೋಟಿ ೨೦ ಲಕ್ಷ ರೂಪಾಯಿನಷ್ಟು ಸರ್ಕಾರಕ್ಕೆ ಕೊಡಬೇಕಾಗಿದೆ. ಅಂಥವರು ೩೬ ಜನ ಕೊಡಬೇಕು. ಮಾನ್ಯ ಮುಖ್ಯಮಂತ್ರಿಗಳು ಮತ್ತು ಎಕ್ಸೈಜ್ ಮಂತ್ರಿಗಳು ನಷ್ಟ ಅಷ್ಟಲ್ಲ, ೩೦ ಕೋಟಿ ರೂಪಾಯಿ ಮಾತ್ರ ಎಂದು ಹೇಳುತ್ತಿದ್ದರು. ಎಕ್ಸೈಜ್ ಸೇಲ್ಸ್‌ನಲ್ಲಿ ಬಾಕಿ ಇದೆ ಎಂದು ಹೇಳಿದರು. ಆದರೆ ಸ್ಪಿರಿಟ್ ತೆಗೆದುಕೊಂಡಿದ್ದಾರಲ್ಲ ಅವರ ಹತ್ತಿರ ಎಷ್ಟಿದೆ ಹೇಳಲಿಲ್ಲ. ಅದನ್ನು ಕಂಟ್ರೋಲ್ ಮಾಡಬೇಕು. ಆಮೇಲೆ ಕಮರ್ಷಿಯಲ್ ಟ್ಯಾಕ್ಸಸ್. ಇದರಲ್ಲಿ ಎಷ್ಟು ಸೋರಿಕೆ ಇದೆ ಎಂಬುದು ಗೊತ್ತು. ಮಾನ್ಯ ಮುಖ್ಯಮಂತ್ರಿಗಳಿಗೆ ವಿಪರೀತ ಕೆಲಸ ಇದೆ. ಆದ್ದರಿಂದ ಈ ಕೆಲಸವನ್ನು ನಿಷ್ಠಾವಂತ ಮಂತ್ರಿಗಳಿಗೆ ಯಾರಿಗಾದರೂ ಕೊಡಬೇಕು. ನಮ್ಮ ಲಕ್ಷ್ಮೀಸಾಗರ್ ಅವರಿಗೆ ಕೊಡಲಿ. ೫೦೦ ಕೋಟಿ ರೂಪಾಯಿ ಆದಾಯ ಜಾಸ್ತಿ ಬರುತ್ತದೆ. ಏನೂ ತೊಂದರೆ ಬರುವುದಿಲ್ಲ. ಏಕೆಂದರೆ ಮುಖ್ಯಮಂತ್ರಿಗಳಿಗೆ ಬಿಡುವಿರುವುದಿಲ್ಲ. ೨೪ ಗಂಟೆ ರಾಷ್ಟ್ರದ ರಾಜಕೀಯ ಜವಾಬ್ದಾರಿ ವಹಿಸಬೇಕಾಗುತ್ತದೆ ಅವರು. ಆದ್ದರಿಂದ ಅವರಿಗೆ ತೊಂದರೆಯಾಗಿದೆ. ದಯವಿಟ್ಟು ಈಗಲಾದರೂ ಇದರ ಬಗ್ಗೆ ಗಮನ ಕೊಡಿ. ೫೦೦ ಕೋಟಿ ರೂಪಾಯಿಗಳಾದರೂ ಜಾಸ್ತಿ ವಸೂಲು ಮಾಡುವುದಕ್ಕೆ ಇದರಲ್ಲಿ ಸಾಧ್ಯ ಇದೆ. ಯಾರಾದರೂ ನಿಷ್ಠಾವಂತರು ಕುಳಿತುಕೊಳ್ಳಬೇಕು. ಅವರು ಅವರಲ್ಲಿ ಕೈಹಾಕಬೇಕು. ಕಂಪನಿಗಳಿಂದ ಮಾಮೂಲಿಗಳಿಗೆ ಕೈಹಾಕಬಾರದು. ವಸೂಲು ಮಾಡಿಕೊಂಡು ಬಾ ಅಂತ ಸೆಕ್ರೆಟರಿಯವರನ್ನು ಕಳುಹಿಸಬಾರದು. ಹಾಗೆ ಮಾಡಿದರೆ ೫೦೦ ಕೋಟಿ ರೂಪಾಯಿಗಳಾದರೂ ಜಾಸ್ತಿ ಬರುತ್ತದೆ. ಇದನ್ನು ಏತಕ್ಕೆ ಯೋಚನೆ ಮಾಡುವುದಿಲ್ಲ ? ಕರ್ನಾಟಕದಲ್ಲಿ ಜನತಾ ಪ್ರಭುತ್ವ ರಾಜ್ಯಭಾರ ಮಾಡುತ್ತಿದೆ ನಾನ್ ಕಾಂಗ್ರೆಸ್ (ಐ) ಸರ್ಕಾರ ಇದೆ. ಇದೇರೀತಿ ಕಂಟಿನ್ಯೂ ಆದರೆ ಒಳ್ಳೆಯದು. ಆದರೆ ಇದು ಹೋಗುತ್ತದಲ್ಲ, ಕೆಟ್ಟ ಹೆಸರು ಬರುತ್ತದಲ್ಲ ಅನ್ನಿಸುತ್ತದೆ. ಆದ್ದರಿಂದ ಸೀರಿಯಸ್ಸಾಗಿ ಯೋಚನೆ ಮಾಡಿ ಎರಡು ಡಿಪಾರ್ಟ್‌ಮೆಂಟಿನಲ್ಲಿ ಸೋರಿಕೆಯನ್ನು ಕಂಟ್ರೋಲ್ ಮಾಡಿದರೆ ಸಾಕು: ಕಂದಾಯ ಹಾಕಿ ವಸೂಲು ಮಾಡಬೇಕಾಗಿಲ್ಲ. ಪಂಪ್‌ಸೆಟ್‌ನವರಿಗೆ ರೇಟ್‌ಜಾಸ್ತಿ ಮಾಡಿದ್ದೀರಿ. ಗುಂಡೂರಾಯರ ಕಾಲದಲ್ಲಿ ಏನೋ ಹೋರಾಟ ಮಾಡಿ ೫೦ ರೂಪಾಯಿ ಮಾಡಿಸಿದ್ದೆವು. ಈಗ ಅದನ್ನು ೬೫ ರೂಪಾಯಿ ಮಾಡಿದ್ದೀರಿ. ಕನ್‌ಸ್ಯೂಮರ್ಸ್ ಮೇಲೆ ಡಿಪಾಜಿಟ್ ಕೊಡಿ ಎಂದು ಕೇಳುತ್ತಿದ್ದೀರಿ. ಇದನ್ನು ಬಿಡಿ. ಇಲ್ಲಿ ಸೋರಿಕೆ ಇದೆ. ಇದನ್ನು ಹಿಡಿದರೆ ಜಾಸ್ತಿ ವಸೂಲಾಗುತ್ತದೆ. ಇನ್ನೂ ೫೦೦ ಕೋಟಿ ರೂಪಾಯಿ ಸಂಪನ್ಮೂಲವನ್ನು ಕೂಡಿಸಿದಹಾಗಾಗುತ್ತದೆ. ನೀವು ಸೀರಿಯಸ್ಸಾಗಿ ಯೋಚನೆ ಮಾಡಿ ವಸೂಲು ಮಾಡಿ. ನಿಮಗೆ ಬಂದಿರುವ ಕೆಟ್ಟ ಹೆಸರು ಹೋಗಲಿ ಎಂದು ತಮ್ಮ ಮುಖಾಂತರ ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ. ತುಂಬಾ ಜಾಸ್ತಿ ಸೋರಿಕೆ ಇದೆ. ಇದನ್ನು ತಡೆಗಟ್ಟಲೇಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನೊಂದು ಇಲಾಖೆ ಬಗ್ಗೆ ಹೇಳಬೇಕಾಗಿದೆ. ಎಕಾಲಜಿ ಮತ್ತು ಎನ್‌ವೈರ್ನಮೆಂಟ್ ಇಲಾಖೆ ಬಗ್ಗೆ. ಇದೂ ಮುಖ್ಯಮಂತ್ರಿಗಳಿಗೇ ಬರುತ್ತದೆ. ಮಾನ್ಯ ಮಂತ್ರಿಗಳಾದ ಚಂದ್ರಶೇಖರ್ ಅವರು ಇದನ್ನು ಗಮನಿಸಬೇಕು. ಬೆಂಗಳೂರು ಈ ನಡುವೆ ಏನಾಗುತ್ತಿದೆ ಅಂದರೆ ಬರೀ ದೊಡ್ಡ ದೊಡ್ಡ ಮಹಡಿಗಳು ಬರುತ್ತಿವೆ. ೭ ಅಂತಸ್ತಿನ ಮಹಡಿ, ೧೦ ಅಂತಸ್ತಿನ ಮಹಡಿ ಮತ್ತು ೧೫ ಅಂತಸ್ತಿನ ಮಹಡಿ ಕಟ್ಟುತ್ತಿದ್ದಾರೆ. ಇನ್ನು ಸ್ವಲ್ಪ ದಿವಸಕ್ಕೆ ಬೆಂಗಳೂರು ಅಂದರೆ ಕಾಂಕ್ರೀಟ್ ಜಂಗಲ್ ಆಗುತ್ತದೇನೋ ಎಂಬ ಭಯ ಆಗುತ್ತಿದೆ. ಇದು ಮದ್ರಾಸ್, ಬೊಂಬಾಯಿ ಅಲ್ಲ. ಬೊಂಬಾಯಿಯಾದರೆ ಐಲ್ಯಾಂಡ್. ಅಲ್ಲಿ ಸುತ್ತಲೂ ಸಮುದ್ರ ಇರುವುದರಿಂದ ೨೦ ಅಂತಸ್ತಿನ ಮಹಡಿ ಕಟ್ಟಬೇಕು. ನಮ್ಮಲ್ಲಿ ಆ ಸಮಸ್ಯೆ ಇಲ್ಲ. ಬೆಂಗಳೂರು ನಗರದಲ್ಲಿ ಏಳು ಅಂತಸ್ತಿನ ಮಹಡಿ ಕಟ್ಟುವುದಕ್ಕೆ ಅವಕಾಶ ಕೊಡುವುದಿಲ್ಲ ಎಂದು ಹೇಳುತ್ತಿದ್ದಾರೆ. ಹಳೇ ಮದ್ರಾಸ್ ರಸ್ತೆಯಲ್ಲಿ ಕೋಲಾರಕ್ಕೆ ಹೋಗುವಾಗ ನೋಡಿದರೆ ೨೦ ಅಂತಸ್ತಿನ ಕಟ್ಟಡಗಳು ಕಾಣುತ್ತವೆ. ೭ ಅಂತಸ್ತು, ೧೦ ಅಂತಸ್ತು, ೧೫ ಅಂತಸ್ತಿನ ಕಟ್ಟಡಗಳು ಇವೆ. ಏನೋ ಒಂದು ಯೋಜನೆ ಇದೆಯಂತೆ. ೬೦-೮೦ ಜಾಗ ಕೊಟ್ಟರೆ ಅಪಾರ್ಟ್‌ಮೆಂಟ್ಸ್ ಕಟ್ಟುವುದು. ಇದನ್ನೆಲ್ಲಾ ಮಾಡಿದರೆ ಎಕಾಲಜಿ ಇಂಬ್ಯಾಲೆನ್ಸ್ ಆಗುತ್ತದೆ. ಒಂದೇ ಕಡೆ ಕಾನ್‌ಸೆಂಟ್ರೇಟ್ ಆಗುತ್ತದೆ. ಇದರಿಂದ ಟ್ರಾಫಿಕ್ ಜಾಸ್ತಿ ಯಾಗುತ್ತದೆ. ಹೆಲ್ತ್ ಹಜಾರ್ಡ್ ಆಗುತ್ತದೆ. ಸೆಟಲೈಟ್ ಟೌನ್ ಮಾಡಬೇಕು ಅಂತ ಕೆಂಗೇರಿ ಮತ್ತು ಯಲಹಂಕದಲ್ಲಿ ಮಾಡಿದರು. ಅದೇರೀತಿ ಬೇರೆಬೇರೆ ಕಡೆ ಅಭಿವೃದ್ಧಿ ಮಾಡಬೇಕು. ಕೈಗಾರಿಕೆಗಳನ್ನು ಬೆಂಗಳೂರಿನಿಂದ ದೂರ ಕಳುಹಿಸಬೇಕು. ಗ್ರೀನ್ ಬೆಲ್ಟ್ ಅಂತ ಹೇಳುತ್ತಾರೆ. ಗ್ರೀನ್ ಬೆಲ್ಟ್ ಎಂಬುದು ಒಂದು ನೋಷನ್. ಗ್ರೀನ್ ಅಂತೂ ಕಾಣುವುದಿಲ್ಲ ಬೆಲ್ಟ್ ಎಲ್ಲಿದೆಯೋ ಗೊತ್ತಿಲ್ಲ. ಐದಾರು ವರ್ಷದಿಂದ ಎಲ್ಲಿ ಸಿಗುತ್ತೋ ಅಂತ ಹುಡುಕುತ್ತಿದ್ದೇನೆ. ನನಗೆ ಸಿಗುವುದು ಒಂದೇ ಒಂದು. ಅದು ಅಂಗಡಿಯಲ್ಲಿರುವ ಬೆಲ್ಟ್. ಅದಕ್ಕೆ ಸುಮ್ಮನೆ ಗ್ರೀನ್ ಬೆಲ್ಟ್ ಅಂತ ಹೇಳಿ ಎಲ್ಲಾ ಆಫೀಸರ್ಸ್‌ಗೂ ಇದು ಗ್ರೀನ್ ಬೆಲ್ಟ್‌ನಲ್ಲಿ ಬರುತ್ತದೆ, ಅದನ್ನು ಕ್ಲಿಯರ್ ಮಾಡುವುದಕ್ಕೆ ೫ ಸಾವಿರ ಕೊಟ್ಟರೆ. ಮಾಡಿಕೊಡುತ್ತೇವೆ ಎಂದು ಹೇಳುವಂತಹ ಅಭ್ಯಾಸವಾಗಿಬಿಟ್ಟಿದೆ. ಇಕಾಲಜಿಯ ಬಗ್ಗೆ ಸ್ವಲ್ಪ ಹೆಚ್ಚು ಗಮನ ಕೊಡಬೇಕು.

ಮಾನ್ಯ ಮುಖ್ಯಮಂತ್ರಿಗಳು ಕೂಡ ಇದರ ಬಗ್ಗೆ ಗಮನಹರಿಸಬೇಕೆಂದು ತಮ್ಮ ಮೂಲಕ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇಕಾಲಜಿಯ ಬಗ್ಗೆ ಇನ್ನು ೧೦ ವರ್ಷಗಳ ನಂತರ ಏನಾಗುತ್ತದೋ ಎಂಬುದನ್ನು ಈಗಲೇ ಯೋಚನೆ ಮಾಡಬೇಕು. ನಾವೇನು ಇದಕ್ಕೆ ಹೊಂದಿಕೊಂಡಿದ್ದೇವೆ. ಆದರೆ ನಮ್ಮ ಮಕ್ಕಳ ಗತಿ ಏನು ? ಮುಂದಿನ ಪೀಳಿಗೆಯ ಗತಿ ಏನು ಎಂಬುದನ್ನು ಯೋಚನೆ ಮಾಡಬೇಕು. ಇಷ್ಟನ್ನು ಹೇಳುವುದಕ್ಕೆ ಅವಕಾಶವನ್ನು ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಸ್. ಬಂಗಾರಪ್ಪ (ಸೊರಬ).—ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಮಂಡಿಸಿರತಕ್ಕ ಎಲ್ಲಾ ಬೇಡಿಕೆಗಳನ್ನು ವಿರೋಧಿಸಿ ನಾನು ಮಾತನಾಡುವುದಕ್ಕೆ ನಿಂತಿದ್ದೇನೆ. ಈ ದಿವಸ ಈ ಬೇಡಿಕೆಗಳ ಬಗ್ಗೆ ನಾವು ಮಾತನಾಡುವುದಕ್ಕಿಂತ ಮೊದಲು ಈ ಸದನದಲ್ಲಿ ನಾವು ಈಗಾಗಲೇ ಸಾಕಷ್ಟು ಇಲಾಖೆಗಳ ಬೇಡಿಕೆಗಳ ಕುರಿತು ಚರ್ಚೆ ಮಾಡಿ ಅವುಗಳಿಗೆ ಸದನ ಒಪ್ಪಿಗೆಯನ್ನು ಕೊಟ್ಟಿದ್ದಾಗಿದೆ. ಆದರೆ ಈ ದಿವಸ ನಾವು ಪ್ರಾಮುಖ್ಯವಾಗಿ ಮಾನ್ಯ ಮುಖ್ಯಮಂತ್ರಿಗಳಿಗೆ ಸಂಬಂಧಪಟ್ಟಂತಹ ಸಾಮಾನ್ಯ ಆಡಳಿತ, ಪೋಲೀಸ್ ಇಲಾಖೆ ಮತ್ತು ಕ್ಯಾಬಿನೆಟ್ ಅಫೇರ್ಸ್‌ಗೆ ಸಂಬಂಧಪಟ್ಟ ವಿಚಾರಗಳು, ಎಲೆಕ್ಷನ್ ಇತ್ಯಾದಿ ಈ ಬೇಡಿಕೆಗಳ ಬಗ್ಗೆ ನಾವು ಈ ಸದನದಲ್ಲಿ ಚರ್ಚೆ ಮಾಡುತ್ತಿದ್ದೇವೆ. ನಾವು ಈ ಬೇಡಿಕೆಗಳನ್ನು ಚರ್ಚೆ ಮಾಡುವಂತಹ ಸಂದರ್ಭದಲ್ಲಿ ಸಾಮಾನ್ಯ ಆಡಳಿತಕ್ಕೆ ಸಂಬಂಧಪಟ್ಟಂತೆ ಸಹಜವಾಗಿ ನಾಲ್ಕು ಮಾತುಗಳನ್ನು ಹೇಳಲೇಬೇಕಾಗುತ್ತದೆ. ಅದಕ್ಕೆ ಕಾರಣ ಈಗಿರತಕ್ಕ ಆಡಳಿತದ ಪರಿಣಾಮ ಜನಸಾಮಾನ್ಯರ ಮೇಲೆ ಏನಾಗಿದೆ ಎನ್ನತಕ್ಕಂತಹ ವಿಚಾರ ಕುರಿತು ಮಾತನಾಡತಕ್ಕ ಸಂದರ್ಭ ಬರುತ್ತದೆ, ಈ ಆಡಳಿತ ಪ್ರಜಾಪ್ರಭುತ್ವದ ಆಡಳಿತ ಆಗಿಲ್ಲದಿದ್ದರೆ ಅದು ಸರ್ವಾಧಿಕಾರ ಅಥವಾ ನಿರಂಕುಶ ಅಥವಾ ಆ ಅರ್ಥದಲ್ಲಿ ಬರತಕ್ಕ ಆಡಳಿತ ಒಂದು ವೇಳೆ ಇದಿದ್ದರೆ ಅಥವಾ ರಾಜಪ್ರಭುತ್ವದ ಆಡಳಿತ ಇದಿದ್ದರೆ, ಆ ಆಡಳಿತ ಕುರಿತು ಚಿಂತನೆ ಮಾಡುವುದಕ್ಕೆ ಅಥವಾ ಅದರ ಬಗ್ಗೆ ಚರ್ಚೆ ಮಾಡುವುದಕ್ಕೆ ಯಾರಿಗೂ ಸಾಧ್ಯವಾಗುತ್ತಿರಲಿಲ್ಲ. ಆದರೆ ಇವತ್ತಿನ ದಿವಸ ನಾವು ಪ್ರಜಾಪ್ರಭುತ್ವದ ಚೌಕಟ್ಟಿನಲ್ಲಿ ಕೆಲಸ ಮಾಡುತ್ತಿದ್ದೇವೆ. ಯಾವುದೇ ಪಕ್ಷ ಬಹುಮತ ಪಡೆದು ಸರ್ಕಾರವನ್ನು ರಚನೆ ಮಾಡುತ್ತದೆ. ಬಹುಮತದ ಆಧಾರದ ಮೇಲೆ ಅಂದರೆ ಚುನಾವಣೆ ನಡೆವಂತಹ ಕಾಲದಲ್ಲಿ ಯಾವ ಪಕ್ಷ, ಮತ್ತು ಸಮಾಜದಲ್ಲಿರತಕ್ಕ ಎಲ್ಲಾ ವರ್ಗಗಳಿಗೂ ಅದರಲ್ಲೂ ದೀನದಲಿತರು, ಹರಿಜನ-ಗಿರಿಜನರಿಗೆ, ಅಲ್ಪ ಸಂಖ್ಯಾತರಿಗೆ, ಸಮಾಜದಲ್ಲಿ ಆರ್ಥಿಕವಾಗಿ, ರಾಜಕೀಯವಾಗಿ ಹಾಗೂ ಶೈಕ್ಷಣಿಕವಾಗಿ, ಈ ಸಮಾಜದ ತಳಕ್ಕೆ ಸಿಕ್ಕಿರತಕ್ಕ ಈ ವರ್ಗಗಳನ್ನು ಮೇಲಕ್ಕೆ ಎತ್ತತಕ್ಕ ವಿಚಾರದಲ್ಲಿ ಅವರ ರಕ್ಷಣೆ ಮಾಡತಕ್ಕ ವಿಚಾರದಲ್ಲಿ ಯಾವ ಕಾರ್ಯಕ್ರಮಗಳನ್ನು ನಾವು ಹಾಕಿದ್ದೇವೆ ಎನ್ನತಕ್ಕಂತಹ ಮಾತನ್ನು ಚುನಾವಣೆ ಕಾಲದಲ್ಲಿ ಒಂದು ರಾಜಕೀಯ ಪಕ್ಷ ಕೊಡುತ್ತದೆ, ಅಥವಾ ಜನಸಾಮಾನ್ಯರಿಗೆ ವಾಗ್ದಾನ ಕೊಡುತ್ತದೆ. ಅಂತಹ ಒಂದು ಜವಾಬ್ದಾರಿ ಬಹುಮತ ಪಡೆದ ಯಾವ ಪಕ್ಷ ಸರ್ಕಾರವನ್ನು ರಚನೆ ಮಾಡುತ್ತದೋ ಆ ಪಕ್ಷಕ್ಕೆ ಇರುತ್ತದೆ. ಚುನಾವಣೆ ಕಾಲದಲ್ಲಿ ಜನಸಾಮಾನ್ಯರಿಗೆ ಕೊಟ್ಟಂತಹ ಆಶ್ವಾಸನೆಯನುಸಾರವಾಗಿ ಆಡಳಿತವನ್ನು ಜನಸಾಮಾನ್ಯರಿಗೆ ಕೊಡತಕ್ಕ ಒಂದು ಜವಾಬ್ದಾರಿ ಆ ಪಕ್ಷದ ಮೇಲೆ ಇರುತ್ತದೆ. ಈಗ ಕೇಂದ್ರದಲ್ಲಿ ಒಂದು ಪಕ್ಷ ಅಧಿಕಾರವನ್ನು ನಡೆಸುತ್ತಿದೆ. ಅದು ಆ ಪಕ್ಷಕ್ಕೆ ಸಂಬಂಧಪಟ್ಟಿರತಕ್ಕದ್ದು. ಆದರೆ ನಾನು ಇಲ್ಲಿ ಕರ್ನಾಟಕ ರಾಜ್ಯದ ಮಟ್ಟಿಗೆ ಸೀಮಿತವಾಗಿ ಹೇಳಬೇಕಾಗುತ್ತದೆ. ಇಲ್ಲಿ ಜನತಾ ಪಕ್ಷದವರು ಕಳೆದ ೧೯೮೫ರ ಚುನಾವಣೆ ಕಾಲದಲ್ಲಿ ಮತ್ತು ಅದಕ್ಕಿಂತಲೂ ಪೂರ್ವ ಯಾವ ಮಾತನ್ನು ಜನಸಾಮಾನ್ಯರಿಗೆ ಕೊಟ್ಟಿದ್ದರೋ ಆ ಮಾತನ್ನು ಉಳಿಸತಕ್ಕ ಒಂದು ಕೆಲಸವನ್ನು ಅವರು ಮಾಡಿದ್ದಾರೆಯೋ ಎನ್ನುವ ಪ್ರಶ್ನೆ ನಮ್ಮ ಮುಂದಿದೆ. ಮಾನ್ಯ ಉಪಾಧ್ಯಕ್ಷರೆ, ಇವತ್ತು ಇಂದು ಒಂದು ನೇರವಾದ ಪ್ರಶ್ನೆಯನ್ನು ತಮ್ಮ ಮುಖಾಂತರ ಸರ್ಕಾರದ ಮುಂದೆ ಇಡುತ್ತಿದ್ದೇನೆ. ಇವರು ಚುನಾವಣೆ ಕಾಲದಲ್ಲಿ ಸ್ವಚ್ಛ ಆಡಳಿತವನ್ನು ಕೊಡುತ್ತೇವೆಂದು ಮಾತನಾಡಿದರು ಅದನ್ನು ಮಾಡುವುದಕ್ಕೆ ಈ ಸರ್ಕಾರಕ್ಕೆ ಸಾಧ್ಯವಾಗಿದೆಯೋ ? ಇದು ನೇರವಾದ ಪ್ರಶ್ನೆ. ಕಾಂಗ್ರೆಸ್ ಸರ್ಕಾರ ಇದ್ದಾಗ ಲಂಚಗುಳಿತನ ಇರಲಿಲ್ಲವೆಂದು ನಾನು ಹೇಳುವುದಿಲ್ಲ. ಆದರೆ ಇವತ್ತು ಲಂಚಗುಳಿತನವನ್ನು ಇನ್‌ಸ್ಟಿಟ್ಯೂಷನಲೈಸ್ ಮಾಡತಕ್ಕ ಮಟ್ಟಕ್ಕೆ ಆಡಳಿತವನ್ನು ಎಂದೂ ಕಾಂಗ್ರೆಸ್ ಸರ್ಕಾರ ತಂದಿರಲಿಲ್ಲ. ಅದನ್ನು ಕಡಿಮೆ ಮಾಡತಕ್ಕ ಪ್ರಾಮಾಣಿಕ ಪ್ರಯತ್ನ ಇತ್ತು. ಈಗ ಲಂಚರುಷುವತ್ತುಗಳು ಅವ್ಯಾಹತವಾಗಿ ಎಂದರೆ ಅಡಿಯಿಂದ ಮುಡಿಯವರೆಗೆ ಎಲ್ಲಾ ಇಲಾಖೆಗಳಲ್ಲಿ, ಸಮಾಜದಲ್ಲಿರತಕ್ಕ ಎಲ್ಲಾ ವರ್ಗಗಳಿಗೆ ಸಂಬಂಧಪಟ್ಟ ಎಲ್ಲಾ ಇಲಾಖೆಗಳಲ್ಲಿ ತಾಂಡವ ನೃತ್ಯ

---

† ಈ ಚಿಹ್ನೆ ಸೂಚಿಸಿದ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಮಾಡುತ್ತಿವೆ, ಯಾರು ಕೂಡಾ ಹೇಳುವವರು ಕೇಳುವವರು ಇಲ್ಲ. ಇದು ವಿಧಾನಸೌಧವನ್ನು ಬಿಟ್ಟಿದೆಯೋ ಎನ್ನುವ ಪ್ರಶ್ನೆಯನ್ನು ಯಾರಾದರೂ ಕೇಳಿದರೆ, ವಿಧಾನಸೌಧವನ್ನು ಕೂಡ ತನ್ನ ಮಡಿಲಲ್ಲಿ ಹಾಕಿಕೊಂಡಿದೆ ಎನ್ನುವ ಮಾತು ಹಿಂದೆ ಅರಾಕ್ ಬಾಟ್ಲಿಂಗ್ ಕೇಸ್ ಹಾಗೂ ಇನ್ನಿತರ ವಿಷಯಗಳ ಬಗ್ಗೆ ವಿಚಾರ ಬಂದಾಗ ವಿಧಾನಸೌಧಕ್ಕೂ ನೇರವಾಗಿ ಸಂಬಂಧಪಟ್ಟ ವಿಚಾರ ಎಂದು ಪ್ರಸ್ತಾಪ ಮಾಡಿ ನ್ಯಾಯಾಲಯಗಳ ತೀರ್ಪುಗಳೂ ಕೂಡಾ ಬಂದಿರತಕ್ಕ ವಿಚಾರ. ಅದು ತಮ್ಮ ಗಮನದಲ್ಲಿ ಇದೆ ಎಂದು ನಾನು ಭಾವಿಸುತ್ತೇನೆ. ಇವತ್ತು ಅಡಿಯಿಂದ ಮುಡಿಯವರೆವಿಗೂ ಎನ್ನುವ ಮಾತನ್ನು ಆಡಿದರೆ, ಅದರಲ್ಲಿ ಅಡಿ ಎಂದರೆ ಇವತ್ತು ಒಬ್ಬ ಅಧಿಕಾರಿ ಇರುತ್ತಾನೆ. ಉದಾಹರಣೆಗೆ ಒಬ್ಬ ಗ್ರಾಮಲೆಕ್ಕಿಗ ಎಂದು ವಿಚಾರ ಮಾಡೋಣ. ಜನಸಾಮಾನ್ಯರಿಗೆ ನೇರವಾಗಿ ಸಂಪರ್ಕ ಇರತಕ್ಕ ಆ ಗ್ರಾಮಲೆಕ್ಕಿಗರ ಸ್ಥಾನದಲ್ಲಿ ಇವತ್ತು ಆ ಜನರನ್ನು ಹಿಂಡಿ ಹಿಪ್ಪೆ ಮಾಡಿ ಬಿಸಾಕುತ್ತಾರೆ. ಈ ಗ್ರಾಮಲೆಕ್ಕಿಗನನ್ನು ಸಂಪೂರ್ಣವಾಗಿ ತಹಬಂದಿಗೆ ತರುವುದರಲ್ಲಿ ಈ ಸರ್ಕಾರ ವಿಫಲವಾಗಿದೆ. ಒಬ್ಬ ಗ್ರಾಮಲೆಕ್ಕಿಗನನ್ನು ಕಾನೂನಿನ ಚೌಕಟ್ಟಿನಲ್ಲಿ ತಂದು ಲಂಚರುಷುವತ್ತುಗಳನ್ನು ನಿಲ್ಲಿಸತಕ್ಕ ಪ್ರಾಮಾಣಿಕ ಪ್ರಯತ್ನವನ್ನು ನಿಜವಾಗಿಯೂ ನಡೆಸಿದ್ದರೆ ಒಪ್ಪಬಹುದಾಗಿತ್ತು. ಆಗ ಈ ಸರ್ಕಾರ ಪ್ರಾಮಾಣಿಕ ಪ್ರಯತ್ನದತ್ತ ದೊಡ್ಡ ಹೆಜ್ಜೆ ಹಾಕುತ್ತಿದೆ ಎಂದು ಹೇಳಬಹುದಾಗಿತ್ತು. ಆದರೆ ಮಾನ್ಯ ಉಪಾಧ್ಯಕ್ಷರೇ, ಪ್ರಾಮಾಣಿಕ ಪ್ರಯತ್ನ ತೃಣ ಮಾತ್ರವಾದರೂ ಕೂಡಾ ನಡೆದಿದ್ದರೆ ಆ ಅಧಿಕಾರಿಗಳು ಸ್ವಲ್ಪ ಬೆಚ್ಚಿ ಬೀಳುತ್ತಿದ್ದರು, ಬೆದರಿಬೀಳುತ್ತಿದ್ದರು. ಆದ್ದರಿಂದ ಜನರಿಗೆ ಸ್ವಲ್ಪ ರಕ್ಷಣೆ ದೊರಕುತ್ತಾ ಇತ್ತು. ಇವತ್ತು ಕಾನೂನುಗಳು ಇವೆ. ಲೋಕಾಯುಕ್ತ ಇದೆ. ಹಿಂದೆ ಕೂಡಾ ವಿಜಿಲೆನ್ಸ್ ಕಮೀಷನ್ ಕೂಡ ಇತ್ತು. ಅದರಿಂದ ನಿಲ್ಲಿಸುವುದಕ್ಕೆ ಆಗಿಲ್ಲವೆಂದು ಹೇಳಿ ಲೋಕಾಯುಕ್ತ ತಂದಿದ್ದೀರಿ. ಇವತ್ತು ಲೋಕಾಯುಕ್ತದಲ್ಲಿ ನಡೆದಿರುವುದೇನು ? ಎಲ್ಲೋ ಒಂದೊಂದು ಸಾರಿ ಮಾತ್ರ ಗ್ರಾಮಲೆಕ್ಕಿಗನನ್ನು ಹಿಡಿದು, ಒಬ್ಬ ಗುಮಾಸ್ತರನ್ನು ಹಿಡಿದರು, ಒಬ್ಬ ಅಸಿಸ್ಟೆಂಟ್ ಎಂಜಿನಿಯರ್‌ರನ್ನೋ, ಎಕ್ಸಿಕ್ಯೂಟಿವ್ ಎಂಜಿನಿಯರ್‌ರನ್ನೋ, ಒಬ್ಬ ಜೂನಿಯರ್ ಎಂಜಿನಿಯರನ್ನೋ ಹಿಡಿದರೆಂದು ಅದೂ ಕೂಡಾ ಅಮಾವಾಸ್ಯೆಗೆ ಒಂದು ಹುಣ್ಣಿಮೆಗೆ ಒಂದು, ಆರು ತಿಂಗಳಿಗೆ ಒಂದು ಸುದ್ದಿ ಬರುತ್ತಿದೆ. ರಾಜ್ಯದಲ್ಲಿ ಲೋಕಾಯುಕ್ತ ಸ್ಥಾಪನೆ ಮಾಡಿ ಎಷ್ಟು ದಿವಸ ಆಯಿತು ? ಇದು ಒಂದು ಅಪರೂಪವಾಗಿರತಕ್ಕ ಅಧಿಕಾರ ಎಂದು ನೀವೆ ಹೇಳಿದ್ದೀರಿ. ಇವತ್ತು ಯಾರು ಯಾರು ಸಾರ್ವಜನಿಕ ಸೇವಾ ಕ್ಷೇತ್ರದಲ್ಲಿ ಇದ್ದಾರೋ ಅವರನ್ನು ಸಂಪೂರ್ಣವಾಗಿ ತಹಬಂದಿಗೆ ತರತಕ್ಕ ಕರ್ತವ್ಯವನ್ನು ಮಾಡುತ್ತದೆ ಎಂದು ಹೇಳಿದ್ದೀರಿ. ಈ ಲೋಕಾಯುಕ್ತ ಮೇಲೆ ನಾವು ಈಗಾಗಲೇ ಕೋಟ್ಯಾಂತರ ರೂಪಾಯಿಗಳನ್ನು ಖರ್ಚುಮಾಡಿದ್ದೇವೆ. ಇದರ ಬಗ್ಗೆ ಪ್ರಶ್ನೋತ್ತರಗಳು ನಡೆದಿವೆ, ಆದರೆ ಲೋಕಾಯುಕ್ತದಿಂದ ಆಗಿರತಕ್ಕ ಉಪಯೋಗ ಏನು ಎನ್ನುವ ಬಗ್ಗೆ ಉತ್ತರವನ್ನು ನಿರೀಕ್ಷೆ ಮಾಡುತ್ತಿದ್ದೇನೆ. ಲೋಕಾಯುಕ್ತದಿಂದ ಏನು ಉಪಯೋಗ ಆಗಿದೆ ? ಇವತ್ತು ಕಾನೂನುಗಳು ಏನಿವೆ ಅವು ಒಬ್ಬ ವಿಲೇಜ್ ಅಕೌಂಟ್‌ನನ್ನು ಹಿಡಿಯುವುದಕ್ಕೆ, ತಹಬಂದಿಗೆ ತರುವುದಕ್ಕೆ ಯಾವ ಕಾನೂನಿನಿಂದ ಏನು ಮಾಡಿದ್ದೀರಿಯೆಂದು ನಾನು ಪ್ರಶ್ನೆಯನ್ನು ಕೇಳುತ್ತೇನೆ. ಜನಸಾಮಾನ್ಯ ಇವತ್ತು ಸಂಪೂರ್ಣವಾಗಿ ಕತ್ತರಿಯಲ್ಲಿ ಸಿಕ್ಕಿಹಾಕಿಕೊಂಡಿದ್ದಾನೆ. ಆತನನ್ನು ಹೇಳುವವರು ಕೇಳುವವರು ಯಾರೂ ಇಲ್ಲ. ಹಳ್ಳಿಗಾಡಿನಲ್ಲಿರತಕ್ಕ ಸಾಮಾನ್ಯನ ಪರಿಸ್ಥಿತಿ ಉಲ್ಬಣವಾಗಿರತಕ್ಕದ್ದು ಒಂದು ಕಡೆಯಾದರೆ ಮತ್ತೊಂದು ಕಡೆ ಪ್ರಕೃತಿಯ ಕೋಪ, ನಿಮ್ಮ ಆಡಳಿತದ ವಿಫಲತೆಯಿಂದ ಜನಸಾಮಾನ್ಯನನ್ನು ಹಿಂಡಿ ಹಿಪ್ಪೆಮಾಡಿ ಬಿಸಾಕಿದ್ದೀರಿ. ಲಂಚ ಎನ್ನತಕ್ಕದ್ದು ಅಡಿಯಿಂದ ಮುಡಿಯವರೆಗೆ ಎಲ್ಲಾ ಕ್ಷೇತ್ರಗಳಲ್ಲಿ ವ್ಯಾಪಕವಾಗಿ ಬೆಳೆದಿದೆ. ಜನಸಾಮಾನ್ಯನ ಬಗ್ಗೆ ನಿಮ್ಮ ಆಡಳಿತ ಏನು ಮಾಡುತ್ತಿದೆ ? ನಿಮ್ಮ ಇಲಾಖೆ ಏನೂ ಮಾಡುತ್ತಾ ಇದೆ ? ನಿಮ್ಮ ಕಾನೂನುಗಳು ಏನೇನು ಮಾಡಿವೆ ಎಂಬುದು ಎಲ್ಲರಿಗೂ ಗೊತ್ತಿರತಕ್ಕ ವಿಚಾರ. ನಿಮ್ಮ ಅಧಿಕಾರದಿಂದ ನಿಮ್ಮ ಹಣೆಯಬರಹ ಶೇಕಡ 1 ರಷ್ಟು ತರುವುದಕ್ಕೆ ಸಾಧ್ಯವಿಲ್ಲ. ನಿಮ್ಮಿಂದ ಮಾಡುವುದಕ್ಕೆ ಸಾಧ್ಯವಿಲ್ಲ. ನೀವು ಮನೋಸ್ಥೈರ್ಯವನ್ನು ಕಳೆದುಕೊಂಡಿದ್ದೀರಿ, ನಿಮಗೆ ಪ್ರಜಾಪ್ರಭುತ್ವದಲ್ಲಿ ನಂಬಿಕೆ ನಶಿಸಿ ಹೋಗಿದೆ. ನಿಮ್ಮ ಆಡಳಿತ ವೈಖರಿ ಏನಿದೆ ಅದು ಪೂರ್ವಕ್ಕೆ ಬದಲಾಗಿ ಪಶ್ಚಿಮಕ್ಕೆ ತಿರುಗಿಕೊಂಡಿದೆ ಎಂದು ಹೇಳಬೇಕಾಗಿದೆ. ಕರ್ನಾಟಕ ರಾಜ್ಯದಲ್ಲಿ ಲಂಚಗುಳಿತನ ಎಲ್ಲಾ ವರ್ಗದಲ್ಲೂ ಎಲ್ಲಾ ಇಲಾಖೆಗಳಲ್ಲಿಯೂ ಅವ್ಯಾಹತವಾಗಿ ನಡೆದಿದೆ, ಅದನ್ನು ನಿಲ್ಲಿಸುವುದಕ್ಕೆ ನಿಮ್ಮಿಂದ ಆಗಿಲ್ಲ. ಮುಖ್ಯಮಂತ್ರಿಗಳು ರಾಜ್ಯದ ಮುಖ್ಯ ಕಾರ್ಯದರ್ಶಿಯವರಿಗೆ ಪತ್ರ ಬರೆದಿದ್ದಾರೆ. ಮುಖ್ಯ ಕಾರ್ಯದರ್ಶಿಯವರು ಎಲ್ಲಾ ಇಲಾಖೆಗಳ ಕಾರ್ಯದರ್ಶಿಯವರಿಗೆ ಪತ್ರ ಬರೆದಿದ್ದಾರೆ. ನೀವು ಪತ್ರ ಬರೆದ ಮೇಲೆ ಏನೇನು ಆಯಿತು ? ನಿಮ್ಮ ಪತ್ರಿಕಾ ಹೇಳಿಕೆಗೆ ಐದು ಪೈಸೆ ಬೆಲೆ ಸಿಗಲಿಲ್ಲ. ಎಲ್ಲಾ ಇಲಾಖೆಗಳ ಕಾರ್ಯದರ್ಶಿಗಳು ಇಲಾಖೆಯ ಮುಖ್ಯಸ್ಥರಿಗೆ ಪತ್ರ ಬರೆದು ಭ್ರಷ್ಟಾಚಾರ ಹಾಗೂ ಲಂಚಗುಳಿತನದ ವಿಚಾರದಲ್ಲಿ ಮುಖ್ಯ ಮಂತ್ರಿಗಳು ಪತ್ರ ಬರೆದಿದ್ದಾರೆ ನೀವು ಲಂಚ ಹಾಗೂ ಭ್ರಷ್ಟಾಚಾರವನ್ನು ತಹಬಂದಿಗೆ ತರಬೇಕಾಗುತ್ತದೆ, ಲಂಚವನ್ನು ನಿಲ್ಲಿಸಬೇಕೆಂದು ಬರೆದಿದ್ದಾರೆ.

ಲಂಚವನ್ನು ನಿಲ್ಲಿಸುವುದು ಹಾಳಾಗಿ ಹೋಗಲಿ ಇದರಿಂದ ಆಗದಿದ್ದರೆ ಇಷ್ಟು ಪರ್ಸೆಂಟ್ ಲಂಚವನ್ನು ಕಂಟ್ರೋಲ್ ಮಾಡುವುದಕ್ಕೆ ಪ್ರಯತ್ನ ಮಾಡಿದ್ದೇವೆಂದು ಅಂತಹ ಒಂದು ಪರಿಸ್ಥಿತಿಯನ್ನು ಉದ್ಭವ ಮಾಡಿಕೊಳ್ಳಬೇಕು. ಮಂತ್ರಿಗಳು ಹಾಗೂ ಮುಖ್ಯಮಂತ್ರಿಗಳ ದೊಡ್ಡ ದೊಡ್ಡ ವಿಚಾರಗಳನ್ನು ನೋಡಿದಾಗ, ಮುಖ್ಯಕಾರ್ಯದರ್ಶಿಗಳ ಪತ್ರಕ್ಕೆ ಬೆಲೆ ಕೊಡುತ್ತಾರೆಯೇ ? ಯಾವ ಇಲಾಖೆಯ ಕಾರ್ಯದರ್ಶಿಯ ಪತ್ರಕ್ಕೆ ಬೆಲೆ ಕೊಡುವುದಕ್ಕೆ ಸಾಧ್ಯವೆನ್ನುವ ಪ್ರಶ್ನೆಯನ್ನು ಇಡುತ್ತೇನೆ. ಮಾನ್ಯ ಉಪಾಧ್ಯಕ್ಷರೇ ಒಂದು ಉದಾಹರಣೆಯನ್ನು ಹೇಳುವುದಾದರೆ ಕೃಷ್ಣರಾಜಪುರದ ಒಬ್ಬ ವಿಲೇಜ್ ಅಕೌಂಟೆಂಟ್ ಇದ್ದಾನೆ ಆತನ ಹೆಸರು ಹೇಳುವುದಕ್ಕೆ ನನಗೆ ಆಸೆಯಿಲ್ಲ. ಹೆಸರು ಹೇಳುವುದಕ್ಕೆ ನಮ್ಮ ನಿಯಮಾವಳಿಗಳು ಅಡ್ಡಬರುತ್ತವೆ. ನೀವು ಹಿಂದೆ ಏನು ಹೇಳಿದ್ದೀರಿ ಗ್ರೀನ್ ಬೆಲ್ಟ್ ಏರಿಯಾ ದಿಂದ ಮುಂದೆ ಬಿಡುವುದಿಲ್ಲವೆಂದು ೧೯೮೫-೮೬ ರಲ್ಲಿ ಮಾನ್ಯ ಬೊಮ್ಮಾಯಿಯವರು ಹೇಳಿಕೆಯನ್ನು ಕೊಟ್ಟರು. ಆ ಎಲ್ಲಾ ಕಡತ ನನ್ನಹತ್ತಿರ ಇವೆ, ವಿಷಯ ಬಂದಾಗ ಅದರ ಬಗ್ಗೆ ಪ್ರಸ್ತಾಪ ಮಾಡುತ್ತೇನೆ. ಗೃಹನಿರ್ಮಾಣ ಸಹಕಾರ ಸಂಘಗಳನ್ನು ಗ್ರೀನ್ ಬೆಲ್ಟ್ ಏರಿಯಾದಿಂದ ಮುಂದಕ್ಕೆ ಬಿಡುವುದಿಲ್ಲವೆಂದು ಹೇಳಿದಿರಿ. ಇವತ್ತು ಸಹಕಾರ ಸಂಘಗಳ ಮುಖಾಂತರ ಸೈಟುಗಳನ್ನು ಪಡೆದು ಕೊಂಡು ಮನೆಗಳನ್ನು ಕಟ್ಟಿಕೊಂಡು ಮುಂದೆ ಹೋಗುತ್ತಿದ್ದಾರೆ. ಇವತ್ತು ಸಹಕಾರ ಸಂಘಗಳು ನಾಯಿಕೊಡೆಗಳಂತೆ ಹುಟ್ಟಿಕೊಂಡು ಕೋಟ್ಯಾಂತರ ರೂಪಾಯಿ ವ್ಯವಹಾರವನ್ನು ಒಂದೊಂದು ಸಂಘ ನಡೆಸುತ್ತಿವೆ. ಪಾಟೀಲ್ ಎನ್ನತಕ್ಕ ವಿಲೇಜ್ ಅಕೌಂಟೆಂಟ್ ಫೋನ್, ಬಂಗಲೆ, ಮನೆ, ಕಾರು ಈ ತರಹ ಲಕ್ಷಾಂತರ ರೂಪಾಯಿ ಆಸ್ತಿ ಮಾಡಿಕೊಂಡಿದ್ದಾನೆ.

ಶ್ರೀ ಆರ್. ಬಿ. ಪೋತದಾರ್.—ಹೆಸರು ಹೇಳುವುದಿಲ್ಲವೆಂದು ಹೆಸರು ಹೇಳಿಬಿಟ್ಟೀರಿ.

ಶ್ರೀ ಎಸ್. ಬಂಗಾರಪ್ಪ.—ಹೇಳಿಬಿಟ್ಟೆನಾ. ಯಾರ ಮೇಲೂ ವ್ಯಯಕ್ತಿಕವಾಗಿ ಆರೋಪ ಮಾಡಬೇಕೆಂದು ನನ್ನ ಆಸೆಯಿಲ್ಲ, ಒಳ್ಳೆಯ ಅಧಿಕಾರಿಗಳು ಇದ್ದಾರೆ, ಇಲ್ಲವೆಂದು ಮಾತನಾಡುವುದಿಲ್ಲ, ಎಲ್ಲರೂ ಹಾಗೇಇದ್ದಾರೆಂದು ಹೇಳುವುದಿಲ್ಲ. ಎಲ್ಲಾ ಇಲಾಖೆ ಅಧಿಕಾರಿಗಳು ಕೆಳಗಿನಿಂದ ಮೇಲುಗಡೆಯ ವರೆಗೆ ಪೂರ್ತಿ ಲಂಚಕೋರರು ಎಂದು ನಾನು ಹೇಳುವುದಿಲ್ಲ, ಒಳ್ಳೆಯ ಅಧಿಕಾರಿಗಳು ಇದ್ದಾರೆ. ನಿಜ ಹೇಳಬೇಕಾದರೆ ಒಂದು ಕಾಲದಲ್ಲಿ ಹಳೆಯ ಮೈಸೂರು ಆಡಳಿತದಲ್ಲಿ ಒಳ್ಳೆಯ ಹೆಸರನ್ನು ಪಡೆದಿತ್ತು. ಅದೇರೀತಿ ಕರ್ನಾಟಕ ಆದಮೇಲೆ ೧೯೫೬ರ ನಂತರ ಕೂಡ ಒಳ್ಳೆಯ ಅಧಿಕಾರಿಗಳು ಕರ್ನಾಟಕ ರಾಜ್ಯ ನಲ್ಲಿ ಹೆಸರು ಪಡೆದಿರತಕ್ಕವರು ಇದ್ದಾರೆ. ಹೆಸರು ಪಡೆದಿರತಕ್ಕ ರಾಜ್ಯ ಇದು. ಕೆಟ್ಟವರೂ

೧-೩೦ ಪಿ. ಎಂ.

ಇದ್ದರು. ಆದರೆ ಒಳ್ಳೆಯವರ ಪ್ರಮಾಣ ಜಾಸ್ತಿ ಇತ್ತು ಎಂಬುದನ್ನು ನಾವು ಮರೆಯಬಾರದು. ಈಗಲೂ ಕೂಡ ಒಳ್ಳೆಯ ಅಧಿಕಾರಿಗಳು ಇದ್ದಾರೆ. ಕೆಳಗಿನಿಂದ ಮೇಲಿನ ವರೆಗೂ ಇದ್ದಾರೆ. ಆದರೆ ಇವರ ಪ್ರಮಾಣ ಮಾತ್ರ ದಿನದಿಂದ ದಿನಕ್ಕೆ ಕುಗ್ಗಿ ಹೋಗುತ್ತಿದೆ. ಇದಕ್ಕೆ ಕಾರಣ ಏನು ? ಇದಕ್ಕೆ ಕಾರಣ ನೀವು ಸಂಪೂರ್ಣವಾಗಿ ಜನರಿಗೆ ನಂಬಿಕೆಯ ಮಾತುಗಳನ್ನು ಹೇಳಿದಿರಿ. ನೀವು ಹೇಳಿದ್ದು ಮತಗಳನ್ನು ಲಪಟಾಯಿಸುವುದಕ್ಕೋಸ್ಕರ ಹೊರತು ಹೃದಯಾಂತರಾಳದಿಂದ ಅಲ್ಲ. ಒಳ್ಳೆಯ ಆಡಳಿತವನ್ನು, ಶುಭ್ರ ಸ್ವಚ್ಛ ಆಡಳಿತವನ್ನು ಕೊಡಬೇಕು, ಜನಸಾಮಾನ್ಯರ ಜೀವನವನ್ನು ಹಸನಾಗಿ ಮಾಡಬೇಕು, ಅವರು ಒಳ್ಳೆಯ ಜೀವನವನ್ನು ಮಾಡಬೇಕು, ಅವರಿಗೆ ತೊಂದರೆಯನ್ನು ಕೊಡಬಾರದು ಎನ್ನುವ ಅಭಿಪ್ರಾಯ ನಿಮಗೆ ಇರಲಿಲ್ಲವೆಂದು ಸ್ಪಷ್ಟವಾಗಿ ಎದ್ದುಕಾಣುತ್ತದೆ.

ಮಾನ್ಯ ಅಧ್ಯಕ್ಷರೇ, ನಾನು ವಿವರಗಳನ್ನು ಕೊಡುವುದಕ್ಕೆ ಹೋಗುವುದಿಲ್ಲ. ನಿಮ್ಮ ಅನುಭವ ದಲ್ಲಿದೆ, ನನ್ನ ಅನುಭವದಲ್ಲಿದೆ, ಮಾನ್ಯಸದಸ್ಯರ ಅನುಭವದಲ್ಲಿರತಕ್ಕಂಥ ಮಾತು ಇದು. ಈ ಸತ್ಯವನ್ನು ಯಾರೂ ಮರೆಮಾಚುವುದಕ್ಕೆ ಆಗುವುದಿಲ್ಲ, ಇವರ ಆಡಳಿತ ಒಂದು ಸಂಪೂರ್ಣವಾಗಿ It is an embodiment of corruption from bottom to the top. ಇದಕ್ಕಿಂತ ಒಳ್ಳೆಯ ಉದಾಹರಣೆಯನ್ನು ಕೊಡುವುದಕ್ಕೆ ನನಗೆ ಸಾಧ್ಯವಾಗಲಾರದು. ಇನ್ನು ಜನರಲ್ ಅಡ್ಮಿನಿಸ್ಟ್ರೇಷನ್ ನಲ್ಲಿ ಸುಮಾರಾಗಿ ನನಗೆ ಗೊತ್ತಿರುವಹಾಗೆ ಅನೇಕ ಇಲಾಖೆಗಳು ಇವೆ. ಯುವಕರಿಗೆ ಮನೆಗೊಂದು ಉದ್ಯೋಗ ಕೊಡುತ್ತೇವೆ ಎಂದು ಹೇಳಿದ್ದೀರಿ. ಕೊಟ್ಟಿದ್ದೀರಿ, ಉದ್ಯೋಗವನ್ನು ಹುಡುಕುವಂಥ ಉದ್ಯೋಗವನ್ನು ಕೊಟ್ಟಿದ್ದೀರಿ ಪ್ರತಿಯೊಂದು ಮನೆಯವರೂ ಉದ್ಯೋಗವನ್ನು ಹುಡುಕಿಕೊಂಡು ಹೋಗಬೇಕು. ಇದೇ ಒಂದು ಉದ್ಯೋಗವನ್ನು ತಾವು ಅವರಿಗೆ ಕರ್ನಾಟಕ ರಾಜ್ಯದಲ್ಲಿ ಕೊಟ್ಟಿರು ವಂಥದ್ದು. ಇವತ್ತು ಕರ್ನಾಟಕ ರಾಜ್ಯದಲ್ಲಿ ಯುವಕ ಯುವತಿಯರು ಎಸ್. ಎಸ್. ಎಲ್. ಸಿ. ಬಿಎ, ಬಿಎಸ್ಸಿ, ಬಿಕಾಂ. ಡಿಪ್ಲೊಮಾ ಗ್ರಾಜುಯೇಟ್ಸ್ ಟೆಕ್ನಿಕಲ್ ವಿದ್ಯಾಭ್ಯಾಸ ಮಾಡಿದವರು ಸಾವಿರಾರು ಜನ ಇದ್ದಾರೆ. ನಾನು ಒಪ್ಪುತ್ತೇನೆ ಏನೆಂದರೆ ಸರ್ಕಾರ ಬಂದ ತಕ್ಷಣ ಎಲ್ಲರಿಗೂ

ಉದ್ಯೋಗ ಕೊಡುತ್ತೇವೆ ಎಂದು ಹೇಳುವುದಕ್ಕೆ ಸಾಧ್ಯವಿಲ್ಲ. ನೀವು ಈ ರೀತಿಯಾಗಿ ಹೇಳಿದ್ದೀರಿ ಎಂಬ ಮಾತನ್ನು ನಾನು ಆಡುವುದಿಲ್ಲ. ಆದರೆ ನೀವು ಸರ್ಕಾರದವರು ಕೊನೆಯಪಕ್ಷ ಜನರ ಹಿತದೃಷ್ಟಿಯಿಂದ ಒಳ್ಳೆಯ ಆಡಳಿತವನ್ನು ಕೊಟ್ಟು ಜನರ ಕೆಲಸ ಆಗುವುದಕ್ಕೆ ಕೆಲವು ಹುದ್ದೆಗಳನ್ನಾದರೂ ಭರ್ತಿಮಾಡಬೇಕಾಗಿತ್ತು. ೧೯೮೩ರಲ್ಲಿ ನೀವು ಅಧಿಕಾರವನ್ನು ವಹಿಸಿಕೊಂಡಾಗ, ಈ ವಿಷಯ ಸದನದಲ್ಲಿ ಕೂಡ ಚರ್ಚೆಗೆ ಬಂದಿತ್ತು. ಸುಮಾರು ೫೨ ಸಾವಿರ ಚಿಲ್ಲರೆ ಹುದ್ದೆಗಳು ಖಾಲಿ ಇದ್ದವು. ೧೯೮೫ರಲ್ಲಿ ಪುನಃ ಅಧಿಕಾರಕ್ಕೆ ಬಂದಾಗ ಸುಮಾರು ೭೩ ಸಾವಿರ ಹುದ್ದೆಗಳು ಖಾಲಿಬಿದ್ದಿದ್ದವು. ಆದರೆ ಇವತ್ತು ನನ್ನ ಅಂದಾಜಿನ ಪ್ರಕಾರ ಹತ್ತಿರ ಹತ್ತಿರ ಒಂದು ಲಕ್ಷ ಹುದ್ದೆಗಳು ಖಾಲಿಬಿದ್ದಿವೆ ಇಡೀ ಕರ್ನಾಟಕ ರಾಜ್ಯದಲ್ಲಿ. ನೀವು ಎಲ್ಲಿ ಅರ್ಜಿಗಳನ್ನು ಕರೆಯುತ್ತಿದ್ದೀರಿ ? ನನಗೆ ಗೊತ್ತು, ಇವತ್ತು ನೀವು ಅರ್ಜಿಗಳನ್ನು ಕರೆಯುವ ಪರಿಸ್ಥಿತಿಯಲ್ಲಿ ಇಲ್ಲ. ಏತಕ್ಕೆಂದರೆ ಈಗಿರತಕ್ಕಂಥ ನೌಕರವರ್ಗದವರಿಗೆ ಸಂಪೂರ್ಣವಾಗಿ ಕರಾರುವಾಕ್ಕಾಗಿ ಆ ತಾರೀಕಿಗೇ ಕೊಡುವುದಕ್ಕೆ ಸಾಧ್ಯವಿಲ್ಲವೆನ್ನುವ ಪರಿಸ್ಥಿತಿಯನ್ನು ಹಲವಾರು ಬಾರಿ ಮುಟ್ಟಿರತಕ್ಕಂಥ ನಿಮ್ಮ ಸರ್ಕಾರಕ್ಕೆ ಮತ್ತೆ ಇವತ್ತು ರಾಜ್ಯದ ಬೊಕ್ಕಸಕ್ಕೆ ಹೆಚ್ಚಿನ ಭಾರವನ್ನು ಹಾಕಿ ರಾಜಕಾರಣವನ್ನು ಮಾಡುವಂಥ ಪರಿಸ್ಥಿತಿಯಲ್ಲಿ ನೀವು ಇಲ್ಲ. ನಿಮ್ಮ ಡಿಪಾರ್ಟ್‌ಮೆಂಟಲ್ ರಿಕ್ರೂಟ್‌ಮೆಂಟ್ ಕಮಿಟಿಗಳು ಎಷ್ಟು ಕೆಲಸ ಮಾಡುತ್ತಿವೆ ? ಎಲ್ಲಿಹೋದವು ನಿಮ್ಮ ಕಮಿಟಿಗಳು ? ಕರ್ನಾಟಕ ರಾಜ್ಯದ ಎಲ್ಲಾ ಜನರಿಗೆ ಉದ್ಯೋಗ ಕೊಡುತ್ತೇವೆ ಎನ್ನುವ ಮಾತನ್ನು ದೊಡ್ಡದಾಗಿ ಹೇಳಿದ್ದಿರಲ್ಲ? ಅನೇಕ ಕಡೆಗಳಲ್ಲಿ ರಿಕ್ರೂಟ್‌ಮೆಂಟ್ ಕಮಿಟಿಗಳನ್ನು ಮಾಡಿಲ್ಲ. ಮಾಡಿದರೂ ಕೂಡ ಅವು ಕೆಲಸ ಮಾಡುತ್ತಿಲ್ಲ. ಅದನ್ನು ಮಾಡಿದರೂ ಕೂಡ ಏನಾಯಿತು ? ಸ್ಟೆನೋಗ್ರಾಫರ್ಸ್ ಮತ್ತು ಟೈಪಿಸ್ಟ್‌ಗಳನ್ನು ಆಯ್ಕೆ ಮಾಡುವ ವಿಚಾರದಲ್ಲಿ ಏನಾಯಿತು ? ಬೇಕಾದಷ್ಟು ಈ ಸದನದಲ್ಲಿ ಆ ಬಗ್ಗೆ ಚರ್ಚೆಗೆ ಬಂತು ಇದರಲ್ಲಿ ಲಂಚರುಷುವತ್ತುಗಳ ಆಪಾದನೆಗಳು ಬಂದು ಈ ರಿಕ್ರೂಟ್‌ಮೆಂಟ್ ಕಮಿಟಿಯ ಮೆಂಬರ್ಸ್ ಮೇಲೆ ಸಾಕಷ್ಟು ಆಪಾದನೆಗಳು ಬಂದವು. ಇವತ್ತು ಆ ಮೆಂಬರ್ಸ್‌ಗಳ ಮೇಲೆ ಏನು ಕ್ರಮ ತೆಗೆದು ಕೊಂಡಿದ್ದೀರಿ ? ಯಾವ ರೀತಿಯಲ್ಲಿ ಕಾರ್ಯಕ್ರಮಗಳನ್ನು ಹಾಕಿಕೊಂಡು ಲಂಚರುಷುವತ್ತುಗಳನ್ನು ದೂರಮಾಡತಕ್ಕಂಥ ಪ್ರಯತ್ನ ಮಾಡಿದ್ದೀರಿ ? ನಾನು ಇವತ್ತು ಸರ್ಕಾರವನ್ನು ಕೇಳುತ್ತಿದ್ದೇನೆ. ನೀವು ಇವತ್ತು ಇಷ್ಟೊಂದು ಇಲಾಖೆಗಳಲ್ಲಿ ಹತ್ತಿರ ಹತ್ತಿರ ಒಂದು ಲಕ್ಷದಷ್ಟು ಹುದ್ದೆಗಳು ಖಾಲಿ ಇವೆ, ಅವೆಲ್ಲವನ್ನೂ ತುಂಬಬೇಕೆನ್ನುವ ಪ್ರಶ್ನೆ ಅಲ್ಲ. ಕನಿಷ್ಟ ಪಕ್ಷ ಶೇಕಡಾ ೭೫, ೫೦ ಹೋಗಲಿ ಕೊನೆಗೆ ೨೫ ರಷ್ಟಾದರೂ ಕೂಡ ತುಂಬುವುದಕ್ಕೆ ನಿಮ್ಮಿಂದ ಸಾಧ್ಯವಾಗಿಲ್ಲ. ನಿಮಗೆ ಆಗುವುದಿಲ್ಲವೆಂದು ನನಗೆ ಗೊತ್ತು. ಏಕೆಂದರೆ ಈ ಹುದ್ದೆಗಳನ್ನು ತುಂಬುವಂಥ ಪರಿಸ್ಥಿತಿಯಲ್ಲಿ ನೀವು ಇಲ್ಲ. ಮತ್ತೊಂದು ಮಾತು. ನೀವು ೧೯೮೩ರಲ್ಲಿ ಅಧಿಕಾರಕ್ಕೆ ಬಂದ ತಕ್ಷಣ ಸಮಾಜದಲ್ಲಿ ತುಳಿತಕ್ಕೆ ಸಿಕ್ಕಿರತಕ್ಕಂಥ ನಿಮ್ಮವರ್ಗದಿಂದ ಬರತಕ್ಕಂಥ ಜನರ ಮೇಲೆ ದೊಡ್ಡ ಮಾತನ್ನು ಆಡಿದಿರಿ. ಆಫೀಸರ್ ಪೋಸ್ಟ್‌ಗೆ ಡೈರೆಕ್ಟ್ ಆಗಿ ರಿಕ್ರೂಟ್‌ಮೆಂಟ್ ಮಾಡುತ್ತೇವೆ Without sending those boys through the Public Service Commission, we will recruit them ಎಂದು ಹೇಳಿದಿರಿ. ಡೈರೆಕ್ಟ್ ರಿಕ್ರೂಟ್‌ಮೆಂಟ್ ಮಾಡಿಕೊಡುತ್ತೇವೆಂದು ಹೇಳಿದಿರಿ. ಬಹಳ ದೊಡ್ಡ ಪ್ರಚಾರ ತೆಗೆದುಕೊಂಡಿರಿ. ಇವತ್ತು ನಾನು ಕೇಳುತ್ತಿದ್ದೇನೆ, ನನಗೆ ಗೊತ್ತಿರುವ ಹಾಗೆ ನಿಮ್ಮ ಸರ್ಕಾರ ೧೯೮೩ ರಿಂದ ಅಧಿಕಾರಕ್ಕೆ ಬಂದು ಇಲ್ಲಿಗೆ ೫ ವರ್ಷಗಳು ಕಳೆದು ಹೋಯಿತು. ಇವತ್ತಿಗೂ ಯಾರನ್ನೂ ಕೂಡ ಡೈರೆಕ್ಟ್ ನೇಮಕ ಮಾಡಲಿಲ್ಲ. ನೀವು ಎಲ್ಲಿ ಮಾಡಿದ್ದೀರಿ, ಒಬ್ಬರನ್ನು ಡೈರೆಕ್ಟ್ ನೇಮಕ ಮಾಡಿರುವುದು ನನ್ನ ಗಮನದಲ್ಲಿಲ್ಲ.

SRI G. BASAVANNAPPA.—The rules framed for the recruitmiet were questioned in the Hon'ble High Court. Now the mattenrs before the Service tribunal.

ಶ್ರೀ ಎಸ್. ಬಂಗಾರಪ್ಪ.—ನನಗೆ ಗೊತ್ತಿದೆ, ನೀವು ಏನು ಉತ್ತರ ಕೊಡುತ್ತೀರಿ ಎಂಬುದು ನನಗೆ ಗೊತ್ತು, ನನ್ನ ಹತ್ತಿರ ವಿವರಗಳು ಇವೆ. ಈ ವಿಚಾರ ಹಿಂದೆ ಕೂಡ ಪ್ರಸ್ತಾಪಕ್ಕೆ ಬಂದಿದೆ. ಇದೇ ಮಾತನ್ನು ಸುಮಾರು ಒಂದು ವರ್ಷದಿಂದ ಪ್ರಸ್ತಾಪ ಮಾಡುತ್ತಾ ಬಂದಿದ್ದೀರಿ. ಮಾನ್ಯ ಬಸವಣ್ಣಪ್ಪನವರೂ ಕೂಡ ನಿಮ್ಮವರ್ಗಕ್ಕೆ ಸೇರಿದವರು, ಅವರು ಈ ವಿಷಯದ ಬಗ್ಗೆ ಹೆಚ್ಚು ಆಸಕ್ತಿ ವಹಿಸಬೇಕಾಗಿತ್ತು ಹರಿಜನ, ಬೋವಿ, ಲಂಬಾಣಿ ಈ ವರ್ಗದವರಿಗೆ ಕೆಲಸ ಸಿಕ್ಕಿದರೆ ಅವರು ಬಹಳ ಸಂತೋಷಪಡುತ್ತಾರೆ. ಇಷ್ಟು ವರ್ಷದಿಂದ ನಿಮ್ಮನ್ನು ಕೋರ್ಟಿಗೆ ಉತ್ತರ ಕೊಡುವುದಕ್ಕಾಗಿ ಮಿನಿಸ್ಟರ್ ಆಗಿ ಇಟ್ಟುಕೊಂಡಿದ್ದಾರೆ. ನಾನು ಕೇಳುತ್ತೇನೆ, ನಮ್ಮ ಅಡ್ವೋಕೇಟ್ ಜನರಲ್ ಅವರು ಏನು ಮಾಡುತ್ತಾರೆ, ನಮ್ಮ ಸರ್ಕಾರಿ ವಕೀಲರು ಏನು ಮಾಡುತ್ತಿದ್ದಾರೆ, ಈ ಬಗ್ಗೆ ''ಸ್ಟೇ'' ಬಂದು ಎಷ್ಟು ವರ್ಷವಾಯಿತು. ಅಲ್ಲಿಂದೀಚೆಗೆ, ಯಾವ ಯಾವ ತಾರೀಖಿನಲ್ಲಿ, ಈ ವಿಚಾರದಲ್ಲಿ ಏನೇನು ನಡೆದಿದೆ ಎಂಬುದನ್ನು ಈ ಸಭೆಯಲ್ಲಿ ಇಡಿ. ನಾವು ಎಷ್ಟೋಸಾರಿ ಈ ವಿಚಾರವನ್ನು ಕೇಳಿದ್ದೇವೆ.

ನಿಮ್ಮ ಉತ್ತರ ಹಳೆಯ ಉತ್ತರ, ೩-೪ ವರ್ಷಗಳಿಂದಲೂ ಈ ಉತ್ತರ ಹೇಳಿ, ವರ್ಷಗಳು ಕಳೆದು ಹೋದವು. ಸಮಾಜದಲ್ಲಿರತಕ್ಕ ಹಿಂದುಳಿದ ವರ್ಗಗಳಿಗೆ ಕೊಡತಕ್ಕ ಬೆನಿಫಿಟ್ ಹಾಳಾಗತಕ್ಕ ಪರಿಸ್ಥಿತಿ ಇವತ್ತು ಉದ್ಭವಿಸಿದೆ. ಇದರ ಬಗ್ಗೆ ನಿಮಗೆ ಆಸಕ್ತಿ ಇಲ್ಲ, ಸಮಾಜದಲ್ಲಿರತಕ್ಕ ದುರ್ಬಲವರ್ಗದವರನ್ನು ಮೇಲಕ್ಕೆ ಎತ್ತತಕ್ಕ ವಿಚಾರದಲ್ಲಿ ಸಂಪೂರ್ಣವಾದ ಸಹಕಾರ ಕೊಡತಕ್ಕ ಆಸೆ ನಿಮ್ಮ ಮಂತ್ರಿ ಮಂಡಲಕ್ಕೆ ಇಲ್ಲ, ಮತ್ತು ನಿಮ್ಮ ಸರ್ಕಾರಕ್ಕೂ ಇಲ್ಲ. ಮಾನ್ಯ ಬಸವಣ್ಣಪ್ಪನವರು ನಿಮ್ಮ ವರ್ಗದವರಾದರೂ, ಅವರಿಗೂ ಆಸಕ್ತಿ ಇಲ್ಲ.......

ಶ್ರೀ ಜಿ. ಬಸವಣ್ಣಪ್ಪ.—ನೀವು ಹೇಳಿದ್ದರಿಂದ ಮಾಡಿದ್ದಲ್ಲ, ನಮಗೆ ಆಸಕ್ತಿ ಇದ್ದುದಕ್ಕೆ ನಾವು ಮಾಡಿದ್ದೇವೆ.........

ಶ್ರೀ ಎಸ್. ಬಂಗಾರಪ್ಪ.—ನೀವು, ಪ್ರಚಾರ ಮಾಡಿ ನಿಮ್ಮ ವರ್ಗದವರನ್ನು ಕತ್ತರಿಸಿ ಹಾಕಿದ್ದೀರಿ. ನೀವು ಬಂದು ೫ ವರ್ಷವಾಯಿತು......

ಶ್ರೀ ಎಂ. ರಾಮಪ್ಪ.—ಬಳ್ಳಾರಿ ಜಿಲ್ಲೆಯಲ್ಲಿ ಕುಡತಿನಿ ಗ್ರಾಮದಲ್ಲಿ ಹಗರಿ ಷುಗರ್ ಫ್ಯಾಕ್ಟರಿ ಎಂದು ಇತ್ತು. ಅದು ಮುಚ್ಚಿ ಹೋಗಿದೆ, ಇದನ್ನು ತೆಗೆಸಿ, ಬೇಗ ಕೆಲಸ ಕೊಡಿಸಿ ಎಂದು, ಅಲ್ಲಿಗೆ ಮಂತ್ರಿಗಳು ಬಂದಾಗ ಹೇಳಿದರೂ ಕೂಡ ಇದುವರೆಗೂ ಆ ಫ್ಯಾಕ್ಟರಿ ತೆಗೆದಿಲ್ಲ, ಕೆಲಸವನ್ನು ಕೊಟ್ಟಿಲ್ಲ. ನೀವು ಏನು ಮಾಡಿದ್ದೀರಿ, ಇವತ್ತಿನವರೆಗೂ ಬರೀ ಮಾತು...

ಶ್ರೀ ಎಸ್. ಬಂಗಾರಪ್ಪ.—ಮಾನ್ಯಸಭಾಧ್ಯಕ್ಷರೇ, ಮಾನ್ಯ ರಾಮಪ್ಪನವರು ಹೇಳಿರುವ ವಿಚಾರಕ್ಕೂ ಗಮನಕೊಡಬೇಕು, ಇದು ಒಂದುಕಡೆ ಇರಲಿ. ನಾನು ಹೇಳಿದ್ದು ಈ ಸರ್ಕಾರವೇ ಪ್ರಚಾರ ಮಾಡಿರುವಂಥ ವಿಚಾರ. ಇವತ್ತು ನೀವೇ ಆ ವಿಚಾರಧಾರೆಯ ಕತ್ತನ್ನು ಹಿಸುಕಿ, ಚಿಪ್ಪುಟಿ ಅಲ್ಲಿ ಬಿಟ್ಟಿದ್ದೀರಿ, ಇವತ್ತು ಕೋರ್ಟಿನಲ್ಲಿ ಕೊಳೆಯುತ್ತಾ ಬಿದ್ದಿದೆ. ಆದ್ದರಿಂದ ದುರ್ಬಲವರ್ಗಕ್ಕೆ ಸಿಗಬೇಕಾದ ಪ್ರತಿಫಲ ಹಾಳು ಮಾಡಿರತಕ್ಕ ಹೆಸರು ನಿಮ್ಮ ಸರ್ಕಾರಕ್ಕೆ ಸಂದಾಯವಾಗಬೇಕು. ಇದೆ ಸಂದರ್ಭದಲ್ಲಿ ಮತ್ತೊಂದು ವಿಚಾರವನ್ನು ಸರ್ಕಾರದ ಗಮನಕ್ಕೆ ತರಬೇಕು. ವರ್ಗಾವಣೆ ವಿಚಾರದಲ್ಲಿ, ಸಾಮಾನ್ಯವಾಗಿ ಯಾವಾಗಲೂ ಕೂಡ ಮೇ ೩೧ ಕೊನೆಯ ತಾರೀಖಿನೊಳಗೆ ವರ್ಗಾವಣೆ ಮಾಡುತ್ತಾರೆ. ಅನಂತರ ವರ್ಗಾವಣೆಗಳನ್ನು ಮಾಡುವುದಿಲ್ಲ, ಇದನ್ನು ನಾನೂ ಕೂಡ ಒಪ್ಪುತ್ತೇನೆ. ಆಕಸ್ಮಾತ್ ಏನಾದರೂ ಹೆಲ್ತ್ ಗ್ರೌಂಡ್ ಅಥವಾ ಇನ್ನಿತರ ಅನಿವಾರ್ಯ ಕಾರಣಗಳು ಇದ್ದರೆ, ಬೇರೆ ತಿಂಗಳಲ್ಲಿ ವರ್ಗ ಮಾಡಬಹುದು. ಅದನ್ನೂ ಒಪ್ಪುತ್ತೇನೆ. ಮತ್ತು ನಿಮ್ಮ ಸರ್ಕಾರ ಇದ್ದಾಗ, ಈ ರೀತಿ ವರ್ಗಾವಣೆ ಮಾಡಲಿಲ್ಲವೇ ಎಂದು ನೀವು ಕೇಳಬಹುದು. ನಾವು ತಪ್ಪು ಮಾಡಿದರೆ, ನಿಮ್ಮನ್ನು ಇವತ್ತು ಕರ್ನಾಟಕದ ಜನ ಏಕೆ ಅಲ್ಲಿ ಕೂಡಿಸಬೇಕಾಗಿತ್ತು ? ಇವತ್ತು ಬೇರೆ ದಿವಸಗಳಲ್ಲಿ ವರ್ಗಾವಣೆ ಮಾಡಿದರೆ ಸರ್ಕಾರ ಟಿ. ಎ. ಮತ್ತು ಡಿ. ಎ. ಕೊಡಬೇಕು, ಇದರಿಂದ ರಾಜ್ಯಸರ್ಕಾರದ ಬೊಕ್ಕಸಕ್ಕೆ ಆರ್ಥಿಕ ವೆಚ್ಚ ಬರುತ್ತದೆ. ಇದನ್ನು ತೆಗೆಯುವುದಕ್ಕೆ ವರ್ಷಂಪೂರ್ತಿ ಈ ವರ್ಗಾವಣೆಗಳು ನಡೆಯಬಾರದು ಮೇ ೩೧ ಎಂದು ನಿಗದಿ ಮಾಡಿದ್ದೇವೆ. ನೀವು, ಇದೆಲ್ಲವನ್ನೂ ಸಂಪೂರ್ಣವಾಗಿ ಮರೆತು, ಇಡೀ ವರ್ಷ ಪೂರ್ತಿ ವರ್ಗಾವಣೆ ಮಾಡಿದ್ದೀರಿ. ಇವತ್ತು ನಿಮ್ಮ ವರ್ಗಾವಣೆ ಆರ್ಡರುಗಳನ್ನು ತೆಗೆಯಿರಿ ಅದು ರಾಶಿ ರಾಶಿಯಾಗಿ ಬಿದ್ದಿವೆ. ಇದರಿಂದ ಏನಾಗುತ್ತದೆ. ಇದು ಯಾವಾಗಲೂ ಕೂಡಾ ಜೂನ್, ಜುಲೈ, ಆಗಸ್ಟ್, ಸೆಪ್ಟೆಂಬರ್, ಅಕ್ಟೋಬರ್, ನವೆಂಬರ್, ಡಿಸೆಂಬರ್, ಜನವರಿ ವರೆಗೆ ಹೋಗಿರತಕ್ಕಂಥಾದ್ದನ್ನು ನಾವು ಸಂಪೂರ್ಣವಾಗಿ ಕಂಡಿದ್ದೇವೆ. ಆಮೇಲೆ ಎಷ್ಟೋ ಜನ ಕರಪ್ಟ್ ಆಫೀಸರ್ಸ್ ಮೇಲೆ ಕಂಪ್ಲೇಂಟ್ಸ್ ಬಂದರೂ, ಡಿಪಾರ್ಟ್‌ಮೆಂಟಲ್ ಹೆಡ್ಸ್, ಮೇಲುಗಡೆ ಇರತಕ್ಕಂಥ ಆಫೀಸರ್ಸ್‌ಗಳಿಂದ ಕಂಪ್ಲೇಮೆಂಟ್ ಬಂದರೂ ಕೂಡಾ. ನೀವು ಅಂತಹ ಕರಪ್ಟ್ ಆಫಿಸರ್ಸ್‌ಗೆ ರಕ್ಷಣೆ ಕೊಟ್ಟು, ಅಲ್ಲೇ ಅವರನ್ನು ಇಟ್ಟಿರತಕ್ಕಂಥ ಪ್ರಕರಣಗಳು ಬೇಕಾದಷ್ಟು ಇವೆ. ಈ ಸದನದಲ್ಲಿ ಕೂಡಾ ಚರ್ಚೆಯಾಗಿದೆ. ಈ ಆಫಿಸರ್ಸ್ ಬಗ್ಗೆ ಅವರೂ ನಾವು ಪದೇಪದೇ ಹೇಳುತ್ತೇವೆ. ಕೆಲವು ಕಾರ್ಯಗಳನ್ನು, ಅಧಿಕಾರಿಗಳನ್ನು ನಾವು ಅವರಿಗೆ ವಹಿಸಿರುತ್ತೇವೆ. ಇಲಾಖೆಯ ಕಾರ್ಯಗಳಲ್ಲಿ ನ್ಯಾಷನಲ್ ಸೇವಿಂಗ್ಸ್ ಸರ್ಟಿಫಿಕೇಟ್‌ಗಳನ್ನು ಹೆಚ್ಚಾಗಿ ಮಾರಾಟ ಮಾಡಬೇಕು, ಹಣ ಕೂಡಿಹಾಕಬೇಕು. ಮಾಡಿಸೋಣ ಒಪ್ಪುತ್ತೇವೆ, ನಮ್ಮ ಸರಕಾರ ಇದ್ದಾಗಲೂ ಈ ಕೆಲಸವನ್ನು ನಾವೂ ಮಾಡಿಸುತ್ತಿದ್ದೆವು. ಆದರೆ ನೀವು ಯಾವ ಮಟ್ಟಕ್ಕೆ ಹೋಗಿದ್ದೀರಿ ಎಂದರೆ, ಆರ್. ಟಿ. ಓ. ತಹಸೀಲ್ದಾರ್, ಫುಡ್ ಡಿಪಾರ್ಟ್‌ಮೆಂಟ್, ಎಲ್ಲಿಹೋದರೂ ಕೂಡಾ ಸಂಪೂರ್ಣವಾಗಿ ಒಂದು ಕಡೆಯಿಂದ ಇದಕ್ಕೆ ದುಡ್ಡಿಟ್ಟರೆ ಸರಿ ಇಲ್ಲದೇ ಹೋದರೆ ಆಗುವುದಿಲ್ಲವೆಂಬ ಮಟ್ಟಕ್ಕೆ ಬಂದಿದ್ದೀರಿ, ಕಡುಬಡವನೂ ಕೂಡಾ ಬರಗಾಲ ಪ್ರದೇಶದಲ್ಲೂ ಕೂಡಾ ಈ ರೀತಿ ಆಗಿದೆ. ನಾನು ಒಪ್ಪುತ್ತೇನೆ, ಚೆನ್ನಾಗಿ ಬಿಸಿನೆಸ್ ಮಾಡುವವನು ನ್ಯಾಷನಲ್ ಸೇವಿಂಗ್ಸ್ ಸರ್ಟಿಫಿಕೇಟ್ ಖರೀದಿ ಮಾಡಲಿ, ಅವನಿಗೆ ಮಾರಾಟ ಮಾಡಿ ಹಣ ಶೇಖರಣೆ ಮಾಡುವುದನ್ನು ಒಪ್ಪುತ್ತೇನೆ. ಬಡವನೂ ಕೂಡಾ ಹಸಿರು

ಕಾರ್ಡ್ ತೆಗೆದುಕೊಳ್ಳುವವನೂ ಕೂಡಾ ನ್ಯಾಷನಲ್ ಸೇವಿಂಗ್ಸ್ ಸರ್ಟಿಫಿಕೇಟ್ ತೆಗೆದುಕೊಳ್ಳಬೇಕು, ಅವನಿಗೂ ಮಾರಾಟ ಮಾಡಿದ ಪ್ರಕರಣಗಳು ಶಾಸನಸಭೆಯಲ್ಲೂ ಬಂದಿವೆ. ಯಾರಿಂದ ವಸೂಲು ಮಾಡಬೇಕು, ಹೇಗೆ ಮಾಡಬೇಕು, ಎಷ್ಟು ಮಾಡಬೇಕು ಎನ್ನತಕ್ಕಂಥಾದ್ದರ ಬಗ್ಗೆ ಯಾವುದೇ ಪರಿವೆ ಇಲ್ಲದ ರೀತಿಯಲ್ಲಿ ನಿಮ್ಮ ಅಧಿಕಾರಿಗಳಿಗೆ ಸೂಚನೆ ಕೊಟ್ಟು ಸಂಪೂರ್ಣವಾಗಿ ಆಡಳಿತ ಜನಸಾಮಾನ್ಯರ ಮಟ್ಟದಲ್ಲಿ ತೊಂದರೆ ಕೊಡುವ ಹಂತ ತಲುಪಿದೆ ಎಂಬುದನ್ನು ತಮ್ಮ ಗಮನಕ್ಕೆ ತರುತ್ತೇನೆ. ಕಮರ್ಷಿಯಲ್ ಟ್ಯಾಕ್ಸ್ ಡಿಪಾರ್ಟ್‌ಮೆಂಟ್ ಏನಿದೆ ಅದರ ಹಣಬರಹ ಕೂಡಾ ಇಷ್ಟೇ, ಇಲ್ಲೂ ಕೂಡಾ ಇದೇ ರೀತಿ ಆಗಿದೆ ಎಂಬ ಮಾತನ್ನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರುತ್ತೇನೆ. ನಮ್ಮ ರಾಜ್ಯದ ಹಣಕಾಸಿನ ಪರಿಸ್ಥಿತಿಯನ್ನು ಮೇಲಕ್ಕೆ ಎತ್ತತಕ್ಕಂಥ ವಿಚಾರದಲ್ಲಿ ಹಲವಾರು ಪ್ರಕಟಣೆಗಳನ್ನು ಪ್ರಕಟ ಮಾಡಿ ಇವತ್ತು ಅವೆಲ್ಲಾ ಮುಗಿದು ಹೋಗಿದೆ. ನಾನು ಬರೀ ಹಣಕಾಸಿನ ಪರಿಸ್ಥಿತಿ ಬಗ್ಗೆ ಮಾತನಾಡುತ್ತಿಲ್ಲ, ಇವತ್ತು ಸಂಪೂರ್ಣವಾಗಿ ರಾಜ್ಯದ ಹಣಕಾಸಿನ ಪರಿಸ್ಥಿತಿ ಚೆನ್ನಾಗಿ ಆಗಬೇಕೆಂದು ಇದ್ದರೆ ನೀವು ಸರಕಾರಕ್ಕೆ ಬರಬೇಕಾದಂಥ ಬಾಕಿಯನ್ನು ವಸೂಲು ಮಾಡಬೇಕು. ಎಕ್ಸೈಸ್ ಕಂಟ್ರಾಕ್ಟರ್ಸ್, ಆಮೇಲೆ ಕಮರ್ಷಿಯಲ್ ಟ್ಯಾಕ್ಸ್ ಡಿಪಾರ್ಟ್‌ಮೆಂಟ್‌ನಿಂದ ಬರತಕ್ಕಂಥ ಹಣ, ಮೋಟಾರ್‌ವೆಹಿಕಲ್ಸ್‌ನಿಂದ ಬರತಕ್ಕಂಥಾದ್ದು ಇರಬಹುದು ಯಾವುದೇ ಬಾಕಿ ಇರಬಹುದು ಅದನ್ನು ವಸೂಲು ಮಾಡಬೇಕು. ಕೆ. ಇ. ಬಿ. ವಿಚಾರದಲ್ಲಿ ಗೋಪಾಲ ಕಾನಡೆಯವರು ಒಂದು ಪ್ರಶ್ನೆ ಹಾಕಿದ್ದರು. ಕೆ. ಇ. ಬಿ. ಮಂಡಲಿ ಸ್ವಾಯತ್ತ ಸಂಸ್ಥೆ ಎಂಬ ಮಾತನ್ನು ತಾವು ಆಡಿದರೂ ಕೂಡಾ ಎಷ್ಟೋ ಸಲ ಸರಕಾರದ ಜವಾಬ್ದಾರಿಯೂ ಇದೆ. ಒಂದು ಲಕ್ಷ ರೂಪಾಯಿ ಕರೆಂಟ್ ಬಿಲ್ ಬಾಕಿ ಕೊಡಬೇಕಾದಂಥವರ ಒಂದು ದೊಡ್ಡ ಪಟ್ಟಿಯೇ ಇದೆ. ಡಿವಿಜನ್‌ವೈಸ್ ೨೭-೨೮ ಕೋಟಿ ರೂಪಾಯಿ ಬಾಕಿ ಇರತಕ್ಕಂಥ ಒಂದು ಪಟ್ಟಿಯನ್ನು ತಾವು ಕೊಟ್ಟಿದ್ದೀರಿ. ನಿನ್ನೆ ತಾನೆ ಕೊಟ್ಟಿದ್ದೀರಿ, ಒಂದು ಲಕ್ಷ ರೂಪಾಯಿ ಒಳಗಡೆ ಬಾಕಿ ಕೊಡತಕ್ಕಂಥವರು ಇನ್ನೂ ಬಹಳ ಜನ ಇರಬಹುದು, ಇದು ಅನೇಕ ಕೋಟಿ ರೂಪಾಯಿ ಬಾಕಿ ಆಗಬಹುದು. ಒಟ್ಟು ಸುಮಾರು ೧೮೨ ಕೋಟಿ ರೂಪಾಯಿ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಒಂದು ಲಕ್ಷಕ್ಕಿಂತ ಒಳಗಡೆ ಬಾಕಿ ಇಟ್ಟುಕೊಂಡಿರತಕ್ಕಂಥವರ ಪಟ್ಟಿ ನನ್ನ ಹತ್ತಿರ ಇಲ್ಲ, ಇದು ಎಷ್ಟು ಕೋಟಿ ಆಗುತ್ತದೆ ಎಂದು ನನಗೆ ಗೊತ್ತಿಲ್ಲ. ಕೆ. ಇ. ಬಿ. ಪರಿಸ್ಥಿತಿ ಈ ಮಟ್ಟಕ್ಕೆ ಬಂದು ನಿಂತುಕೊಂಡಿದೆ. ನೀವು ಸರಕಾರಕ್ಕೆ ಬರತಕ್ಕಂಥ ಬಾಕಿಯನ್ನು ಕಡ್ಡಾಯವಾಗಿ ವಸೂಲು ಮಾಡಬೇಕು, ಇದರಲ್ಲಿ ನೀವು ವಿಫಲರಾಗಿದ್ದೀರಿ ಎಂಬ ಮಾತನ್ನು ಹೇಳಬೇಕಾಗಿದೆ. ನೀವು ಇದಕ್ಕೆ ಒಂದು ಉತ್ತರವನ್ನು ಕೊಡುತ್ತೀರಿ, ಕೋರ್ಟಿನಲ್ಲಿ ಕೇಸ್ ಹಾಕಿದ್ದೇವೆ ಎಂದು ಹೇಳುತ್ತೀರಿ. ಅದು ಕಮರ್ಷಿಯಲ್ ಟ್ಯಾಕ್ಸ್ ಇರಬಹುದು, ಎಕ್ಸೈಸ್ ಇರಬಹುದು. ಇದರ ಬಗ್ಗೆ ಲೀಡರ್ ಆಫ್ ದಿ ಅಪೋಸಿಷನ್ ಒಂದು ಪ್ರಶ್ನೆ ಕೇಳಿದ್ದರು. ಎಷ್ಟು ಹಣ ಎಕ್ಸೈಸ್‌ಗೆ ಸಂಬಧಪಟ್ಟ ಹಾಗೆ ಬಾಕಿ ಇದೆ ಎಂದು ಕೇಳಿದ್ದರು ಅದಕ್ಕೆ ನೀವು ಉತ್ತರ ಕೊಡುತ್ತಾ, ನೀವು ಹೇಳಿದಷ್ಟು ಹಣ ಬಾಕಿ ಇಲ್ಲ. ಇಷ್ಟು ಮಾತ್ರ ಕೋರ್ಟ್‌ನಲ್ಲಿ ಇರತಕ್ಕಂಥಾದ್ದು ಎಂದು ಹೇಳಿದಿರಿ. ಆದರೆ ಕೋರ್ಟಿನಲ್ಲಿ ಇನ್‌ವಾಲ್ವ್ ಆಗದೇ ಇರತಕ್ಕಂಥ ಹಣ ಎಷ್ಟು, ಎಷ್ಟು ಬರಬೇಕಾಗಿದೆ ಎಂಬುದರ ಬಗ್ಗೆ ಫಿಗರ್ಸ್ ಕೊಡುವುದಕ್ಕೆ ನಿಮಗೆ ಸಾಧ್ಯ ಇಲ್ಲದಿದ್ದರೂ ಕೂಡಾ ಬಾಕಿ ಇರತಕ್ಕಂಥ ಹಣವನ್ನು ವಸೂಲು ಮಾಡುವುದಕ್ಕೆ ನಿಮ್ಮಿಂದ ಆಗಿಲ್ಲ. ಇದು ನಂಬರ್ ಒನ್. ಇನ್ನು ನಂಬರ್ ಟು ಕೋರ್ಟಿನಲ್ಲಿರತಕ್ಕಂಥ ಕೇಸ್‌ಗಳಲ್ಲಿ ಎಷ್ಟು ಬಾಕಿ ಹಣ ಸಿಕ್ಕಿಹಾಕಿಕೊಂಡಿದೆ, ಅರ್ಜೆಂಟ್ ಆಗಿ ಆ ಕೇಸನ್ನು ಮುಗಿಸುವುದಕ್ಕೆ ಯಾವ ಕಾರ್ಯಕ್ರಮ ಹಾಕಿದ್ದೀರಿ ಎಂದು ಪ್ರಶ್ನೆ ಮಾಡುತ್ತೇನೆ. ನೀವು ಯಾವ ಕಾರ್ಯಕ್ರಮವನ್ನೂ ಹಾಕುವುದಿಲ್ಲ, ನೀವು ಪ್ರಭಾವಿತರ ಕೈಯಲ್ಲಿ ಸಿಕ್ಕಿಕೊಂಡು ನರಳುತ್ತಿದ್ದೀರಿ. ನಿಮ್ಮ ಆಡಳಿತ ಯಾವ ಮಟ್ಟಕ್ಕೆ ಹೋಗಿದೆ ಎಂದರೆ ಇದಾವುದಕ್ಕೂ ನೀವು ಒತ್ತಡವನ್ನು ತರುವುದಿಲ್ಲ. ಕೋರ್ಟ್‌ನವರು ತಾವಾಗಿಯೇ ಕೇಸ್ ತೆಗೆದುಕೊಂಡು ಮುಗಿಸತಕ್ಕ ಪರಿಸ್ಥಿತಿಯಲ್ಲಿ ಇಲ್ಲ. ಅಲ್ಲಿನ ವ್ಯವಸ್ಥೆ ನಮಗೆಲ್ಲಾ ಗೊತ್ತಿರತಕ್ಕದ್ದೇ. ಈ ದೃಷ್ಟಿಯಿಂದ ಇವತ್ತು ನಮ್ಮ ರಾಜ್ಯದ ಖಜಾನೆಗೆ ಎಷ್ಟು ಹಣ ಬರಬೇಕಾಗಿತ್ತು ಅದನ್ನು ವಸೂಲು ಮಾಡುವುದರಲ್ಲಿ ಸಂಪೂರ್ಣವಾಗಿ ವಿಫಲರಾಗಿದ್ದೀರಿ ಎಂಬ ಮಾತನ್ನು ಇಲ್ಲಿ ಅನಿವಾರ್ಯವಾಗಿ ಹೇಳಬೇಕಾಗುತ್ತದೆ. ಮಾನ್ಯ ಜೆ. ಹೆಚ್. ಪಟೇಲ್‌ರವರು ಹಾಗೂ, ಸನ್ಮಾನ್ಯ ಮುಖ್ಯಮಂತ್ರಿಗಳು ಅನಿವಾಸಿ ಭಾರತೀಯರಿಂದ ಹಣದ ಬಂಡವಾಳವನ್ನು ಹೂಡುವ ವಿಚಾರದಲ್ಲಿ ಹೇಳಿಕೆ ಕೊಟ್ಟಿದ್ದಾರೆ. ನಾವೆಲ್ಲಾ ಹೋಗಿ ವಿದೇಶಿಯರಿಂದ ಕೈಗಾರಿಕೆಗಳಿಗೆ ಬಂಡವಾಳವನ್ನು ತರುತ್ತೇವೆಂದು ಹೇಳಿ ನಿಮ್ಮ ಜೊತೆಯಲ್ಲಿ ಅಧಿಕಾರಿಗಳನ್ನು ಕರೆದುಕೊಂಡು ಹೋದಿರಿ. ಇದಕ್ಕೆ ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿ ನೀವು ದೊಡ್ಡ ದೊಡ್ಡ ಹೇಳಿಕೆಗಳನ್ನು ಕೊಟ್ಟಿದ್ದನ್ನು ನಾವು ನೋಡಿದ್ದೇವೆ. ಕೋಟ್ಯಾಂತರ ರೂಪಾಯಿಗಳ ಬಂಡವಾಳ ತರುತ್ತೇವೆಂದು ಹೇಳಿದ್ದನ್ನು ಸಹ ನಾನು ಕೇಳಿದ್ದೇನೆ. ನೀವು ಖರ್ಚು ಮಾಡಿದ ಹಣ ಒಂದು ಕಡೆ ಇರಲಿ, ಈ ಅನಿವಾಸಿ ಭಾರತೀಯರಿಂದ ತಾವು ಎಷ್ಟು ಬಂಡವಾಳವನ್ನು

ತಂದಿದ್ದೀರಿ ಎನ್ನುವುದನ್ನು ಕೊಡಬೇಕು, ಯಾವ ಯಾವ ವಿಚಾರದಲ್ಲಿ ಯಾವ ಯಾವ ತರಹ ಬಂಡವಾಳ ತಂದಿದ್ದೀರಿ ಎನ್ನುವುದು ನಮಗೆ ಬೇಕು. ನೀವು ಅನಿವಾಸಿ ಭಾರತೀಯರಿಂದ ಬಂಡವಾಳವನ್ನು ಹೂಡಿಸುತ್ತೇವೆ ಎನ್ನುವ ವಿಚಾರದಲ್ಲಿ ಆ ಒಂದು ನೆಪದಲ್ಲಿ ವಿದೇಶಿ ಪ್ರವಾಸ ಮಾಡತಕ್ಕಂಥ ಒಂದು ಪ್ರವೃತ್ತಿ ನಿಮ್ಮಲ್ಲಿ ಬೆಳೆದಿದೆ ಎನ್ನುವುದು ಇದರಿಂದ ನಮಗೆ ಸ್ಪಷ್ಟವಾಗಿ ಗೋಚರವಾಗುತ್ತದೆ.

ಶ್ರೀ ಜೆ.ಹೆಚ್. ಪಟೇಲ್.—ನಾವು ನೋಡಲು ಹೋಗಿರಲಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಆ ರುಚಿ ಕಂಡು ಹೋಗಿರಬೇಕು ಈಗ.

ಶ್ರೀ ಜೆ.ಹೆಚ್. ಪಟೇಲ್.—ರುಚಿ ಬೇರೆ ಗೊತ್ತಿದೆಯೋ ನಿಮಗೆ ?

ಶ್ರೀ ಎಸ್. ಬಂಗಾರಪ್ಪ.—ಅದಕ್ಕೇ ನೀವು ಹೋಗಬೇಕು? ನಾವು ಆ ರೀತಿ ಹೋಗಿಲ್ಲ. ಇವನ್ನು ನೀವು ಸುಮಾರಾಗಿ ಏನು ಮಾಡಿದಿರಿ ಅಂದರೆ ಅನಿವಾಸಿ ಭಾರತೀಯರಿಗೆ ಸೈಟ್ ಕೊಡಬೇಕೆಂದು [illegible] ಮೊದಮೊದಲು ಒಂದು ಬುದ್ಧಿವಂತಿಕೆ ಮಾತುಗಳನ್ನು ಹೇಳಿ ನೀವು ಅನಿವಾಸಿ ಭಾರತೀಯರಿಂದ ಬಂಡವಾಳವನ್ನು ಹೂಡುವ ವಿಚಾರಕ್ಕೆ ಹೋಗಿ ಎಷ್ಟು ಅಚೀವ್‌ಮೆಂಟ್ ಮಾಡಿದ್ದೀರಿ ಎಂದರೆ ಅಲ್ಲಿಂದ ಬಂದು ಇಲ್ಲಿ ಬಿಲ್ಡಿಂಗ್ ಅಪಾರ್ಟ್‌ಮೆಂಟ್ಸ್ ಕಟ್ಟುವುದಕ್ಕೆ ಅಂದರೆ ಗ್ರೂಪ್ ಹೌಸಿಂಗ್ ಸ್ಕೀಮ್ ಮಾಡಬೇಕೆನ್ನುವ ಉದ್ದೇಶವಿಟ್ಟುಕೊಂಡು ಕ್ರಮ ಕೈಗೊಂಡಿರುವಿರಿ. ಆದರೆ ಇನ್ನೂ ಹಲವಾರು ವಿಚಾರಗಳಲ್ಲಿ ಅಂದರೆ ಒಂದು ಫ್ಯಾಕ್ಟರಿಯಾಗಲಿ ಮತ್ತ್ಯಾವುದಕ್ಕಾಗಲಿ ಹಣ ನೀವು ಹಾಕಿಲ್ಲವೆನ್ನುವುದು ಇದರಿಂದ ನಮಗೆ ಸ್ಪಷ್ಟವಾಗಿ ಗೊತ್ತಾಗುತ್ತದೆ. ಇರಬಹುದು ಕೆಲವು ಸೈಟುಗಳನ್ನು ಹರಾಜು ಮಾಡುವುದರಿಂದ ಹಣ ಉತ್ಪಾದನೆ ಜಾಸ್ತಿಯಾಗಿ ಬರುತ್ತದೆ ಆ ಹಣದಲ್ಲಿ ಬಡಬಗ್ಗರಿಗೆ ಸೈಟ್ ಕೊಡುವುದಕ್ಕೆ ಸಹಕಾರಿಯಾಗುತ್ತದೆಂದು ಹೇಳಿದ ಹೇಳಿಕೆಯನ್ನು ಸಹ ನಾನು ಕೇಳಿದ್ದೇನೆ. ಇದರಿಂದ ಎಷ್ಟು ಜನ ಬಡಬಗ್ಗರಿಗೆ ಇವತ್ತು ಸೈಟ್‌ಗಳು ಸಿಕ್ಕಿವೆ? ಬಿ.ಡಿ.ಎ. ಯವರ ಮುಖಾಂತರವಲ್ಲ. ಇನ್ನಿತರ ಯಾವುದೇ ಮುಖಾಂತರವಾಗಲಿ ಅದು ಹೌಸಿಂಗ್ ಬೋರ್ಡ್ ಮುಖಾಂತರ ಮನೆಗಳನ್ನು ಕಟ್ಟಿಸಿ ಕೊಡುವುದಾಗಲಿ ಸೈಟುಗಳನ್ನು ಕೊಡುವುದಾಗಲಿ ಈ ಬಗ್ಗೆ ತಾವೇನೇನು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೀರಿ ಎನ್ನುವುದನ್ನು ನಾನು ಈ ಸಂದರ್ಭದಲ್ಲಿ ಕೇಳಬಯಸುತ್ತೇನೆ. ಮಾನ್ಯ ಅಧ್ಯಕ್ಷರೇ, ಇನ್ನೊಂದು ಬಹಳ ಮುಖ್ಯವಾದ ಒಂದು ವಿಚಾರವನ್ನು ನಾನು ಪ್ರಸ್ತಾಪ ಮಾಡಬಯಸುತ್ತೇನೆ. ಅದೇನೆಂದರೆ ಸರ್ಕಾರದ ಗಮನಕ್ಕೆ ನೀವು ನಿಮ್ಮ ಇಲಾಖೆಯಿಂದ ಹೊರಡಿಸಿದಂತಹ ಆದೇಶಗಳು ಏನಿವೆ ಅವುಗಳಿಗೆ ಒಂದು ಐದು ಪೈಸೆ ಬೆಲೆಯನ್ನು ನಿಮ್ಮ ಅಧಿಕಾರಿಗಳು ಇವತ್ತು ಕೊಡುತ್ತಿಲ್ಲ. ಅದಕ್ಕೆ ನಾನೊಂದು ಉದಾಹರಣೆಯನ್ನು ಬೇಕಾದರೂ ಕೊಡುತ್ತೇನೆ. ಹಿಂದೆ ನಾನು ಪ್ರಸ್ತಾಪಿಸಿದ್ದೆ ಅಂದರೆ ೧೯೭೪ನೇ ಇಸವಿಯಲ್ಲಿ ಈ ಭೂಸುಧಾರಣಾ ಕಾಯ್ದೆಯಲ್ಲಿ ಯಾರು ಜಮೀನುದಾರರಿರುತ್ತಾರೋ ಅವರು ಜಮೀನು ಕಳೆದುಕೊಂಡಿರುತ್ತಾರೋ ಅಂತಹವರಿಗೆ ಒಂದೇ ಕಂತಿನಲ್ಲಿ ಪರಿಹಾರ ಹಣ ಪಾವತಿ ಕೊಡಬೇಕೆಂದು ನಾನು ಕೇಳಿದ್ದಕ್ಕೆ ಆಗ ತಾವು ಪಾವತಿ ಮಾಡುತ್ತೇವೆಂದು ಹೇಳಿದಿರಿ. ಅದು ಇದುವರೆವಿಗೂ ನಮ್ಮ ಕಡೆ ಆಗಿಲ್ಲ. ಭೂಮಿ ಕಳೆದುಕೊಂಡಂತಹ ಬಡವರು ಯಾರಿದ್ದಾರೆ ಅದೂ ಸಣ್ಣಪುಟ್ಟ ಬಡವರು ಯಾರಿದ್ದಾರೆ ಅವರಿಗಾದರೂ ಕೊಡಿ ಎಂದು ನಾನು ಕೇಳಿದ್ದೆ. ದೊಡ್ಡ ದೊಡ್ಡ ಭೂಮಾಲೀಕರು ಯಾರಿದ್ದಾರೆ ಅಂತಹವರಿಗೆ ಬೇಕಾದರೆ ಕಂತುಗಳಲ್ಲಿ ಕೊಡಿ, ಅದಕ್ಕೆ ಭೂಸುಧಾರಣಾ ಕಾಯ್ದೆಯಲ್ಲಿ ಒಂದು ಕಾಲಂ ಕೂಡ ಇದೆ. ಆದರೆ ಗೇಣಿದಾರರು ಏನಿದ್ದಾರೆ ಅವರ ಬಗ್ಗೆ ನಾನು ಸನ್ಮಾನ್ಯ ಮುಖ್ಯಮಂತ್ರಿಗಳನ್ನು ನೇರವಾಗಿ ಕೇಳಿದ್ದೆ. ಬಡವರು ಯಾರಿದ್ದಾರೆ ಅಂತಹವರಿಗೆ ಪರಿಹಾರ ಹಣವನ್ನು ಒಂದೇ ಕಂತಿನಲ್ಲಿ ಕೊಡಿ ಎಂದು ನಾನು ಆಗ ಕೇಳಿದ್ದೆ. ಆಗ ಅವರೂ ಸಹ ಒಪ್ಪಿಕೊಂಡಿದ್ದರು. ಅದೇ ಸುಮಾರು ೨೦-೩೦ ಎಕರೆ ಜಮೀನು ಇಟ್ಟುಕೊಂಡವರಿಗೆ ಬೇಕಾದರೆ ಕಂತುಗಳ ರೂಪದಲ್ಲಿ ಕೊಡಿ ನಾವು ಬೇಡವೆಂದು ಹೇಳುವುದಿಲ್ಲ: ಯಾರು ಬಡಬಗ್ಗರು ಗೇಣಿದಾರರಿದ್ದಾರೆ ಅಂತಹವರಿಗೆ, ಅಂದರೆ ನಮ್ಮ ಮಲೆನಾಡು ಪ್ರದೇಶದಲ್ಲಿ ಯಾರು ೨ ಎಕರೆ ೩ ಎಕರೆ ೪ ಎಕರೆ ೫ ಎಕರೆ ಇಟ್ಟುಕೊಂಡಿರತಕ್ಕಂಥ ಬಡವರು ಯಾರು ಇದ್ದಾರೆ, ಅಂತಹವರಿಗೆ ಬೇಗ ಕೊಡಿ ಎಂದು ನಾನು ಕೇಳಿದ್ದೆ. ನಮ್ಮ ಜಿಲ್ಲೆ ಬರಗಾಲ ಜಿಲ್ಲೆಯೆಂದು ತಾವೇ ಕೇಂದ್ರ ಸರ್ಕಾರಕ್ಕೆ ತಮ್ಮ ವರದಿಯಲ್ಲಿ ಸೇರಿಸಿ ತಿಳಿಸಿದ್ದೀರಿ. ನಮ್ಮ ಕಡೆ ಒಂದು ಎಕರೆ ಪ್ರದೇಶದಲ್ಲಿ ಸುಮಾರಾಗಿ ನಾಲ್ಕು ಚೀಲ ಭತ್ತ ಕೂಡ ಬೆಳೆಯುವುದಕ್ಕಾಗುವುದಿಲ್ಲ. ಅಂತಹ ನಿಕೃಷ್ಟ ಪರಿಸ್ಥಿತಿ ಇದೆ. ಕಾಂಗ್ರೆಸ್ ಸರ್ಕಾರವಿದ್ದಾಗ ಮಾಡಿರತಕ್ಕಂಥ ಈ ಕಾನೂನಿನ ಪ್ರಕಾರ ಹಣ ವಸೂಲಿ ಮಾಡಬಾರದೆಂದು ಅಲ್ಲಿ ತಿಳಿಸಿದ್ದರು. ಮುಂದೆ ಈ ಭೂ ಅಭಿವೃದ್ಧಿ ಬ್ಯಾಂಕಿನವರು ವಸೂಲಿ ಕ್ರಮ ಮಾಡಿ ಅವರ ಚರಾಸ್ತಿ ಮತ್ತು ಸ್ಥಿರಾಸ್ತಿಗಳನ್ನು ಹರಾಜು ಹಾಕತಕ್ಕಂಥದ್ದು ನಮ್ಮ ಗಮನಕ್ಕೆ ಬಂದಿದೆ. ಎಲ್ಲಾ ಕಡೆ

ಇದು ನಡೆಯುತ್ತಿದೆ. ಒಂದೇ ಒಂದು ಉದಾಹರಣೆಯನ್ನು ನಿಮ್ಮ ಗಮನಕ್ಕೆ ತರಬಯಸುವುದೆಂದರೆ ದಿನಾಂಕ ೨೬-೨-೮೮ರಲ್ಲಿ ಅನವಟ್ಟಿಯಲ್ಲಿ ಒಂದು ಪ್ರಸಂಗ ನಡೆದಿದೆ. ಈ ರೀತಿ ರಾಜ್ಯದ ೧೯ ಜಿಲ್ಲೆಗಳಲ್ಲಿ ನಡೆಯುತ್ತಿದೆ. ಅನವಟ್ಟಿಯಲ್ಲಿ ಮಹಮದ್ ಗೌಸ್ ಬಿನ್ ಜೈನುಲ್ಲಾ ಸಾಬ್, ಸರ್ವೆ ನಂಬರು ಸೋ ಆಡ್ ಕೋ ೩ ಎಕರೆ ೪ ಗುಂಟೆ ನಿಮ್ಮ ಕ್ಲಾಸಿಫಿಕೇಷನ್ ಪ್ರಕಾರ ಮಾಡಿದ್ದಾರೆ. ಜಮೀನಿನ ಬಾಬತ್ತು ಕಟ್ಟಬೇಕಾದ ಅಸಲು, ಬಡ್ಡಿ ಸೇರಿ ೩,೪೫೬ ರೂಪಾಯಿ ೫೦ ಪೈಸೆ ಮತ್ತು ಭೂಕಂದಾಯ ೨೬೨,೩೫ ಪೈಸೆ ಆಗಿದೆ. ಒಟ್ಟು ೩,೭೧೮.೮೫ ಪೈಸೆ ನೀವು ಕಟ್ಟಬೇಕೆಂದು ನಾವು ನೋಟೀಸ್ ಕೊಟ್ಟಿದ್ದರೂ ಕೂಡ ಹಣವನ್ನು ಕಟ್ಟಿಲ್ಲ. ಈಗ ನೀವು ತಕ್ಷಣ ಹಣ ಕಟ್ಟದಿದ್ದರೆ ನಿಮ್ಮ ಜಮೀನನ್ನು ಸರ್ಕಾರದ ವಶಕ್ಕೆ ತೆಗೆದುಕೊಳ್ಳುತ್ತೇವೆಂದು ನಿಮ್ಮ ಅಧಿಕಾರಿಗಳು ಅನವಟ್ಟಿ ಗ್ರಾಮದ ಒಬ್ಬ ಗೇಣಿದಾರರಿಗೆ ತಿಳಿಸಿದ್ದಾರೆ. ಗೇಣಿದಾರನಿಗೆ ಅನುಕೂಲ ಮಾಡಬೇಕೆನ್ನುವ ಉದ್ದೇಶದಿಂದ ಕಾಂಗ್ರೆಸ್ ಸರ್ಕಾರ ಭೂ ಸುಧಾರಣ ಕಾನೂನನ್ನು ಮಾಡಿತು. ಈ ಭೂ ಸುಧಾರಣ ಕಾನೂನಿನ ರೀತ್ಯ ಗೇಣಿದಾರರಿಗೆ ಅನುಕೂಲ ಮಾಡಿಕೊಡಲಾಗುತ್ತದೆಂದು ಜನತಾ ಸರ್ಕಾರ ಕೂಡ ಅಧಿಕಾರಕ್ಕೆ ಬರುವ ಮೊದಲು ಹೇಳಿತ್ತು. ಆದರೆ, ಇವತ್ತು ಏನಾಗಿದೆ? ಗೇಣಿದಾರರ ಜಮೀನುಗಳನ್ನು ಅಟ್ಯಾಚ್ ಮಾಡುತ್ತಿದ್ದಾರೆ. ನಿಮ್ಮ ಅಧಿಕಾರಿಗಳು ಗೇಣಿದಾರನಿಗೆ ಕೊಟ್ಟಿರುವ ನೋಟೀಸ್‌ಗಳು ನನ್ನ ಹತ್ತಿರ ಇವೆ. ಅವುಗಳನ್ನು ಬೇಕಾದರೆ ನಿಮಗೆ ಕಳುಹಿಸಿ ಕೊಡುತ್ತೇನೆ. ಈ ನೋಟೀಸ್‌ನಲ್ಲಿ ಗೇಣಿದಾರರಿಗೆ ಏನು ತಿಳಿಸಿದ್ದಾರೆ ಎಂದರೆ, ನೀವು ಈ ಜಮೀನಿಗೆ ಸಂಬಂಧಪಟ್ಟ ಹಾಗೆ ಕಟ್ಟಬೇಕಾಗಿರುವ ಹಣವನ್ನು ಕಟ್ಟದೇ ಇದ್ದರೆ ಜಮೀನನ್ನು ಅಟ್ಯಾಚ್ ಮಾಡುತ್ತೇವೆಂದು ನಿಮ್ಮ ಆಫೀಸರ್‌ಗಳು ತಿಳಿಸಿದ್ದಾರೆ. ಈಗಾಗಲೇ ಅನೇಕ ಗೇಣಿದಾರರ ಮನೆಗಳನ್ನೂ ಸಹ ಜಪ್ತಿ ಮಾಡಲಾಗಿದೆ. ಗೇಣಿದಾರರು ಹಣ ಕಟ್ಟದೇ ಇರುವ ಜಮೀನುಗಳಲ್ಲಿ ನಿಮ್ಮ ಅಧಿಕಾರಿಗಳು ಹೋಗಿ ಕೆಂಪು ಬಾವುಟವನ್ನು ಹಾಕಿದ್ದಾರೆ. ಸಿದ್ದಾಪುರ ತಾಲ್ಲೂಕಿನಲ್ಲಿ ಈ ರೀತಿ ಮಾಡಲಾಗಿದೆ. ನಿಮ್ಮ ತಾಲ್ಲೂಕಿನಲ್ಲೂ ಸಹ ಮಾಡಿದ್ದಾರೆ (ಮುಖ್ಯ ಮಂತ್ರಿಯವರನ್ನು ಉದ್ದೇಶಿಸಿ) ಗೇಣಿದಾರರಿಂದ ಯಾವ ರೀತಿ ಹಣವನ್ನು ವಸೂಲು ಮಾಡಬೇಕೆಂಬುದರ ಬಗ್ಗೆ ನೀವು ಎರಡು ಆರ್ಡರ್‌ಗಳನ್ನು ಹೊರಡಿಸಿದ್ದೀರಿ. ಒಂದು ಆರ್ಡರ್ ಸಂಖ್ಯೆ ಆರ್‌ಡಿ/೧೭೭/ಎಲ್‌ಆರ್‌ಹೆಚ್ ೮೪/ದಿನಾಂಕ ೧೭-೧೧-೮೪. ಈ ದಿನಾಂಕದಂದು ಒಂದು ಆರ್ಡರ್ ಹೊರಡಿಸಿದ್ದೀರಿ.

"Government bave recently taken a decision to waive the premium payable under Land Reforms Act by those ex-tenants who have been conferred with occupancy rights and whose total holding of 'D' Class land including the former tenanted land as owner, does not exceed 10 acres. While necessary steps are separately being taken to introduce the legislation in the ensuing Assembly session it may take some more time for passing the legislation by both the Houses of the Legislature. The Government has decided to enforce the decision with immediate effect.

Hence the Deputy Commissioners, Assistant Commissioners and Tahsildars are directed not to collect the premium from those ex-tenants who have been conferred with occupancy rights and whose total holding as owner, including former tenanted land does not exceed 10 acres of 'D' class land, pending passing of necessary law in this regard."

ಸ್ವಾಮಿ ನಾನು ಏನು ಕೇಳುತ್ತೇನೆ ಎಂದರೆ, ಇಲ್ಲಿಯವರೆಗೆ ಒಂದು ಅಮೆಂಡ್‌ಮೆಂಟ್‌ನ್ನು ತರಲು ಏಕೆ ಪ್ರಯತ್ನ ಮಾಡಲಿಲ್ಲ? ಈ ಆರ್ಡರ್ ಅಲ್ಲದೇ ಮತ್ತೊಂದು ಆರ್ಡರ್ ದಿನಾಂಕ 10--3-85 ರಂದು ಹೊರಡಿಸಲಾಗಿದೆ.

"Circular instructions were issued to the Divisional Commissioners, Deputy Commissioners, Assistant Commissioners, and Tahsildars in Circular of even No. dated

17-11-84 not to collect the premium from these ex-tenants who have been conferred with occupancy rights and whose total holding of 'D' Class land including the former tenanted land, as owner, does not exceed 10 acres.

By way of clarification of those instructions, it is hereby conveyed that, it is the decision of the Government not to collect future instalments from the categories of ex-tenants mentioned therein. It is not to be interpreted to mean any refund of premium already collected from those ex-tenants. This may kindly be noted."

ಇದರ ಅರ್ಥ ಏನು ಎಂದರೆ, ಯಾರು ಈಗಾಗಲೇ ಕಂತುಗಳನ್ನು ಕಟ್ಟಿದ್ದಾರೋ ಅವರಿಗೆ ಹಣವನ್ನು ಹಿಂದಕ್ಕೆ ಕೊಡಬೇಕೆಂದು ಅಲ್ಲ. ಇನ್ನು ಮುಂದೆ ಗೇಣಿದಾರರಿಂದ ಹಣವನ್ನು ವಸೂಲಿ ಮಾಡಬಾರದೆಂದು ಇದರಲ್ಲಿ ಸ್ಪಷ್ಟವಾಗಿದೆ. ಇದರ ಬಗ್ಗೆ ದಿನಾಂಕ 17-11-84ರಂದು ಒಂದು ಆರ್ಡರನ್ನೂ ಮತ್ತು ದಿನಾಂಕ 19-3-85ರಂದು ಒಂದು ಆರ್ಡರನ್ನೂ ಹೊರಡಿಸಿದ್ದೀರಿ. ನಾನು ಕೇಳುತ್ತೇನೆ, ಈ ಆರ್ಡರ್‌ಗಳ ಬಗ್ಗೆ ಸದನದಲ್ಲಿ ಕಾನೂನನ್ನು ಏಕೆ ತಂದಿಲ್ಲ? ಎರಡನೆಯದಾಗಿ ನಾನು ಹೇಳುವುದೇನೆಂದರೆ, ಈಗಲೂ ಕೂಡ ಗೇಣಿದಾರರ ಮನೆಗಳನ್ನು ಜಪ್ತಿ ಮಾಡುತ್ತಿದ್ದಾರೆ. ನಿಮ್ಮ ಹೊರಡಿಸಿರುವ ಆರ್ಡರ್‌ಗಳಿಗೆ ನಿಮ್ಮ ಆಫೀಸರ್‌ಗಳು 5 ಪೈಸೆಯಷ್ಟು ಕಿಮ್ಮತ್ತು ಸಹ ಕೊಡುತ್ತಿಲ್ಲ. ಸರ್ಕಾರದ ನಿರ್ದೇಶನಕ್ಕೆ ಸಂಪೂರ್ಣವಾಗಿ ನಿಮ್ಮ ಅಧಿಕಾರಿಗಳು ಎಗೆನೆಸ್ಟ್ ಆಗಿ ಹೋಗುತ್ತಿದ್ದಾರೆಂದು ಈ ಸಂದರ್ಭದಲ್ಲಿ ನಿಮ್ಮ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ನಮ್ಮ ರಾಜ್ಯದಲ್ಲಿ ಲಕ್ಷಾಂತರ ಜನ ರೈತ ವರ್ಗದವರಿದ್ದಾರೆ. ಅವರುಗಳಲ್ಲಿ 5 ಲಕ್ಷದಷ್ಟು ಜನ ಟೆನೆಂಟ್‌ಗಳು ಇದ್ದಾರೆ. ಇವರಲ್ಲಿ 4 ಲಕ್ಷ ಟೆನೆಂಟ್‌ಗಳು ಖಾತೆದಾರರಾಗಿದ್ದಾರೆ. ಒಂದು ಕಡೆ ನೀವು ಬರಗಾಲ ಇದೆ ಎಂದು ಕೇಂದ್ರ ಸರ್ಕಾರಕ್ಕೆ ವರದಿಯನ್ನು ಕಳುಹಿಸುತ್ತೀರಿ. ಅವರಿಗೆ ಹಣ ಕಟ್ಟಬೇಕೆಂದು ಹೇಳಿದರೆ ಯಾವ ನ್ಯಾಯ ಸಿಗುತ್ತದೆ ಎಂದು ಹೇಳಬಯಸುತ್ತೇನೆ. ಮಾನ್ಯ ಅಧ್ಯಕ್ಷರೇ, ಒಂದು ಮಾತನ್ನು ನಾನು ಈ ಬಗ್ಗೆ ಹಿಂದೆಯೂ ಕೂಡ ಹೇಳಿದ್ದೇನೆ, ಅದೇನೆಂದರೆ, ಈ ಹೌಸ್ ಬಿಲ್ಡಿಂಗ್ ಕೋ-ಆಪರೇಟಿವ್ ಸೊಸೈಟಿಗಳ ಬಗ್ಗೆ ನಾನು ಪದೇಪದೇ ಮಾತನಾಡಿದ್ದೇನೆ. ಇಂತಹ ಸೊಸೈಟಿಗಳು ಎಲ್ಲೆಲ್ಲಿ ಯಾರ್ಯಾರು ಮಾಡುತ್ತಾ ಇದ್ದಾರೆ ಅವುಗಳನ್ನು ಮೊದಲು ನಿಲ್ಲಿಸಿ ಕ್ರಮ ತೆಗೆದುಕೊಳ್ಳಬೇಕು. ಹೀಗೆ ನಿಲ್ಲಿಸದಿದ್ದರೆ ನಿಮ್ಮ ಬಿ.ಡಿ.ಎ.ದವರು ಕೂಡ ತಮ್ಮ ಕೆಲಸ ನಿರ್ವಹಣೆ ಮಾಡುವುದು ಕಷ್ಟವಾಗುತ್ತದೆ. ಈ ತೆರನಾದ ಸೊಸೈಟಿಗಳು ನಾಯಿಕೊಡೆಗಳ ರೀತಿಯಲ್ಲಿ ಹುಟ್ಟಿಕೊಂಡಿದ್ದಾವೆ. ಅದಕ್ಕೊಂದು ಮರ್ಯಾದೆ ಬೇಡವೇ? ಬೆಂಗಳೂರು ಸುತ್ತಮುತ್ತ ಪ್ರದೇಶಗಳಲ್ಲಿ ರೆವಿನ್ಯೂ ಲ್ಯಾಂಡ್‌ಗಳನ್ನು ತೆಗೆದುಕೊಂಡು ಈ ಸೊಸೈಟಿಗಳು ಹಾಗೆಯೇ ಬಿಟ್ಟಿದ್ದಾರೆ. ಇಂತಹ ಪರಿಸ್ಥಿತಿಯು ಬೆಂಗಳೂರು ಸುತ್ತಮುತ್ತ ಮಾತ್ರವಲ್ಲ ಗ್ರಾಮಾಂತರ ಪ್ರದೇಶಗಳಲ್ಲಿ ಕೂಡ ಇದೆ. ಈ ಸೊಸೈಟಿಗಳು ಸಿವಿಕ್ ಅಮಿನಿಟೀಸ್ ಗೋಸ್ಕರ ಕೂಡ ಜಾಗವನ್ನು ಬಿಡುತ್ತಾ ಇಲ್ಲ. ಮತ್ತು ತಾವುಗಳು ರೆವಿನ್ಯೂ ಲ್ಯಾಂಡ್‌ನಲ್ಲಿ ಮನೆಗಳನ್ನು ಕಟ್ಟಿಕೊಂಡಿರತಕ್ಕಂಥ ಅನೇಕ ಮನೆಗಳನ್ನು ಒಡೆದುಹಾಕಿದ್ದೀರಿ. ನಂದಿನಿ ಲೇಔಟ್ ಮತ್ತು ಕಾಕ್ಸ್‌ಟೌನ್ ದಾಟಿ ಆಚೆಗಿನ ಒಂದು ಪ್ರದೇಶದಲ್ಲಿ ಬಹಳಷ್ಟು ಮನೆಗಳನ್ನು ಒಡೆದು ಹಾಕಿದ್ದೀರಿ. ಹೀಗೆ ಬಡವರ ಮನೆಗಳನ್ನು ಒಡೆದು ಹಾಕುವುದರಲ್ಲಿ ನೀವುಗಳು ತುಂಬಾ ಪರಿಣತರು ಎಂದು ತೋರಿಸಿಕೊಟ್ಟಿದ್ದೀರಿ. ಹೀಗೆ ಮಾಡುವುದರ ಮೂಲಕ ನೀವು ಮಾಡಿದ ದೊಡ್ಡ ಸಾಧನೆಗಳನ್ನು ರಾಜ್ಯದ ಜನರಿಗೆ ತೋರಿಸಬೇಕಲ್ಲವೆ? ಈ ಹೌಸ್ ಬಿಲ್ಡಿಂಗ್ ಕೋ-ಆಪರೇಟಿವ್ ಸೊಸೈಟಿಗಳು ನಿಮ್ಮ ಕಾಲದಲ್ಲಿ ಹುಟ್ಟಿದಷ್ಟು ಬೇರೆ ಯಾವ ಕಾಲದಲ್ಲಿಯೂ ಹುಟ್ಟಲಿಲ್ಲ ಎಂದು ಹೇಳುತ್ತಿದ್ದೇನೆ.

ಉಪಾಧ್ಯಕ್ಷರು.—ಮಾನ್ಯ ಬಂಗಾರಪ್ಪನವರೇ ತಮಗೆ ತಮ್ಮ ಭಾಷಣವನ್ನು ಮುಗಿಸಲು ಇನ್ನೂ ಎಷ್ಟು ನಿಮಿಷಗಳ ಕಾಲಾವಕಾಶ ಬೇಕು? ಈಗಾಗಲೇ 45 ನಿಮಿಷಗಳ ಕಾಲ ಮಾತನಾಡಿದ್ದೀರಿ.

ಶ್ರೀ ಎಸ್. ಬಂಗಾರಪ್ಪ.—ಇನ್ನೂ 45 ನಿಮಿಷಗಳ ಕಾಲಾವಕಾಶ ಕೊಡಿ, ಮುಗಿಸುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೆ, ನಮ್ಮ ಸರ್ಕಾರ ಬಂದಮೇಲೆ ಹೊಸದಾಗಿ ಯಾವುದೇ ಒಂದು ಹೌಸಿಂಗ್ ಕೋ-ಆಪರೇಟಿವ್ ಸೊಸೈಟಿಯಾಗಿಲ್ಲ. ಏನಾದರೂ ಆಗಿದ್ದರೆ

ಅವುಗಳು ಹಿಂದೆಯೇ ಆಗಿದ್ದುವು. ಅದರಲ್ಲಿಯೂ ಕೂಡ ನಾವು 120 ಸೊಸೈಟಿಗಳನ್ನು ಅವುಗಳ ಹಿಂದಿನ ಮತ್ತು ಮುಂದಿನ ವಿಷಯ ಮತ್ತು, ಇತರ ಒಳ್ಳೆಯ ಅಂಶಗಳನ್ನು ನೋಡಿ ತಿಳಿದುಕೊಂಡು ಅದರ ಬಗ್ಗೆ ಒಂದು ತ್ರಿಸದಸ್ಯ ಸಮಿತಿಯನ್ನು ಮಾಡಿ, ಆ ಸಮಿತಿಯು ಕೂಲಂಕಷವಾಗಿ ಅವುಗಳ ಬಗ್ಗೆ ಪರಿಶೀಲನೆ ಮಾಡಿದ ಮೇಲೆಯೇ ಅವುಗಳ ಬಗ್ಗೆ ಸರ್ಕಾರ ತನ್ನ ಮುಂದಿನ ಕ್ರಮವನ್ನು ತೆಗೆದುಕೊಳ್ಳುತ್ತದೆ. ನಾವು ಬಂದಮೇಲೆ ಹೊಸದಾಗಿ ಯಾವ ಹೌಸ್‌ಬಿಲ್ಡಿಂಗ್ ಕೋ-ಆಪರೇಟಿವ್ ಸೊಸೈಟಿಗಳು ಆಗಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಯಾವುದೇ ಸೊಸೈಟಿಗಳನ್ನು ನಾವು ಬಂದಮೇಲೆ ರಿಜಿಸ್ಟರ್ಡ್ ಮಾಡಿಲ್ಲ ಎಂದು ಮುಖ್ಯಮಂತ್ರಿಯವರು ಹೇಳಿದರು. ನಾನು ಹೇಳುತ್ತಿರುವುದು ರಿಜಿಸ್ಟರ್ಡ್ ಸೊಸೈಟಿಗಳ ಬಗ್ಗೆ ಮಾತ್ರವಲ್ಲ. ಸೊಸೈಟಿಗಳಲ್ಲಿ ರಿಜಿಸ್ಟರ್ಡ್ ಮತ್ತು ಅನ್‌ರಿಜಿಸ್ಟರ್ಡ್ ಎಂದು ಎರಡು ತರಹದಲ್ಲಿವೆ. ಇಂತಹ ಸೊಸೈಟಿಗಳಿಗೆ ರಾಜ್ಯದ ಮುಗ್ಧ ಜನರು ಬಲಿಯಾಗುತ್ತಾ ಇದ್ದಾರೆ. ಅವರಿಗೆ ಇವುಗಳ ಚಟುವಟಿಕೆಗಳು ಗೊತ್ತಾಗುವುದಿಲ್ಲ. ಒಟ್ಟಿನಲ್ಲಿ ಸೊಸೈಟಿಗಳನ್ನು ಮಾಡಿಕೊಂಡು ಅವ್ಯವಹಾರ ಮಾಡುವುದಕ್ಕೆ ಪ್ರಾರಂಭ ಮಾಡುತ್ತಾರೆ. ಇಂತಹ ರಿಜಿಸ್ಟರ್ಡ್ ಸೊಸೈಟಿಗಳು 50–60ರಿಂದ 100 ಎಕರೆಗಳವರೆಗೂ ಭೂಮಿಯನ್ನು ಪಡೆದುಕೊಂಡಿವೆ. ಸರ್ಕಾರವು ಹೇಗೆ ಇವರಿಗೆ ಒಪ್ಪಿಗೆ ಕೊಟ್ಟಿದೆ ಎಂದು ಆಶ್ಚರ್ಯವಾಗುತ್ತಿದೆ. ಹೀಗೆ ಕೆಲವು ಸೊಸೈಟಿಗಳು ಬಡಾವಣೆಗಳನ್ನು ಮಾಡಿದ್ದರಲ್ಲಿ ನಿಮ್ಮ ಕಾನೂನು ನಿಯಮಗಳ ಪ್ರಕಾರ ದೇವಸ್ಥಾನಕ್ಕೆ, ಆಸ್ಪತ್ರೆಗೆ, ಅಂಚೆ ಕಚೇರಿಗೆ, ಆಟದ ಮೈದಾನಕ್ಕೆ ಮೀಸಲಾಗಿ ಈ ಸಿ.ಎ. ಸೈಟ್ಸ್ ಎಂದು ಏನು ಜಾಗವನ್ನು ಬಿಡಬೇಕು ಅದನ್ನೂ ಕೂಡ ಬಿಟ್ಟಿಲ್ಲ. ನಿಮ್ಮ ಡೈರೆಕ್ಷನ್ಸ್‌ನ್ನು ಅವರು ಯಾರೂ ಪಾಲನೆ ಮಾಡುತ್ತಾ ಇಲ್ಲ. ಹೀಗೆ ನಿಮ್ಮ ಕಾಲದಲ್ಲಿ ಈ ರಿಜಿಸ್ಟರ್ಡ್ ಮತ್ತು ಅನ್‌ರಿಜಿಸ್ಟರ್ಡ್ ಸೊಸೈಟಿಗಳು ತುಂಬಾ ಆಗಿಬಿಟ್ಟಿವೆ. ಬೇಕಾದರೆ ಅದರ ಪಟ್ಟಿಯನ್ನು ನಾನು ಕೊಡುತ್ತೇನೆ. ಇದರಲ್ಲಿ ಕೆಲವರು ಸಾಕಷ್ಟು ಜಮೀನು ಮಾಡಿಕೊಂಡಿದ್ದಾರೆ. ಆ ಒಂದು ಪಟ್ಟಿಯನ್ನು ನೋಡಿದರೆ ಯಾರಿಗೂ ಆಶ್ಚರ್ಯವಾಗುವ ಹಾಗೆ ಇದೆ. ಇಂತಹ ಸೊಸೈಟಿಗಳಲ್ಲಿ ಬಹಳ ದೊಡ್ಡ ದೊಡ್ಡ ವ್ಯಕ್ತಿಗಳು ಇದ್ದಾರೆ. ಇಂತಹವರಿಗೆ ಸರ್ಕಾರದವರ ಸಹಾಯ ಸಹಕಾರ ಇಲ್ಲದೇನೆ ಅವರು ಮಾಡುವುದಕ್ಕೆ ಸಾಧ್ಯವೇ ಇಲ್ಲ. ಅವರಿಗೆ ನಿಮ್ಮ ಮೂಲಕ ಇಂತಹ ಒಂದು ಧೈರ್ಯ ಕೊಡದಿದ್ದರೆ ಯಾರೂ ಕೂಡ ಸೊಸೈಟಿಗಳನ್ನು ಮಾಡುವುದು ಮುಂದೆ ಬರುವುದಿಲ್ಲ. ನಾನು ಅಂತಹ ದೊಡ್ಡ ವ್ಯಕ್ತಿಗಳ ಹೆಸರು ಹೇಳುವುದಕ್ಕೆ ತಯಾರಾಗಿಲ್ಲ. ಅಧ್ಯಕ್ಷರೆ, ಬಿ.ಡಿ.ಎ.ನವರು ಬೇಕಾದಷ್ಟು ಸುತ್ತೋಲೆ ಕಳಿಸಿ ಹಾಗೆ ಮಾಡಬೇಕು,

1–30 ಪಿ.ಎಂ.

ಹೀಗೆ ಮಾಡಬಾರದು ಎಂದು ಹೇಳಿದ್ದಾರೆ. ಕೃಷ್ಣರಾಜಪುರಂಗೆ ಸಂಬಂಧಪಟ್ಟ ಏರಿಯಾದಲ್ಲಿ ಬೇಕಾದಷ್ಟು ಆಗಿದೆ. ಅದನ್ನೆಲ್ಲಾ ಹೇಗೆ ಮ್ಯಾನೇಜ್ ಮಾಡುತ್ತೀರೋ ಗೊತ್ತಿಲ್ಲ. ಇದನ್ನೆಲ್ಲಾ ನೋಡಿದರೆ ಎಷ್ಟು ಹಣದ ವ್ಯವಹಾರ ನಡೆದಿದೆ ಎಂದು ಆಶ್ಚರ್ಯವಾಗುತ್ತದೆ. ಹಿಂದೆ ನಾನು ರೆವಿನ್ಯೂ ಮಿನಿಸ್ಟ್ರಾಗಿದ್ದಾಗ ಬಡವರಿಗೆ ಒಂದು ಸೈಟ್ ಕೊಡುವುದಕ್ಕೇ ತ್ರಾಸವಾಗುತ್ತಿತ್ತು. ನೀವು ಸಾವಿರಾರು ಸೈಟ್‌ಗಳನ್ನು ಹೇಗೆ ಮಾಡುತ್ತೀರೋ ಗೊತ್ತಿಲ್ಲ. ಲಕ್ಷಾಂತರ ರೂ.ಗಳ ಅವ್ಯವಹಾರ ಇವತ್ತಿಗೂ ನಡೆಯುತ್ತಿದೆ. ಸಬ್ ರಿಜಿಸ್ಟ್ರಾರ್ ಆಫೀಸ್‌ಗಳು ಎಷ್ಟೋ ಸಲ ರಾತ್ರಿ 1 ಗಂಟೆವರೆಗೂ ವ್ಯವಹಾರ ನಡೆಸುತ್ತಿರುತ್ತವೆ. ಈಗಲೂ ನಡೆಯುತ್ತಿದೆ. ಬೇಕಾದರೆ ನಿಮ್ಮ ಸಿ.ಒ.ಡಿ.ನೋ ಸಿ.ಐ.ಡಿ.ನೋ ಯಾವುದೋ ಬಿಟ್ಟು ಬೇಕಾದರೆ ಪರೀಕ್ಷೆ ಮಾಡಿ.

ಅಧ್ಯಕ್ಷರೇ, ಇವರು ಹೊರಡಿಸಿರುವ ಆಜ್ಞೆ ಎಫೆಕ್ಟಿಗೆ ಬರಬಾರದು ಆ ರೀತಿ ಆಗಿರುವ ಸೊಸೈಟಿಗಳ ಪಟ್ಟಿಗೆ ಬರುತ್ತೇನೆ. ತಾವು 85ರಲ್ಲಿ ಒಂದು ಆಜ್ಞೆ ಹೊರಡಿಸಿದ್ದೀರಿ. ಹಾಗೇನೇ 23–4–86ರಲ್ಲೂ ಹೊರಡಿಸಿದ್ದೀರಿ, ಅದರಲ್ಲಿ ನೀವು ಏನು ಮಾಡಿದ್ದೀರಿ ಎಂದರೆ,

'Accordingly in Government Order dated 18-6-1985, the acquisition of land through Revenue Department was cancelled. The Bangalore Development Authority was made the sole agency for acquisition of lands in Bangalore Metropolitan Area. Registration of lands in favour of House Building Co-operative Societies was frozan. Conversion of agricultural lands in favour of such societies

> was prohibited. However, it was proposed to continue acquisition of lands for 79 House Building Co-operative Societies subject to the clearance from the Three Men Committee appointed for scrutiny of such a proposal. Additional 49 societies listed in the schedule to this order could not come within the purview of the said Government Order referred at (1) above. The cut-off date was fixed as 30-6-1984 for the purpose of registration of societies and enrolment of members for the said purpose.......

ಇದರ ಪ್ರಕಾರ 79 ಸೊಸೈಟಿಗಳಿಗೆ ಮಾತ್ರ ನೀವು ಕ್ಲಿಯರ್ ಮಾಡಿದ್ದೀರಿ. ಅದೇ ನಮ್ಮ ಮುಂದಿರುವ ಪ್ರಶ್ನೆ. ಈ 79 ಸೊಸೈಟಿಗಳು ಒಂದೆ ರೆವಿನ್ಯೂ ಜಾಗದಲ್ಲಿ ಮಾಡಿರುವ ಹಾಗೂ ಆಡಬಾರದ ಆಟಗಳು ಏನೇನಿದ್ದವೋ ಅದಕ್ಕಿಂತ ನೂರರಷ್ಟು ಸಾವಿರದಷ್ಟು ಆಟವಾಡುತ್ತಿವೆ. ಕೆಲವು ಸೊಸೈಟಿಗಳ ಹೆಸರನ್ನು ಹೇಳುವುದಾದರೆ, ಮಹಾಲಕ್ಷ್ಮಿ ಹೆಚ್.ಬಿ.ಸಿ.ಎಸ್., ಗವೀಪುರಂ ಹೆಚ್.ಬಿ.ಸಿ.ಎಸ್. ಹೆಚ್.ಎಂ.ಟಿ. ಹೆಚ್.ಬಿ.ಸಿ.ಎಸ್. ಹೀಗೆ ಒಂದು ದೊಡ್ಡ ಪಟ್ಟಿಯೇ ಇದೆ. ಒಂದೊಂದು ಸೊಸೈಟಿಯವರು ಎಷ್ಟೆಷ್ಟು ಎಕರೆ ಜಮೀನನ್ನು ತೆಗೆದುಕೊಂಡಿದ್ದಾರೆ ಎಂಬುದನ್ನು ಬೇಕಾದರೆ ಉದಾಹರಣೆ ಸಹಿತ ತಮ್ಮ ಗಮನಕ್ಕೆ ತರುತ್ತೇನೆ. ಕೃಷ್ಣರಾಜಪುರದ ಚಿಕ್ಕಬಸವನಪುರದಲ್ಲಿ ಬಾಸ್ಕರ್ ಹೌಸ್ ಬಿಲ್ಡಿಂಗ್ ಕೋ-ಆಪರೇಟಿವ್ ಸೊಸೈಟಿಯವರು 10½ ಎಕರೆ 26 ಗುಂಟೆ ಜಮೀನು ಕೊಂಡು ಸೈಟ್ ಮಾಡಿದ್ದಾರೆ. ಅದರಲ್ಲಿ 26, 4ನೇ ಸರ್ವೇ ನಂಬರಿನ ಮಾಲೀಕರು ವಿಶಾಲಾಕ್ಷಮ್ಮ ಇವರ ಹೆಸರಿನಲ್ಲಿ ಖಾತೆ ಇರುತ್ತದೆ, ವಿಸ್ತೀರ್ಣ 10 ಎಕರೆ 20 ಗುಂಟೆ. ಸರ್ವೆ ನಂ. 25ರ ಮಾಲೀಕರು ಮುನಿಯಪ್ಪ. 6 ಎಕರೆ 3 ಗುಂಟೆ ಈ ರೀತಿ ಇದೆ. ಲಕ್ಷ್ಮಮ್ಮ ೧೪ ಎಕರೆ ಚಿಲ್ಲರೆ ಹೀಗೆ ಬೇಕಾದಷ್ಟು ಇದೆ. ಎಲ್ಲೆಲ್ಲಿ ಅಕ್ವೈರ್ ಮಾಡತಕ್ಕಂತಹ ಕೆಲಸ ಮಾಡಿದ್ದಾರೆ ಅವಷ್ಟೂ ಕೂಡ ನಿಯಮಗಳಿಗೆ, ಅಕ್ವಿಸಿಷನ್ ರೂಲ್ಸ್‌ಗೆ ಯಾವ್ಯಾವ ಕಂಡಿಷನ್ ಅನ್ನು ಏನು ಸೊಸೈಟಿಗಳಿಗೆ ಏನು ಹಾಕಿತ್ತು ಅದಕ್ಕೆಲ್ಲಾ ಸಂಪೂರ್ಣ ವಿರೋಧವಾಗಿ ಅಕ್ವೈರ್ ಮಾಡಿದತಕ್ಕಂಥದ್ದು ಇದೆ. ಅಧಿಕಾರಿಗಳು ಇದಕ್ಕೆ ಹೇಗೆ ಒಪ್ಪಿಗೆ ಕೊಟ್ಟರು ಎಂಬುದು ತನಿಖೆಯಾಗಬೇಕು. ದರಖಾಸ್ತು ಜಮೀನನ್ನು ಯಾವ ಬಡವನಿಗೆ ಕೊಡಲಾಗಿತ್ತು ಅದನ್ನು ಇಷ್ಟು ವರ್ಷದವರೆಗೆ ಪರಭಾರೆ ಮಾಡಬಾರದು ಎಂದು ಕಂಡೀಷನ್ ಏನು ಇರುತ್ತದೆ ಅಂತಹ ಜಮೀನುಗಳನ್ನೆಲ್ಲಾ ಇದು ಹೋಗಿದೆ. ಇನಾಂ ಜಮೀನುಗಳು, ಭೂ ನ್ಯಾಯ ಮಂಡಲಿಗಳ ಜಮೀನುಗಳನ್ನು ೧೫ ವರ್ಷ ಪರಭಾರೆ ಮಾಡಬಾರದೆಂದು ಇದ್ದರೂ ಕೂಡ ಅಂತಹ ಜಮೀನುಗಳು ಇವತ್ತು ಬೇಕಾದಷ್ಟು ಹೊರಟು ಹೋಗಿರತಕ್ಕಂಥಾ ಉದಾಹರಣೆಗಳು ಇವೆ. ಕಾನೂನು ಇದ್ದರೂ ಕೂಡ ಇದು ಹೇಗೆ ಹೋಯಿತು ಎಂದು ನಾನು ಈ ಸಂದರ್ಭದಲ್ಲಿ ಕೇಳುತ್ತಿದ್ದೇನೆ. ಮತ್ತೊಂದು ದೊಡ್ಡ ಕಂಪನಿ ಇದೆ. ದಯಾನಂದ ಪೈ, ರಮಾನಂದ ಪೈಯವರ ಮಣಿಪಾಲ್ ಗ್ರೂಪ್ ಅನ್ನತಕ್ಕಂಥ ಕಂಪನಿ, ಕೃಷ್ಣರಾಜಪುರದ್ದು ಉದಾಹರಣೆ ಕೊಡಬೇಕೆಂದು ಇದ್ದರೆ ಹಳೆಯ ಮದ್ರಾಸ್ ರಸ್ತೆ ಬೆನಗಾನಹಳ್ಳಿ ಮಧುರ ಕೋಟ್ಸ್ ಹತ್ತಿರ ೪೦ ಎಕರೆ ಜಮೀನನ್ನು ಒಂದೇ ಸಾರಿ ಇವರು ತೆಗೆದುಕೊಂಡಿದ್ದಾರೆ. ಒಬ್ಬ ವ್ಯಕ್ತಿ ಜಮೀನು ತೆಗೆದುಕೊಳ್ಳಬೇಕಾಗಿದ್ದರೆ ೧೨ ಸಾವಿರ ರೂಪಾಯಿ ವರಮಾನ ಮೇಲೆ ಇದ್ದವನು ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ. ಇದರ ಬಗ್ಗೆ ಕೆಲವು ಕೇಸುಗಳು ಸರಕಾರದ ಮಟ್ಟದಲ್ಲಿ ಮತ್ತು ಅಧಿಕಾರಿಗಳ ಮಟ್ಟದಲ್ಲಿ ಇವೆ. ೪೦ ಎಕರೆಯನ್ನು ಖರೀದಿ ಮಾಡುವುದಕ್ಕೆ ಪರ್ಮಿಷನ್ ಅನ್ನು ಯಾರು ಕೊಟ್ಟರು ಎಂಬ ಪ್ರಶ್ನೆಯನ್ನು ನಾನು ಕೇಳುತ್ತೇನೆ. ಜೊತೆಗೆ ಏನು ಮಾಡಿದ್ದಾರೆಂದರೆ, ಈ ೪೦ ಎಕರೆಯಲ್ಲಿ ಮನೆಗಳು ಇದ್ದವು ಎಂದು ತೋರಿಸುವುದಕ್ಕಾಗಿ ೧೦ X ೧೦ ಅಡಿ ಷೆಡ್ಡು ಹಾಕಿಕೊಂಡು ಕುಳಿತಿದ್ದಾರೆ. ವಿಜಯಾಪುರ ರೆವಿನ್ಯೂ ಸೈಟ್ ಮಾಡಿ ಜೋಡಿದಾರರು ಅದನ್ನು ಕನ್‌ವರ್ಷನ್ ಮಾಡಿಸಿದ್ದಾರೆ. ಇಂತಹ ಸುಳ್ಳು ದಾಖಲೆ, ಅಸತ್ಯ ದಾಖಲೆಯನ್ನು ಸೃಷ್ಟಿ ಮಾಡಿದ್ದಾರೆ. ಹೆಚ್. ಎ. ಎಲ್. ವೈಟ್ ಫೀಲ್ಡ್, ಚನ್ನಪ್ಪನ ಹಳ್ಳಿ ಬಳಿ ೭೮ ಎಕರೆಯನ್ನು ಕೆ. ಸಿದ್ದರಾಮದಾಸ್ ಎನ್ನುವವರು ಕೊಂಡುಕೊಂಡಿದ್ದಾರೆ. ೭೮-೪೦-೩೦ ಎಕರೆ ಹೀಗೆ ಕೊಂಡುಕೊಂಡಿದ್ದಾರೆ ಇದೇನು ಹುಡುಗಾಟವೇ ? ಸಣ್ಣ ವಿಚಾರವೇ ? ೧-೧ ಲಕ್ಷ ೫೦-೭೦ ಸಾವಿರಕ್ಕೆ ತೆಗೆದುಕೊಂಡಿದ್ದು ಇದು ೨-೩-೫ ಲಕ್ಷ ಒಂದೊಂದು ಎಕರೆ ವ್ಯಾಲ್ಯೂ ಆಗುತ್ತದೆ. ಬಡವರಿಂದ ನೇರವಾಗಿ ನೀವೇ ತೆಗೆದುಕೊಂಡು ಮಾಡಿದ್ದರೆ ಅದು ಬೇರೆಯಾಗುತ್ತಿತ್ತು. ನೀವೇ ಸೈಟ್ ಕೊಟ್ಟಿದ್ದೀರಿ ಅನ್ನತಕ್ಕಂತಹ ಅರ್ಥವಾದರೂ ಬರುತ್ತಿತ್ತು. ಆದರೆ ನಾಯಿಕೊಡೆಗಳನ್ನು

ಮಾಡಿ ಜನರಿಗೆ ಅನ್ಯಾಯ ಮಾಡಿಕಾನೂನಿಗೆ ಸಂಪೂರ್ಣವಾಗಿ ವಿರೋಧವಾಗಿ ಮಾಡಿ ಮಧ್ಯೆ ಇರತಕ್ಕಂತಹ ಜನರು ಹಣವನ್ನು ಹೊಡೆದುಕೊಂಡು ಇವತ್ತು ಲಕ್ಷಾಧೀಶ, ಕೋಟ್ಯಾಧೀಶರಾಗುವುದಕ್ಕೆ ನಿಮ್ಮ ದುರಾಡಳಿತ ಕಾರಣ ನಿಮ್ಮ ಆಡಳಿತದಲ್ಲಿ ಏನು ಶಕ್ತಿ ಕುಂದಿ ಹೋಗಿದೆ ಅದು ಇದಕ್ಕೆ ಕಾರಣವೆಂದು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಹಿಂದೆ ಇದೇ ವಿಚಾರದಲ್ಲಿ ಸ್ಪೆಷಲ್ ಡಿ. ಸಿ. ಸಿದ್ದಯ್ಯ ಎಂಬುವವರು ಸಿ.ಓ.ಡಿ. ಗೆ ರೆಫರ್ ಮಾಡಿ, ಇದರಲ್ಲಿ ಅನ್ಯಾಯವಾಗಿದೆ ಎಂದು ಕಂಪ್ಲೈಂಟ್ ಕೊಟ್ಟು ರಿಜಿಸ್ಟರ್ ಮಾಡಿಸಿದ್ದಾರೆ. ಸಿ.ಓ.ಡಿ. ವರದಿ ಬಂತು. ಅದು ಏನಾಯಿತು ಎಂಬುದನ್ನು ತಾವು ತಮ್ಮ ಉತ್ತರದಲ್ಲಿ ಹೇಳಬೇಕು. ಸ್ಪೆಷಲ್ ಡಿ. ಸಿ. ಸಿದ್ದಯ್ಯ ಅವರು ಕೊಟ್ಟಿರತಕ್ಕಂತಹ ಕಂಪ್ಲೆಂಟ್ ಗತಿ ಏನಾಯಿತು ? ದೊಡ್ಡ ದೊಡ್ಡವರಿಗೆ ಸಂಬಂಧ ಪಟ್ಟಿರತಕ್ಕಂತಹ ವಿಚಾರ ಕಂಪ್ಲೇಂಟ್ ಕೊಟ್ಟ ತಕ್ಷಣ ಅಲ್ಲೇ ಮುಚ್ಚಿಬಿಡುತ್ತಾರೆ ಅನ್ನತಕ್ಕಂತಹ ವಿಚಾರ ಗೊತ್ತಾಗುತ್ತದೆ. ತಾವು ಇದನ್ನು ಹೇಳಬೇಕು. ಇವತ್ತು ಸುಮಾರಾಗಿ ೧೬೦ ಗೃಹ ನಿರ್ಮಾಣ ಸಹಕಾರ ಸಂಘಗಳು ಇದೆ. ಇವು ಏಕೆ ಇರಬೇಕು ಇದಕ್ಕೊಂದು ಕಾನೂನು ತನ್ನಿ ಇವೆಷ್ಟನ್ನೂ ವಜಾ ಮಾಡಿ ನೇರವಾಗಿ ಸರಕಾರವೇ ವ್ಯವಹಾರ ಮಾಡಿದರೆ ಒಳ್ಳೆಯದಾಗುತ್ತದೆ. ಬಿ. ಡಿ. ಎ. ಗೆ ತೆಗೆದುಕೊಳ್ಳುವುದೋ ಇಲ್ಲವೇ ಮತ್ತೊಂದು ಯೋಜನೆಯನ್ನು ಮಾಡದೇ ಇದ್ದರೆ ಹಳ್ಳಿಗಾಡಿನ ಜನ ಉಳಿಯುವುದಿಲ್ಲ. ಉದಾಹರಣೆಗೆ ಹೇಳುವುದಾದರೆ, ಗ್ರೇಪ್‌ಯಾರ್ಡ್ ಮಾಡಿರ ತಕ್ಕಂತಹವರು ಒಳ್ಳೆಯ ಭತ್ತ ಬೆಳೆಯುತಕ್ಕಂಥಾದ್ದು ದ್ರಾಕ್ಷಿ ಬೆಳೆಯುತಕ್ಕಂಥಾ ಜಾಗಗಳು ಏನು ಇದೆ ಅಂತಹ ಜಾಗವನ್ನು ದುಡ್ಡಿಗೆ ಮಾರಿಕೊಳ್ಳುತ್ತಿದ್ದಾರೆ. ಯಾರು ೧-೨ ಎಕರೆಯನ್ನು ಇಟ್ಟುಕೊಂಡಿರುತ್ತಾರೆ ಅದನ್ನು ಮಾರಾಟ ಮಾಡಿಕೊಂಡಿದ್ದಾರೆ. ಈ ರೀತಿಯಾಗಿ ಜನರ ಆಸ್ತಿ ಅವರ ಕೈ ತಪ್ಪಿ ಹೋದರೆ ಜನರ ಗತಿ ಏನಾಗುತ್ತದೆ ಎಂಬುದನ್ನು ತಾವು ಯೋಚನೆ ಮಾಡಬೇಕು. ಜನರ ಹತ್ತಿರ ಆಸ್ತಿ ಉಳಿಸತಕ್ಕಂತಹ ಉದ್ದೇಶ ಸರಕಾರಕ್ಕಿರಬೇಕೇ ವಿನಃ ಜನರ ಹತ್ತಿರವಿರುವ ಆಸ್ತಿಯನ್ನು ಮಾರಾಟ ಮಾಡಲಿಕ್ಕೆ ಅನುವು ಮಾಡಿಕೊಡಬಾರದು, ಬಡ ಜನರನ್ನು ಪೂರ್ತಿಯಾಗಿ ಹಿಂಡಿ ಹಿಪ್ಪೆ ಮಾಡಿ ಬಿಸಾಕತಕ್ಕಂತಹ ಅಧಿಕಾರವನ್ನು ಅವರಿಗೆ ಕೊಡಲೀ ಎಂದು ಜನರು ತಮ್ಮ ಕೈಗೆ ಅಧಿಕಾರವನ್ನು ಕೊಟ್ಟಿಲ್ಲವೆಂಬುದನ್ನು ತಮ್ಮ ಗಮನಕ್ಕೆ ತರುತ್ತೇನೆ. ಅಧ್ಯಕ್ಷರೇ, ನನ್ನ ಬಳಿ ಚರ್ಚೆಗೆ ಬೇಕಾಗುವಷ್ಟು ಫೈಲುಗಳಿದ್ದಾವೆ. ನಾನು ಈ ಎಲ್ಲಾ ಫೈಲಿನ ವಿಚಾರಕ್ಕೆ ಹೋಗಿಬಿಟ್ಟರೆ ಬಹಳ ಕಾಲ ಬೇಕಾಗುತ್ತದೆ. ಏಕೆಂದರೆ ಆ ಒಂದೇ ವಿಚಾರದಲ್ಲಿ ಮಾತನಾಡುವುದಕ್ಕೆ ಆಗುವುದಿಲ್ಲ. ಮಾನ್ಯ ಪ್ರಕಾಶ್‌ರವರು ಒಂದು ಹೇಳಿಕೆಯನ್ನು ಕೂಡಾ ಕೊಟ್ಟಿದ್ದಾರೆ. ೧೭ ಸಹಕಾರ ಸಂಘಗಳಿಗೆ ೨೦ ಎಕರೆಗೆ ಮೀರದಂತೆ ಜಮೀನನ್ನು ನೀಡಲಾಗಿದೆ ಎಂದು ಒಂದು ಸಾರಿ ಹೇಳಿಕೆಯನ್ನು ಕೊಟ್ಟಿದ್ದು ಕೂಡಾ ನನಗೆ ನೆನಪು ಇದೆ, ಸಬ್ಜೆಕ್ಟ್ ಟು ವೆರಿಫಿಕೇಷನ್ ನನಗೆ ಗೊತ್ತಿರುವ ಹಾಗೆ ಒಂದೊಂದು ಸಹಕಾರ ಸಂಘಗಳವರೂ ೬೦ ರಿಂದ ೧೦೦ ಎಕರೆಯನ್ನು ಮಾಡಿಕೊಂಡಿದ್ದಾರೆ. ಇದಷ್ಟೂ ವೆರಿಫೈ ಮಾಡಿಸಿ. ಹೇಳಿಕೆಯನ್ನು ಸಂಪೂರ್ಣವಾಗಿ ತದ್ವಿರುದ್ಧವಾಗಿ ಮಾಡಿದ್ದಾರೆ. ನೀವು ಹೇಳಿಕೆ ಕೊಟ್ಟ ಮೇಲೂ ಕೂಡಾ ಮಾಡಿದ್ದಾರೆ.

ಶ್ರೀ ಎಂ ಪಿ. ಪ್ರಕಾಶ್.—ಸನ್ಮಾನ್ಯ ಉಪಾಧ್ಯಕ್ಷರೆ, ಈ ಹಿಂದೆ ಈ ಪ್ರಶ್ನೆ ಈ ಸದನದಲ್ಲಿ ಪ್ರಸ್ತಾಪಕ್ಕೆ ಬಂದಾಗ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ನೇರವಾಗಿ ಕೊಟ್ಟಿರತಕ್ಕಂಥ ಅರ್ಜಿಗಳು ಈ ರೀತಿಯಾಗಿ ನಮಗೆ ನಿವೇಶನಗಳನ್ನು ಅದಕ್ಕೆ ಜಮೀನುಗಳನ್ನು ಕೊಟ್ಟಿರತಕ್ಕಂತಹವರಲ್ಲಿ ಇರತಕ್ಕಂತಹ ಳಳ ಅರ್ಜಿಗಳಲ್ಲಿ ೧೭ ಅರ್ಜಿಗಳಿಗೆ ಮಾತ್ರ ಮಾನ್ಯತೆಯನ್ನು ಕೊಟ್ಟು ಅವುಗಳಿಗೆ ನಿವೇಶನಗಳನ್ನು ಕೊಡಲಾಯಿತು. ೧೭ ಕೊಟ್ಟಿರತಕ್ಕಂಥ ಸಂಘ ಸಂಸ್ಥೆಗಳಲ್ಲಿ ನಮ್ಮ ಸರ್ಕಾರ ಬಂದಾಗ ಕಳೆದ ಐದು ವರ್ಷದಿಂದ ಏಳು ಇಂಥ ಒಂದು ಸಂಘ ಸಂಸ್ಥೆಗಳಿಗೆ ಮಾತ್ರ ಜಮೀನುಗಳನ್ನು ಕೊಡಲಾಗಿದೆ. ಈ ಜಮೀನನ್ನು ಕೊಟ್ಟಿರತಕ್ಕಂಥ ಎಲ್ಲರಿಗೂ ಕೂಡಾ ಇಪ್ಪತ್ತು ಎಕರೆಗಳಿಗಿಂತ ಹೆಚ್ಚು ಇಲ್ಲ. ತಾವು ಪ್ರಸ್ತಾಪ ಮಾಡುತ್ತಿರತಕ್ಕಂಥ ಸಹಕಾರ ಸಂಘ ಏನು ಇದೆ, ಅವು ಕಂದಾಯ ಇಲಾಖೆಗೆ ಸಂಬಂಪಟ್ಟಿರತಕ್ಕಂಥದ್ದೇ ವಿನಹಾ ಬೆಂಗಳೂರು ಪ್ರಾಧಿಕಾರಕ್ಕೆ ಸಂಬಂಧ ಪಟ್ಟಿರತಕ್ಕಂಥದ್ದು ಅಲ್ಲ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಧ್ಯಕ್ಷರೇ, ನಾನು ಕೇಳುವುದು ನಾನು ಮಾತನಾಡುತ್ತಿರತಕ್ಕಂಥ ಎಲ್ಲಾ ಹೌಸ್ ಬಿಲ್ಡಿಂಗ್ ಕೋ-ಆಪರೇಟಿವ್ ಸೊಸೈಟಿಗಳು ಏನು ಇದ್ದಾವೆ, ನಾನು ಅದಕ್ಕೆ ಸಂಬಂಧಪಟ್ಟ ಹಾಗೆ ನಾನು ಮಾತನಾಡುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಅವರು ಏನು ಹೇಳಿದ್ದಾರೆ, ಅದಕ್ಕೆ ಒಂದು ಶಬ್ದವನ್ನು ಸೇರಿಸಿ ಹೇಳುತ್ತೇನೆ. ನಮ್ಮ ಸರ್ಕಾರದ ನೀತಿ ಏನು ಎಂದರೆ ನೀವು ಹೇಳಿದಿರಲ್ಲಾ, ಸಹಕಾರ ಸಂಘಗಳು, ಎಲ್ಲೆಲ್ಲೋ ಹುಟ್ಟಿಕೊಂಡು ಯಾವುದೋ ರೀತಿ ಹುಟ್ಟಿಕೊಂಡು ರೈತರ ಜಮೀನನ್ನು ಅವರು ಖರೀದಿ

ಮಾಡಿ ಅದಾದ ಮೇಲೆ ಅಕ್ವೈರ್ ಮಾಡಿಸಿ ಎಂದು ಹೇಳುವುದು, ಅದನ್ನು ನಿಲ್ಲಿಸುವುದು ಮತ್ತು ಏನಾದರೂ ಸಹಕಾರ ಸಂಘಗಳು ಮನೆ ಕಟ್ಟತಕ್ಕಂಥ ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದರೆ ಅವುಗಳಿಗೆ ಬೇಕಾಗಿರತಕ್ಕಂಥ ಜಮೀನನ್ನು ಕೇವಲ ಬೆಂಗಳೂರು ಪ್ರಾಧಿಕಾರದಿಂದ ಡೆವಲಪ್‌ಮೆಂಟ್ ಅಥಾರಿಟಿಯಿಂದಲೇ ಕೊಡಬೇಕು. ನೇರವಾಗಿ ಅವರು ರೆವಿನ್ಯೂ ಡಿಪಾರ್ಟ್‌ಮೆಂಟಿನ ಮುಖಾಂತರವಾಗಿ ಅಕ್ವೈರ್ ಮಾಡಕೂಡದು ಎಂದು ಹೇಳತಕ್ಕಂಥದ್ದು ನಮ್ಮ ನೀತಿ. ಮತ್ತು ಆ ರೀತಿ ಕೊಟ್ಟಾಗಲೂ ಕೂಡಾ ಇಪ್ಪತ್ತು ಎಕರೆಗಳಿಗಿಂತ ಹೆಚ್ಚು ಮಾಡಕೂಡದು ಎನ್ನತಕ್ಕಂಥ ನೀತಿ. ಅದನ್ನು ಕಟ್ಟುನಿಟ್ಟಾಗಿ ನಾವು ಅನುಸರಿಸಿಕೊಂಡು ಬಂದಿದ್ದೇವೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಧ್ಯಕ್ಷರೇ, ನನ್ನ ಅಭಿಪ್ರಾಯವನ್ನು ನಾನು ತಿಳಿಸಿದ್ದೇನೆ. ನನ್ನ ಪ್ರಕಾರ ಬಿ.ಡಿ.ಎ. ಗೆ ವಹಿಸಿ. ಬಿ.ಡಿ.ಎ. ಒಳಗೆ ತಪ್ಪಿದ್ದರೆ ಅದನ್ನು ಸರಿಪಡಿಸತಕ್ಕಂಥ ವಿಚಾರ ಮತ್ತು ಅದು ಪ್ರತ್ಯೇಕ. ಇವೆಲ್ಲಾವನ್ನು ಕೂಡಾ ವಹಿಸಿ. ಈ ಸಹಕಾರ ಸಂಘಗಳು ಏನು ಇದ್ದಾವೆ, ಅವುಗಳನ್ನು ರದ್ದು ಮಾಡಬೇಕು. ರದ್ದು ಮಾಡಿ ನೇರವಾಗಿ ನೀವು ವ್ಯವಹಾರವನ್ನು ಮಾಡಿ ಅಕ್ವೈರ್ ಮಾಡುವುದು ಆಗಿದ್ದರೆ ಆ ಭೂಮಿಯ ಮಾಲೀಕರ ಜೊತೆ ನೇರವಾಗಿ ವ್ಯವಹಾರವನ್ನು ಮಾಡತಕ್ಕಂಥ ಕೆಲಸವನ್ನು ನೀವು ಮಾಡಿ. ಈ ಸಹಕಾರ ಸಂಘಗಳು ಏನು ಇದೆ ಈ ಈ ಪಿಡುಗನ್ನು ಹೊಡೆದು ಹಾಕತಕ್ಕಂಥ ಕೆಲಸವನ್ನು ತತ್‌ಕ್ಷಣ ಮಾಡಬೇಕು, ಇದನ್ನು ಮಾಡದಿದ್ದರೆ ಉದ್ಧಾರ ಆಗುವುದಿಲ್ಲ. ಇಲ್ಲಿಯವರೆಗೂ ಆಗಿರತಕ್ಕಂಥ ಏನು ವಿಚಾರ ಇದೆ, ಅದನ್ನು ಸಂಪೂರ್ಣವಾಗಿ ತನಿಖೆಯಾಗಬೇಕು, ಪೂರ್ತಿಯಾಗಿ ಆಗಬೇಕು. ಏಕೆಂದರೆ ಬರೀ ಭಾಷಣ ಮಾಡಿ ನಿಲ್ಲಿಸತಕ್ಕಂಥ ವಿಚಾರ ಅಲ್ಲ. ಏಕೆಂದರೆ ಇಲ್ಲಿ ಲಕ್ಷಾಂತರ ರೂಪಾಯಿ ವ್ಯವಹಾರಗಳು ಒಂದೊಂದು ಜಾಗದಲ್ಲಿ ನಡೆದಿವೆ. ಕೋಟ್ಯಾಂತರ ರೂಪಾಯಿ ವ್ಯವಹಾರ ಅದು ಕೆಲವು ಸೊಸೈಟಿಗಳು ಟೋಟಲ್ ಆಗಿ ನಾವು ನೋಡುತ್ತಾ ಹೋದರೆ ಕೋಟಿಗಟ್ಟಲೇ ವ್ಯವಹಾರ ನಡೆದಿದೆ. ಇದೇನೂ ಸಣ್ಣ ವಿಚಾರ ಅಲ್ಲ. ಇದಕ್ಕೆ ಸರಿಯಾದಂಥ ಒಂದು ತನಿಖೆಯಾಗಬೇಕು. ತನಿಖೆಯನ್ನು ಕೇಳಿಬಿಟ್ಟರೆ ಸಿ.ಓ.ಡಿ. ನ್ಯಾಯಾಂಗ ಮತ್ತೊಂದು ಇವೆಲ್ಲವೂ ಕೂಡಾ ಬರುತ್ತದೆ. ಅನಿವಾರ್ಯವಾಗಿ ನಾನು ಇದನ್ನು ಡಿಮ್ಯಾಂಡ್ ಮಾಡುತ್ತಿದ್ದೇನೆ. ಇದಕ್ಕೆ ಒಂದು ನ್ಯಾಯಾಂಗ ತನಿಖೆಯನ್ನು ಮಾಡಿದರೆ ಒಳ್ಳೆಯದು. ನಾಳೆ ನೀವು ಏನೇ ತಪ್ಪು ಮಾಡಲಿ, ಸರ್ಕಾರ ತಪ್ಪು ಮಾಡಲಿ ಅಧಿಕಾರಿಗಳು ತಪ್ಪು ಮಾಡಲಿ, ನಿಯಮಗಳನ್ನು ಪೂರ್ತಿಯಾಗಿ ಎಲ್ಲಾ ಉಲ್ಲಂಘನೆ ಮಾಡಿದ್ದಾರೆ ಎಂದು ಹೇಳುತ್ತಾರೆ. ಏತಕ್ಕೆಂದರೆ ಇದರಲ್ಲಿ ಬಹಳ ದೊಡ್ಡ ದೊಡ್ಡವರುಗಳ ಕುಮ್ಮಕ್ಕು ಇದೆ, ಆಶೀರ್ವಾದ ಇದೆ. ಇಲ್ಲದಿದ್ದರೆ ಯಾರೂ ಮಾಡುವುದಕ್ಕೆ ಸಾಧ್ಯ ಇಲ್ಲ. ನಾನು ಎಲ್ಲವನ್ನೂ ಕೂಡಾ ಬಿಚ್ಚುವುದಕ್ಕೆ ಸಾಧ್ಯ ಇಲ್ಲ. ವಿಧಾನಸೌಧದ ಮಟ್ಟದಿಂದ ಮಂತ್ರಿಗಳ ಮಟ್ಟದಿಂದ ಅವುಗಳಿಗೆ ಸಹಕಾರ ಇದೆ ಎನ್ನತಕ್ಕಂಥ ಮಾತನ್ನು ಕೂಡಾ ಕೇಳಿದ್ದೇವೆ. ನಮ್ಮನ್ನು ಏನೂ ಮಾಡುವುದಕ್ಕಾಗುವುದಿಲ್ಲ ಎಂದು ಅವರೇ ಹೇಳಿಕೊಂಡು ತಿರುಗಾಡುತ್ತಿದ್ದಾರೆ. ಯಾರೂ ಕೂಡಾ ಇಷ್ಟು ಧೈರ್ಯವಾಗಿ ಮಾಡುವುದಕ್ಕೆ ಸಾಧ್ಯ ಇಲ್ಲ. ಆದ್ದರಿಂದ ಈ ಎಲ್ಲಾ ವಿಚಾರಗಳು ಹೊರಗೆ ಬರಲಿ, ಸಾಕ್ಷ್ಯಾಧಾರಗಳು ಬರಲಿ. ಈ ನ್ಯಾಯಾಂಗ ವಿಚಾರಣೆಗೆ ತತ್‌ಕ್ಷಣ ಸರ್ಕಾರದವರು ಒಪ್ಪಬೇಕು. ಎಲ್ಲಾ ಸಹಕಾರ ಸಂಘಗಳ ವಿಚಾರ ಕೂಡಾ ಸಂಪೂರ್ಣವಾಗಿ ಈ ವಿಚಾರಣೆಗೆ ವಹಿಸಬೇಕು. ನನ್ನ ಒತ್ತಾಯ ಈ ಸಂದರ್ಭದಲ್ಲಿ ಬಿ.ಡಿ.ಎ. ಅವರು ಎರಡನೇ ಬಡಾವಣೆ, ರಾಜಮಹಲ್ ವಿಲಾಸ್ ಎಕ್ಸ್‌ಟೆನ್ಷನ್‌ನಲ್ಲಿ ಚಿಕ್ಕ ಅಪ್ಪಣ್ಣಪ್ಪ ಎಂಬುವರಿಂದ ಮೂವತ್ತು ಎಕರೆ ಮೂವತ್ತು ಗುಂಟೆ ಜಮೀನನ್ನು ಸ್ವಾಧೀನಪಡಿಸಿಕೊಂಡು ಆಗಿದೆ. ಈಗ ಇದರಲ್ಲಿ ಬೇರೆ ಬೇರೆ ಸೈಟ್ ಮಾಡಿ ಬೇರೆ ಬೇರೆ ಸೈಟ್ ಕೊಡತಕ್ಕ ವಿಚಾರ ಸರಿ. ಆದರೆ ಚಿಕ್ಕ ಅಪ್ಪಣ್ಣಪ್ಪ ಅವರಿಗೆ ೯೦ ಸೈಟ್ ಕೊಟ್ಟಿದ್ದಾರೆ, ಇದು ಯಕ್ಷಪ್ರಶ್ನೆಯಾಗಿ ಉಳಿದಿದೆ. ಒಬ್ಬರಿಗೆ ೯೦ ಸೈಟ್ ಕೊಡುವುದು, ೧೯ ಅಲ್ಲ, ಅದು ೯೦ ಸೈಟ್ ನೀಡಿದ್ದಾರೆ ಎಂದೂ ಅದನ್ನು ಅವರು ಪ್ರತ್ಯೇಕ ಪ್ರತ್ಯೇಕವಾಗಿ ಮಾರಾಟ ಮಾಡಿದ್ದಾರೆ ಎಂದು ನನಗೆ ಬಂದಿರುವ ವರದಿ, ಅಲ್ಲದೆ ನನಗೆ ಬಂದಿರುವ ವರದಿ ಪ್ರಕಾರ ಬಿ.ಡಿ.ಎ. ನವರು ಕೊಟ್ಟಿದ್ದಾರೆ. ಅದು ಇಲ್ಲ, ಸತ್ಯ ಇಲ್ಲ ಎಂದು ಅಭಿಪ್ರಾಯ ತಪ್ಪು ಇದು ಇದ್ದರೆ ತಮಗೆ ಗೊತ್ತಿದ್ದರೆ ಹೇಳಿ, ಇಲ್ಲದಿದ್ದರೆ ಅದನ್ನು ಒಬ್ಬನೇ ವ್ಯಕ್ತಿಗೆ ೯೦ ಸೈಟ್ ಕೊಟ್ಟಿಲ್ಲ ಎಂದು ಹೇಳುವುದಾದರೆ ಆ ಉತ್ತರ ಹೇಳಿ. ನನಗೆ ಗೊತ್ತಿರುವ ಹಾಗೆ ಕೊಟ್ಟಿದ್ದಾರೆ, ದಾಖಲೆಗಳೆಲ್ಲಾ ಇವೆ, ನಾನು ದಾಖಲೆಗಳನ್ನು ತರಿಸುವುದಕ್ಕೆ ಪ್ರಯತ್ನ ಮಾಡಿದೆ ಆದರೆ ಕಾಲದ ಅಭಾವದಿಂದ ತರಿಸುವುದಕ್ಕೆ ಸಾಧ್ಯವಾಗಲಿಲ್ಲ. ಹಾಗೆ ಏನಾದರೂ ೯೦ ಸೈಟ್‌ಗಳನ್ನು ಕೊಡತಕ್ಕ ಪ್ರಮೇಯ ಏನು ಇತ್ತು, ಯಾವ ರೂಲ್ ಪ್ರಕಾರ ಕೊಟ್ಟಿದ್ದಾರೆ, ಹೇಗೆ ಕೊಟ್ಟರು ಎಂಬುದನ್ನು ತಿಳಿಸಬೇಕು.

ಶ್ರೀ ಎಂ.ಪಿ. ಪ್ರಕಾಶ್.—ಮಾನ್ಯ ಉಪಾಧ್ಯಕ್ಷರೇ, ರಾಜಾ ಮಹಲ್ ವಿಲಾಸ್ ಎರಡನೇ ಬಡಾವಣೆಯಲ್ಲಿ ಯಾವುದೇ ಒಬ್ಬ ವ್ಯಕ್ತಿಗೆ ಒಂದು ನಿವೇಶನಕ್ಕಿಂತ ಹೆಚ್ಚು ಕೊಡಲಿಕ್ಕೆ ಸಾಧ್ಯತೆ ಇಲ್ಲ.

ಅವರು ಅನೇಕ ಸಂದರ್ಭಗಳಲ್ಲಿ ಅರ್ಜಿಗಳನ್ನು ನಮ್ಮ ಜಾಹಿರಾತಿಗೆ ಅನುಸಾರವಾಗಿ ಹಾಕಿಕೊಳ್ಳಬೇಕಾಗುತ್ತದೆ. ಆಗ ಜ್ಯೇಷ್ಠತೆ ಆಧಾರದ ಮೇಲೆ ಅವುಗಳನ್ನು ಕೊಡಲಿಕ್ಕೆ ಸಾಧ್ಯವಾಗುತ್ತದೆ. ಪ್ರಾಯಶಃ ಸಹಕಾರ ಸಂಘಗಳ ಮೂಲಕ ಅಥವಾ ಕಂದಾಯ ಇಲಾಖೆಯ ಮೂಲಕ ಅದು ಆಗಿರಬಹುದು. ಯಾವುದೇ ಒಬ್ಬ ವ್ಯಕ್ತಿಗೆ ೯೦ ನಿವೇಶನಗಳನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಕೊಟ್ಟಿದ್ದಾರೆ ಎನ್ನುವುದಾದರೆ, ಯಾವುದೇ ಶಿಕ್ಷೆಗೆ ತಾವು ಅವರನ್ನು ಗುರಿಪಡಿಸಬಹುದು ಹಾಗೂ ನಮ್ಮನ್ನೂ ಗುರಿಪಡಿಸಬಹುದು ಇಷ್ಟು ಮಾತ್ರ ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಉಪಾಧ್ಯಕ್ಷರೇ, ಈ ಎಲ್ಲಾ ವಿಚಾರಗಳನ್ನು ಕೂಡ ಬಿ.ಡಿ.ಎ. ಮಾತ್ರ ಅಲ್ಲ, ಕೋ-ಆಪರೇಟೀವ್ ಸೊಸೈಟಿಯ ವಿಚಾರದಲ್ಲಿ ಅದು ಒಂದು ಸಮಗ್ರ ತನಿಖೆ ಮಾಡಿ, ಸ್ವಲ್ಪ ಅವರಿಗೆ ನೀವು ಬೇಸರಿಕೆ ಹುಟ್ಟಿಸದೇ ಹೋದರೆ ಭೂಮಿಯ ಒಂದು ಇಂಚೂ ಕೂಡ ಸಿಕ್ಕುವುದಿಲ್ಲ. ಸರ್ಕಾರ ಇದೆಯೋ ಇಲ್ಲವೋ ಎನ್ನುವ ಮಟ್ಟಕ್ಕೆ ಹೋಗಿದೆ. ಅಲ್ಲಿ ಪ್ಯಾರಲಲ್ ಅಡ್ಮಿನಿಸ್ಟ್ರೇಷನ್ ನಡೆಯುತ್ತಿದೆ. ಸಂಪೂರ್ಣವಾಗಿ ನಡೆಯುತ್ತಾ ಇದೆ. ಇವನ್ನು ನಿಲ್ಲಿಸದಿದ್ದರೆ ಅದು ನಿಜವಾಗಿಯೂ ಯಾರಿಗೂ ಒಳ್ಳೆಯ ಹೆಸರು ಬರತಕ್ಕ ಸ್ಥಿತಿಯಲ್ಲಿ ಇಲ್ಲ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತಂದು ಇನ್ನು ಒಂದು ವಿಚಾರವನ್ನು ಹೇಳುತ್ತೇನೆ. ಕನ್ನಡವನ್ನು ಅಫೀಷಿಯಲ್ ಲಾಂಗ್ವೇಜ್ ಮಾಡಿ ಅದನ್ನು ಎಲ್ಲಾ ಮಟ್ಟದಲ್ಲಿ ತರುತ್ತೇವೆ ಎನ್ನುವ ಮಾತನ್ನು ಹೇಳಿದ್ದೀರಿ. ಸುಮಾರು ನನಗೆ ಗೊತ್ತಿರುವ ಹಾಗೆ ಅನೇಕ ಕಡೆ ಅಡಿಯಿಂದ ಮುಡಿಯವರೆಗೆ ಅದನ್ನು ನಾವು ಜಾರಿಗೆ ಕೊಡುತ್ತೇವೆ ಎನ್ನುವ ಮಾತನ್ನು ಹೇಳಿದ್ದೀರಿ, ತರುವುದಕ್ಕೆ ನಿಮ್ಮಿಂದ ಆಗಲಿಲ್ಲ. ಇನ್ನೂ ಅನೇಕ ವ್ಯವಸ್ಥೆಗಳು ಆಗಬೇಕು ಎನ್ನುವ ಒತ್ತಡವನ್ನು ನಾನು ತರುತ್ತಿದ್ದೇನೆ. ಆಮೇಲೆ ಫಿಲ್ಮ್ ವಿಚಾರದಲ್ಲಿ ತಮ್ಮ ಇಲಾಖೆಗೆ ಸಂಬಂಧಪಟ್ಟ ಹಾಗೆ ಇದರಲ್ಲಿ ಸಬ್ಸಿಡಿ ಕೊಡತಕ್ಕ ವಿಚಾರದಲ್ಲಿ ಇನ್ನೂ ಕೂಡ ಪೇಮೆಂಟ್ ಮಾಡಿಲ್ಲ, ಬಹಳ ಜನರ ಪೆಂಡಿಂಗ್ ಉಳಿದಿದೆ ಎಂದು ಹೇಳುತ್ತಿದ್ದಾರೆ. ಇನ್ನೂ ಕೆಲವು ಸೌಲಭ್ಯಗಳನ್ನು ಕೊಡದೇ ಹೋದರೆ ನಾವು ಫಿಲ್ಮ್ ಇಂಡಸ್ಟ್ರೀಸ್‌ಅನ್ನು ಬೆಳೆಸುವುದಕ್ಕೆ ಕಷ್ಟ ಆಗುತ್ತದೆ ಎನ್ನತಕ್ಕ ವಿಚಾರವನ್ನು ತಮ್ಮ ಅಂದರೆ ವಾರ್ತಾ ಸಚಿವರ ಹತ್ತಿರ ಅವರುಗಳು ಮಾಡಿದ್ದಾರೆ ಎಂದು ಕೇಳಿದ್ದೇನೆ, ಇದನ್ನು ನೋಡಿ ಕೂಡಲೇ ಶೀಘ್ರವಾಗಿ ಕ್ರಮವನ್ನು ಹಾಕಿಕೊಂಡು ಸುಮಾರು ಫಿಲ್ಮ್ ಇಂಡಸ್ಟ್ರೀಸ್‌ಅನ್ನು ಏನು ಬೆಳೆಸಬೇಕು ಎಂಬ ಆಶೆ ಇದೆ, ಅದನ್ನು ಮಾಡಬೇಕು. ಯಾಕೆಂದರೆ ಬೆಂಗಳೂರಿನ ಲೆದರ್ ಫಿಲ್ಮ್ ಇಂಡಸ್ಟ್ರೀಸ್ ಬೆಳೆಸಲು ಬಹಳ ಉಪಯುಕ್ತವಾಗಿದೆ. ತಾವು ಇನ್ನೂ ಅನೇಕ ವಿಚಾರಗಳಲ್ಲಿ ಗಮನಕೊಡದೇ ಇದ್ದರೆ, ಯಾರು ಪ್ರೊಡ್ಯೂಸರ್ಸ್ ಇದ್ದಾರೆ ಅವರಿಗೆ ಕೊಡತಕ್ಕದ್ದು ಕೊಡದೇ ಹೋದರೆ ಸುಮಾರಾಗಿ ಅವರು ಇಂಡಸ್ಟ್ರೀಸ್‌ಅನ್ನು ಬೆಳೆಸುವುದಕ್ಕೆ ಆಗುವುದಿಲ್ಲ ಎಂದು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರುತ್ತಿದ್ದೇನೆ, ಇನ್ನು ಬಹು ಅಂತಸ್ತಿನ ಕಟ್ಟಡದ ಬಗ್ಗೆ ಹೇಳಬೇಕಾದರೆ ಅದು ಸುಪ್ರೀಂ ಕೋರ್ಟಿಗೆ ಹೋಗಿದೆ. ಆ ವಿಷಯ ಮಾನ್ಯ ಮುಖ್ಯಮಂತ್ರಿಗಳಿಗೂ ಗೊತ್ತಿದೆ. ಸುಪ್ರೀಂ ಕೋರ್ಟಿಗೆ ಹೋದ ಮೇಲೆ ಕೆಲವು ಮೇಲಿನ ಅಂತಸ್ತನ್ನು ಕೆಡವಬೇಕು ಎಂದು ಆರ್ಡರ್ ಮಾಡಿ ಮತ್ತೆ ಕೋರ್ಟಿಗೆ ಹೋಗತಕ್ಕಂಥಹ ಪ್ರಯತ್ನವನ್ನು ಮಾಡುತ್ತಿದ್ದಾರೆ, ಯಾಕೆಂದರೆ ಕೆಳಗಡೆ ಅಂತಸ್ತಿನಲ್ಲಿರತಕ್ಕ ಜನರು ತಮಗೆ ತೊಂದರೆ ಆಗುತ್ತದೆ ಎಂಬ ಕಾರಣ ಕೊಟ್ಟು ಸುಪ್ರೀಂ ಕೋರ್ಟ್ ಜಡ್ಜ್‌ಮೆಂಟ್ ಆದ ಮೇಲೂ ಹೋಗಿದ್ದಾರೆ. ಹಿಂದೆ ಕೊಟ್ಟಿದ್ದೇ ಅಪರಾಧ ಈಗ ಅದನ್ನು ಕೆಡವಬೇಕು ಅಂದರೆ ಮಾಲೀಕರಿಗೆ ಲಾಸ್ ಆಗುವುದರ ಜೊತೆಗೆ ಕೆಳಗಡೆ ಅಪಾರ್ಟ್‌ಮೆಂಟ್ಸ್ ಯಾರು ತೆಗೆದುಕೊಂಡಿರುತ್ತಾರೆ ಅವರಿಗೆ ತೊಂದರೆ ಬರುತ್ತದೆ. ಇವೆಲ್ಲಾ ತೊಂದರೆಗಳು ನಿಮ್ಮ ನೀತಿಯಿಂದಾಗಿ ಆಗಿದೆ. ಎಲ್ಲಾ ತೊಂದರೆಗಳೂ ಒಂದಕ್ಕೊಂದು ಸೇರಿಕೊಂಡು ಬರತಕ್ಕ ವಿಚಾರ.

ಶ್ರೀ ರಾಮಕೃಷ್ಣ ಹೆಗಡೆ.—ಅದನ್ನು ರೆಗ್ಯುಲರೈಸ್ ಮಾಡಬೇಕೋ, ಏನು ಮಾಡಬೇಕೋ ಅದನ್ನು ಹೇಳಿ.

ಶ್ರೀ ಎಸ್. ಬಂಗಾರಪ್ಪ.—ಸುಪ್ರೀಂ ಕೋರ್ಟ್ ಕೆಡವಬೇಕು ಎಂದರೆ ಅದನ್ನು ಕೆಡವಿ. ನೀವು ಅದನ್ನು ರೆಗ್ಯುಲರೈಸ್ ಮಾಡಬೇಕು ಎಂಬ ಭಾವನೆಯನ್ನು ಮನಸ್ಸಿನಲ್ಲಿ ಇಟ್ಟುಕೊಂಡಿದ್ದೀರಿ ಎಂದು ಕೇಳಿದ್ದೇನೆ. ಕಾನೂನಿಗೆ ಬದಲಾವಣೆ ತರಬೇಕು ಎನ್ನುವ ವಿಚಾರ ಇದೆಯೆಂದು ಕೇಳಿದ್ದೇನೆ, ಅದನ್ನು ತರುವುದಿಲ್ಲವೇ, Are you sure

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ, ''ಇಲ್ಲಿಯವರೆಗೆ ನಾವು ಈ ವಿಚಾರದಲ್ಲಿ ಕೋರ್ಟಿನ ಆದೇಶ ಏನಿದೆಯೋ ಆದರಂತೆ ನಡೆದುಕೊಂಡಿದ್ದೇವೆ. ಈಗ ಅವರು ಪುನಃ ಕೋರ್ಟಿಗೆ ಹೋಗಿದ್ದಾರೆ ಈಗ ಮೇಲಿನ ಅಂತಸ್ತುಗಳನ್ನು ಕೆಡವಿಹಾಕಿದರೆ ಅದರ ಕೆಳಗೆ ವಾಸ ಮಾಡುತ್ತಿರುವವರಿಗೆ ಅಂದರೆ

ಡೆವಲಪ್‌ಮೆಂಟ್ ಆಗಿ ಎಷ್ಟು ಅಂತಸ್ತುಗಳು ಇವೆಯೋ, ''ಅಲ್ಲಿರುವವರಿಗೆ ತೊಂದರೆಯಾಗುತ್ತದೆಂದು ಮಾನ್ಯ ಬಂಗಾರಪ್ಪನವರು ಹೇಳಿದರು. ಅವರು ಈ ವಿಚಾರವನ್ನು ವ್ಯಕ್ತ ಮಾಡಿದ್ದರಿಂದ ಈ ಬಗ್ಗೆ ತಮ್ಮ ಸೂಚನೆ ಏನಾದರು ಇದೆಯೇ ಎಂದು ಅವರನ್ನು ಕೇಳಿದೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಮಾನ್ಯ ಮುಖ್ಯಮಂತ್ರಿಗಳು ಮಾನ್ಯ ಬಂಗಾರಪ್ಪನವರು ಹೇಳುವಂತಹ ಮಾತುಗಳನ್ನು ಕೇಳುತ್ತಿರುವುದನ್ನು ನೋಡಿದರೆ ನನಗೇನೋ ಸಂಶಯ ಬರುತ್ತಿದೆ. ಈ ಬಗ್ಗೆ ನಮಗೇನೂ ತಿಳಿಯುತ್ತಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ನಾವುಗಳು ಏನು ಸ್ನೇಹಿತರಲ್ಲವೋ? ಅವರು ನಾನು ವೈರಿಗಳೇ? ಅವರೇನಾದರು ಒಳ್ಳೆಯ ಸೂಚನೆಗಳನ್ನು ಕೊಟ್ಟರೆ ನಾವು ತಿರಸ್ಕಾರ ಮಾಡುತ್ತೇವೆಯೇ? ಒಳ್ಳೆಯ ಸೂಚನೆಗಳನ್ನು ಅವರು ಆಗಾಗ ಕೊಡಲಿ ಎಂದು ನಾನು ಹೇಳುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ.—ಈ ಸೆಕ್ರೆಟೇರಿಯಟ್‌ನಲ್ಲಿ ಕೆಲಸ ಮಾಡುತ್ತಿರುವ ನೌಕರರು ಸ್ಟ್ರೈಕ್ ಮಾಡುತ್ತಿದ್ದಾರೆ. ಅವರು ಈಗಲೂ ಹೊರಗಡೆ ಕೂಗುತ್ತಿದ್ದಾರೆ. ಇವರ ಬಗ್ಗೆ ನಾನು ಮುಖ್ಯಮಂತ್ರಿಗಳ ಗಮನವನ್ನು ಸೆಳೆಯುತ್ತಿದ್ದೇನೆ.

ಉಪಾಧ್ಯಕ್ಷರು.—ತಾವು ದಯವಿಟ್ಟು ಕುಳಿತುಕೊಳ್ಳಿ. ಆ ವಿಚಾರ ಈಗ ಸಭೆಯ ಮುಂದಿಲ್ಲ.

ಶ್ರೀ ಆರ್. ವೆಂಕಟರಾಮಯ್ಯ.—ಅವರು ಹೊರಗಡೆ ನಿಂತುಕೊಂಡು ಕೂಗುತ್ತಿರುವುದರಿಂದ ನಮಗೆ ಬಹಳ ತೊಂದರೆ ಆಗುತ್ತಿದೆ. ಅವರನ್ನು ಮುಖ್ಯಮಂತ್ರಿಗಳು ಕರೆಸಿ ಮಾತನಾಡಬೇಕು ಮತ್ತು ಅವರ ಬೇಡಿಕೆಗಳನ್ನು ಈಡೇರಿಸಬೇಕು. ಅವರು ನಮ್ಮ ಅಸೆಂಬ್ಲಿ ಪಕ್ಕದಲ್ಲಿಯೇ ಗಲಾಟೆ ಮಾಡುತ್ತಿದ್ದಾರೆ.

ಉಪಾಧ್ಯಕ್ಷರು.—ತಾವು ದಯಮಾಡಿ ಕುಳಿತುಕೊಳ್ಳಿ. ಮಾನ್ಯ ಬಂಗಾರಪ್ಪನವರು ಚರ್ಚೆಯನ್ನು ಮುಂದುವರೆಸಬಹುದು.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಮುಖ್ಯಮಂತ್ರಿಗಳು ಈಗ ನಾನು ಹೇಳಿದ್ದನ್ನು ಸರಿಯಾಗಿ ಗ್ರಹಿಕೆ ಮಾಡಲಿಲ್ಲವೆಂದು ನನ್ನ ಭಾವನೆ. ಮೇಲುಗಡೆ ಇರುವ ಅಂತಸ್ತುಗಳನ್ನು ಕೆಡವಿ ಹಾಕಬೇಕೆಂದು ಸುಪ್ರೀಂ ಕೋರ್ಟಿನ ತೀರ್ಪು ಬಂದಮೇಲೆ ತಮಗೆ ಅದರಿಂದ ತೊಂದರೆಯಾಗುತ್ತದೆಂದು ಕೆಳಗೆ ವಾಸ ಮಾಡುತ್ತಿರುವವರು ಮತ್ತೆ ಕೋರ್ಟಿಗೆ ಹೋಗಿದ್ದಾರೆಂದು ನಾನು ಹೇಳಿದೆ. ನನ್ನ ವಾಕ್ಯವನ್ನು ತಾವು ಸಂಪೂರ್ಣವಾಗಿ ಅರ್ಥ ಮಾಡಿಕೊಳ್ಳಲಿಲ್ಲ. ನಾನು ಅವರ ಪರವಾಗಿ ಹೇಳಲಿಲ್ಲ. ಇಂತಹ ಬಹು ಅಂತಸ್ತಿನ ಕಟ್ಟಡಗಳನ್ನು ಬೆಂಗಳೂರಿನಲ್ಲಿ ಇದೇರೀತಿ ಕಟ್ಟುತ್ತಾ ಹೋದರೆ ಬೆಂಗಳೂರಿನ ಸೌಂದರ್ಯ ಕೆಡುವುದು ಒಂದೇ ಅಲ್ಲ. ಇನ್ನೂ ಹಲವಾರು ತೊಂದರೆಗಳು ಬರುತ್ತವೆ ಎಂದು ನಾವು ಇಲ್ಲಿ ಈ ಹಿಂದೆ ಸಹ ಹೇಳಿದ್ದೇವೆ.

ಇನ್ನು ಇವರು ಮೊದಲು ಮೌಲ್ಯಾಧಾರಿತ ರಾಜಕಾರಣದ ಬಗ್ಗೆ ಹೇಳುತ್ತಿದ್ದರು. ಆದರೆ ಈಗ ಈ ಮಾತನ್ನು ಇವರು ಹೇಳುತ್ತಿಲ್ಲ. ಆದ್ದರಿಂದ ನಾನು ಅವರ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ನಿಮ್ಮ ಸಂಪುಟದ ಬಗ್ಗೆ ಒಂದು ಮಾತನ್ನು ಹೇಳಿದರೆ ತಪ್ಪಾಗಲಾರದು. ತಮ್ಮ ಸಚಿವಸಂಪುಟವನ್ನು ಬಹಳ ಚಿಕ್ಕದನ್ನಾಗಿ ಮಾಡುವ ಕೆಲಸವನ್ನು ನೀವು ಮಾಡಲಿಲ್ಲ. ಮಾನ್ಯ ದೇವೇಗೌಡರು ಮತ್ತು ಕೆಲವು ಸಚಿವರು ಪ್ರಯತ್ನ ಮಾಡಿ ತಮ್ಮ ಸಂಪುಟವನ್ನು ಚಿಕ್ಕದು ಮಾಡಿದರು ಎಂದು ನನ್ನ ಭಾವನೆ. ಈ ಬಗ್ಗೆ ನಿಮ್ಮ ನಿಮ್ಮಲ್ಲಿರುವ ವ್ಯತ್ಯಾಸಕ್ಕೂ ನನಗೂ ಸಂಬಂಧವಿಲ್ಲ. ಅದು ನನಗೆ ಬೇಕಾಗಿಲ್ಲ. ಅದು ನಿಮಗೇ ಬಿಟ್ಟ ವಿಚಾರ. ಆದರೆ ನೀವು ಈ ರಾಜ್ಯಕ್ಕೆ ಒಳ್ಳೆಯ ರಾಜ್ಯಭಾರವನ್ನು ಕೊಡುವ ಸಲುವಾಗಿ ಚಿಕ್ಕ ಹಾಗೂ ಚೊಕ್ಕ ಸಂಪುಟವನ್ನು ರಚನೆ ಮಾಡುವುದಾಗಿ ಜನತೆಗೆ ಏನು ಮಾತನ್ನು ಕೊಟ್ಟಿದ್ದಿರಿ. ಅದನ್ನು ಹೃದಯಪೂರ್ವಕವಾಗಿ ಜಾರಿಗೆ ತರಲು ನಿಮಗೆ ಸಾಧ್ಯವಾಗಲಿಲ್ಲ. ಈಗ ಈ ಬಗ್ಗೆ ವಿಚಾರ ಮಾಡುವುದಕ್ಕೂ ಸಹ ನಿಮಗೆ ಸಾಧ್ಯವಿಲ್ಲದಂತೆ ಆಗಿದೆ. ನಿಮ್ಮ ಆಡಳಿತದಲ್ಲಿ ಕೆಲವರಿಗೆ ತೊಂದರೆಗಳು ಬರುತ್ತಿವೆ. ನಮ್ಮ ಪಕ್ಷದವರಿಗೆ ಮಾತ್ರವಲ್ಲ, ''ನಿಮ್ಮ ಪಕ್ಷದವರಿಗೂ ಸಹ ತೊಂದರೆಗಳು ಬರುತ್ತಿವೆ ಎಂಬ ಮಾತನ್ನು ಇಲ್ಲಿ ಹೇಳಬೇಕಾಗಿದೆ. ಈ ಮನೆಯ ಶಾಸಕರಾದ ಡಾ|| ಹುಂಬರವಾಡಿ ಅವರ ಮಿಲ್‌ನಲ್ಲಿದ್ದ ಟ್ರಾನ್ಸ್‌ಫಾರ್ಮರ್‌ನ್ನು '' ಸುಟ್ಟು ಹಾಕಿದರು ಎಂಬ ಕಾರಣದಿಂದ ಅವರ ಮೇಲೆ ಕೇಸ್ ಹಾಕಲು ಒತ್ತಡ ಬಂದಿದೆ ಎಂದು ನನಗೆ ತಿಳಿದುಬಂದಿದೆ. ಅದೇ ರೀತಿ ಶಾಸಕರಾದ ತಿಪ್ಪೇಸ್ವಾಮಿ ಅವರ ಮಗನ ಮೇಲೆ ಕೇಸ್ ಹಾಕಿ ಅರೆಸ್ಟ್ ಮಾಡಿದ್ದಾರೆಂದು ನನಗೆ ತಿಳಿದು ಬಂದಿದೆ. ಇದರ ಜೊತೆಗೆ ಇನ್ನೂ ಬೇರೆ ಬೇರೆ ವಿಚಾರಗಳ ಬಗ್ಗೆ ಗೋಡೆಗಳ ಮೇಲೆ ಬರಹಗಳು

ಬಂದಿರುವುದನ್ನು ನೋಡಿದರೆ ನೀವು ರಾಜಕೀಯವಾಗಿ ಅವರ ಮೇಲೆ ಸೇಡು ತೀರಿಸಿ ಕೊಳ್ಳಲು ಗಮನ ಕೊಡುತ್ತಿದ್ದೀರಿ ಎಂಬ ಮಾತನ್ನು ಹೇಳಬೇಕಾಗುತ್ತದೆ. ಮತ್ತೆ ಮುಖ್ಯ ಮಂತ್ರಿಗಳು ಕರ್ನಾಟಕ ರಾಜ್ಯದಲ್ಲಿ ಎಷ್ಟು ದಿವಸಗಳ ಕಾಲ ಪ್ರವಾಸ ಮಾಡಿದ್ದಾರೆಂಬ ಬಗ್ಗೆ ಇಲ್ಲಿ ಒಂದು ಪ್ರಶ್ನೆ ಬಂದಿತ್ತು. ಇದರಬಗ್ಗೆ ಮೇಲ್ಮನೆಯಲ್ಲಿ ಸಹ ಪ್ರಸ್ತಾಪವಾಗಿತ್ತು.

(ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಸುಮಾರಾಗಿ ೨ ವರ್ಷಗಳಲ್ಲಿ ೬೮ ದಿನ ಕರ್ನಾಟಕ ರಾಜ್ಯದಲ್ಲಿ ಪ್ರವಾಸ ಮಾಡಿದ್ದಾರೆ, ೨ ತಿಂಗಳು, ೮ ದಿವಸ. ಇನ್ನು ಉಳಿದಿರತಕ್ಕಂಥ ದಿನಗಳನ್ನು ಕರ್ನಾಟಕದ ಹೊರಗೆ ತಾವು ಕಳೆದಿದ್ದೀರಿ. ನಾವು ಹೊರಗಡೆ ಹೋಗಲೇಬಾರದು ಎಂದು ಹೇಳುವುದಿಲ್ಲ, ಬೇಲಿ ಹಾಕಿ ಯಾರೂ ರಾಜಕಾರಣ ಮಾಡುವುದಿಲ್ಲ ಎಂದು ನನಗೆ ಗೊತ್ತಿದೆ, ಪಾಪ, ನಿಮಗೆ ಹಂಬಲ ಇತ್ತು, ರಾಷ್ಟ್ರ ರಾಜಕಾರಣಕ್ಕೆ ಹೋಗತಕ್ಕಂಥಾದ್ದು, ಮುಂದೆ ಹೋಗಿ ಬೆಳೆದರೆ ನಾವು ಸಂತೋಷಪಡುತ್ತೇವೆ. ಅದರ ಬಗ್ಗೆ ಏನೂ ಮಾಡುವುದಿಲ್ಲ. ಆದರೆ ಹೆಜ್ಜೆ ಇಡಬೇಕಾದರೆ ಹೇಗೆ ಇಡಬೇಕು ಎನ್ನುವುದರಲ್ಲಿ ಸ್ವಲ್ಪ ವ್ಯತ್ಯಾಸವಾಗಿರಬೇಕು ಎಂದು ಕಾಣಿಸುತ್ತದೆ. ಅದು ಏನೇ ಇರಲಿ. ಏಕೆಂದರೆ, ಕರ್ನಾಟಕ ರಾಜ್ಯಕ್ಕೆ ಒಳ್ಳೆಯ ಆಡಳಿತ ಕೊಡುತ್ತೇನೆ ಎನ್ನತಕ್ಕಂಥ ಮಾತನ್ನು ಆಡಿದಿರಿ. ಪತ್ರಿಕೆಗಳಲ್ಲಿ, ಮ್ಯಾಗ್ಜೈನ್‌ಗಳಲ್ಲಿ ಎಲ್ಲ ಬರೆಸಿ ಬರೆಸಿ ಹಾಕಿ, ಒಂದು ಸಾರಿ ಹೇಳಿದಿರಿ, ಏನೆಂದರೆ, ರಾಷ್ಟ್ರಕ್ಕೆ ಅಷ್ಟೇ ಅಲ್ಲ ವಿಶ್ವದಲ್ಲೇ ಇದು ಮಾದರಿಯಾಗತಕ್ಕ ಸರ್ಕಾರ ಎನ್ನುವ ಮಾತು ಬಂದಿದ್ದು ನೆನಪು. ಇದನ್ನು ಯಾರು ಬರೆದರು ಒಂದು ಗುಂಪಿನ ಪತ್ರಿಕೆಗಳು. ತಾವು ಏನು ಸಾಕ್ಷಿ ಸಲಹಿದಿರಿ ರಾಷ್ಟ್ರಮಟ್ಟದಲ್ಲೂ ಕೂಡ ಆ ಪತ್ರಿಕೆಗಳಲ್ಲಿ ಒಂದು ಗುಂಪಿನ ಪತ್ರಿಕೆಗಳು ಮಾತ್ರ ನಿಮ್ಮ ಪರವಾಗಿ ಬರೆದರೇ ವಿನಃ ಇನ್ನಾರೂ ಬರೆಯಲಿಲ್ಲ. ಇತ್ತೀಚಿನ ದಿನಗಳಲ್ಲಿ ಎಲ್ಲಾ ಪತ್ರಿಕೆಗಳವರೂ ಅವರೂ ಕೂಡ ಸೇರಿಕೊಂಡು ಸ್ಪಷ್ಟವಾಗಿ ಬರೆದಿದ್ದಾರೆ. ಇವತ್ತು ನಿಮ್ಮ ಜವಾಬ್ದಾರಿ ಇತ್ತು. ಇವತ್ತು ಸಾಮಾನ್ಯ ಆಡಳಿತದ ಜವಾಬ್ದಾರಿ ಯನ್ನು ಹೊತ್ತಿರತಕ್ಕಂಥ ತಾವು ಮುಖ್ಯಮಂತ್ರಿಗಳು ಕರ್ನಾಟಕ ರಾಜ್ಯದಲ್ಲಿ ಪ್ರವಾಸಮಾಡಿ ಜನ ಸಾಮಾನ್ಯರ ಹತ್ತಿರ ಹೋಗಲಿಲ್ಲ. ನೀವು ಹೋಗಿದ್ದು ಮೂರೇ ಸಾರಿ. ನನಗೆ ಗೊತ್ತಿರುವ ಹಾಗೆ, ೧೯೮೫ರ ಚುನಾವಣೆ ಕಾಲದಲ್ಲಿ, ಅನಂತರ ತಾವು ಹೋಗಿದ್ದು ಇತ್ತೀಚೆಗೆ ಜಿಲ್ಲಾಪರಿಷತ್, ಮಂಡಲ ಪಂಚಾಯತ್ ಚುನಾವಣೆಯಲ್ಲಿ, ಅಲ್ಲಿ ಸಂಪೂರ್ಣವಾಗಿ ಹೋಗಲಿಲ್ಲ. ಕೆಲವು ಕಡೆ ಮಾತ್ರ ಹೋಗಿರ ತಕ್ಕಂಥಾದ್ದು. ಮೂರನೇ ಸಾರಿ ಹೋಗಿರತಕ್ಕದ್ದು, ತಮಗೂ ದೇವೇಗೌಡರಿಗೂ ವ್ಯತ್ಯಾಸ ಬಂದು ಆದಮೇಲೆ ಜನರ ಹತ್ತಿರ ಹೋಗಿದ್ದು. ಆಗ ದಕ್ಷಿಣ ಕನ್ನಡ ಜಿಲ್ಲೆ, ಕಾರವಾರ ಜಿಲ್ಲೆ, ಶಿವಮೊಗ್ಗ ಜಿಲ್ಲೆ, ದಾವಣಗೆರೆ ಹತ್ತಿರ ಕಾಕವಾಡ ಎಂಬ ಯಾವುದೋ ಹಳ್ಳಿಗೆ ಒಂದು ಕಾರ್ಯಕ್ರಮಕ್ಕೆ ಹೋಗಿ ಬಂದಿರತಕ್ಕದ್ದು ನಾನು ನೋಡಿದೆ. ಜನಸಾಮಾನ್ಯರ ಹತ್ತಿರ ಹೋಗತಕ್ಕಂಥ ಜವಾಬ್ದಾರಿ ನಿಮ್ಮ ಮೇಲಿತ್ತು ನೀವು ವಿಫಲರಾದಿರಿ. ನಿಮ್ಮ ಸಚಿವ ಸಂಪುಟದ ಸಹೋದ್ಯೋಗಿಗಳೂ ಕೂಡ ಎಷ್ಟು ಜನ ಇವತ್ತು ಪ್ರವಾಸಮಾಡಿ ಎಷ್ಟೆಷ್ಟು ಕಾರ್ಯಕ್ರಮಕ್ಕೆ ಹೋಗಿದ್ದಾರೆ ಎನ್ನುವ ಪಟ್ಟಿಯನ್ನು ದಯು ಮಾಡಿ ಸದನದ ಮುಂದೆ ಇಡೀ, ನೀವು ಹೋಗಿರಬಹುದು. ಯಾವುದಾದರೂ ಜಿಲ್ಲಾ ಕೇಂದ್ರಕ್ಕೆ ಹೋಗಿ ಕಟ್ಟಡದ ಉದ್ಘಾಟನೆ ಮಾಡಿದ್ದರಲ್ಲಾ ಎಂಬುದನ್ನು ನಾನು ಕೇಳುವುದು, ಫೌಂಡೇಷನ್ ಹಾಕಿದ್ದು ಅಲ್ಲ, ಅದನ್ನು ಈ ದೇಶದಲ್ಲಿ ಬಹಳ ಸುಲಭವಾಗಿ ಮಾಡುತ್ತಾರೆ, ಅದಲ್ಲ. ಶಿಡ್ಲಘಟ್ಟದಲ್ಲಿ ಗಲಾಟೆ ಯಾಯಿತು, ಮುಖ್ಯ ಮಂತ್ರಿಯಾಗಿ ಅಲ್ಲಿಗೆ ಹೋಗಿ ಬಂದಿದ್ದೀರಾ, ತಾವು ಹೋಗಲಿಲ್ಲ. ಮೈನಾ ರಿಟೀಸ್ ಮೇಲೆ ದೌರ್ಜನ್ಯ ಆಗಿದ್ದರೂ ಕೂಡ ಅವರಿಗೆ ರಕ್ಷಣೆ ಕೊಡತಕ್ಕ ವಿಚಾರ ಬಂತು ತಾವು ಹೋಗುವುದಕ್ಕೆ ಆಗಲಿಲ್ಲ. ಶಿಡ್ಲಘಟ್ಟಕ್ಕೆ ಸ್ವಲ್ಪ ಹೆಚ್ಚುಕಡಿಮೆ ಒಂದು ಗಂಟೆ ಪ್ರಯಾಣ, ಅಷ್ಟಾದರೂ ಕೂಡ ತಾವು ಹೋಗಲಿಲ್ಲ. ಆದರ ಬದಲು ಬಾಂಬೆ, ಡೆಲ್ಲಿ, ಕಲ್ಕತ್ತ, ಮದ್ರಾಸ್– ಈ ಕಡೆ ಹೋಗುವುದಕ್ಕೆ ನಿಮಗೆ ವ್ಯವಧಾನ ಬೇಕಾದಷ್ಟು ಇರುತ್ತದೆ. ಕಾಲ ಸಿಗುತ್ತದೆ. ಆದರೆ ಇದು ಹತ್ತಿರ ಇದ್ದೂ ಹೋಗಲಿಲ್ಲ. ಅಲ್ಪಸಂಖ್ಯಾತರು ಅಥವಾ ಮತ್ತೊಬ್ಬರು ಬಂದುಗಳು ಇರಬಹುದು, ಮುಸಲ್ಮಾನ್ ಬಾಂಧವರು ಇರಬಹುದು ಎಲ್ಲರೂ ಅಣ್ಣತಮ್ಮಂದಿರು, ಅಕ್ಕ ತಂಗಿಯರು. ಅಲ್ಲಿ ಹೋಗಿ ಆಸಕ್ತಿವಹಿಸತಕ್ಕ ಜವಾಬ್ದಾರಿ ಏನಿತ್ತು ಆ ಸಂಪೂರ್ಣವಾದ ಜವಾಬ್ದಾರಿ ಯನ್ನು ನಿರ್ವಹಣೆ ಮಾಡತಕ್ಕ ವಿಚಾರದಲ್ಲಿ ನೀವು ದೂರು ಸರಿದಿರಿ. ಇದು ಬೇಜವಾಬ್ದಾರಿತನದ ಸಂಕೇತವಲ್ಲವೇ ಎನ್ನತಕ್ಕಂಥ ಮಾತನ್ನು ತಮ್ಮ ಮುಂದೆ ಇಡುತ್ತಾ ಇದ್ದೇನೆ. ಮಾನ್ಯ ಸಭಾಧ್ಯಕ್ಷರೆ, ಕರ್ನಾಟಕ ರಾಜ್ಯದಲ್ಲಿ ರೈತರ ಸಮಸ್ಯೆ ಇರಬಹುದು, ಬರಗಾಲದ ಸಮಸ್ಯೆ ಇರ ಬಹುದು, ಬೇರೆ ಸಮಸ್ಯೆ ಇರಬಹುದು. ಆ ಸಮಸ್ಯೆಗಳಗನ್ನು ಬಗೆಹರಿಸಲು ಹೋಗತಕ್ಕಂಥ ಪ್ರಯತ್ನ ಮಾಡಲಿಲ್ಲ. ತಾವು ಮುಖ್ಯಮಂತ್ರಿ ಯಾಗಿದ್ದು ಜನಸಾಮಾನ್ಯರ ಅಭಿಪ್ರಾಯವನ್ನು ನೇರವಾಗಿ ತಿಳಿದುಕೊಳ್ಳತಕ್ಕ ಕೆಲಸದಲ್ಲಿ ನೀವು ಸಂಪೂರ್ಣ ವಿಫಲರಾಗಿದ್ದೀರಿ ಎಂದು ಇವತ್ತಿನದಿವಸ ಅನಿವಾರ್ಯವಾಗಿ ಹೇಳಬೇಕಾಗಿದೆ.

೨.೦೦ ಪಿ. ಎಂ.

ಮಾನ್ಯ ಅಧ್ಯಕ್ಷರೆ, ಈ ರೀತಿಯಲ್ಲಿ ಆಡಳಿತ ಸಂಪೂರ್ಣವಾಗಿ ಕೆಟ್ಟು ಹೋಗಿ ಜನಸಾಮಾನ್ಯರಿಗೆ ವಿರೋಧವಾಗಿ, ಅವರ ಪ್ರೀತಿ ವಿಶ್ವಾಸದಿಂದ ದೂರ ಸರಿದಿರತಕ್ಕ ಆಡಳಿತವನ್ನು ಕೊಟ್ಟಿದ್ದಾರೆ. ಇವತ್ತು ಮುಖ್ಯಮಂತ್ರಿಗಳು ನಾವು ಸ್ನೇಹಿತರಾಗಿರಬೇಕೆಂದು ಹೇಳಿದಿರಿ ಎಂದು ಕೇಳಿದೆ. ನನಗೆ ಬಹಳ ಸಂತೋಷ. ನಾವು ನೀವು ಸ್ನೇಹಿತರಾಗಿರೋಣ. ಸ್ನೇಹಿತರಾಗಿರುವಂಥ ದಿನ ಬರಲಿ ಎಂದು ನಾನು ಕಾಯುತ್ತಿದ್ದೇನೆ. ಆದರೆ, ದೌರ್ಭಾಗ್ಯದ ಸಂಗತಿ. ಅಂದರೆ ವೈಯಕ್ತಿಕವಾಗಿ ಸ್ನೇಹಿತರಾಗಿರೋಣ. ಆಡಳಿತದ ದೃಷ್ಟಿಯಿಂದ ನಾನು ಮಾತನಾಡುತ್ತಿದ್ದೇನೆ. ನಾನು ಹಿಂದೆ ನಿಮ್ಮ ಮೇಲೆ ಕೆಲವು ವಿಚಾರಗಳನ್ನು ತಂದಾಗ, ಆಪಾದನೆ ಮಾಡಿದ್ದು ವೈಯಕ್ತಿಕವಾಗಿ ಅಲ್ಲ. ಆಡಳಿತದ ದೃಷ್ಟಿಯಿಂದ. ತಾವು ಒಮ್ಮೆ ನನ್ನ ಮೊಮ್ಮಕ್ಕಳನ್ನು ಬಿಟ್ಟಿಲ್ಲವೆಂದು ಹೇಳಿದ್ದೀರಿ ಇವತ್ತು ಸಾಯಂಕಾಲ ರೇವಜೀತು ವಿಚಾರ ಬಂದಾಗ ನೀವು ಮಕ್ಕಳನ್ನು ಯಾವರೀತಿ ಉಪಯೋಗ ಮಾಡಿಕೊಂಡಿದ್ದೀರಿ ಎಂಬುದನ್ನು ಬಿಚ್ಚಿಡೋಣ. ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ತಾವು ಜನ ಸಾಮಾನ್ಯರ ಬಗ್ಗೆ ಯಾವರೀತಿ ಪ್ರೀತಿವಿಶ್ವಾಸ ಇರಬೇಕಾಗಿತ್ತೋ. ಅದನ್ನು ಗಳಿಸುವುದರಲ್ಲಿ ಸಂಪೂರ್ಣವಾಗಿ ವಿಫಲರಾಗಿದ್ದೀರಿ-ಎಂದು ಅನಿವಾರ್ಯವಾಗಿ ಹೇಳಬೇಕಾಗಿದೆ.

ಇನ್ನು ಪೋಲೀಸ್ ಇಲಾಖೆಯ ವಿಚಾರದಲ್ಲಿ – ನಾಲ್ಕು ಮಾತುಗಳನ್ನು ಆಡಬೇಕಾಗಿದೆ. ಶಿಡ್ಲಘಟ್ಟದಲ್ಲಿ ತಾವು ಪ್ರವಾಸ ಮಾಡಿಲ್ಲ ಎನ್ನುವ ಬಗ್ಗೆ ಸೂಚ್ಯವಾಗಿ ಪ್ರಸ್ತಾಪ ಮಾಡಿದೆ. ಶಿಡ್ಲಘಟ್ಟ ಒಂದೇ ಅಲ್ಲ, ಕರ್ನಾಟಕ ಹಲವಾರು ಭಾಗಗಳಲ್ಲಿ ನಿಮ್ಮ ಆಡಳಿತದ ಕಾಲದಲ್ಲಿ ಈ ರೀತಿಯಾದ ಕೋಮು ಗಲಬೆಗಳು ನಡೆದಿರತಕ್ಕಂಥ ಸಂದರ್ಭದಲ್ಲಿ ನಿಮ್ಮ ಇಂಟಲಿಜೆನ್ಸ್ ವಿಂಗ್‌ನವರು ಏನು ಮಾಡುತ್ತಿದ್ದಾರೆ. ಅವರು ಏತಕ್ಕೆ ಕೆಲಸ ಮಾಡುತ್ತಿಲ್ಲ. ಕೇವಲ ಅವಿವೇಕಿಗಳು ಆ ಕಡೆ ಇರಬಹುದು, ಈ ಕಡೆಯೂ ಇರಬಹುದು. ಇಂಥ ಘಟನೆಗಳು ನಡೆದಾಗ, ಚಿಗುರಿನಲ್ಲಿ ಚಿವುಟಿ ಹಾಕಬೇಕು. ತಾವು ಇಲ್ಲಿ ಇಲ್ಲ ಅಂದರೆ ಈ ಕೆಲಸವನ್ನು ಯಾರು ಮಾಡುತ್ತಾರೆ, ಅಧಿಕಾರಿಗಳಿಂದ ವರದಿಗಳು ಬಂದಾಗ ಯಾರು ನೋಡಬೇಕು. ಸಂಪೂರ್ಣವಾಗಿ ಪೋಲೀಸ್ ಇಲಾಖೆಗೂ ನಿಮಗೂ ಸಂಬಂಧ ಇಲ್ಲದಂತಾಗಿದೆ. ಜನತೆಗೂ ನಿಮಗೂ ಸಂಬಂಧ ಕಡಿದು ಹೋಗಿರುವಂತೆ, ಇಲಾಖೆಗಳಿಗೂ ನಿಮಗೂ ಸಂಬಂಧ ಕಡಿದು ಹೋಗಿದೆ. ಇದು ದೌರ್ಭಾಗ್ಯದ ವಿಚಾರವೆಂದು ಹೇಳಬೇಕಾಗಿದೆ. ಇನ್ನು ರಾಜ್ಯದಲ್ಲಿ ಮರ್ಡರ್ಸ್ ಮತ್ತು ಡಕಾಯಿತಿಗಳು ರಾಶಿರಾಶಿಯಾಗಿ ನಡೆದಿವೆ. ೧೯೮೭ನೇ ನವೆಂಬರ್‌ನಲ್ಲಿ ಮಿ. ಮ್ಯಾಥ್ಯೂ ಸುಮಾರು ೭೪ ವರ್ಷದ ವಯೋವೃದ್ಧರ ಮರ್ಡರ್ ಬೆಂಗಳೂರಿನಲ್ಲಿ ಆಗಿತ್ತು. ಇವತ್ತಿನವರೆಗೂ ಅದು ಪತ್ತೆ ಆಗಿಲ್ಲ. ನಾನು ಕೆಲವೊಂದು ಘಟನೆಗಳನ್ನು ಮುಟ್ಟಿ ಮುಟ್ಟಿ ಬಿಡುತ್ತಿದ್ದೇನೆ. ಉದಯಕಿರಣ ಎನ್ನುವ ಇಂಜಿನಿಯರಿಂಗ್ ಕಾಲೇಜಿನ ವಿದ್ಯಾರ್ಥಿ ೧೨-೩-೮೮ರಲ್ಲಿ ಸೂಯಿಸೈಡ್ ಮಾಡಿಕೊಂಡನು ಎಂದು ವರದಿಯಾಯಿತು. ಈತ ಬಿ. ಐ. ಟಿ, ಕಾಲೇಜಿನ ವಿದ್ಯಾರ್ಥಿ. ಈ ಸಾವಿಗೆ ಕಾರಣ ಮಾಲ್‌ಪ್ರಾಕ್ಟೀಸಸ್. ಇವನಿಗೆ ಬರಬೇಕಾದ ಅಂಕಗಳು ಬೇರೆಯವರಿಗೆ ಹಾಕಿದ್ದು. ಇದಕ್ಕೆ ಕಾರಣ ಒಬ್ಬ ಅಧಿಕಾರಿ ಮಾಡಿದ ತಪ್ಪು. ಈತ ಬ್ರಿಲಿಯೆಂಟ್ ಮತ್ತು ರ್‍ಯಾಂಕ್ ಸ್ಟೂಡೆಂಟ್. ಫೇಲಾದ್ದರಿಂದ ಸೂಸೈಡ್ ಮಾಡಿಕೊಂಡು ಸತ್ತು ಹೋದ. ಇವರ ತಂದೆ ಸೆಕ್ರೆಟೇರಿಯೇಟಿನ ಒಬ್ಬ ರಿಟೈರ್ಡ್ ಅಂಡರ್ ಸೆಕ್ರಟರಿ. ಬಹಳ ವಯಸ್ಸಾದ ವ್ಯಕ್ತಿ. ಇವತ್ತು ಕೂಡ ಮನೆಗೆ ಬಂದು ತಮ್ಮ ಅಳಲನ್ನು ತೋಡಿಕೊಂಡರು. ಇದರ ಬಗ್ಗೆ ಸಿ. ಓ. ಡಿ. ಯವರು ಡಿಸೆಂಬರ್ ೮೭ರಲ್ಲಿಯೇ ರಿಪೋರ್ಟ್ ಕೊಟ್ಟಿದೆ. ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರೋ ಗೊತ್ತಿಲ್ಲ. ಮತ್ತೆ. ಭಾಗ್ಯಮ್ಮ ಪಾವಗಡ ತಾಲ್ಲೂಕು, ಕೋಟುಗುಡ್ಡದ ವಾಸಿ, ಸತ್ತವನು ರಾಮಪ್ಪ ಎನ್ನುವ ವ್ಯಕ್ತಿ. ಪೋಲೀಸ್ ಜೀಪಿನಿಂದ ಹಾರಿ ಸತ್ತು ಹೋದ ಎಂದು ರಿಪೋರ್ಟ್ ಬಂದಿದೆ. ಪೋಲೀಸ್‌ನವರು ನೋಡಿಕೊಂಡು ಕೂತಿದ್ದರಂತೆ. ಪೋಲೀಸಿನವರೇ ಹೊಡೆದು ಹಾಕಿ, ಕೊಂದು ಹಾಕಿದ್ದಾರೆ. ಇದರ ಬಗ್ಗೆ ಮಹಜರ್ ಮಾಡಿಲ್ಲ, ವಿಚಾರಣೆ ಮಾಡಿಸಿಲ್ಲ. ಸರ್ಕಾರ ಕ್ರಮ ತೆಗೆದುಕೊಂಡಿಲ್ಲ.

ಮಾನ್ಯ ಅಧ್ಯಕ್ಷರೆ, ಇವೊತ್ತು ಕರ್ನಾಟಕ ರಾಜ್ಯದಲ್ಲಿ ಮಟ್ಕಾ ಮತ್ತೆ ಇನ್ನು ಏನೇನೋ ಹೆಸರು ಇದೆ. ಓ. ಸಿ. ಎಂದು ಇದೆ. ಇವು ಕರ್ನಾಟಕ ರಾಜ್ಯದಲ್ಲಿ ಬೇಕಾದಷ್ಟು ನಡೆಯುತ್ತಿವೆ. ಇನ್ನು ಕೆಲವು ದಿವಸಗಳಲ್ಲಿ ಮಟ್ಕಾ ಓ. ಸಿ. ಯಾವುದೂ ನಡೆಯದ ಹಾಗೆ ನಾವು ಮಾಡುತ್ತೇವೆ ಎಂದು ಹೇಳಿದ ತಮ್ಮ ಭಾಷಣ ಮುಖ ಪುಟದಲ್ಲಿ ಅಚ್ಚು ಆಯಿತು. ಇವೊತ್ತು ನಿಮ್ಮ ಭಾಷಣ ಎಲ್ಲಿ ಹೋಯಿತು ? ನಿಮ್ಮ ಸರ್ಕಾರದ ತೀರ್ಮಾನ ಎಲ್ಲಿ ಹೋಯಿತು ? ಇವೊತ್ತು ಮಟ್ಕಾ ಓ. ಸಿ.

ಅವ್ಯಾಹತವಾಗಿ ಕರ್ನಾಟಕ ರಾಜ್ಯದ ತುಂಬಾ ನಡೆಯುತ್ತಿದೆ. ಈ ವಿಚಾರವನ್ನು ಅನಿವಾರ್ಯವಾಗಿ ಹೇಳಲೇಬೇಕಾಗಿದೆ, ಇನ್ನು ಶಿರಹಟ್ಟಿ ತಾಲ್ಲೂಕು ಪಿ. ಎಸ್. ಐ. ಅವರ ವಿಚಾರ ಒಂದು ಇದೆ. ಇವರು ಪಿ. ಎಸ್. ಪಾಟೀಲ್. ಧಾರವಾಡ್ ರೂರಲ್‌ನಲ್ಲಿದ್ದು ಬೇಕಾದಷ್ಟು ಆಸ್ತಿ ಮಾಡಿಕೊಂಡಿದ್ದಾರೆ. ಎನ್ನುವ ಅಪಾದನೆ ಇದೆ. ಇವರು ಬೇಕಾದಷ್ಟು ಆಸ್ತಿ ಮಾಡಿಕೊಂಡಿರುವ ಬಗ್ಗೆ ಒಂದು ದೊಡ್ಡ ಪಟ್ಟಿಯೇ ಇದೆ. ಇನ್ನು ಮತ್ತೊಬ್ಬರದು ಹೇಳಬೇಕೆಂದರೆ, ಅರಣ್ಯ ಅಧಿಕಾರಿ ವಿಚಾರ ಇದೆ. ತಾವು ಯಾವ ಯಾವ ಅಧಿಕಾರಿ ಮೇಲೆ ಏನೇನು ಕಾರ್ಯಕ್ರಮ ಹಾಕಿದ್ದೀರಿ. ಒಬ್ಬ ಅರಣ್ಯ ಅಧಿಕಾರಿ ಅಕ್ರಮದಿಂದ ಗಳಿಸಿದಂಥ ಆಸ್ತಿ, ಧಾರವಾಡ ತಾಲ್ಲೂಕು ಪೈಕಿ ಹಳ್ಳಿಗೇರಿ ನಿಗದಿ, ಹಾಗೂ ಬನಕನಬಟ್ಟಿ ಗ್ರಾಮದ ರೈತರು ಬರೆದುಕೊಂಡ ವಿನಂತಿ. ಧಾರವಾಡ ತಾಲ್ಲೂಕುಪೈಕಿ ಆಳ್ನಾವರ ಹೋಬಳಿ ಹಳ್ಳಿಗೇರಿ ಗ್ರಾಮದ ಹದ್ದಿನಲ್ಲಿ ಉಮೇಶ ನಾರಾಯಣ ಸಾನು ಎಂಬ ಒಬ್ಬ ಭ್ರಷ್ಟ ಅರಣ್ಯ ಅಧಿಕಾರಿ ಸಾಕಷ್ಟು ಆಸ್ತಿ ಮಾಡಿಕೊಂಡಿರುವ ಬಗ್ಗೆ ಒಂದು ದೊಡ್ಡ ಪಟ್ಟಿಯನ್ನೇ ಕೊಟ್ಟಿದ್ದಾರೆ. ಈ ಪತ್ರವನ್ನು ನಾನು ಮಾನ್ಯ ಮುಖ್ಯ ಮಂತ್ರಿಗಳಿಗೆ ಕಳುಹಿಸಿಕೊಡುತ್ತೇನೆ. ಇವರು ಎಷ್ಟೆಷ್ಟು ಆಸ್ತಿ ಮಾಡಿದ್ದಾರೆ ಎನ್ನುವುದು ತಾವೇ ನೋಡಿ. ನಾವು ಎಲ್ಲವನ್ನೂ ಭಾಷಣ ಮಾಡಿ ಹೇಳಲಿಕ್ಕೆ ಆಗುವುದಿಲ್ಲ. ನಿಮ್ಮ ಇಲಾಖೆ ಏನು ಮಾಡುತ್ತಿದೆ ಎಂದು ಕೇಳುತ್ತಿದ್ದೇನೆ. ಅಧಿಕಾರಿಗಳ ಮೇಲೆ ಏನೇನು ಕಾರ್ಯಕ್ರಮ ಹಾಕಿದ್ದೀರಿ, ಎಂದು ಕೇಳುತ್ತಿದ್ದೇನೆ. ಇನ್ನು ಪೋಲೀಸ್ ಇಲಾಖೆಯ ಬಗ್ಗೆ ಹೇಳುವುದಾದರೆ, ಇವೊತ್ತು ನಿಮ್ಮ ವರ್ಗದ ಜನ, ಹರಿಜನ ಗಿರಿಜನರು, ಅಲ್ಪಸಂಖ್ಯಾತರು, ನಮ್ಮ ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು ಏನಿದ್ದಾರೆ ಅವರ ಮೇಲೆ ದಬ್ಬಾಳಿಕೆಯನ್ನು ಮಾಡಿ, ಸುಮಾರು ಸಾವಿರಾರು ಕೇಸುಗಳಲ್ಲಿ ಇವೊತ್ತು ಕೋರ್ಟಿಗೆ ಅಲೆಯುತ್ತಿದ್ದಾರೆ, ಜಿಲ್ಲಾಪರಿಷತ್ ಮತ್ತು ಮಂಡಲ್‌ಪಂಚಾಯತ್ ಚುನಾವಣೆಗಳು ಆದಮೇಲೆ, ಸಂಪೂರ್ಣವಾಗಿ ಆಡಳಿತ ಅವ್ಯವಸ್ಥೆಯಾಗಿ ಹೋಗಿದೆ. ಇವೊತ್ತು ಯಾರಿಗೂ ಕೂಡ ಸರ್ಕಾರದಿಂದ ರಕ್ಷಣೆ ಸಿಕ್ಕುತ್ತದೆ ಎನ್ನುವ ನಂಬಿಕೆ ಇಲ್ಲದಂತಾಗಿದೆ. ಕಾಂಗ್ರೆಸ್ ಸರ್ಕಾರದಲ್ಲಿ ನಮಗೆ ರಕ್ಷಣೆ ಸಿಕ್ಕುತ್ತದೆ ಎನ್ನುವ ನಂಬಿಕೆಯನ್ನು ಜನರು ಏನು ಇಟ್ಟುಕೊಂಡಿದ್ದರು ಅದನ್ನು ಇವೊತ್ತು ತಾವು ಹಾಳು ಮಾಡಿಬಿಟ್ಟಿದ್ದೀರಿ. ಮೊದಲು ಈ ಒಂದು ತುಳಿತಕ್ಕೆ ಸಿಕ್ಕಿರತಕ್ಕ ವರ್ಗಗಳು, ಅಲ್ಪಸಂಖ್ಯಾತರು ಹರಿಜನ ಗಿರಿಜನರು ನಮಗೆ ರಕ್ಷಣೆ ಸಿಕ್ಕುತ್ತದೆ ಎನ್ನುವ ನಂಬಿಕೆಯನ್ನು ಇಟ್ಟುಕೊಂಡಿದ್ದರು, ಇವೊತ್ತು ಅದು ಇಲ್ಲವಾಗಿದೆ. ಇವೊತ್ತು ತಾವು ಹಿಂದುಳಿದವರನ್ನು, ಎಲ್ಲರನ್ನೂ ಸರಿಸಮನಾಗಿ ಕಂಡಿದ್ದೀರಿ, ಒಳ್ಳೆಯ ಸಮಾಜವಾದ ನಡೆದಿದೆ. ಇವೊತ್ತು ಫಿರ್ಯಾದಿ ಕೊಟ್ಟವನಿಗೂ ಹಾಕಿಕೊಂಡು ಬಾರಿಸುತ್ತಿದ್ದೀರಿ, ಫಿರ್ಯಾದಿ ಯಾರಮೇಲೆ ಕೊಟ್ಟಿದ್ದಾನೆ ಅವನಿಗೂ ಹಾಕಿಕೊಂಡು ಬಾರಿಸುತ್ತಿದ್ದೀರಿ. ಈ ಇಬ್ಬರಿಂದಲೂ ಲಂಚರುಷುವತ್ತು ನಡೆಯುವಂತಾದ್ದು ಆಗಿದೆ. ಇನ್ನು ನಾನು ಉಳಿದಿರತಕ್ಕ ವಿಚಾರಗಳನ್ನು ಹೇಳಲಿಕ್ಕೆ ಹೋಗುವುದಿಲ್ಲ. ಇವೊತ್ತು ಇವರ ಆಡಳಿತ ಸಂಪೂರ್ಣವಾಗಿ ಕುಸಿದು ಬಿದ್ದಿರುವುದಕ್ಕೆ ಕಾರಣ ಅಂದರೆ ಯಾವ ಮಾತನ್ನು ಕರ್ನಾಟಕದ ಜನತೆಗೆ ಕೊಟ್ಟರೋ ಆ ಒಂದು ಮಾತಿಗೆ ಸಂಪೂರ್ಣ ತದ್ವಿರುದ್ಧವಾಗಿ ನಡೆದಿರತಕ್ಕಂಥ ನಡವಳಿಕೆ ಇದೆ, ಇವೊತ್ತು ಕರ್ನಾಟಕ ರಾಜ್ಯದ ಜನತೆಗೆ ಅಷ್ಟೇ ವಂಚನೆ ಮಾಡತಕ್ಕ ಕೆಲಸ ಮಾಡಿಲ್ಲ, ಎಲ್ಲರಿಗೂ ಆಗಿದೆ. ನಾವು ಇವೊತ್ತು ವಿರೋಧಪಕ್ಷದಲ್ಲಿ ಕುಳಿತು ವಿಚಾರ ಪ್ರಸ್ತಾಪ ಮಾಡಬೇಕಾದರೆ. ನೀವು ಕೆಲವು ಸಾರಿ ನಯವಾದ ಮಾತುಗಳನ್ನು ಮಾತನಾಡಿ ನಂಬಿಸಿ ಮೋಸ ಮಾಡತಕ್ಕ ಆಡಳಿತ ಕೊಟ್ಟಿರುವುದು ನಮಗೆ ಅಷ್ಟೇ ಗೊತ್ತಾಗಿಲ್ಲ, ಇದು ಇವೊತ್ತು ನಿಮ್ಮ ಪಕ್ಷದ ಸದಸ್ಯರಿಗೂ ಗೊತ್ತಾಗಿದೆ. ಅದಕ್ಕೋಸ್ಕರವೇ ವಿಚಾರವೇದಿಕೆ ಎಂದು ಫ್ರಂಟ್ ಕೂಡ ಮಾಡಿಸಿದರು. ಭಿನ್ನಮತ ಏಕೆ ಎಂದು ಪ್ರಿಂಟ್ ಮಾಡಿಸಿ ಎಲ್ಲರಿಗೂ ಹಂಚಲಾಗಿದೆ, ಇವೊತ್ತು ಎಲ್ಲಿಯೋ ಒಂದು ಕಡೆ ಬರೆದಿದ್ದಾರೆ, ೯೮ ಜನ ಶಾಸಕರ ಸಹಿ ಹಾಕಿದ ಪತ್ರಕೊಟ್ಟೆವು, ಅನಂತರ ೮೩ ಜನ ಶಾಸಕರ ಸಹಿ ಹಾಕಿದ ಪತ್ರ ಕೊಟ್ಟೆವು, ಮತ್ತೆ ೫೦ ಜನ ಶಾಸಕರ ಸಹಿ ಹಾಕಿದ ಪತ್ರ ಕೊಟ್ಟೆವು ಎಂದೆಲ್ಲಾ ಹೇಳಿದ್ದಾರೆ. ಇವೊತ್ತು ನೋವಾಗುತ್ತಿರುವುದು ನಮಗೆ ಅಷ್ಟೇ ಅಲ್ಲ. ಇವೊತ್ತು ಬಿನ್ನಮತ ಎನ್ನತಕ್ಕದ್ದು ನಿಮ್ಮ ಪಕ್ಷದ ಆಂತರಿಕ ವಿಚಾರ ಅದರ ಬಗ್ಗೆ ನಾನು ಹೇಳಲಿಕ್ಕೆ ಹೋಗುವುದಿಲ್ಲ, ಆದರೆ ಆಡಳಿತಕ್ಕೆ ಸಂಬಂಧಪಟ್ಟಿರತಕ್ಕ ವಿಚಾರವನ್ನು ಪಕ್ಷಾತೀತವಾಗಿ ಈ ಸದನದಲ್ಲಿ ಹೇಳತಕ್ಕ ಹಕ್ಕು ನಮಗೆ ಇದೆ. ಇದರಲ್ಲಿ ಬರೆದಿದ್ದಾರೆ, ಹಣ ಶೇಖರಣೆ ಹೇಗೆ ಹೇಗೆ ಮಾಡುತ್ತಿದ್ದೀರಿ, ಯಾರ ಯಾರ ಮುಖಾಂತರ ಮಾಡುತ್ತಿದ್ದೀರಿ, ಎಂದು ಬರೆದಿದ್ದಾರೆ ಇದನ್ನು ಕಾಂಗ್ರೆಸ್ ಪಕ್ಷದವರು ಏನಾದರೂ ಹೇಳಿದ್ದರೆ, ನಿಮಗೆ ಅಧಿಕಾರ ಸಿಕ್ಕಲಿಲ್ಲ ಅದಕ್ಕೋಸ್ಕರ ಅಪಾದನೆ ಮಾಡುತ್ತಿದ್ದೀರಿ. ಇವೊತ್ತು ನಿಮ್ಮ ಪಕ್ಷದವರೇ ನಿಮ್ಮ ಮೇಲೆ ಚಾರ್ಜ್‌ಷೀಟ್ ಹೇಳಿದರು. ಆ ಚಾರ್ಜ್‌ಷೀಟ್ ಹೇಳಿದಮೇಲೆ ಯಾವ ಕ್ರಮ ತೆಗೆದುಕೊಂಡಿದ್ದೀರಿ. ನಿಮ್ಮ ಮೇಲೆ ಬಂದಾಗ ಯಾವ ಕಾರ್ಯಕ್ರಮಕ್ಕೆ ಒಳಪಟ್ಟಿರಿ. ಈಗ ನೀವು ಹೇಳುವುದು ಏನು ಲೋಕಾಯುಕ್ತಕ್ಕೆ ಕಂಪ್ಲೆಂಟ್ ಕೊಡಲಿ ಎಂದು ಹೇಳುತ್ತೀರಿ.

ಶ್ರೀ ಎಂ. ರಘುಪತಿ.—ನಮ್ಮ ಡಿಪಾರ್ಟ್‌ಮೆಂಟ್‌ಗೆ ನಿಮ್ಮ ಪ್ರೀತಿ ನಿಮ್ಮ ವಕಾಲತ್ತು ಬೇಕಾಗಿಲ್ಲ. ಇದು ನಮ್ಮ ಪಕ್ಷದ ಆಂತರಿಕ ವಿಷಯ. ನಿಮ್ಮ ಶಕ್ತಿ ಅವರಿಗೆ ಬೇಕಾಗಿಲ್ಲ.

(ಗೊಂದಲ)

ಶ್ರೀ ಆರ್. ಎನ್. ನಾಯಕ್.—ನಿಮಗೆ ಈ ರೀತಿ ಬುದ್ಧಿ ಇದ್ದಿದ್ದರೆ......

(ಗೊಂದಲ)

ಶ್ರೀ ಎಂ. ರಘುಪತಿ.—ನೀನು ಇನ್ನೂ ಹುಡುಗ. ಆಗ ನೀನು ಇನ್ನೂ ಕಣ್ಣು ಬಿಟ್ಟಿರಲಿಲ್ಲ. ಅದು ನಿನಗೆ ಗೊತ್ತಿಲ್ಲ. ಅದನ್ನು ಬಿಟ್ಟುಬಿಡು.

ಶ್ರೀ ಎಸ್. ಬಂಗಾರಪ್ಪ.—ನಾಯಕ್‌ರವರೆ, ಅವರು ಮಹಾ ತ್ಯಾಗಿ. ಅವರ ಬಗ್ಗೆ ಹೆಚ್ಚಿಗೆ ವ್ಯಾಖ್ಯಾನ ಸಲ್ಲದು.

ಶ್ರೀ ಎಂ. ರಘುಪತಿ.—ನಿಮ್ಮಷ್ಟು ತ್ಯಾಗಮಾಡುವುದಕ್ಕೆ ನನಗೆ ಸಾಧ್ಯವಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೆ, ನಾನು ಹೇಳುವುದೇನೆಂದರೆ, ಯಾರು ಬೇಕಾದರೂ ಪ್ರಿಂಟ್ ಮಾಡಿಸಬಹುದು. ನಮ್ಮ ಕರ್ನಾಟಕದ ಆಡಳಿತಕ್ಕೆ ಸಂಬಂಧಪಟ್ಟಂಥ ವಿಚಾರ ಬಂದಾಗ ಆ ವಿಚಾರವನ್ನು ಪ್ರಸ್ತಾಪ ಮಾಡತಕ್ಕ ಹಕ್ಕು ಈ ಸದನದ ಸದಸ್ಯರಿಗೆ ಇದೆ. ಆ ಹಕ್ಕಿನ ಚಲಾವಣೆಯನ್ನು ನಾನು ಇವತ್ತು ಮಾಡುತ್ತಿದ್ದೇನೆಂದು ಹೇಳುತ್ತಿದ್ದೇನೆ. ನಿಮ್ಮ ಪಕ್ಷದ ಶಾಸಕರು ಸುಮಾರು ೯೩ ಜನ ನಿಮ್ಮ ಮೇಲೆಯೇ ಛಾರ್ಜ್ ಷೀಟನ್ನು ಹಾಕಿದಾಗ ನೀವು ಏತಕ್ಕೆ ಮೊದಲೇ ಈ ಕೆಲಸವನ್ನು ಮಾಡಲಿಲ್ಲ? ನೀವು ಏತಕ್ಕೆ ಆ ಧೈರ್ಯವನ್ನು ತೆಗೆದುಕೊಳ್ಳಲಿಲ್ಲ? ನಿಮ್ಮ ಮೇಲೆಯೂ ಕೂಡ ಆಪಾದನೆ ಮಾಡಿದ್ದಾರೆ. ಆದರೂ ಕೂಡ you have lost confidence of the public that you had enjoyed in the past. You hove now completely lost. ಇವತ್ತು ನಾನು ನಿಮ್ಮ ರಾಜೀನಾಮೆಯನ್ನು ಏನೂ ಕೇಳುತ್ತಿಲ್ಲ. ಅದು ನನ್ನ ಪಾಯಿಂಟ್ ಅಲ್ಲ. ನೀವು ಆಡಳಿತವನ್ನು ಕೊಡತಕ್ಕ ವಿಚಾರದಲ್ಲಿ ನಾನು ನಿಮ್ಮ ಮೇಲೆ ಛಾರ್ಜ್ ಮಾಡತಕ್ಕದ್ದು ಮಾತ್ರ ಅಲ್ಲ. ಜನತಾ ಪಕ್ಷದವರು, ನಿಮ್ಮ ಆಡಳಿತ ಪಕ್ಷದವರೇ ನಿಮ್ಮ ಮೇಲೆ ಛಾರ್ಜ್ ಮಾಡುತ್ತಿದ್ದಾರೆಂದರೆ ಅದು ಸಣ್ಣ ವಿಚಾರವೇನೂ ಅಲ್ಲ. ಇಷ್ಟಾದರೂ ಕೂಡ, ಏನಾದರೂ ಮಾಡಿ ಅಧಿಕಾರಕ್ಕೆ ಅಂಟಿಕೊಂಡಿರಬೇಕೆಂದು ನಿಮಗೆ ವಿಚಾರಧಾರೆ ನಿಮಗೇನಾದರೂ ಇದ್ದರೆ ಅದನ್ನು ನಾವು ಅಂತಿಮವಾಗಿ ಈ ಕರ್ನಾಟಕ ರಾಜ್ಯದ ಜನತೆಗೆ ಬಿಡುತ್ತೇವೆ. ಇದನ್ನು ನಾವು ಅನಿವಾರ್ಯವಾಗಿ ಬಿಡಬೇಕಾಗುತ್ತದೆ. ಆಗಾಗ್ಗೆ ನೀವೇ ಹೇಳುತ್ತಿರುತ್ತೀರಲ್ಲಾ, ಕರ್ನಾಟಕ ರಾಜ್ಯದ ಜನತೆ ನಮ್ಮ ಪ್ರಭುಗಳು, ನಾವು ಅಲ್ಲಿಗೆ ಹೋಗುತ್ತೇವೆ ಅಂತ. ಸ್ವಾಮಿ, ಇವತ್ತು ಆ ನಿಮ್ಮ ಪ್ರಭುಗಳನ್ನು ಸಂಪೂರ್ಣವಾಗಿ ಮುಗಿಸಿಬಿಟ್ಟಿದ್ದೀರಿ. ಕರ್ನಾಟಕ ರಾಜ್ಯದ ನಿಮ್ಮ ಆ ಪ್ರಭುಗಳು ಸುಮಾರಾಗಿ ಸಮಾಧಿಯಾಗಿ ಹೋಗಿದ್ದಾರೆ. ಬೇರೆ ಪ್ರಭುಗಳನ್ನು ಈಗ ಹುಡುಕತಕ್ಕ ಕಾಲನಿಮಗೆ ಬಂದಿದೆ. ಆದರೆ ಈಗ ಆ ಪ್ರಭುಗಳು ನಿಮಗೆ ಸಿಕ್ಕುವುದಿಲ್ಲ. ಆ ಪ್ರಭುಗಳನ್ನು ನಂಬಿಸಿ, ದುರಾಡಳಿತವನ್ನು ಈ ಕರ್ನಾಟಕ ರಾಜ್ಯದಲ್ಲಿ ಏನು ಕೊಟ್ಟಿರೋ, ಒಳ್ಳೆಯ ಕಾರ್ಯಕ್ರಮಗಳನ್ನೆಲ್ಲಾ ಹಾಳುಮಾಡಿದಿರೊ, ಅದೇ ಪ್ರಭುಗಳು ಇವತ್ತು ನಿಮ್ಮನ್ನು ಕಾಯುತ್ತಿದ್ದಾರೆ. ನಿಮಗೆ ಯಾವರೀತಿ ಉತ್ತರವನ್ನು ಕೊಡಬೇಕು, ಯಾವರೀತಿ ಪಾಠವನ್ನು ಕಲಿಸಬೇಕು. ಮುಂದೆ ಬರತಕ್ಕ ಚುನಾವಣೆಯ ದಿನಗಳಲ್ಲಿ ನಿಮಗೆ ಯಾವ ಒಂದು ನೀತಿಯನ್ನು ರೂಪಿಸಬೇಕೆಂದು ಅವರು ಕಾಯುತ್ತಿದ್ದಾರೆ..... ...

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರೇ, ನಿಮ್ಮ ಲೆಕ್ಕದ ಪ್ರಕಾರವೇ ೧೫ ನಿಮಿಷಗಳಾಗಿ ಹೋಯಿತು, ಬೇಗ ಮುಗಿಸಿ. ಕೊನೆಯ ಮಾತನ್ನು ಹೇಳಿಬಿಡಿ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೆ, ಭಿನ್ನಮತೀಯರು, ಇನ್ನೊಂದು, ಮತ್ತೊಂದು ವಿಚಾರ ನನಗೆ ಸಂಬಂಧವಿಲ್ಲವೆಂದು ನಾನು ಮೊದಲೇ ತಮಗೆ ಹೇಳಿದ್ದೇನೆ. I do not hold any brife and that is not my culture, ಆಡಳಿತಕ್ಕೆ ಸಂಬಂಧಪಟ್ಟ ವಿಚಾರ ಬಂದಾಗ ತಮ್ಮ ಗಮನಕ್ಕೆ ತರತಕ್ಕದ್ದು ನನ್ನ ಕರ್ತವ್ಯ. ಈ ಪ್ರಜಾಪ್ರಭುತ್ವದಲ್ಲಿ ಯಾವಾಗಲೂ ಈ ವಿಧಾನ ಸೌಧ ಎಂದರೆ ಇದು ಒಂದು ರೀತಿಯ ಬುಲ್‌ಡಾಗ್ ಇದ್ದ ಹಾಗೆ. ನಾನು ಹೇಳುತ್ತಿರುವುದು ಬುಲ್ಡೋಜರ್ ಅಲ್ಲ. ಬುಲ್‌ಡಾಗ್ ಇದು ಯಾವರೀತಿ ಇರಬೇಕೆಂದರೆ ತನ್ನ ಹಿಂದಿರತಕ್ಕ ಬಾಲವನ್ನು ಯಾವಾಗಲೂ ಅಲ್ಲಾಡಿಸುತ್ತಾ ಇರಬೇಕು. ಅಂದರೆ ಇಲಾಖೆಯ ಅಧಿಕಾರಿಗಳನ್ನು ಕಂಟ್ರೋಲ್ ಮಾಡಿ

ಜನ ಸಾಮಾನ್ಯರ ಹಿತದೃಷ್ಟಿಯಿಂದ ಕೆಲಸಮಾಡಬೇಕು. ಆದರೆ ಇವತ್ತು ಏನಾಗಿದೆ ಎಂದರೆ ಆ ಬಾಲ ಏನಿದೆ ಅದೇ ಈ ನಿಮ್ಮ ಒುಲ್ ಡಾಗನ್ನು ಅಲ್ಲಾಡಿಸುತ್ತಿದೆ. ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ಬಾಲವನ್ನು ನಾಯಿ ಅಲ್ಲಾಡಿಸುವ ಬದಲು ಬಾಲವೇ ನಾಯಿಯನ್ನು ಅಲ್ಲಾಡಿಸುತ್ತಿದೆ. ಇಂಥ ಒಂದು ಮಟ್ಟಕ್ಕೆ ನಿಮ್ಮ ಆಡಳಿತವನ್ನು ಕೊಟ್ಟಿರತಕ್ಕ ನಿಮ್ಮ ಈ ಸರ್ಕಾರಕ್ಕೆ ಧಿಕ್ಕಾರವನ್ನು ಹಾಕುವುದಕ್ಕೆ ಜನರು ಕಾಯುತ್ತಿದ್ದಾರೆ. ಇಂಥ ಆಡಳಿತವನ್ನು ಕೊಟ್ಟಿರತಕ್ಕ.........

ಶ್ರೀ ಡಿ. ಟಿ. ಜಯಕುಮಾರ್.—ಅಲಹಾಬಾದ್.

ಶ್ರೀ ಎಸ್. ಬಂಗಾರಪ್ಪ.—ಅಲಹಾಬಾದ್ ಎಂದು ಹೇಳಬೇಡಿ. ಅದು ಏನೂ ಉಪಯೋಗವಿಲ್ಲ. ಅಪ್ಪಿತಪ್ಪಿ ನೀವು ಏನಾದರೂ ಗೆದ್ದರೆ ಅದು ಪುಣ್ಯ. ಆದರೆ ನಿಮ್ಮ ಮುಖಕ್ಕೆ ಒಂದು ಓಟೂ ಹುಟ್ಟುವುದಿಲ್ಲ. ರಾಮಕೃಷ್ಣಹೆಗಡೆಯವರು ಏತಕ್ಕೆ ಪ್ರಚಾರಕ್ಕೆ ಹೋಗಲಿಲ್ಲ ಗೊತ್ತೆ... . ...

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರೇ, ಬೇಗ ಮುಕ್ತಾಯಮಾಡಿ.

ಶ್ರೀ ಎಸ್. ಬಂಗಾರಪ್ಪ.—ಇವರು ಏತಕ್ಕೆ ಹೋಗಲಿಲ್ಲ ಗೊತ್ತೇ ? ಇವರು ಅಲ್ಲಿಗೆ ಹೋದರೆ ಇಲ್ಲಿಯ ಬಗ್ಗೆ ಪ್ರಶ್ನೆಯನ್ನು ಕೇಳುತ್ತಾರೆ. ಅದಕ್ಕೆ ಉತ್ತರ ಕೊಡುವುದಕ್ಕೆ ಬಹಳ ಕಷ್ಟ. ಇಲ್ಲಿಯದು ಹಾಗಿರಲಿ ನಿಮ್ಮ ಮನೆಯ ಪರಿಸ್ಥಿತಿ ಏನಾಗಿದೆ ಎಂದು ಇವರನ್ನು ಕೇಳುತ್ತಾರೆ. ಆದ್ದರಿಂದ ಇವರು ಹೋಗಲಿಲ್ಲ. ಇದು ನಯವಂಚಕ ಸರ್ಕಾರ. ಜನತೆಯನ್ನು ನಂಬಿಸಿ ಜನತೆಗೆ ಮೋಸಮಾಡಿರತಕ್ಕಂಥ ಸರ್ಕಾರ. ಇಂಥ ಸರ್ಕಾರದ ಆಡಳಿತ ಎಷ್ಟು ಶೀಘ್ರವಾಗಿ ಕೊನೆಗೊಳ್ಳುತ್ತದೆಯೋ ಅಷ್ಟೂ ಜನರಿಗೆ ಒಳ್ಳೆಯದು. ಜನರ ಪ್ರತಿನಿಧಿಗಳಾಗಿರತಕ್ಕಂಥ ತಮಗೂ ಒಳ್ಳೆಯದೆಂದು ಹೇಳಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

SRI J. A. FERNANDEZ (Nominated).—

Mr. Speaker, Sir, in supporting the demands of the Chief Minister I would like to offer a few comments on the administration.

It would appear today that our Government is of transfers, by transfers and for transfers. This is becoming quite a scandal. Every member of the Legislative Assembly appears to be indulging in the business of transfers. I don't know how much of a scandal this is but it would appear that it is quite an interesting business. Perhaps if the cost of all these transfers are taken into account it should be possible to run another Government. I sincerely appeal to all those concerned to desist from indulging in this unnecessary transfer business as it is not helping the administration on the one hand, but encouraging corruption on the other. Transfers are necessary in the administrative setup of any Government, but it should be left to the authorities concerned to decide. Unless there are some every glaring irregularities I would think that all of us must desist from interfering in the business of transfers.

Then there is no accountability. If one looks at the manner in which the Government deals with the general public I can only say that there is no aspect of responsiveness towards the members of the public. If a member telephones a Government office the chances are he never gets any proper response unless he happens to be some person of high status. I would like to see the day when the Government administration in the Vidhana Soudha can ensure efficiency by clearing the Vidhana Soudha corridors of

petitioners. At present the Vidhana Soudha is clogged up with members of the public, the petitioners and with some MLAs and MLCs who have to take these poor people around to get their jobs done. The staff are well paid. Why can't they do their jobs. If a paper comes to a Government Secretary he passes it down the line. Similarly, it goes back up the line from the case worker who makes his comments. It goes to the Section Officer, from the Section Officer to the Under Secretary, from the Under Secretary to the Deputy Secretary, from the Deputy Secretary to the Joint Secretary, from the Joint Secretary to Additional Secretary and then to the Secretary. A mere time consuming. delaying execrise. Why do people come to the Covernment offices? They hope that if their petitions are submitted to the Government the matter will be considered seriously. They do not come to pass their spare time. Nobody wants to come to the Government offices or any Government Department unless he or she has some positive purpose. The relation between the Government and the people is not on a person to person basis. They treat the public like a piece of paper. Nobody even offers you a seat in the Government offices, the rare exception apart. The courtesy that one expects from another is totally absent. There is one other interesting aspect known as file disposal. It is very easy to dispose of a file by saying 'No' strightaway across it But if there is an element of concern that file can reach a stage of meaningful finality and orders can be passed accordingly or at least getting the work done without too many difficulties.

Today the relationship between the Government and the public is one of a Master and servent relationship. We have inherited this system from feudal times. it is very glaring. The person who comes to the Government office is considered somebody's subordinate and he is not given the right treatment as a member of the public. Government is supposed to be the servant of the public. But the people at the helm of affairs think that the public are the servants of the Government. This role has to change and with it we must have a greater degree of accountability built into Government regulations.

How many of our Government officers are conscious of their responsibilities? When a file does not move, does the concerned officer understand the distress that is caused to the poor person? Does it take months to move a simple application? Why should not there be some time-bound regulations introduced in the Government service rules that the officer concerned is accountable for every paper that he gets, that the disposal must be made within a stipulated time, otherwise he must be made responsible and he should be accountable for his lack of duty? In other words, deriliction of duty must be defined in the Conduct Rules. Only if

there is some degree of fear of repurcussions for not doing one's duty, will the officer realise what are his responsibilities. In the political level also a sense of public opinion is absent. We must try to bring this particular aspect back. Many of our Government officers believe that the rules are an end in themselves. Rules are there for the officers to interpret them to the best of their ability bearing in mind that the general public have a right to the benefit of doubt and the officers should try to interpret those rules to be more helpful and co-operative rather than using them in a negative manner. In other words, the Government policies and programmes must be properly translated by the administration. Otherwise, the Parliamentary democracy which we are supposed to practise will become meaningless.

I would also like to state that in many departments there should be greater emphasis and greater percentage of recruitment of ladies. They will bring to the administration a kind of soothing influence. There will be less of the master-servant relationship and there will be better inter-action with the public. I think this matter must be considered very carefully and a definitely higher percentage of ladies must be built into the recruitment for the purpose of administration.

In India, we have a tremendously inflated number of Class IV category of staff. I don't really believe that it is a very healthy tendency because we have too many peons. Everybody is doing somebody's work, whereas it would not cost anything if a person moves out of his seat to some extend and gets his work done. This will give him some exercise ! But today our exercise is built around the Canteen. I think our administration should introduce a system whereby coffee and snacks can be served to the employees in their seats, because we find that half the employees at any given time will not be in their seats and a standard replay we get is that 'so and so has gone for coffee'. In other words, a person who has come from hundreds of miles does not get his work done. Why should we not introduce Canteen service into the office at a given time. I am sure that this can be done without much difficulty. I also believe that there is a tendency to multiply the work to justify the appointment of staff. I was thinking about the Bangalore Development Authority's method of distribution of sites. We are told that a person will get a site only at the sixth or seventh attempt. Each and every time we have to get the application forms from the B.D.A., fill them up, we have to get a domicile certificate, and then we have to remit the money into the bank and finally we have to submit the forms. Each and every time when we apply for sites, the minimum exercise must be done which means that the Bangalore Development Authority is multi-

plying the work within its own Department to justify their staff. today, they are having a Computor. If they really want to know as to how to use the Computer and if they don't have the requisite staff, I can get them a good person who can teach them to operate the computer.

What is happening is that there is multiplication of futile exercises, because there are a lesser number of sites available than the number of pending applications. Therefore on the basis of supply and demand ratio, the B.D.A. should collect the application forms, distribute the sites from the first lot onwards and make allotments on the remaining applications on the basis of 'first come first served' basis. then go on to the next lot of sites available. Why should they advertise in a big way? It is enough if they just notify the number of sites available, because applicants have no choice in the area in which they can demand sites, irrespective of the fact whether he has applied for a site in a particular sector or not. Such being the case, with no choice being given to the applicants, what purpose will be served by multiplying and further multiplying this work, This must be looked into immediately. The report of the Bangalore Development Authority just received is a shocking example of non-reporting. There is no Receipts and Expenditure Statement. Therefore this report is practically meaningless and I would request that the Statement of Accounts, Receipts and Expenditure should be placed before this House without any delay.

Regarding the administration of the Police Department, I am a little scared to mention too much. Today nobody wants to go to the Police Station be he a petitioner, plaintiff or a defendant, beause the element of courtesy is completely taken out of the Police Stations and everyone is treated as a criminal. The senior officials may be nice people, but I wish that senior officials could spend a little more time to educate those who deal with public that they could be made more courteous and kind to them. Nobody even thinks of the Policeman as a person to whom he can go for help. The general public are afraid of Policemen. There is no doubt that the Policeman's job is not very easy, but the Policemen should be so trained as to be kind to the people who come to the Police Station. Nobody goes to the Police Station to enjoy himself. Why can't the people be treated like simple ordinary human beings rather than as offendersy ? this element of distrust from the Government sector to the people must be removed. We are not in the feudal times any more. This is not the 'Police Raj'. Why can't we be more kind and courteous ? Why can't we build in a certain degree of training in courtesy among our Government officials, in general, and the Police Force in particular, who are in daily contact with the people and they should project the right image of the Government.

Many of the minority communities suffer at the hands of the Police, not because of any other reason, but because of the fact that they do not Godfathers or Legislators to take up their cases. They are treated as if they are criminals, even though they might never have committed any crime in their lives. This is the one aspect about the Police administration which must be looked into and a rigid training must be imparted to the Sub-Inspector, the Station Writer and others at that level.

(Mr. Deputy speaker in the chair)

Another aspect is that the development of Bangalore demands a greater deal of attention than has been given to it so far. We have been refused the Second T.V. Channel. Why should this be? We are a part of the Government of India. The Government of Karnataka is one segment of the Government of India. Why should the 'big-brother' attitude be there? If we get the second T.V. Channel are we going to de-stabilise our country? Are we going to pose a security threat to the country? We are one of the most important States of the country. Yet we can't be trusted for a simple thing like a second T. V. channel. I think this matter must be taken up even more emphatically and strongly this year by the Hon'ble Chief Minister so that we do not lag behind in the area of media facilities.

Another important aspect is that we still do not have an International Airport. We have a Cargo complex, but we do not have an International Airport. Now no hope seems to be on the horizon that we will be placed on the International Air map. Bangalore city is known throughot the world as one of the most beautiful cities. It is a place where anybody can find a happy home and many would like to come to Bangalore to spend their holidays. Yet in the Tourist Map of India we are some where in the background. There is not much emphasis on the City in general and particularly on the State of Karnataka, despite the rich heritage we have, despite having Belur, Hampi, Haleyeedu, Shravanabelagola, etc. We are not in the International Tourist Map. We can certainly get into the International Tourist Map, if we not only have an International Airport. but we are able to arrange character fights from foreign countries. These are the suggestions which must engage the attention of our Government to put Bangalore in the place which it richly deserves.

In the field of roads, I have mentioned it before and I will mention it again. The development of any State is competely dependent on the infrastuctural facilities available and begins with roads. Today Karnataka is a State of two-wheelers. The bulk of the vehicles on the roads are two-wheelers. We have not reached

the four-wheeler category as yet in terms of numbers. The economy of any country is measured by the number of vehicles on its roads. We may be lagging behind in the four-wheeler category, but the number of two-wheelers on the road is enough to choke the entire system during the peak hours. We have no means by which this traffic can be regulated. Schools are in danger and the children are in danger of being run over any minute. Yet if the number of accidents in Bangalore is low it is because the hand of God is on Bangaloge. I don't think that there is any other reason as to why we have been escaping so much. We have mentioned it many times. Yet no action is being taken to regulate the inflow of heavy goods vehicles to ensure that during certain hours of the day they are not allowed. This has to be done immediately. Unless the people at the helm of affairs know what is happening, nothing can be done. It is impossible to imagine what goes on in the city streets. The beautiful Cantonment area was known for its peaceful atmosphere, but that atmosphere has been completely vitiated.

This matter must engage the attention of our planners. Planning of course has been a casuality for many years. At least now let us try and take it up before it is too late. Let us start with this beautiful city of Bangalore. Let us bring back a little more greenery into Bangalore.

The corporation officials have no concern for the citizenry. Even today, one can see buildings coming up with no parking space, no set-backs allowed. I think the Corporation officials or the Revenue officials should be suspended immediately if the building laws are deliberately violattd. If the owner of the building has put up the building violating the Rules, that building shoulding be demolished. Everywhere we can see the deliberate violation of the Zonal Rules and Regulations and the Town Planning Rules and Regulations. Everything is being flouted right under our very noses. There is a new building coming up called "Brigade Towers". God alone knows where the parking space has been provided. Another building is coming up at the corner of Queen's Road and Cunningham Road. Where are the vehicles going to be parked? How could licences have been issued to these buildings without adequate parking places being provided? Somebody will say that the police were not consulted Nobody consults anybody unless that person is interested. Police could have asserted themselves and could have refused to allow the building to come up. There are so many avenues open to the Police to protect the interest of the people. Why should they protect the builders? With no parking place available, the road becomes the parking place not only for their vehicles of those people who visit them, with the result further choking of the street takes place and further pollution. I

will not be wrong if I say that within a couple of months of that building being opened the entire Cunningham Road at the end of Vidhana Veedhi, is going to be a terrible mess. How did the Police allow this situation to arise ? What were they doing ? Were they sleeping ? They should not have allowed this building to come up. If they are vigilant, the other Departments will be vigilant. There is no doubt that there is a certain degree of corruption. But why should we have a Police Force if they cannot manage these things and if they cannot assert themselves when they should ? These monstrous things which are happening in the city go totally undetected and nobody brothers about it. I think we as a legislative body must ensure that there is no more haphazard growth of the city on the one hand and on other, no building should be allowed to come up with more than three or four floors with adequate parking place for each flat, not only for the owners, but also for the visitors. Otherwise the city of Bangalore will sink further like Calcutta and there will be no other means by which we can protect the city of Bangalore.

As regards the Greenbelt, let us take a firm decision, that " this is the greenbelt and nothing can be built here". Let us not allow the greenbelt to be shifted here and there so that the vasted interests take undue advantage of it and over us.

The State Transport Corporation will also be under tremndous preessure in this growing city of Bangalore. One of the few things which occur to my mind is that they are usien a vehicle which is not relevant to our needs. They are using a Truck engine and Chassis for a Bus operation. The normrl pay-load of a truck is about 10 to 15 tonnes. By any means that is twice the requirement of the load that we carry in a bus. The bus carries at the most 60 to 70 passengers. It is less than half the weight required for the present Truck Engine. Why should we have such a high power engine ? We can pervail upon the vehicle manufacturers to produce vehicles that suit us not only for Bangalore, but for other city services as well. Even long distance buses do not require such high powered vehicles.

The manfuctures want us to buy their high power vehicles and we are doing their jobs for them. We should say to the mantfucturers that we want such type of horsepower engine and that we don't want a Truck Chassis for our bus operations. Why don't we try to make the vehicle manufacturers produce what we as customers want ? This matter should engage the attention of our Transport Minister and officials so that with the use of lighter vehicles, we can save on tyres, on fuel and in so many other areas, without affecting the efficiency of the vehicles or the comforts of the passengers.

New extensions are coming up around Bangalore which also have to be covereb by the transportation system What are we doing to help the transportation system work efficiently in these new extensions ? They are coming up within a radius of 15 to 20 Kms. There is inflow of traffic towards the city in the morning and back in the evening from the city. In the meantime, between these timess, there is practically no business, and thare is only one direction traffic. Therefore, there should be either a separate tariff for such new extensions or some subsidy should be given from the B. D. A. to the Transport Department to operate their services there.

Similary, the coordination among the various agencies like the BWSSB, the KEB, the Municipal Corporation, the BDA: etc. is not as good as it should be. This will not make for healthy development or healthy growth and it is absolutely necessary that there should be better planning with particular referernce to Bangalore which is our premier city so that we do not go backwards. The system as it obtains today does not make for planned and proper growth nor proper development. Here also I would once again like to appeal to the police Department th take a greater interest in what is happening around them. otherwise they will be saddled with all the problems of this metropolis.

Leave alone the traffic, what about the law and order situation? What about the crime problem ? Dacioties cannot be detected. Can you imagine how dacoities will be multiplied if the city is allowed to grow in a haphazard manner ? I think in any planned undertaking, wherever buildings are fairly big, some monitoring from the police Dapartment is absolutely essential to ensure that there is no further problem created as a result of that building coming up. Also the traffic police have got to show much more dedication to their duties. people flout the traffic rules like uobody's business. 'One Way' streets have become 'two-way' streets. It is better to remove the boards that they keep there. If they cannot enforce that particular regulation they should not imPose it. Almost on every street where there is a 'one-way' board, it is not at all being followed. why should we have such an ineffective police Force ? If it is a matter of inadequate staff, there are many ways of augmenting the staff. why cannot we have the system obtaining in some of the foreign countries like police Traffic wardens, whose main functions will be to bring in revenue against violation of traffic rules ? some minimum training to high school and unemployed graduates can put them in jobs. we can give them uniforms and train them a little. Fines for incorrect parking they can pick up, also for violations of traffic rules can be picked up by them. fines can be levied on the spot. Employment is generated at the same time without cost to the exchequer.

They can earn their livelihood by attending to their duties diligently and collecting the fines on the spot. They can be given some percentage of the fines they collect. This system is a must because far too many violations are committed on the road and the roads are in a shocking condition also. Most roads in the city are not in good condition. As a vehicle owner, I think I am entitled to a goog road after having paid my taxes. But no road in Bangalore can provide a smooth ride.

MR. DEPUTY SPEAKER.—will you please conclude ?

SRI J. A. FERNANDEZ.— I would also suggest that to begin with let us try to make administration responsive to the needs of the people. Let us have better roads. Better roads means better movement, faster movement, less clogging of the roads, less accidents, less loss of lives and give a better deal to the people who pay their taxes. Similarly, the Corporation and the other agencies that we have, if they follow the rules, there is enough legislation to protect everybody. If they follow the rules and do their duties, I think Bangalore will be a much betterplace to live in.

similarly, the Secretaries of various Departments must analyse the duties the officers have to do. Many of them happen to be Chairmen of various Companies.

MR. DEPUTY SPEAKER.—you have already taken 30 minutes.

SRI J. A. FERNANDEZ.—I will just finish in one minute.

By being Chairmen of various Companies, they get various parks. some of them have three cars at their disposal. Do we have a need for this ? Why should we have this relic from the Raj ? Let us find out where we can economise. Everybody talks about the financial crunch. If there is a financial crunch should we not teach ourselves how to contribute towards reducing that financial crunch in some way ? perhaps each Secretary should look into his Departmental needs. Where there is excess staff, recommend that we don't recruit any staff until such time as a proper study is made. our existing staff is properly used, and how best we can marshal them to improve the administration, to make our staff and the administration of the Government more responsive to the people's needs as that instead of coming up against the cutting edge of the administration our people may instead com up against the soft edge and the kind words of a new responsive administration in Karnataka.

Thank you.

† ಶ್ರೀ ಪಂಪಾಪತಿ (ದಾವಣಗೆರೆ).—ಸನ್ಮಾನ್ಯ ಅಧ್ಯಕ್ಷರೇ, ಈ ದಿವಸದ ಮಾನ್ಯ ಮುಖ್ಯಮಂತ್ರಿಗಳವರಿಗೆ ಸಂಬಂಧಪಟ್ಟ ಬೇಡಿಕೆಗಳ ಬಗ್ಗೆ ನಾನು ಒಂದೆರಡು ಮಾತುಗಳನ್ನು ಆಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಮೊದಲನೆಯದಾಗಿ ತಮಗೆ ವಂದನೆಗಳನ್ನು ಸಲ್ಲಿಸುತ್ತೇನೆ. ಮೊದಲನೆಯದಾಗಿ ಈ ರಾಜ್ಯದಲ್ಲಿ ಎಲ್ಲರೂ ಹೇಳತಕ್ಕದ್ದು ಆಡಳಿತ ವ್ಯವಸ್ಥೆ ಕುಸಿದು ಬಿದ್ದಿದೆ ಎಂದು. ಯಾವ ಹಂತದಲ್ಲೂ ಆಡಳಿತ ವ್ಯವಸ್ಥೆ ಚುರುಕಾಗಿಲ್ಲ, ಆಡಳಿತ ವ್ಯವಸ್ಥೆ ಕುಸಿದಿದೆ ಎಂದು. ಇದಕ್ಕೆ ಕಾರಣಗಳು ಹಲವಾರು ಉಂಟು. ಅವೆಲ್ಲವನ್ನೂ ನಾನು ಹೇಳುವುದಕ್ಕೆ ಹೋಗುವುದಿಲ್ಲ. ನಮ್ಮ ದೇಶದಲ್ಲಿ ಸ್ವಾತಂತ್ರ್ಯ ಬಂದ ಮೇಲೆ ಪ್ರಜಾಪ್ರಭುತ್ವದ ಆಧಾರದಲ್ಲಿ ಈ ಒಂದು ಪ್ರಜಾಪ್ರತಿನಿಧಿ ಸಭೆ ನಡೆಯುವುದಕ್ಕೆ ಪ್ರಾರಂಭವಾದಾಗಿನಿಂದ ಕೂಡ ಸುಮಾರು ೫೨ ರಿಂದ ಇಲ್ಲಿಯವರೆಗೆ ೩೬ ವರ್ಷಗಳ ಅವಧಿಯಲ್ಲಿ ಮಾತನಾಡುತ್ತಾ ಮಾತನಾಡುತ್ತಲೇ ಆಡಳಿತ ವ್ಯವಸ್ಥೆ ಕೆಟ್ಟಿದೆಯೋ ಏನಹ ಇದೆಂದೂ ಸರಿಹೋಗಲಾರದೆಂಬುದು ನನ್ನ ಅಭಿಪ್ರಾಯ. ಏಕೆ ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ ನಾನು ಸದಸ್ಯನಾಗಿ ಈ ಸದನಕ್ಕೆ ಬಂದು ಹತ್ತು ವರ್ಷಗಳಾದವು. ಹತ್ತು ವರ್ಷಗಳ ಹಿಂದಿನ ವ್ಯವಸ್ಥೆಗೂ ಮತ್ತು ಈಗಿನ ವ್ಯವಸ್ಥೆಗೂ ಹೋಲಿಸಿದರೆ ಸ್ವಲ್ಪ ವ್ಯತ್ಯಾಸವೇನೋ ಕಾಣುತ್ತದೆ. ಈಗಿನ ವ್ಯವಸ್ಥೆಗೂ ಮತ್ತು ಆಗಿನ ವ್ಯವಸ್ಥೆಗೆ ಹೋಲಿಸಿ ಯೋಚನೆ ಮಾಡಿದರೆ ಕಲ್ಪನೆಗೂ ನಿಲುಕಲಾರದಂಥ ಪರಿಸ್ಥಿತಿ ಉಂಟಾಗಿದೆಯೇನೋ ಎನ್ನತಕ್ಕದ್ದು ನನ್ನ ಅಭಿಪ್ರಾಯ. ನಾವು ಇವತ್ತು ಏನು ಮಾತನಾಡುತ್ತೇವೆ, ಏನು ಸಲಹೆಗಳನ್ನು ಕೊಡುತ್ತೇವೆ, ಆ ಸಲಹೆಗಳನ್ನು ಸ್ವೀಕರಿಸುವುದಾಗಲೀ ಅಥವಾ ಸರಿಯಾದಂಥ ಸಲಹೆಗಳನ್ನು ಕೊಡತಕ್ಕದ್ದು ಆಗಲಿ ನಡೆದರೆ ಈ ವ್ಯವಸ್ಥೆಯಲ್ಲಿ ಸ್ವಲ್ಪ ಲಾಭ ಇದೆಯೆನ್ನತಕ್ಕದ್ದು ನನ್ನ ಭಾವನೆ. ವಿರೋಧಪಕ್ಷದವರು ವಿರೋಧ ಮಾಡುವುದು ಮತ್ತು ಆಡಳಿತ ಪಕ್ಷದಲ್ಲಿರತಕ್ಕಂಥವರು ಅವೆಲ್ಲವನ್ನೂ ಸಮರ್ಥನೆ ಮಾಡುವುದು, ಇದು ಬೆಳೆಯುತ್ತಲೇ ಬರುತ್ತಿದೆ. ಈ ಜನತಾ ಸರ್ಕಾರ ಬಂದಮೇಲೆ ಈ ರಾಜ್ಯಕ್ಕೆ ಒಂದು ಉತ್ತಮವಾದಂಥ ಆಡಳಿತ ವ್ಯವಸ್ಥೆ ಒದಗಬಹುದು, ಈ ರಾಜ್ಯಕ್ಕೆ ಜನತೆಗೆ ಹಿಂದೆ ಇದ್ದಂಥ ಸರ್ಕಾರ ಸುಮಾರು ಮೂವತ್ತು ವರ್ಷಗಳ ಕಾಲ ಅಧಿಕಾರ ನಡೆಸಿದಂಥ ಸರ್ಕಾರ ಮಾಡಿದಂಥ ಒಂದು ವ್ಯವಸ್ಥೆಯನ್ನು ಬದಲಾಯಿಸಿ ಜನತೆಯ ಪರವಾದಂಥ ಜನರಿಗೆ ಅನುಕೂಲವಾಗುವಂಥ ಜನರಿಗೆ ನೆಮ್ಮದಿಯನ್ನು ಕೊಡತಕ್ಕಂಥ ಆಡಳಿತ ಬರಬಹುದು ಎನ್ನತಕ್ಕಂಥ ಭಾವನೆಯಿಂದ ಆಡಳಿತದ ಒಂದು ಬದಲಿ ವ್ಯವಸ್ಥೆಗೆ ಅವಕಾಶವನ್ನು ಜನರು ಮಾಡಿಕೊಟ್ಟರು. ಆದರೆ ಇವತ್ತು ಅದು ಆಗಲಿಲ್ಲ. ಜನ ಏನು ಯೋಚನೆ ಮಾಡಿದ್ದರು ಅದು ಹುಸಿಯಾಯಿತು ಎಂದು ಹೇಳಿದರೆ ತಪ್ಪಾಗಲಾರದು. ಇದಕ್ಕೆ ಕಾರಣ ಏನು ? ಇದಕ್ಕೆ ಕಾರಣ ಆಡಳಿತದಲ್ಲಿರತಕ್ಕಂಥ ಲೋಪದೋಷಗಳು. ಆಡಳಿತ ನಡೆಸತಕ್ಕವರ ಲೋಪದೋಷಗಳಿಂದ ಈ ವ್ಯವಸ್ಥೆ ಇನ್ನೂ ಕೆಡುತ್ತಲೇ ಬರುತ್ತಿದೆ.

ಇವತ್ತು ಲಂಚ ಹೆಚ್ಚಾಗಿದೆ ಎನ್ನುವುದನ್ನು ಎಲ್ಲಾ ಕಡೆಯಿಂದಲೂ ಕೇಳುತ್ತಿದ್ದೇವೆ. ಮಾನ್ಯ ಬಂಗಾರಪ್ಪನವರು ''ಅಡಿಯಿಂದ ಮುಡಿಯುವರೆಗೂ'' ಎನ್ನತಕ್ಕಂಥ ಮಾತನ್ನು ಹೇಳಿದರು. ಇದು ಇವತ್ತಲ್ಲ, ಅಡಿಯಿಂದ ಮುಡಿಯುವರೆಗೂ, ಈ ಅವಸ್ಥೆ ಬೆಳೆಯುತ್ತಾ, ಬೆಳೆಯುತ್ತಾ ಇವತ್ತು ಹೆಚ್ಚಾಗಿದೆ ಎಂದು ಹೇಳಿದರೂ ತಪ್ಪಾಗದು. ಇನ್ನೊಂದು ಮಾತು ಈಗ ಕೇಳಿಬರುತ್ತಾ ಇದೆ, ಏನೆಂದರೆ, ಹಿಂದೆ ಲಂಚ ತೆಗೆದುಕೊಂಡರೂ ಕೆಲಸ ಮಾಡುತ್ತಿದ್ದರು, ಇವತ್ತು ಲಂಚ ಕೊಟ್ಟರೂ ಕೆಲಸ ಆಗುವುದಿಲ್ಲ ಎಂಬ ಸಂಶಯ ಜನಸಾಮಾನ್ಯರಿಗೆ ಬಂದಿದೆ. ಇದು ನಾನು ಯಾರನ್ನೋ ನೋಡಿ ಟೀಕೆ ಮಾಡುವುದಿಲ್ಲ. ಜನರ ಭಾವನೆಯಲ್ಲಿ ಈ ಒಂದು ಕಲ್ಪನೆ ಬೆಳೆದು ಬಂದಿದೆ. ಏಕೆಂದರೆ ಯಾವ ಕೆಲಸವೂ ಸುಲಲಿತವಾಗಿ ನಡೆಯುವುದಿಲ್ಲ. ಉದಾಹರಣೆಗೆ ಹೇಳುವುದಾದರೆ, ಇವತ್ತು ನಮ್ಮ ರಾಜ್ಯದಲ್ಲಿ ಮುಖ್ಯವಾಗಿ ವ್ಯವಸಾಯ ಮತ್ತು ಕೈಗಾರಿಕೆಗಳು. ಈ ವ್ಯವಸಾಯಕ್ಕೆ ಹೆಚ್ಚು ಆದ್ಯತೆ ಕೊಟ್ಟಿದ್ದೇವೆ, ಕೈಗಾರಿಕೆಗೆ ಹೆಚ್ಚು ಆದ್ಯತೆ ಕೊಟ್ಟಿದ್ದೇವೆ ಎಂದು ಹೇಳುತ್ತಾರೆ. ಮಾನ್ಯ ಕೈಗಾರಿಕಾ ಮಂತ್ರಿಗಳು, ಹಿಂದೆ ಇದ್ದ ಕೈಗಾರಿಕಾ ಮಂತ್ರಿಗಳು, ರಾಜ್ಯದಲ್ಲಿ ತಿಂಗಳಿಗೆ ಒಂದು ಸಾವಿರ ಕೈಗಾರಿಕೆಗಳನ್ನು ಪ್ರಾರಂಭ ಮಾಡಿದ್ದೇವೆಂದು ಹೇಳಿದರು. ತಿಂಗಳಿಗೆ ಒಂದು ಸಾವಿರ ಕೈಗಾರಿಕೆಗಳು ಪ್ರಾರಂಭವಾಗುತ್ತವೆ, ಇವುಗಳಲ್ಲಿ ಎಷ್ಟು ಕೈಗಾರಿಕೆಗಳು ನಡೆಯುತ್ತವೆ, ಎಷ್ಟು ಕೈಗಾರಿಕೆಗಳು ಮುಚ್ಚುತ್ತವೆ ಎಂಬುದು ಮುಖ್ಯ. ಸರ್ಕಾರ ಈ ಕೈಗಾರಿಕೆಗಳಿಗೂ ನಮಗೂ ಏನೂ ಸಂಬಂಧ ಇಲ್ಲ, ಎಂದು ಕುಳಿತಿರುವಂತಿದೆ. ದೇಶದಲ್ಲಿರತಕ್ಕಂತ ನಾಲ್ಕು ಗ್ಲಾಸ್ ಕೈಗಾರಿಕೆಗಳಲ್ಲಿ, ಒಂದು ಕೈಗಾರಿಕೆ ಬೆಂಗಳೂರಿನಲ್ಲಿದೆ, ಅದು ಅಲೆಂಬಿಕ್ ಗ್ಲಾಸ್ ಫ್ಯಾಕ್ಟರಿ, ಇದರಿಂದ ಬೇಕಾದಷ್ಟು ಲಾಭ ಬರುತ್ತಿತ್ತು. ಅದು ಇವತ್ತಿನ ದಿವಸ ಮುಚ್ಚಿಹೋಗಿದೆ. ಟೆಕ್ಸ್‌ಟೈಲ್, ಬಟ್ಟೆ ತಯಾರು ಮಾಡತಕ್ಕಂಥ ಕೈಗಾರಿಕೆ

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಗಳು, ಈ ರಾಜ್ಯದಲ್ಲಿ ೧೦-೧೨ ಕೈಗಾರಿಕೆಗಳು ಮುಚ್ಚಿಹೋಗಿವೆ. ಇವೆಲ್ಲವೂ ಜನರಿಗೆ ಉದ್ಯೋಗ ಒದಗಿಸತಕ್ಕಂಥ ದೊಡ್ಡ ಕೈಗಾರಿಕೆಗಳು. ಜೊತೆಗೆ, ಇವತ್ತು ಒಂದು ಕೈಗಾರಿಕೆ ಸ್ಥಾಪನೆಯಾದರೆ, ಇನ್ನೊಂದು ಕೈಗಾರಿಕೆ ಮುಳುಗಿಯತಕ್ಕಂಥ ಪರಿಸ್ಥಿತಿಯಲ್ಲಿ ನಾವು ಎರಡು ಜನ ಇರುವುದರಿಂದ, ಹೊರಗಿನ ಜಗತ್ತಿನಲ್ಲಿ ಇವತ್ತು ನಮ್ಮ ಸ್ಥಿತಿ ಏನಾಗಿದೆ, ನಿರುದ್ಯೋಗ ಯಾವ ಮಟ್ಟಕ್ಕೆ ಬೆಳೆದಿದೆ, ನಿರುದ್ಯೋಗಿ ಯುವಕರು ಯಾವರೀತಿಯಲ್ಲಿ ಜೀವನ ಸಾಗಿಸುತ್ತಿದ್ದಾರೆ ಎಂಬುದನ್ನು ನಾವು ನೋಡಬೇಕಾಗಿದೆ. ಇವತ್ತು ದೊಡ್ಡ ಕೈಗಾರಿಕೆಗಳು ಮುಚ್ಚಿ ಹೋಗಿರುವುದರಿಂದ, ಉತ್ಪಾದನೆಗೆ ಅಷ್ಟೇ ಧಕ್ಕೆಯಾಗಿದೆ, ಉತ್ಪಾದನೆಗೆ ಧಕ್ಕೆಯಾಗಿರುವುದರಿಂದ ಅದರಿಂದ ಬರತಕ್ಕ ಕರ, ಟ್ಯಾಕ್ಸ್ ಸರ್ಕಾರಕ್ಕೆ ಬರಬೇಕಾದ ಹಣ ಎಷ್ಟು ಕೊರತೆಯಾಗಿದೆ ಕಡಿಮೆಯಾಗಿದೆ, ಇವನ್ನು ನಾವು ಇವತ್ತು ಯೋಚನೆ ಮಾಡುತ್ತಾ ಇಲ್ಲ. ಇವತ್ತು ಯಾವುದಕ್ಕೂ ಈ ಸರ್ಕಾರ ನಡೆಸುವುದಕ್ಕೆ ಹಣ ಇಲ್ಲ. ಅದಕ್ಕೆ ಹಣ ಇಲ್ಲ, ಇದಕ್ಕೆ ಹಣ ಇಲ್ಲ, ಸಂಬಳ ಕೊಡುವುದಕ್ಕೆ ಹಣ ಇಲ್ಲ. ಹಣ ಸರ್ಕಾರಕ್ಕೆ ಒದಗಬೇಕಾದರೆ, ಈ ದೊಡ್ಡ ದೊಡ್ಡ ಕೈಗಾರಿಕೆಗಳು ಇವತ್ತು ಸರಿಯಾದ ರೀತಿಯಲ್ಲಿ ನಡೆದು ಉತ್ಪಾದನೆಯನ್ನು ಹೆಚ್ಚು ಮಾಡಬೇಕು. ಅದರಿಂದ ಬರತಕ್ಕ ಹಣ ಇವತ್ತು ಕಡಿಮೆಯಾಗಿರುವುದರಿಂದ, ಇವತ್ತು ಸರ್ಕಾರಕ್ಕೆ ಇದೂ ಒಂದು ಕಾರಣ ಎಂದು ಹೇಳಿದರೆ ತಪ್ಪಾಗಲಾರದು. ಇವತ್ತು ರಾಜ್ಯದಲ್ಲಿ ದೊಡ್ಡ ದೊಡ್ಡ ಕೈಗಾರಿಕೆಗಳು ಬಹಳ ನಿಂತುಹೋಗಿವೆ. ನಾನು ನೇರವಾಗಿ ಟೆಕ್ಸ್‌ಟೈಲ್ ಕಾರ್ಮಿಕನಾಗಿ, ಕಾರ್ಮಿಕ ಸಂಘಟನೆಯ ಕಾರ್ಯಕರ್ತನಾಗಿ, ಈ ಕೈಗಾರಿಕೆಗಳನ್ನು ಪ್ರಾರಂಭ ಮಾಡಬೇಕೆಂದು ಸುಮಾರು ಒಂದು ವರ್ಷದಿಂದ ಸತತವಾಗಿ ಪ್ರಯತ್ನ ಮಾಡಿದೆ. ಆ ಪ್ರಯತ್ನ ಏನೂ ಫಲಕಾರಿ ಆಗಲಿಲ್ಲ ಎಂದರೆ, ಎಷ್ಟರಮಟ್ಟಿಗೆ ನಮ್ಮ ಆಡಳಿತ ವ್ಯವಸ್ಥೆ ಚುರುಕಾಗಿ ನಡೆಯುತ್ತಿದೆ ಎಂಬುದು ಗೊತ್ತಾಗುತ್ತದೆ. ಇವತ್ತು ಸಾವಿರಾರು ಕಾರ್ಮಿಕರು ನಿರುದ್ಯೋಗಿಗಳಾಗಿದ್ದಾರೆ, ಅವರು ಜೀವನ ನಡೆಸತಕ್ಕಂಥ ಸ್ಥಿತಿ ಕಂಗಾಲಾದುಸ್ಥಿತಿಯಾಗಿದೆ ಎನ್ನತಕ್ಕಂಥ ವಿಚಾರವನ್ನು ತಮ್ಮ ಗಮನಕ್ಕೆ ತರುವುದಕ್ಕಾಗಿ ಅನೇಕ ಹೋರಾಟ. ಹೋರಾಟ ಎಂದರೆ ಚಳುವಳಿ...... ನಮ್ಮ ಕರ್ನಾಟಕ ರಾಜ್ಯದಲ್ಲಿ ಇತ್ತೀಚಿನ ದಿವಸಗಳಲ್ಲಿ ದೊಡ್ಡ ದೊಡ್ಡ ಕೈಗಾರಿಕೆಗಳು ಮುಚ್ಚಿ ಹೋಗತಕ್ಕಂತ ಸಂಭವ ಹೆಚ್ಚಾಗಿದೆ. ಇವತ್ತು ಹತ್ತಿ ಬೆಳೆಯತಕ್ಕಂಥ ರೈತರು ಈ ಕೈಗಾರಿಕೆಗಳು ಟೆಕ್ಸ್‌ಟೈಲ್ ಮಿಲ್ಸ್ ನಡೆದರೆ ಅವರು ಬೆಳೆಯಕ್ಕಂಥ ಹತ್ತಿಯನ್ನು ಖರೀದಿಸುವುದಕ್ಕೆ ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಕೈಗಾರಿಕೆಗಳಿಗೆ ಹತ್ತಿಬೆಳೆಯತಕ್ಕಂಥ ರೈತರಿಗೆ ತೊಂದರೆಯಾಗುತ್ತದೆ. ಈ ರೀತಿ ಅನೇಕ ಜನರು ಕೈಗಾರಿಕೆಗಳನ್ನು ಮುಚ್ಚಿಕೊಂಡು ಹೋಗುತ್ತಿದ್ದಾರೆ. ಇಂತಹ ದೊಡ್ಡ ದೊಡ್ಡ ಕೈಗಾರಿಕೆಗಳು ಮುಚ್ಚಿಕೊಂಡು ಹೋಗುತ್ತಿದ್ದರೂ ಕೂಡ ನಮಗೇನು ಸಂಬಂಧವಿಲ್ಲ ಎನ್ನತಕ್ಕ ರೀತಿಯಲ್ಲಿ ಸರ್ಕಾರ ಇವತ್ತು ಕೈ ಕಟ್ಟಿಕೊಂಡು ಕುಳಿತುಕೊಂಡರೆ ಖಂಡಿತವಾಗಿ ಅದು ಸಾಧುವಲ್ಲ. ಅವರು ಸಹ ಕೈ ಕಟ್ಟಿಕೊಂಡು ಕುಳಿತುಕೊಂಡಿಲ್ಲ. ಅವರು ಮಾಡುವ ಪ್ರಯತ್ನ ಮಾಡುತ್ತಿದ್ದಾರೆ. ಅಷ್ಟು ಪ್ರಯತ್ನ ಮಾಡಿದರೂ ಕೂಡ ಅದೂ ಸತತವಾಗಿ ಒಂದು ವರ್ಷ ಪ್ರಯತ್ನ ಮಾಡಿದರೂ ಕೂಡ ಸಧ್ಯವಾಗಲಿಲ್ಲ. ಅದೊಂದು ಪ್ರಶ್ನೆ ಇರಲಿ. ಅದಷ್ಟು ಇಂತಹ ಕೈಗಾರಿಕೆಗಳನ್ನು ಪ್ರಾರಂಭಿಸುವುದಕ್ಕೆ ಇನ್ನು ಮುಂದಾದರೂ ಪ್ರಯತ್ನ ಮಾಡಬೇಕು. ನಿಮ್ಮಲ್ಲಿ ಅಧಿಕಾರ ವರ್ಗದವರು ಇದ್ದಾರೆ. ಇವತ್ತು ಇಂಡಸ್ಟ್ರೀ ಸೆಕ್ರೆಟರಿಗಳು ಇದ್ದಾರೆ. ಅವರು ಸರಿಯಾದಂತ ಕಾರ್ಯಕ್ರಮ ಕೈಗೊಳ್ಳಬೇಕೆಂದು ನಾನು ಸಲಹೆಗಳನ್ನು ಮಾನ್ಯ ಸಚಿವರಿಗೆ ಕೊಡುವುದರ ಮೂಲಕ ಕೈಗಾರಿಕೆಗಳ ಆಡಳಿತ ವರ್ಗದ ಮೇಲೆ ಶಿಸ್ತಿನ ಕ್ರಮ ಕೈಗೊಳ್ಳುವುದರ ಮುಖಾಂತರ ಇಂತಹ ಕೈಗಾರಿಕೆಗಳನ್ನು ಕೂಡಲೇ ಪ್ರಾರಂಭ ಮಾಡುವ ವ್ಯವಸ್ಥೆ ಸರ್ಕಾರದವರು ಮಾಡಬೇಕು. ಒಂದು ಕಡೆ ಸಹಕಾರಿ ಕೈಗಾರಿಕೆಗಳು ಇನ್ನೊಂದು ಕಡೆ ಸಕ್ಕರೆ ಕೈಗಾರಿಕೆಗಳು ಮುಚ್ಚಿ ಹೋಗುತ್ತಿವೆ. ಇದಕ್ಕೆ ತಾವು ಹಲವಾರು ಕಾರಣಗಳನ್ನು ಕೊಡಬಹುದು. ಆಡಳಿತ ವ್ಯವಸ್ಥೆ ಸರಿಯಾಗಿಲ್ಲ. ಅಲ್ಲಿ ಕಬ್ಬು ಇಲ್ಲ. ನೀರು ಇಲ್ಲ ಮುಂತಾದ ಎಲ್ಲಾ ಕಾರಣಗಳನ್ನು ತಾವು ಕೊಡಬಹುದು. ಕೋಟ್ಯಾಂತರ ರೂಪಾಯಿಗಳ ಬಂಡವಾಳ ಹೂಡಿರತಕ್ಕಂಥ ಕೈಗಾರಿಕೆಗಳು ಇವತ್ತು ಮುಚ್ಚಿ ಹೋಗುತ್ತಿರತಕ್ಕಂಥಾದ್ದಕ್ಕೆ ನಿಮ್ಮ ಕಾರ್ಯಕ್ರಮ ಏನು ? ಅಲ್ಲಿನ ಕಾರ್ಮಿಕರಿಗೆ ಏನು ವ್ಯವಸ್ಥೆ ಇದೆ ? ಅವರು ಹೇಗೆ ಜೀವನ ಸಾಗಿಸಬೇಕು ? ಅವರ ಆಡಳಿತ ವ್ಯವಸ್ಥೆ ಏನು ? ಇವೆಲ್ಲವನ್ನು ಕೂಡ ಸರ್ಕಾರದವರು ಯೋಚನೆ ಮಾಡಬೇಕಾಗುತ್ತದೆ. ಆದ್ದರಿಂದ ಇನ್ನು ಇದರ ಬಗ್ಗೆ ಇಷ್ಟು ಮಾತ್ರ ಹೇಳಿ ಕೈಗಾರಿಕೆಗಳು ಮುಚ್ಚಿರುವುದರಿಂದ ನಮ್ಮ ಸರ್ಕಾರದ ಬೊಕ್ಕಸಕ್ಕೆ ಬರಬೇಕಾದ ಹಣ ಬಹಳ ಕಡಿಮೆಯಾಗಿದೆ. ಅಂತ ಹೇಳುತ್ತಾ ವ್ಯಾಪಾರ ಮಾಡುವ ಜನರಿಂದ ಸರ್ಕಾರಕ್ಕೆ ಬರಬೇಕಾದ ಸಾವಿರಾರು ಕೋಟಿ ರೂಪಾಯಿಗಳನ್ನು ಬೇರೆಯವರು ಲಪಟಾಯಿಸುತ್ತಿರುವ ದಾಖಲೆಗಳು ನಾವು ಇವತ್ತು ಕಾಣಬಹುದು. ತಪ್ಪು ಲೆಕ್ಕಪತ್ರಗಳನ್ನು ಕೊಡುವುದರ ಮೂಲಕ ಸರ್ಕಾರಕ್ಕೆ ಬರತಕ್ಕಂಥ ಹಣವನ್ನು ಅವರು ದುರುಪಯೋಗ ಮಾಡಿಕೊಳ್ಳತಕ್ಕಂಥ ವ್ಯವಸ್ಥೆ ಇದೆ. ಈ ಕಡೆ ಸರ್ಕಾರದವರು

ಗಮನ ಕೊಡಬೇಕು. ಸರ್ಕಾರ ಕೊಡಬೇಕು, ಸರ್ಕಾರದ ಅಧಿಕಾರಿಗಳು ಕೊಡಬೇಕು. ಇಷ್ಟು ಹೇಳುತ್ತಾ ನಾನು ೧೯೭೮ನೇ ಇಸವಿಯಲ್ಲಿ ಶಾಸನಸಭಾ ಸದಸ್ಯನಾಗಿ ಚುನಾಯಿಸಿ ಬಂದೆ. ಆಗ ಶ್ರೀಮಾನ್ ದೇವರಾಜಅರಸುರವರು ಆಡಳಿತದಲ್ಲಿ ಇದ್ದರು. ಆಗ ನಿಜವಾಗಿಯೂ ಯಾವಾಗ ಬಂದರೂ ಯಾವುದೇ ಮಂತ್ರಿಗಳು ಆಫೀಸಿನಲ್ಲಿರುತ್ತಿದ್ದರು. ಮಂತ್ರಿಗಳು ಹೆಚ್ಚಿನ ವೇಳೆ ಆಫೀಸಿನಲ್ಲಿರುತ್ತಿದ್ದರು. ಅದೂ ಹೆಚ್ಚಿನ ವೇಳೆ ಕೊಠಡಿಗಳಲ್ಲಿ, ಕಚೇರಿಗಳಲ್ಲಿ ಇರುತ್ತಿದ್ದರು. ಆದರೆ ಈಗ ಬಹಳ ಕಷ್ಟ ಅದನ್ನು ಹೇಳಿದರೆ ತಮಗೆ ಬೇಸರವಾದರೂ ಪರವಾಗಿಲ್ಲ. ಇವತ್ತು ಮಂತ್ರಿಗಳ ಬಳಿ ಅನೇಕ ಜನ ಅನೇಕ ಸಮಸ್ಯೆಗಳನ್ನು ಪರಿಹಾರ ಮಾಡಿಕೊಳ್ಳುವುದಕ್ಕೆ, ಶಾಸಕರು ಬರಬಹುದು ಅಥವಾ ಬೇರೆ ಬೇರೆ ಕೆಲಸ ಕಾರ್ಯಗಳಿಗೆ ಬರಬಹುದು ಆದರೆ ಇವರ ಕೊಠಡಿಗಳಿಗೆ, ಕಚೇರಿಗಳಿಗೆ ಹೋಗಿ ನೋಡಿದರೆ ಇವರು ಇರುವುದಿಲ್ಲ ಆಗ ಬೇಸರದಿಂದ ಹೋಗಬೇಕಾಗುತ್ತದೆ. ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಸರಿಯಾದ ವ್ಯವಸ್ಥೆ ಮಾಡಬೇಕು, ಪ್ರತಿಯೊಬ್ಬ ಮಂತ್ರಿಗಳು ಕೂಡ ಆಫೀಸಿನಲ್ಲಿ ಇಂತಿಷ್ಟು ಕಾಲ ಇರಬೇಕೆಂದು ಅಥವಾ ಒಂದು ತಿಂಗಳಲ್ಲಿ ಇಂತಿಷ್ಟು ದಿವಸಗಳು ಆಫೀಸಿನಲ್ಲಿರಬೇಕೆಂದು ಎನ್ನುವ ಒಂದು ನಿರ್ಬಂಧ ಹಾಕಬೇಕು. ನಾನು ನೋಡುತ್ತಿದ್ದೇನೆ ಅನೇಕ ಜನ ಮಂತ್ರಿಗಳು ಊರಿನಲ್ಲಿದ್ದರೂ ಮನೆಗಳಲ್ಲಿರುತ್ತಾರೆ. ಆಫೀಸಿಗೆ ಬರುವುದಿಲ್ಲ. ಇಂತಹ ಒಂದು ವ್ಯವಸ್ಥೆಯನ್ನು ತಾವು ಸರಿ ಮಾಡಬೇಕು ಆಗ ಆಡಳಿತ ವ್ಯವಸ್ಥೆ ಸುಗಮವಾಗಿ ನಡೆಸುವುದಕ್ಕೆ ಸಾಧ್ಯವಾಗುತ್ತದೆ. ನನ್ನ ಸಲಹೆಯನ್ನು ತಾವು ಯಾವ ರೀತಿಯಲ್ಲಿ ಪರಿಗಣಿಸುತ್ತೀರೋ ಅದು ತಮಗೆ ಬಿಟ್ಟಿದ್ದು. ಇನ್ನು ಕಾರ್ಮಿಕರ ಬಗ್ಗೆ ರೈತರ ಬಗ್ಗೆ ಕೂಡ್ಲಿಗಿಯಲ್ಲಿ ರೈತ ಸಂಘದ ನಾಯಕನನ್ನು ೮ ಗಂಟೆಯಲ್ಲಿ ಹೊಡೆದಿದ್ದಾರೆ. ಇವತ್ತು ಏನಾಗಿದೆ ? ಯಾರು ಯಾರನ್ನು ಬೇಕಾದರೂ ಹೊಡೆದು ಹಾಕಬಹುದು. ಅಂಥಾ ಒಂದು ಪರಿಸ್ಥಿತಿ ಉಂಟಾಗಿದೆ. ಕೂಡ್ಲಗಿಯಲ್ಲಿ ತಮಗೆ ಗೊತ್ತಿದ್ದ ಹಾಗೆ ಅದು ಹಿಂದುಳಿದಿರತಕ್ಕ ಪ್ರದೇಶ. ಆ ಪ್ರದೇಶದಲ್ಲಿ ರೈತರಿಗಾಗಿ, ಸಾಮಾನ್ಯ ಜನರಿಗಾಗಿ ಇವತ್ತು ಕೆಲಸ ಮಾಡತಕ್ಕಂಥಾ ಒಬ್ಬ ಕೆ. ಬಿ. ಶಿವಶಂಕರ್ ಎಂಬ ರೈತ ಮುಖಂಡನಿಗೆ ಹೊಡೆದಿದ್ದಾರೆ. ಈ ಶಿವಶಂಕರ್ ಅವರನ್ನು ದಾವಣಗೆರೆ ಆಸ್ಪತ್ರೆಗೆ ಹಾಕಿದ್ದಾರೆಂದು ಈಗತಾನೇ ನಮಗೆ ಸುದ್ದಿ ಬಂತು. ಅಲ್ಲಿರತಕ್ಕ ಜನ ಸುಮ್ಮನೆ ಬಿಟ್ಟಿಲ್ಲ. ಕರ ಪತ್ರಗಳನ್ನು ಹಂಚಿ ಕೂಡ್ಲಗಿಯನ್ನು ಬಂದ್ ಮಾಡಿ ಇದರ ಬಗ್ಗೆ ಪ್ರತಿಭಟನೆ ಮಾಡಿದ್ದಾರೆ. ಹೊಡೆದಿರುವವರು ಯಾರು ? ಕರಪತ್ರದಲ್ಲಿ ತಿಳಿಸಿರುವ ಪ್ರಕಾರ ಜನತಾ ಪಕ್ಷಕ್ಕೆ ಸೇರಿದವರು ಹೊಡೆದಿದ್ದಾರೆಂದು ಇದರಲ್ಲಿ ತಿಳಿಸಲಾಗಿದೆ. ಮಾನ್ಯ ಅಧ್ಯಕ್ಷರೇ, ಈ ಕರ ಪತ್ರವನ್ನು ಮಾನ್ಯ ಮಂತ್ರಿವರ್ಯರಿಗೆ ಕಳುಹಿಸಿಕೊಡುತ್ತೇನೆ. ತಾವು ಸರಿಯಾದ ರೀತಿಯಲ್ಲಿ ಅನೇಕ ಚಳುವಳಿಗಳನ್ನು ಮಾಡಿದರು, ಮೆರವಣಿಗೆಗಳನ್ನು ಮಾಡಿದರು, ಉಪವಾಸ ಸತ್ಯಾಗ್ರಹ ಮಾಡಿದರು. ಜೈಲಿಗೆ ಹೋದರು, ಇವೆಲ್ಲವೂ ಕೂಡಾ ಸರಕಾರದ ಗಮನ ಸೆಳೆಯಬೇಕೆಂಬ ಉದ್ದೇಶದಿಂದ ಮಾಡಿದ್ದು. ಹಿಂದೆ ಮಹಾತ್ಮಾಜೀಯವರು ಕೂಡಾ ಬ್ರಿಟೀಷರ ಕಾಲದಲ್ಲಿ ಚಳುವಳಿ ಮಾಡುತ್ತಿದ್ದರು. ಉಪವಾಸ ಸತ್ಯಾಗ್ರಹ ಮಾಡುತ್ತಿದ್ದರು. ಬ್ರಿಟೀಷರಿಗೆ ತಕ್ಷಣ ಕನಿಕರ ಬರುತ್ತಿತ್ತು. ಮಹಾತ್ಮಾಗಾಂಧೀಜಿಯವರು ಉಪವಾಸ ಕುಳಿತಿದ್ದಾರೆ, ಅವರ ಬೇಡಿಕೆ ಏನು ಎಂದು ತಕ್ಷಣ ಹೋಗಿ ಕೇಳಿ, ಅವರ ಬೇಡಿಕೆಯನ್ನು ಈಡೇರಿಸಿ ಅವರ ಉಪವಾಸ ಸತ್ಯಾಗ್ರಹವನ್ನು ಬಿಡಿಸುತ್ತಿದ್ದರು. ಆದರೆ ಇವತ್ತು ಏನಾಗಿದೆ ? ಉಪವಾಸ ಸತ್ಯಾಗ್ರಹ ಕುಳಿತಿದ್ದಾರೆ ಎಂದು ಸರಕಾರಕ್ಕೆ ಗೊತ್ತಾದರೂ ಕೂಡಾ ಗೊತ್ತಾಗದಿರುವ ರೀತಿಯಲ್ಲಿ ನಡೆದುಕೊಳ್ಳುತ್ತಿದ್ದಾರೆ. ಏತಕ್ಕೆಂದರೆ ಅವರಿಗೆ ಇದರ ಬಗ್ಗೆ ಅಭಿಮಾನ ಇಲ್ಲ, ಸಾಯಲಿ ಎಂದು ಬಿಡುತ್ತಾರೆ. ಆದುದರಿಂದ ಇಂತಹ ಕೈಗಾರಿಕೆಗಳು ಮುಚ್ಚಿರುವುದರಿಂದ ಸರಕಾರದ ಬೊಕ್ಕಸಕ್ಕೆ ಬರತಕ್ಕಂಥ ಹಣ ಕೊರತೆಯಾಗಿದೆ. ಸರಕಾರಕ್ಕೆ ಬರತಕ್ಕಂಥ ಹಣ ಕೊರತೆಯಾಗಿರುವುದರಿಂದ ಸರಕಾರದಲ್ಲಿ ತೀವ್ರಗತಿಯಲ್ಲಿ ಯಾವುದೇ ಕಾರ್ಯಕ್ರಮ ಕೈಗೊಳ್ಳುವುದಕ್ಕೆ ಆಗುತ್ತಿಲ್ಲ. ಆದುದರಿಂದ ಈ ವ್ಯವಸ್ಥೆಯನ್ನು ಸರಿಪಡಿಸುವುದಕ್ಕೆ ಪ್ರಯತ್ನಿಸಬೇಕು. ಮಾನ್ಯ ಮುಖ್ಯಮಂತ್ರಿಗಳು ಇನ್ನೂ ಸ್ವಲ್ಪ ಹೊತ್ತು ಇಲ್ಲಿದ್ದರೆ ಚೆನ್ನಾಗಿತ್ತು. ಅವರು ಹೊರಟುಹೋದರು. ಇಲ್ಲೇನಾಗಿದೆ ಎಂದರೆ ನಮ್ಮಂಥ ಸಾಮಾನ್ಯ ಜನ ಮಾತನಾಡಿದರೆ ಅದು ಯಾವ ಲೆಕ್ಕಕ್ಕೂ ಇಲ್ಲ. ಮುಂದಿನ ಸಾಲಿನವರು ಮಾತನಾಡಿದರೆ ಅದು ದೇವಲೋಕದಿಂದ ಬಂದಂಥ ಮಾತು. ಇದು ಹತ್ತು ವರ್ಷದಿಂದ ನಾವು ನೋಡಿರುವುದು ಅನುಭವಿಸಿರುವುದು. ಮುಂದಿನ ಸಾಲಿನಲ್ಲಿ ಮಾತನಾಡಿದ್ದು ದೇವಲೋಕದಿಂದ ಬಂದ ಅದೃಶ್ಯವಾಣಿ.

ಪ್ರೊ॥ ಎ. ಲಕ್ಷ್ಮೀಸಾಗರ್.—ಮಾನ್ಯ ಪಂಪಾಪತಿಯವರು ಹಿರಿಯ ಸದಸ್ಯರು. ಈ ಸಭೆಯಲ್ಲಿ ಇರತಕ್ಕಂಥ ಸನ್ಮಾನ್ಯ ಸದಸ್ಯರೆಲ್ಲರಿಗೂ ಒಂದೇ ವಿಧವಾದ ಗೌರವ ಸ್ಥಾನ ಇದೆ. ಅವರು ಹೇಳತಕ್ಕಂಥ ಮಾತಿಗೂ ಅಷ್ಟೇ ವಿಧವಾದ ತೂಕ ಮರ್ಯಾದೆ ಇದೆ. ಸನ್ಮಾನ್ಯ ಪಂಪಾಪತಿಯವರು ಹೇಳುವ ಮಾತಿಗೆ ಸ್ವಲ್ಪ ಜಾಸ್ತಿ ಇದೆ. ಅದೇ ರೀತಿ ಕೆ. ಹೆಚ್. ಪಾಟೀಲರು ಹೇಳುವ ಮಾತಿಗೂ

ಇದೆ. ನಾವು ಹಿರಿಯ ಸದಸ್ಯರು ಅನುಭವ ಇದೆ. ಮಾನ್ಯ ಮುಖ್ಯಮಂತ್ರಿಗಳು ಊಟಕ್ಕೆ ಹೋಗಿದ್ದಾರೆ.

ಶ್ರೀ ಪಂಪಾಪತಿ.—ನೀವು ನಮ್ಮ ಬಗ್ಗೆ ಎಷ್ಟು ಅಭಿಮಾನ ಇಟ್ಟುಕೊಂಡಿದ್ದೀರಿ. ಅದಕ್ಕೆ ನಾನು ತಮಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಏತಕ್ಕೆಂದರೆ ನಾವು ಹೆಚ್ಚು ಕೇಳುವುದಕ್ಕೆ ಹೋಗದೆ ಇದ್ದರೂ, ಹೆಚ್ಚು ತಿಳಿದುಕೊಳ್ಳದಿದ್ದರೂ, ಜನಸಾಮಾನ್ಯರ ಸಮಸ್ಯೆ ಏನು ಎಂಬುದು ನಮಗೆ ಚೆನ್ನಾಗಿ ಅರಿವಾಗಿದೆ, ಅದನ್ನು ನಿಮಗೆ ತಿಳಿಸಬೇಕೆಂಬುದೇ ನಮ್ಮ ಉದ್ದೇಶ, ಬೇರೆ ಏನಿಲ್ಲ. ಇವತ್ತು ಇಷ್ಟೊಂದು ಕೈಗಾರಿಕೆಗಳು ಮುಚ್ಚಿರುವಾಗ ಅವುಗಳನ್ನು ಪ್ರಾರಂಭ ಮಾಡಬೇಕು. ಡಾಲ್ಮಿನ್ ಎಂಬ ಕಾಗದ ತಯಾರು ಮಾಡತಕ್ಕ ಕಾರ್ಖಾನೆ ಮುಚ್ಚಿ ಹೋಗಿದೆ. ಅದನ್ನು ಪ್ರಾರಂಭ ಮಾಡಬೇಕು. ಕೆಲಸಗಾರರಿಗೆ ಸಂಬಳ ಕೊಡಿಸಬೇಕು. ಬೇರೆಯವರು ಅದನ್ನು ನಡೆಸುವುದಕ್ಕೆ ತಯಾರಾಗಿದ್ದಾರೆ. ಆ ಬಗ್ಗೆ ಸರಕಾರ ಏನು ಕ್ರಮ ಕೈಗೊಂಡಿದೆ. ಏತಕ್ಕೆ ಕೈಗೊಳ್ಳಲಿಲ್ಲ ಎಂದು ಕೇಳಿದರೆ ಅದೇನೂ ತಪ್ಪಾಗುವುದಿಲ್ಲ. ಅದೇ ನಮ್ಮ ಅಲೆಂಬಿಕ್ ಗ್ಲಾಸ್ ಫ್ಯಾಕ್ಟರಿ ಮುಚ್ಚಿದೆ, ಬೇಕಾದಷ್ಟು ಜಮೀನು ಅದಕ್ಕೆ ಇದೆ. ಗ್ಲಾಸ್ ತಯಾರು ಮಾಡತಕ್ಕ ಒಳ್ಳೆಯ ಕೈಗಾರಿಕೆ. ಅದನ್ನೂ ಬೇರೆಯವರು ನಡೆಸುವುದಕ್ಕೆ ತಯಾರಾಗಿದ್ದಾರೆ. ಸರಕಾರ ಏನು ಕ್ರಮ ಕೈಗೊಂಡಿದೆ, ಏಕೆ ಕ್ರಮ ಕೈಗೊಳ್ಳಲಿಲ್ಲ. ಮಾನ್ಯ ಕೈಗಾರಿಕಾ ಮಂತ್ರಿಗಳು ಕೆಟ್ಟಿರುವುದನ್ನೆಲ್ಲಾ ತೆಗೆದುಕೊಳ್ಳುವುದಕ್ಕೆ ಸರಕಾರ ಏನೂ ಗ್ಯಾರೇಜ್ ಅಲ್ಲ, ಕೆಟ್ಟಿರುವುದನ್ನೆಲ್ಲಾ ರಿಪೇರಿ ಮಾಡುವುದಕ್ಕೆ ಆಗುವುದಿಲ್ಲ ಎಂದರು. ಈ ರೀತಿ ಮಾತನಾಡುವುದಾದರೆ ಇದಕ್ಕೆ ಏನು ಅರ್ಥ. ಕಾರ್ಮಿಕ ಮಂತ್ರಿಗಳು ಪ್ರಾಮಾಣಿಕವಾದ ಪ್ರಯತ್ನ ಮಾಡುತ್ತಾರೆ. ಆದರೆ ಕೈಗಾರಿಕಾ ಮಂತ್ರಿಗಳಿಗೂ ಕಾರ್ಮಿಕ ಮಂತ್ರಿಗಳಿಗೂ ವ್ಯತ್ಯಾಸ ಇದೆ. ಕೈಗಾರಿಕಾ ಮಂತ್ರಿಗಳು ಇವತ್ತು ಕೈಗಾರಿಕೆ ನಡೆಸದೇ ಇರುವವರನ್ನು ಕರೆದು, ನೀವು ಕೈಗಾರಿಕೆಯನ್ನು ನಡೆಸುತ್ತೀರೋ ಇಲ್ಲವೋ. ನಡೆಸುವುದಕ್ಕೆ ಆಗುವುದಿಲ್ಲ ಎಂದರೆ ನಿಮ್ಮ ಕೈಗಾರಿಕೆಯನ್ನು ನಡೆಸುವುದಕ್ಕೆ ಬೇರೆ ರೀತಿಯಲ್ಲಿ ವ್ಯವಸ್ಥೆ ಮಾಡುತ್ತೇವೆ ಬೇರೆಯವರು ನಡೆಸುವುದಕ್ಕೆ ಏರ್ಪಾಡು ಮಾಡುತ್ತೇವೆ, ಅದಕ್ಕೆ ಬೇಕಾದಂಥ ಕಾನೂನು ತಿದ್ದುಪಡಿಯನ್ನು ತರುತ್ತೇವೆ ಎಂದು ಹೇಳಿದರೆ ಅವರಿಗೆ ಸ್ವಲ್ಪ ಭಯ ಬರಬಹುದು,

ಶ್ರೀ ಆರ್. ವೆಂಕಟರಾಮಯ್ಯ.—ನಮ್ಮ ಕೈಗಾರಿಕಾ ಮಂತ್ರಿಗಳು ಇಂಡಸ್ಟ್ರಿಯಲಿಸ್ಟ್‌ಗಳನ್ನು ಡಿಫೆಂಡ್ ಮಾಡುತ್ತಾರೆ.

೩-೧೦ ಪಿ. ಎಂ.

ಶ್ರೀ ಪಂಪಾಪತಿ.—ಕೈಗಾರಿಕೆಗಳು ಇವತ್ತು ಮುಚ್ಚಿ ಹೋಗುತ್ತಿವೆ. ದೊಡ್ಡ ದೊಡ್ಡ ಕೈಗಾರಿಕೆಗಳನ್ನು ಉಳಿಸುವುದರ ಜೊತೆಗೆ ಸಣ್ಣ ಸಣ್ಣ ಕೈಗಾರಿಕೆಗಳನ್ನು ತಂದರೆ ಸಂತೋಷ. ಸಣ್ಣ ಕೈಗಾರಿಕೆಗಳನ್ನು ಪ್ರಾರಂಭಮಾಡಿ ಇನ್ನೊಂದು ಕಡೆ ದೊಡ್ಡ ದೊಡ್ಡ ಕೈಗಾರಿಕೆಗಳಿಗೆ ಹೆಚ್ಚು ಪ್ರೋತ್ಸಾಹ ಕೊಡಿ. ಆಗ ಆ ಕೈಗಾರಿಕೆಗಳಲ್ಲಿ ಕೆಲಸ ಮಾಡತಕ್ಕಂಥ ಸಾವಿರಾರು ಜನ ಕೆಲಸಗಾರರಿಗೆ ಅನುಕೂಲವಾಗುತ್ತದೆ. ಇಲ್ಲದಿದ್ದರೆ ಸಾವಿರಾರು ಜನ ಕೆಲಸಗಾರರಿಗೆ ಈ ಕೈಗಾರಿಕೆಗಳು ಮುಚ್ಚುವುದರಿಂದ ತೊಂದರೆಯಾಗುತ್ತದೆ. ಎಷ್ಟು ಸಣ್ಣ ಕೈಗಾರಿಕೆಗಳನ್ನು ತೆಗೆದರೂ ಅದು ಪ್ರಯೋಜನವಾಗುವುದಿಲ್ಲ. ಈಗ ಕೆಲವರು ೨-೩ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿರುತ್ತಾರೆ. ನಾವು ಖರ್ಚು ಮಾಡಿರುವ ವಿಚಾರದಲ್ಲಿ ಯಾರೇ ಬೇಕಾದರೂ ದಾವಣಗೆರೆಯಲ್ಲಿ ಬಂದು ಕೇಳಿದರೆ ಗೊತ್ತಾಗುತ್ತದೆ. ಇಲ್ಲಿ ನನ್ನನ್ನು ಕೇಳಿದರೆ ನಾನು ಸುಳ್ಳು ಹೇಳುತ್ತಿದ್ದೇನೆ ಎಂದು ತಿಳಿದುಕೊಳ್ಳಬಹುದು. ನಾನು ೩೫ ಸಾವಿರ ರೂ.ಗಳ ಒಳಗೆ ಖರ್ಚು ಮಾಡಿದ್ದೇನೆ. ಏಕೆಂದರೆ ಹೆಚ್ಚಿಗೆ ಖರ್ಚು ಮಾಡಲು ನಮ್ಮ ಹತ್ತಿರ ಹಣವೇ ಇಲ್ಲ. ನಾವು ಆರಿಸಿ ಬರಲೇ ಬೇಕೆಂಬ ಉದ್ದೇಶವನ್ನೂ ಕೂಡ ಇಟ್ಟುಕೊಂಡಿರುವವರು ಅಲ್ಲ. ನಮ್ಮ ಕಾರ್ಮಿಕ ವರ್ಗದವರು ನಮಗೆ ಒಂದು ರೂಪಾಯಿ, ಎರಡು ರೂಪಾಯಿಗಳನ್ನು ಕೊಡುತ್ತಾರೆ. ನಾವು ಅವರಲ್ಲಿ ಮೊದಲೇ ಕೇಳುತ್ತೇವೆ, ನೋಟು ಕೊಡಿ ಮತ್ತು ಓಟು ಕೊಡಿ ಎಂದು. ಅವರು ನಮಗೆ ನೋಟು ಕೊಟ್ಟು ಓಟು ಕೊಡುತ್ತಾರೆ. ಆದುದರಿಂದ ದಯಮಾಡಿ ನಮ್ಮ ಯೋಚನೆ ಮಾಡಬೇಡಿ. ಒಟ್ಟಿನಲ್ಲಿ ಈ ಒಂದು ವ್ಯವಸ್ಥೆಯಲ್ಲಿ ಬದಲಾವಣೆಯನ್ನು ತರುವುದಕ್ಕೆ ಪ್ರಯತ್ನ ಮಾಡಿ ಎಂದು ಹೇಳ ಬಯಸುತ್ತೇನೆ.

ಶ್ರೀ ಪಟವುಕ್ಕಿ ರತ್ನಾಕರ್.—ಮಾನ್ಯ ಅಧ್ಯಕ್ಷರೆ, ನಮ್ಮ ಮಾನ್ಯ ಮುಖ್ಯ ಮಂತ್ರಿಯವರು ಒಂದು ಪುಸ್ತಕವನ್ನು ಬರೆದಿದ್ದಾರೆ. ಅದರ ಹೆಸರು ಚುನಾವಣೆ ಸುಧಾರಣೆಗಳು ಎಂದು ಇದೆ. ಅದರಲ್ಲಿ ಮಾನ್ಯ ಪಂಪಾಪತಿಯವರು ಹೇಳಿರುವ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ.

ಆದುದರಿಂದ ಮಾನ್ಯ ಮುಖ್ಯ ಮಂತ್ರಿಯವರು ಉತ್ತರವನ್ನು ಕೊಡತಕ್ಕಂಥ ಸಂದರ್ಭದಲ್ಲಿ ಮಾನ್ಯ ಪಂಪಾಪತಿಯವರ ಭಾವನೆಗಳನ್ನು ಅರ್ಥಮಾಡಿಕೊಂಡು ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ಪುಸ್ತಕದಲ್ಲಿ ಏನು ಭಾವನೆಗಳನ್ನು ಹರಿಯ ಬಿಟ್ಟಿದ್ದಾರೆ ಅವೆರಡನ್ನೂ ಸೇರಿಸಿ ಒಂದು ಉತ್ತರವನ್ನು ಕೊಡಬೇಕೆಂದು ಮಾನ್ಯ ಲಕ್ಷ್ಮೀಸಾಗರ್‌ರವರ ಮೂಲಕ ಹೇಳಬಯಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಪಂಪಾಪತಿಯವರು ಅದೇ ಮಾತನ್ನು ಹೇಳಿದರು. ದೊಡ್ಡವರು ಮಾತನಾಡುವಾಗ ಮಾನ್ಯ ಮುಖ್ಯ ಮಂತ್ರಿಯವರು ಇರುತ್ತಾರೆ, ನಾವೆಲ್ಲರೂ ಸಣ್ಣವರು ಎಂದು ದುಃಖದಿಂದ ಹೇಳಿದರು. ಈ ಮನೆಗೆ ಪ್ರಜೆಗಳಿಂದ ಆರಿಸಿಬರತಕ್ಕಂಥ ಪ್ರತಿಯೊಬ್ಬರೂ ದೊಡ್ಡವರಾಗಿರುತ್ತಾರೆ. ಆದರೂ ನಾನು ಒಂದು ವ್ಯತ್ಯಾಸವನ್ನು ಹೇಳಿದ್ದೇನೆ. ಅವರವರ ವ್ಯಕ್ತಿತ್ವದಿಂದ ಹೆಚ್ಚು ಕಾಲ ಈ ಸಭೆಯಲ್ಲಿ ಸೇವೆ ಮಾಡಿರತಕ್ಕಂಥ ಕೆಲವರಿಗೆ ನಾವು ಜಾಸ್ತಿ ಗೌರವ ಕೊಡುತ್ತೇವೆ. ಅಂತಹವರಲ್ಲಿ ಮಾನ್ಯ ಪಂಪಾಪತಿಯವರು, ಮಾನ್ಯ ಕೆ. ಹೆಚ್. ಪಾಟೀಲರವರು ಬರುತ್ತಾರೆ ಎಂದು ಹೇಳಿದ್ದೇನೆ. ಮಾನ್ಯ ಸದಸ್ಯರುಗಳು ಹೇಳಿದ ಪ್ರತಿಯೊಂದು ಮಾತನ್ನೂ ಕೂಡ ನಾನು ಬರೆದುಕೊಳ್ಳುತ್ತಿದ್ದೇನೆ ಮತ್ತು ನಮ್ಮ ಕಾರ್ಯದರ್ಶಿಯವರು, ಚೀಫ್ ಸೆಕ್ರೆಟರಿಯವರು ಎಲ್ಲರೂ ಇಲ್ಲಿ ಇದ್ದಾರೆ. ಅವರೂ ನೋಟ್ ಮಾಡಿಕೊಳ್ಳುತ್ತಾರೆ. ನಾನೇನೂ ಶೀಘ್ರಲಿಪಿಗಾರನಲ್ಲ. ಮಾನ್ಯರು ಹೇಳಿದ ಹಾಗೆ ಚಿತ್ರಗುಪ್ತನ ಕೆಲಸವನ್ನು ಮಾಡುತ್ತಿದ್ದೇನೆ, ವಕೀಲನಾಗಿ ಆ ಕೆಲಸವನ್ನು ಮಾಡುತ್ತಿದ್ದೇನೆ. ಒಟ್ಟಿನಲ್ಲಿ ಅವರು ಎತ್ತಿದ ಪ್ರತಿಯೊಂದು ವಿಷಯಕ್ಕೆ ಪೂರ್ಣವಾದಂಥ, ಜವಾಬ್ದಾರಿಯುತವಾದಂಥ ಸಮಜಾಯಿಷಿಯುಕ್ತವಾದಂಥ ಹಾಗೂ ಅವರ ಮನಸ್ಸಿಗೆ ಒಪ್ಪಿಗೆಯಾಗತಕ್ಕಂಥ ರೀತಿಯಲ್ಲಿ ಪೂರ್ಣ ಪ್ರಮಾಣದಲ್ಲಿ ಉತ್ತರವನ್ನು ಕೊಡಿಸಲಿಕ್ಕೆ ಪ್ರಾಮಾಣಿಕವಾದ ಪ್ರಯತ್ನ ನಡೆಯುತ್ತದೆ ಎಂದು ಹೇಳ ಬಯಸುತ್ತೇನೆ.

ಶ್ರೀ ಪಟವಾಕ್ಕಿ ರತ್ನಾಕರ್.—ಮಾನ್ಯ ಲಕ್ಷ್ಮೀಸಾಗರ್‌ರವರು ಬರೇ ಲಕ್ಷ್ಮೀಸಾಗರ್ ಅಲ್ಲ. ಅವರು ಪ್ರೊಫೆಸರ್ ಲಕ್ಷ್ಮೀಸಾಗರ್ ಆಗಿದ್ದಾರೆ. ಅವರು ಮಾನ್ಯ ಸದಸ್ಯರಾದ ಪಂಪಾಪತಿಯವರು ಮತ್ತು ಕೆ. ಹೆಚ್. ಪಾಟೀಲರವರ ಮಾತುಗಳಿಗೆ ಹೆಚ್ಚು ತೂಕ ಇದೆ ಎಂದು ಹೇಳಿದ್ದಾರೆ. ಹಾಗಾದರೆ ನಿಮ್ಮ ದೃಷ್ಟಿಯಲ್ಲಿ ನಮ್ಮಂಥ ಯುವಕರ ಬಗ್ಗೆ ಏನು ಹೇಳುತ್ತೀರಿ?

ಶ್ರೀ ಎ. ಲಕ್ಷ್ಮೀಸಾಗರ್.—ನಮಗೆ ಈ ಸದನದ ಎಲ್ಲಾ ಸದಸ್ಯರ ಬಗ್ಗೆಯೂ ಗೌರವ ಇದೆ. ಮಾನ್ಯ ಟಿಕ್ಕಪ್ಪನವರ ಬಗ್ಗೆಯೂ ಇದೆ. ಮಾನ್ಯ ಪಟವಾಕ್ಕಿಯವರ ಬಗ್ಗೆಯೂ ಗೌರವ ಇದೆ. ನಮ್ಮ ಕೈಯಲ್ಲಿ ಐದು ಬೆರಳುಗಳೂ ಒಂದು ತೆರನಾಗಿ ಉದ್ದವಾಗಿಲ್ಲ. ಆದರೂ ಕೂಡ ಪ್ರತಿಯೊಂದೂ ಉಪಯೋಗಕ್ಕೆ ಬರುತ್ತದೆ. ಏಕಲವ್ಯನಿಗೆ ಒಂದು ಬೆರಳು ಹೋದ ಕಾರಣದಿಂದಾಗಿ ಬಾಣ ಬಿಡಲು ಬರಲಿಲ್ಲ. ಇದು ನಾನು ಮಾಡಿಲ್ಲ, ದೈವ ಸೃಷ್ಟಿಯಲ್ಲಿದೆ ಎಂದು ಹೇಳ ಬೇಕಾಗುತ್ತದೆ.

ಶ್ರೀ ಪಂಪಾಪತಿ.—ಅಧ್ಯಕ್ಷರೆ, ಜಿಲ್ಲಾ ಆಡಳಿತ ಬಗ್ಗೆ ನಾವು ಏನನ್ನೂ ಹೇಳಬೇಕಾಗಿಲ್ಲ. ಈಗ ಜಿಲ್ಲಾ ಪರಿಷತ್ತು ಬಂದಿದೆ. ಮಂಡಲ್ ಪಂಚಾಯತ್ ಬಂದಿದೆ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೆ, ಇಲ್ಲಿಯವರೆಗೆ ಮಾನ್ಯ ಸದಸ್ಯರುಗಳು ಏನೇನು ಮಾತನಾಡಿದ್ದಾರೆ ಅಷ್ಟನ್ನೂ ಕೂಡ ನಾನು ಕೇಳಿದ್ದೇನೆ. ಅವರು ಮಾತನಾಡಿದ ಧಾಟಿಯನ್ನು ನಾನು ಕಣ್ಣಲ್ಲಿ ನೋಡಿದ್ದೇನೆ. ಆದುದರಿಂದ ಮಾನ್ಯರು ದೊಡ್ಡವರು ಮಾತನಾಡುವಾಗ ಮಾತ್ರ ನಾನು ಇಲ್ಲಿ ಇರುತ್ತೇನೆ ಎಂದು ತಿಳಿಯುವುದು ಬೇಡ. ಮಾನ್ಯ ಪಂಪಾಪತಿಯವರು ಕಾರ್ಲ್‌ಮಾರ್ಕ್ಸ್‌ನ ರೀತಿಯಲ್ಲಿ ಕಾಣುತ್ತಾರೆ ಎಂದು ನಾನು ಮೊನ್ನೆ ಹೇಳಿದ್ದೇನೆ.

ಶ್ರೀ ಪಂಪಾಪತಿ.—ನಾನು ಗಡ್ಡ ಬಿಟ್ಟಿರುವುದು ಏಕೆಂದರೆ ನಮ್ಮ ಜನರಿಗೆ ಮುಖ ತೋರಿಸುವುದು ನಾಚಿಕೆಯಾಗಿರುವುದರಿಂದ ಹೊರತು ಮಾರ್ಕ್ಸ್ ತರಹ ಕಾಣಬೇಕೆಂದಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಗಡ್ಡದಿಂದ ಮುಖ ಮರೆಸಿಕೊಳ್ಳಬಹುದೆಂದು ನನಗೆ ಇವತ್ತು ಗೊತ್ತಾಯಿತು.

ಶ್ರೀ ಆರ್. ವೆಂಕಟರಾಮಯ್ಯ.—ಅವರು ಗಡ್ಡ ಬಿಟ್ಟಿರುವುದಕ್ಕೆ ಒಂದು ಕಾರಣ ಇದೆ. ಅದೇನೆಂದರೆ ದಾವಣಗೆರೆ ಮಿಲ್ ಮುಚ್ಚಿದ್ದಾರೆ, ಅದು ಓಪನಾಗುವವರೆಗೂ ಅಲ್ಲಿನ ನೌಕರರಿಗೆ ಮುಖ ತೋರಿಸುವುದಕ್ಕಾಗುವುದಿಲ್ಲ ಎಂದು.

ಶ್ರೀ ಪಟಮಕ್ಕಿ ರತ್ನಾಕರ್.—ನಮ್ಮ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆಯವರು ಗಡ್ಡ ಬಿಟ್ಟಿರುವುದು ಏಕೆ?

ಶ್ರೀ ರಾಮಕೃಷ್ಣ ಹೆಗಡೆ.—ನಾನು ಎಮರ್ಜೆನ್ಸಿ ಅವಧಿಯಲ್ಲಿ ಸೆರೆಮನೆಗೆ ಹೋದಾಗ ಅಲ್ಲಿಂದ ಹೊರಗಡೆ ಬರುವವರೆಗೂ ಗಡ್ಡ ಬೋಳಿಸುವುದಿಲ್ಲ ಎಂದು ಬಿಟ್ಟಿದ್ದೆ. ಹೊರಗಡೆ ಬಂದ ಮೇಲೆ ಕೆಲವರು ಇರಲಿ ಬಿಡಿ ಎಂದರು. ಅಂದಿನಿಂದ ಕಂಟಿನ್ಯೂ ಆಗುತ್ತಿದೆ.

ಶ್ರೀ ಪಂಪಾಪತಿ.—ಜಿಲ್ಲಾಪರಿಷತ್ತುಗಳ ವೈಖರಿ ಬಗ್ಗೆ ಪ್ರಶ್ನೆ ಏನೂ ಇಲ್ಲ. ಅವಕ್ಕೇ ಪ್ರತ್ಯೇಕವಾದ ಆಡಳಿತ ವ್ಯವಸ್ಥೆ ಇದೆ, ಕಾರ್ಯದರ್ಶಿಗಳಿದ್ದಾರೆ, ಮಾಡಿಕೊಳ್ಳುತ್ತಾರೆ. ಆದರೆ ಜಿಲ್ಲಾಧಿಕಾರಿಗಳ ಮೇಲೆ ಜವಾಬ್ದಾರಿ ಹೆಚ್ಚಿರುವುದಿದೆ. ಏಕೆಂದರೆ ಅನೇಕ ಕಡೆ ಅಲ್ಪ ಸಂಖ್ಯಾತರು ಮತ್ತು ಪರಿಶಿಷ್ಟ ಜಾತಿ ಮತ್ತು ವರ್ಗಗಳ ಮೇಲೆ ಧಾಳಿ ನಡೆಯುತ್ತಿದೆ. ಉದಾಹರಣೆಗೆ ಮೊನ್ನೆ ಹೊಸದುರ್ಗದಲ್ಲಿ ನಡೆದಿದೆ. ಎಷ್ಟೋ ನಡೆದಿರುತ್ತದೆ, ಕೆಲವು ಮಾತ್ರ ನಮಗೆ ಗೊತ್ತಾಗುತ್ತವೆ, ಮಿಕ್ಕವು ಗೊತ್ತು ಆಗುವುದಿಲ್ಲ. ಅಂತಹ ದುರ್ಬಲ ವರ್ಗದವರಿಗೆ ಹೆಚ್ಚಿನ ರಕ್ಷಣೆ ಕೊಡುವ ವ್ಯವಸ್ಥೆಯಾಗಬೇಕು ಏಕೆಂದರೆ ಜಿಲ್ಲೆಗಳಲ್ಲಿ ಜಿಲ್ಲಾಧಿಕಾರಿಗಳು ವಿಭಾಗಾಧಿಕಾರಿಗಳು ತಹಸೀಲ್ದಾರ್ ಎಲ್ಲಾ ಇರುತ್ತಾರೆ. ಅವರೆಲ್ಲರೂ ಜವಾಬ್ದಾರಿ ವಹಿಸಿ ಸಾಮಾನ್ಯ ಜನರಿಗೆ ರಕ್ಷಣೆ ಒದಗಿಸುವ ವ್ಯವಸ್ಥೆಯಾಗಬೇಕು.

ಪೋಲಿಸರ ಬಗ್ಗೆ ಹೆಚ್ಚು ಹೇಳಬೇಕಾಗಿಲ್ಲ. ಅವರಲ್ಲಿ ಒಳ್ಳೆಯವರು ಕೆಟ್ಟವರು ಇಬ್ಬರೂ ಇದ್ದಾರೆ. ಕೆಟ್ಟವರು ಯಾರೋ ಒಬ್ಬರು ತಪ್ಪು ಮಾಡುವುದರಿಂದ ಇಡೀ ಇಲಾಖೆಯ ಮೇಲೆ ಕಳಂಕ ಬರುತ್ತದೆ. ಇಡೀ ರಾಜ್ಯಕ್ಕೆ ಕೆಟ್ಟ ಹೆಸರು ಬರುತ್ತದೆ. ಉದಾಹರಣೆಗೆ ರಶೀದರ ಪ್ರಕರಣ, ಮೊನ್ನೆ ಲಾಕಪಿನಲ್ಲಿ ಒಬ್ಬ ಸತ್ತು ಹೋದದ್ದು—ಇವನ್ನೆಲ್ಲಾ ನೋಡಿದರೆ ಯಾರೋ ಕೆಲವರು ಮಾಡಿದ ತಪ್ಪು ಇಲಾಖೆಗೆ ತನ್ಮೂಲಕ ಸರ್ಕಾರಕ್ಕೇ ಕೆಟ್ಟ ಹೆಸರು ಬರುತ್ತದೆ. ಅದು ಆಗದಂತೆ ನೋಡಿಕೊಳ್ಳಬೇಕು. ಪೋಲಿಸರೂ ಕೂಡ ಎಲ್ಲರಿಗೂ ಒಂದೇ ರೀತಿ ನಡೆದುಕೊಳ್ಳುವುದಕ್ಕಾಗುವುದಿಲ್ಲ. ಕಳ್ಳರಿರುತ್ತಾರೆ, ದರೋಡೆಕಾರರಿರುತ್ತಾರೆ, ಪಿಕ್‌ಪಾಕೆಟ್ ಮಾಡಿರುವವರಿರುತ್ತಾರೆ, ಅಂತಹವರ ಮೇಲೆಲ್ಲಾ ಯಾವ್ಯಾವ ಕಾನೂನು ಕ್ರಮ ಜರುಗಿಸಬೇಕೋ ಅದನ್ನು ಮಾಡಬೇಕು. ಆದರೆ ಸಾಮಾನ್ಯ ಜನ ವಿದ್ಯಾರ್ಥಿಗಳು, ಬಡ ಜನರಿಗಾಗಿ ಕೆಲಸ ಮಾಡುವ ನಾಯಕರ ಮೇಲೆಲ್ಲ ಪೋಲಿಸರ ಕೆಟ್ಟ ದೃಷ್ಟಿ ಅವರನ್ನು ಮೋಸಗೊಳಿಸುವ ವ್ಯವಸ್ಥೆ ಕೆಲವು ಕಡೆ ನಡೆಯುತ್ತಿದೆ. ಅದು ತಪ್ಪಬೇಕು. ಮತ್ತು ಕಾರ್ಮಿಕರ ಸಮಸ್ಯೆಗಳು ಬಂದಾಗ ಅದನ್ನು ಬಗೆಹರಿಸುವುದಕ್ಕೆ ಕಾರ್ಮಿಕ ಇಲಾಖೆ ಮುಂದೆ ಬರಬೇಕು. ಆದರೆ ಈಗ ಪೋಲಿಸ್ ಇಲಾಖೆ ಮುಂದೆ ಬರುತ್ತದೆ. ಕೈಗಾರಿಕೆಯಲ್ಲಿ ಕೆಲಸ ಮಾಡುವವರಿಗೆ ಕೈಗಾರಿಕೆ ನಡೆಸುವವರಿಗೆ ಇರುವ ವ್ಯತ್ಯಾಸವನ್ನು ಸರಿಪಡಿಸುವುದಕ್ಕೆ ಕಾರ್ಮಿಕ ಇಲಾಖೆ ಮಧ್ಯಸ್ಥಿಕೆ ವಹಿಸಬೇಕು. ಆದರೆ ಅದಕ್ಕಿಂತ ಮುಂಚೆ ಪೋಲಿಸರು ಬಂದು ಕಾರ್ಮಿಕರ ಮೇಲೆ ಹಲ್ಲೆ ಮಾಡುವುದು ಧಾಳಿ ಮಾಡುವುದು ಕೂಡಲೇ ನಿಲ್ಲಬೇಕು. ಸಮಸ್ಯೆ ಇನ್ನೇನು ಇತ್ಯರ್ಥವಾಗುತ್ತದೆ ಎನ್ನುವಾಗ ಪೋಲಿಸರ ಪ್ರವೇಶವಾಗುವುದರಿಂದ ಪರಿಹಾರ ಮಣ್ಣು ಪಾಲಾಗುತ್ತದೆ. ಆದ್ದರಿಂದ ಕೈಗಾರಿಕಾ ರಂಗದಲ್ಲಿ ಪೋಲಿಸರ ಹಸ್ತಕ್ಷೇಪವನ್ನು ಆದಷ್ಟು ಕಡಿಮೆ ಮಾಡಬೇಕು. ಅವಕ್ಕೆ ಮಾನ್ಯ ಮುಖ್ಯ ಮಂತ್ರಿಗಳು ಈ ಕಡೆ ಗಮನ ಕೊಡಬೇಕೆಂದು ಕೇಳಿ ಕೊಳ್ಳುತ್ತೇನೆ. ಈ ರಾಜ್ಯದಲ್ಲಿ ಈಗಾಗಲೇ ಅನೇಕ ವರ್ಷಗಳಿಂದ ಹೇಳುತ್ತಲೇ ಬಂದಿದ್ದೇವೆ ಬಗರ್‌ಹುಕುಂ, ಬಗರ್‌ಹುಕುಂ ಎಂದು. ಜಮೀನು ಇಲ್ಲದೇ ಇರತಕ್ಕಂತಹ ಜನ ಉದ್ಯೋಗ ವಿಲ್ಲದೇ ಇರತಕ್ಕಂತಹ ಜನ ಬೇರೆ ವಿಧಿಯಿಲ್ಲದೇ ಈ ಸರಕಾರೀ ಜಮೀನುಗಳಲ್ಲಿ ಕಲ್ಲು, ಗುಂಡಿ, ಹಳ್ಳ ಎಲ್ಲಾ ಇದ್ದುದನ್ನು ಸರಿ ಮಾಡಿಕೊಂಡು ಅದರಲ್ಲಿ ಏನಾದರೂ ಸ್ವಲ್ಪ ಮಟ್ಟಿಗೆ ಬೆಳೆ ಬೆಳೆದುಕೊಂಡು ಜೀವನ ಸಾಗಿಸಬೇಕೆಂದು ಮಾಡುತ್ತಾರೆಯೇ ವಿನಃ ಇಲ್ಲದಿದ್ದರೆ ಅವರು ಮಾಡುವುದಿಲ್ಲ. ಅಂತಹ ಜನರಿಗೆ ಆ ಜಮೀನನ್ನು ಖಾಯಂ ಮಾಡಿ ಕೊಟ್ಟರೆ ಆ ಮೂಲಕ ಅವರು ಗ್ರಾಮೀಣ ಬ್ಯಾಂಕ್, ಭೂ ಅಭಿವೃದ್ಧಿ ಬ್ಯಾಂಕ್‌ನಿಂದ್ಲೋ ಅಥವಾ ಇನ್ನಾವುದಾದರೂ ಇಂತಹ ಕೆಲವಾರು ಹಣಕಾಸು ಸಂಸ್ಥೆಗಳ ನೆರವನ್ನು ಪಡೆದು ಅವರು ಅದನ್ನು ಅಭಿವೃದ್ಧಿ ಪಡಿಸಿ ಇನ್ನೂ ಹೆಚ್ಚು ಆಹಾರವನ್ನು ಉತ್ಪಾದನೆ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಅದನ್ನು ಕೂಡಲೇ ಮಾಡಬೇಕು. ಇದನ್ನು ನಾವು

ಅನೇಕ ವರ್ಷಗಳಿಂದ ಕೇಳುತ್ತಾ ಬಂದಿದ್ದೇವೆ ಅವರೂ ಕೂಡ ಹೇಳುತ್ತಲೇ ಬರುತ್ತಿದ್ದಾರೆ, ಬಲಾಢ್ಯ ಜನರು ಆ ಜಮೀನಿನಿಂದ ಅವರನ್ನು ಹೊರಗೆ ಹಾಕತಕ್ಕಂಥಾದ್ದು ನಡೆಯುತ್ತಿದೆ. ಉದಾಹರಣೆಗೆ ಹೇಳುವುದಾದರೆ ಹೊಸದುರ್ಗದಲ್ಲಿ ೫೦೦ ತೆಂಗಿನ ಗಿಡಗಳನ್ನು ಕಡಿದು ಹಾಕುವುದರ ಮೂಲಕ ಹೆಣ್ಣು ಮಕ್ಕಳ ತಾಳಿ ಕಿತ್ತು ಹಾಕುವುದರ ಮೂಲಕ, ಅಲ್ಲಿದ್ದವರನ್ನು ಹೊಡೆಯುವುದರ ಮೂಲಕ ತಮ್ಮ ಬಲ ಪ್ರದರ್ಶನ ಮಾಡಿದ್ದಾರೆ, ಕ್ರೂರ ಕೃತ್ಯವನ್ನು ಪ್ರದರ್ಶನ ಮಾಡಿದ್ದಾರೆ. ಇದು ಬೇರೆ ಕಡೆ ಕೂಡ ಆಗುತ್ತಿದೆ. ಇದನ್ನು ತಡೆಗಟ್ಟಬೇಕಾದರೆ ಹಕ್ಕು ಪತ್ರ ಕೊಡಬೇಕು. ಅವನು ಉಳುಮೆ ಮಾಡಿರತಕ್ಕಂತಹ ೧–೨ ಎಕರೆ ಜಮೀನು ಇದೆ ಅದರ ಪಟ್ಟಾವನ್ನು ಕೊಟ್ಟು ಅವನ ಸ್ವಂತಕ್ಕೆಂದು ಅದನ್ನು ಮಾಡಿದರೆ ಖಂಡಿತವಾಗಿಯೂ ಒಳ್ಳೆಯ ಕೆಲಸ ಮಾಡಿದಂತಹ ಕೀರ್ತಿ ನಿಮ್ಮ ಸರಕಾರಕ್ಕೆ ಬರುತ್ತದೆ. ಅನೇಕ ತಪ್ಪುಗಳನ್ನು ಮಾಡಿದ್ದರೂ ಕೂಡ ಒಂದು ಒಳ್ಳೆಯ ಕೆಲಸ ಮಾಡಿದರೆ ಆ ಜನರ ಮನಸ್ಸಿನಲ್ಲಿ ಬಹಳ ದಿವಸಗಳ ಕಾಲ ಉಳಿಯುತ್ತದೆ. ಈ ಜನತಾ ಸರಕಾರವು ಒಂದು ಒಳ್ಳೆಯ ಕೆಲಸ ಮಾಡಿದೆ ನಮಗೆ ಎರಡು ಎಕರೆ ಜಮೀನು ಕೊಟ್ಟಿದೆ. ಇದರಲ್ಲಿ ಸುಖವಾಗಿ ಜೀವನ ಮಾಡುತ್ತಿದ್ದೇವೆ ಎನ್ನತಕ್ಕಂತಹ ಭಾವನೆ ಬರುತ್ತದೆ. ಅಂತಹ ಒಳ್ಳೆಯ ಕೆಲಸಗಳನ್ನು ಮಾಡಿ ಇರತಕ್ಕಂತಹ ಲೋಪ ದೋಷಗಳನ್ನು ತೊಡೆದುಹಾಕಿ. ಇವತ್ತು ಸರಕಾರೀ ಅಧಿಕಾರಿಗಳು ಆಡಳಿತ ವ್ಯವಸ್ಥೆಯಲ್ಲಿ ಒಂದು ಆಲಸ್ಯ ಮನೋಭಾವವನ್ನು ಏನು ಬೆಳೆಸಿದ್ದಾರೆ ಇದನ್ನು ತೊಡೆದು ಹಾಕುವುದಕ್ಕೆ ಸರಕಾರ ತೀವ್ರ ಗತಿಯಲ್ಲಿ ಕ್ರಮ ಕೈಗೊಳ್ಳಬೇಕು ಇದು ನನ್ನ ಕಳಕಳಿಯ ವಿನಂತಿ. ಆ ಒಂದು ಕಾರ್ಯವನ್ನು ಮಾಡಿದರೆ ಖಂಡಿತವಾಗಿ ಎಲ್ಲಾ ಕೆಲಸಗಳು ಜಾಗ್ರತೆ ಆಗುತ್ತದೆ. ಇನ್ನು ದೊಡ್ಡ ದೊಡ್ಡ ನಗರಗಳಲ್ಲಿ ೫ ವರ್ಷಕ್ಕೊಮ್ಮೆ ಕಂದಾಯವನ್ನು ಪರಿಶೀಲನೆ ಮಾಡಿ ಪುನರ್ ವಿಮರ್ಶೆ ಮಾಡುತ್ತಾರೆ ಅದೇ ರೀತಿಯಾಗಿ ನಮ್ಮ ದಾವಣಗೆರೆಯಲ್ಲೂ ಮಾಡಬೇಕಾಗಿದೆ. ದಾವಣಗೆರೆಗೆ ಬಂದಿರತಕ್ಕಂತಹ ಅಧಿಕಾರಿಗಳು ಹಣ ತೆಗೆದುಕೊಂಡು ಎಷ್ಟು ಕಂದಾಯ ವಿಧಿಸಬೇಕೋ ಅದಕ್ಕಿಂತ ಬಹಳ ಕಡಿಮೆ ಕಂದಾಯವನ್ನು ವಿಧಿಸಿ ಹಣ ಲೂಟಿ ಮಾಡಿದ್ದಾರೆ. ಹಿಂದೆ ನಮ್ಮ ನಗರಾಭಿವೃದ್ಧಿ ಇಲಾಖೆ ಬಗ್ಗೆ ಬೇಡಿಕೆ ಬಂದಾಗಲೂ ಕೂಡ ನಾನು ಇದರ ಬಗ್ಗೆ ಮಾತನಾಡಿದ್ದೆ. ಸಚಿವರ ಜೊತೆಯಲ್ಲಿ ಮಾತನಾಡಿದ್ದೆ ಆದರೆ ಇನ್ನೂ ಏನೂ ಕ್ರಮ ತೆಗೆದುಕೊಂಡಿಲ್ಲ. ಇದು ನನಗೆ ತಿಳಿದು ಬಂದ ವಿಚಾರ. ವಿಧಾನ ಸಭೆಯಲ್ಲಿ ಮಾತನಾಡಿದರೆ ಎಲ್ಲಾ ಆಗುತ್ತದೆಂದು ಹೇಳಬೇಡಿ ನಾವು ಏನೇನು ಮಾಡಬೇಕೋ ಅದನ್ನೆಲ್ಲಾ ಮಾಡಿಕೊಂಡು ಬಂದಿದ್ದೇವೆ ಬರೀ ಸುಮ್ಮನೆ ಬಂದಿಲ್ಲವೆಂದು ಹೇಳುತ್ತಾರೆ. ಇದು ನಿಜವಾದಂತಹ ಅಂಶ. ಯಾವ ಅಧಿಕಾರಿಯ ಮೇಲೆ ಸುಳ್ಳು ಆಪಾದನೆ ಹೊರಿಸತಕ್ಕಂತಹ ದಿಕ್ಕಿನಲ್ಲಿ ನಾನು ಈ ಮಾತನ್ನು ಹೇಳುತ್ತಿಲ್ಲ. ದಯಮಾಡಿ ಮಾನ್ಯ ಸಚಿವರು ಗಮನ ಕೊಟ್ಟು ಈ ಕೆಲಸವನ್ನು ಮಾಡಬೇಕು. ಏಕೆಂದರೆ ನಗರಕ್ಕೆ ಕಂದಾಯ ಬಹಳ ಮುಖ್ಯವಾದಂತಹ ಒಂದು ಆದಾಯ. ಆ ಕಂದಾಯದಲ್ಲಿ ಮೂರನೇ ಒಂದು ಭಾಗ ಕಡಿಮೆಯಾದರೆ ಆ ನಗರದಲ್ಲಿ ಕೆಲಸ ಮಾಡುವ ಕೆಲಸಗಾರರಿಗೆ ಸಂಬಳ ಕೊಡುವುದನ್ನು ಬಿಟ್ಟರೆ ಅಲ್ಲಿ ಬೇರೆ ಯಾವುದೇ ಅಭಿವೃದ್ಧಿ ಕೆಲಸಗಳನ್ನು ಮಾಡುವುದಕ್ಕಾಗುವುದಿಲ್ಲ, ಸಾಧನೆ ಮಾಡುವುದಕ್ಕಾಗುವುದಿಲ್ಲ. ಭದ್ರಾ ಯೋಜನೆ ಡ್ಯಾಂ ನಿಂದ ನಮಗೆ ನೀರು ಬರಬೇಕು. ನೀರನ್ನು ಕೊಡುತ್ತೀರಿ ಸಂತೋಷ. ಆದರೆ ಅಲ್ಲಿ ಬಹಳ ದಿವಸದಿಂದ ಮಳೆ ಬಂದಿಲ್ಲ ನೀರಿನ ಕೊರತೆಯಾಗಿದೆ. ನಾಳೆ ನಮ್ಮ ನಗರಸಭೆಯ ಅಧ್ಯಕ್ಷರು, ನಗರ ಸಭೆಯ ಸದಸ್ಯರು ಇವರೆಲ್ಲರ ಒಂದು ನಿಯೋಗ ಬರುತ್ತದೆ. ತಾವು ನಮ್ಮ ದಾವಣಗೆರೆಗೆ ಕುಡಿಯುವ ನೀರನ್ನು ಕೊಡುವ ಬಗ್ಗೆ......

ಶ್ರೀ ರಾಮಕೃಷ್ಣ ಹೆಗಡೆ.—ನಿಯೋಗ ಬರಬೇಕಾದ್ದು ಇಲ್ಲ. ನೀವೇ ಹೇಳಿದರೆ ಸಾಕು.

ಶ್ರೀ ಪಂಪಾಪತಿ.—ನಮ್ಮ ದಾವಣಗೆರೆ ನೀರನ್ನು ಬಿಡುವುದಕ್ಕೆ ತಾವು ಸಲಹೆ ಸೂಚನೆಗಳನ್ನು ಕೊಡಬೇಕು ಎಂದು ತಮ್ಮನ್ನು ವಿನಂತಿಸಿಕೊಳ್ಳುತ್ತೇನೆ. ಅನೇಕ ಅಧಿಕಾರಿಗಳನ್ನು ಇವತ್ತು ಸಸ್ಪೆಂಡ್ ಮಾಡಿ ಅವರಿಗೆ ಸಂಬಳವನ್ನು ಕೊಡುತ್ತಿದ್ದೀರಿ. ಸಣ್ಣ ಸಣ್ಣ ವಿಷಯಗಳಿಗೆ ಅವರನ್ನು ಸಸ್ಪೆಂಡ್ ಮಾಡಿದ್ದೀರಿ. ಇದರ ಬಗ್ಗೆ ನಾನು ಮಾನ್ಯ ಮುಖ್ಯ ಮಂತ್ರಿಗಳಿಗೆ ಕೂಡಾ ಈ ವಿಷಯದ ಬಗ್ಗೆ ಹೇಳಿದ್ದೇನೆ. ಒಳ್ಳೆಯ ಅಧಿಕಾರಿಗಳು ಇದ್ದರೆ ಅಲ್ಲಿಂದ ಅವರನ್ನು ಕಿತ್ತು ಹಾಕುವುದಕ್ಕೆ ಏನು ಮಾಡಬೇಕು ಎಂದು ಯೋಚನೆಯನ್ನು ಮಾಡುತ್ತಾರೆ. ನೂರಾರು ಅಲ್ಲ, ಲಕ್ಷಗಟ್ಟಲೆ ರೂಪಾಯಿಗಳನ್ನು ಹೊಡೆಯುತಕ್ಕಂಥವರನ್ನು ಯಾರು ಕೇಳುವುದಿಲ್ಲ. ಅವರುಗಳಿಗೆ ನೂರು ರೂಪಾಯಿಯನ್ನು ಕೊಟ್ಟು ಹಿಡಿಸಿಹಾಕುವುದು, ನಂತರ ಸಸ್ಪೆಂಡ್ ಮಾಡುವುದು. ಅವರು ನೂರು ರೂಪಾಯಿಯನ್ನು ತೆಗೆದುಕೊಂಡಾಗ ಅಲ್ಲಿಂದ ಅವರನ್ನು ಕಿತ್ತು ಹಾಕುವುದು. ಆರು ತಿಂಗಳು ವರ್ಷಾನುಗಟ್ಟಲೇ ಕೆಲಸ ಇಲ್ಲದೇ ಅವರು ಓಡಾಡುತ್ತಿದ್ದಾರೆ, ಆದರೂ ಅವರಿಗೆ ಸಂಬಳ ಕೊಡಬೇಕು ಇಂಥ

ಒಂದು ಪರಿಸ್ಥಿತಿ ಇದೆ. ದಯವಿಟ್ಟು ಇಂಥ ಅಧಿಕಾರಿಗಳನ್ನು ಪುನರ್ ನೇಮಕ ಮಾಡಿಕೊಂಡು ಅವರ ಮೇಲೆ ಏನಾದರೂ ತಪ್ಪು ಇದ್ದರೆ ಅಂಥವರನ್ನು ಕೆಲಸದಿಂದ ನಿಲ್ಲಿಸುವುದಾಗಲೀ, ಅವರ ಮೇಲೆ ಶಿಸ್ತಿನ ಕ್ರಮವನ್ನು ಕೈಗೊಳ್ಳುವುದಾಗಲೀ ಮಾಡಿದರೆ ನಮ್ಮದೇನೂ ಅಭ್ಯಂತರ ಇಲ್ಲ. ದಯವಿಟ್ಟು ಅಂಥ ಅನೇಕ ಅಧಿಕಾರಿಗಳು ಇವತ್ತು ತೊಂದರೆಯಲ್ಲಿದ್ದಾರೆ. ಇವತ್ತು ಒಳ್ಳೆಯ ಅಧಿಕಾರಿಗಳಿಗೆ ನಾವು ಅಭಿನಂದನೆಯನ್ನು ಸಲ್ಲಿಸೋಣ. ಇವತ್ತು ಯಾರು ಈ ರಾಜ್ಯದ ಜನತೆಯನ್ನು ಸರಿಯಾದಂಥ ರೀತಿಯಲ್ಲಿ ಕಾಣುತ್ತಿಲ್ಲ. ಕೆಟ್ಟ ಅಧಿಕಾರಿಗಳು ಯಾರು ಇದ್ದಾರೆ ಅಂಥ ಅಧಿಕಾರಿಗಳಿಗೆ ಸರಿಯಾದಂಥ ತಿಳಿವಳಿಕೆಯನ್ನು ಕೊಟ್ಟು ಅವರಿಂದ ಸರಿಯಾದಂಥ ರೀತಿಯಲ್ಲಿ ಕೆಲಸವನ್ನು ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಡೋಣ ಎಂದು ಹೇಳುತ್ತಾ ಈ ದಿವಸ ನನಗೆ ಮಾತನಾಡುವುದಕ್ಕಾಗಿ ಅವಕಾಶ ಮಾಡಿಕೊಟ್ಟ ಉಪಾಧ್ಯಕ್ಷರಿಗೆ ನಾನು ಅಭಿನಂದನೆಯನ್ನು ಸಲ್ಲಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†SRI MOHAMED LIAQUUDIN BURANUDDIN (Bidar.)—Sir, I take this opportunity of participating in the discussions on the demands of the Hon'ble Chief Minister relating to Wakf and Administration in the State of Karnataka. In the annual report placed before the House correct picture of the wakf institutions, wakf properties and even problems relating to the administration of the wakf Board in our State was not given. The report is silent on many vital issues relating to wakf properties. At the out set, I would like to point out that the term of the State Wakf Board has expired and it came to an end on 10-4-88. I don't know whether the Goverrment has extended the term of the existing board. If it has been done, it is not announced and it is not made known to the public. Even if it is extended, it is not legal one because, under the wakf Act the term of the Wakf Board is only five years after which term comes to an end. There is no question of extension of time and the government has no powers to extend the time limit. So the present Board of wakf is not having any legal status.

3-30 p.m.

I feel the working of the wakf Board is not proper it is illegal and unjustified. I suggest the Government and the Chief Minister to re-constitute the Wakf Board instead of extending the period of the wakf Board because there is no scope for extension of time in the period of Wakf Board. At the time of nomination of Members of the Board of wakf, there should not be any political influence, because it is a supervisory body on the religious institutions and it is vested with the powers to administer the wakf properties. The persons belonging to any political party should not be nominated. In the wakf Act, there are some norms and they have given some categories of persons who should be nominated on the Board. They should be eminent jurists/legal luminaries or a person having religious knowledge just like Alim.

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

That is why it was suggested that Jamaet-e-Ulma should be taken on the Board. Some persons having knowledge in the Educational field and other activities or arts and culture should also be nominated. Such persons should be given chance to work on the Board. Here, those norms have been violated and the people belonging to ruling party alone are nominated and preferred which is not a healthy state of affairs. I urge upon the Government in the interest of the wakf properties and wakf institutions the true and proper persons should be given due weightage and such persons alone should be given chance to work as members of the Board. Same norms should be maintained for the constitution of the district wakf committees. It has become onesided business that all the district wakf committees are having nominating persons belonging to the elected party *i.e.*, Janatha Party and they are working in a very haphazard manner. They do not have the elementary knowledge of wakf and they do not have even zeal to work on the wakf committees properly. In many instances, I have seen that the District Wakf Committees have indulged in decimating wakf properties and in some cases they have aliented and let out these properties to the disadvantages of the institution. I request that the persons of reputation and eminence should given a chance to serve on the wakf committees. Some norms should be laid down for the Constitution of Wakf Committees in respect of either individual or independet wakf Institutions. For example the term of the, Tippusultan wakf Committee of Srirangapatna, has expired some 6-7 years back. The same committee continued till today. This committee is contributing an amount of Rs. 5,000 to an institution under the style of Jamia Tippu which is not a recognised or a registered wakf Institution. But still amount is paid under Jamia Tippu. These are the anomolies. Under the wakf Act, the unregistered institutions are not entitled to any help from sister institutions. This fact I am bringing it to your notice not on the basis of any bias but purely to avoid legal consequences of such contribution. If such contribution is continued, then I don't think there is proper utilisation of the income of a particular institution for the uplift of another institution which is not registered under wakf Act. Development of wakf properties should be closely monitored and taken care of. I will come to the working of the Board later. Now I invite the attention of the Chief Minister regarding the unauthorised occupation of wakf properties by two categories of persons. One is the individual persons and the other is the Government itself. In many of the wakf properties, encroachments have been made whether It is the property of Idgah or Masjid, properties belonging to other institutions like Imambaras etc., are also encroached by individuals. Their encroachments have not been removed particularly grave yards situated in the district and taluka areas.

It has been identified that there is unauthorised occupation by the Government on 36 wakf properties; for removal of such encroachments either by the Government or by individuals, the Central Government has issued a circular in the year 1974 and under that circular, it was specifically stressed upon the State Governments to immediately vacate the same and if it is not possible to vacate immediately, the State Government should fix a rent on such properties and paid to the Institutions. If the State Government does not want to pay the rental, then, it should fix the market value and then pay the entire amount to the institution. Since last three years, I am urging upon the Government that atleast they should show some progress regarding vacation of wakf properties by the Government or the properties which have been under the unauthorised occupation of the local bodies like Municipalities, Municipal Corporations, Mandal Panchayats etc., So, it is high time to take immediate action. It is also quite necessary to protect the interests of the minorities and to protect the interests of the institution and the persons who are administering that institution. It is high time to vacate those properties which are in unauthorised occupation in this regard. I submit before the Hon'ble Chief Minister and also invite his kind attention to another matter. Whenever the District Wakf Committee or the persons who are interested in the Wakf property report the matter to the Deputy Commissioner or to the S.P., or to the Police personnel, they should take immediate action. Whenever they mention that there is an encroachment of the wakf property, it should be vacated. It is our better experience that no doubt they promise but that promise remains always in the same fashion and such promises are never been fulfilled I request that special instructions should be given to the D.Cs and the S.Ps to remove the encroachments of the individuals who have recently occupied the wakf properties particularly the graveyards which are situated in urban areas, cities etc., These graveyards have become the instruments of criminal violance as well as these encroachments on the wakf properties sometimes have given room for the communal ryots also. It is quite necessary to mention here that in the last December when the communal ryots have broken out in Mysore City, majority of graveyards have been trampled by miscreants. goonda elements, and anti social elements. It was specifically pointed out to the Hon'ble Chief Minister when he had visited the Mysore City after the ryots in the year 1987 but no action has been taken. No doubt some orders were passed by the Hon'ble Chief Minister as well as Wakf Minister, Janab Abdul Nasir Sab, but the unauthorised occupations which have been made or the graveyards which have been destroyed and the graves which have been demolished have not been restored to its original

shape and particularly some of the institutions like Ungesha Makan, Masthan Saheb Darga and other institutions where there is an encroachment by the goonda elements. and where they have caused damage. I therefore urge upon the Government that compensation should be paid and these properties should be brought to its original shape and their past existence should be restored.

I wish to bring to the kind notice of the Hon'ble Chief Minister in regard to the last wakf properties. In our area, after the enforcement of the Land Reforms Act all the Service Inams Lands which were under the occupation of the tenents have been registered in the name of the tenants and in the year 1978, there is another law *i.e.*, Certain Inams Abolition Act. By virtue of the Certain Inams Abolition Act and Land Reforms Act, all the service inams lands are vested with the State Government and all the tenants who are occupying these lands have been granted occupancy rights. When there is a question of wakf properties and the wastage of wakf properties, alienation of wakf properties, every body show lip-sympathy. It is not proper on the part of any person to alienate any wakf properties. Colossal loss has caused after the enforcement of certain Inams Abolition Act and the Land Reforms Act. 75,000 acres of land in Gulbarga District, 35,000 acres of land in Raichur District and 25,000 acres of land in Bidar District, all service inam lands have lost after the enforcement of these various enactments. Sir, totally 1,35,000 acres of land has been lost due to the enforcement of these various enactment. No proper action is taken in this regard by the Government. Under the Central Wakf Act, there is a provision that whenever the wakf property is taken or it is lost, equal corpus should be provided alternatively. I urge upon the Govt. that when the corpus is lost, the institution cannot be managed properly because they will be having no income. Such institutions will be having no income. In majority of cases where certain Inam lands have been granted, the institutions like mosques, dargahs and Idiga and several other wakf institutions, are unable to manage without any income or without property. When there is no income, the services in such institutions cannot be performed and practically there is a possibility of extinction of such institutions. Sir, services cannot be continued in these institutions for want of income. Therefore, I urge upon the Government to consider my suggestion in this regard. If the Government sincerely wants to help these institutions, they should create the property of equal value for such institutions in order to restore the corpus. Under the definition of wakf, corpus cannot be changed once the property has been given in wakf. Wakf is created under the

(Mr. Speaker in the Chair)

principles of Wakfs Act and it becomes the property of Allah, the Almighty and it does not become the property of any individual person. The corpus cannot be taken away because it will be a permanent dedication for specific purpose *i.e.*, it should be religious, pious and for the purpose which are permissible under the Islamic law. When the corpus is taken away, there will be no perpetuating. In order to restore corpus, it is quite necessary to create another property of equal value for rendering all the services in such institutions. Therefore, I request that the action should be taken in this regard. The market value of 1,35,000 acres of land is not less than Rs. 100 crores. It cannot be allowed to be wasted or should be lost. It is a very vital problem. The Government should pay its attention towards this aspect in order to restore services. Moreover, under the provisions of Certain Inams Abolition Act, the Government is bound to pay annuity to the Inamdars for the purpose of rendering services to the institution but in majority of cases, annuities are not fixed even though properties are taken away from the wakf institutions and occupancy rights given to the tenents when the land is given to the tiller. What about the wakf institutions? The wakf institution is not an individual property. This property belongs to the community. You have snatched the property of the community and you have given it to individuals. Why the community is being deprived of that property? So, I request that proper steps should be taken in order to make payment of annuities to the institutions which are the management Mutawallis or various committees constituted by the Karnataka Wakf Board. In the annual report, certain things are mentioned. It is stated that out of 20,000 wakf institutions in the State, 56 are under the direct management of the Wakf Board, It is not mentioned which are those 56 institutions. No list is appended with the report. It is also not mentioned whether those institutions are being managed properly, whether those institutions have been developed and what is their expenditure and so on. Every year in respect of these institutions there will be a budget, In that budget they will earmark money in respect of hostels and so many things. But no proper information is given here in this report. Not a single instance is quoted. Unless correct information is given regarding the management of the institutions which are directly under the control of the State Wakf Board, we are unable to speak on the state of affairs of these institutions. How can we compare? There should be some comparison. Unless we make some comparison that such a progess is achieved by the Karnataka Wakf Board a progress is achieved by individual committees which have been constituted, and

such an achievement has been made by Mutavalli controlled institutions, it is dificult to speak regarding how these institutions are being managed. In majorcities there are gave yards and wakf properties. For the development of the wakf properties, which are the steps that the State Government has taken ? I wish to bring to the notice of the Government that the rural property ie landed property has been snatched from the wakf institutions, and only urban properties are left. As regards the urban properties are left. As regards the urban properties, what development has been made by the Government of Karnataka or the Board of wakf ? Whether there is any scheme, whether there is any master plan to develop it There is no mention at all. I would like to quote one instance of proper Bangalore. There is a big wakf institution a five star hotel *i. e.* Windson Maner. Its value goes in crores and that property has been let out for 99 years and the yearly income from that property is only Rs. 1500/— In this House when our brother Mr. Malhrigowda Patil had put a question regarding the development of the wakf properties, Hon'ble Minister for Wakfs had given an assurancee that an inquiry will be held and a commission will be appointed to look into the mismanagement and misuse of the wakf properties. He had told that enquiry will be conducted by a person who is having the position of a High court judge. Though that was assured some years back nothing has been done so for though sufficiently long period has expired. Wakf property is being misused. Those properties have intrinsic value, potential value and they can be developed in the cities like Bangalore Mysore or the district headquarters. Hubli and other cities. There should be a plan or master plan. I will quot one instance, *i. e.* Majlis-a-milia of Bangalore. Some five years back Majlis-a-milia was having only 15,000 at its disposal and it was having some property. The Majlis-a-milia committee has developed that property. They have constructed buildings worth more than 60 lakhs. It all depends on the committee which is managing the property. It all depends on the authorities who are sitting as administrators of the property. or the management of that property So, many urban properties have remained neglected. There is no development of these properties. So, I urge upon the Government to hold a through enquiry and invegtigation regarding the existence of such properties which are having potentialies and which are having interinsic value for development. A special enquiry should be conducted and such properties should be identified and after identification of such properties, work should be started for the development of such properties. It is mentioned in report that the State Government has stood guarantee for a sum of Rs. 106 lakhs and that 106 lakhs will be spent on the development of wakf properties. It is mentioned that

they are trying to develop the urban properties. They have made three categories. (1) Urban Wakf proporties free from encroachment and readily available for devlopment, (2) Urban Wakf properties which are under unauthorised occupation; and (3) Urban Wakf properties which are under litigation. But it is not mentioned which are those institutions, which property is going to be devellopped by spending this Rs. 106 lakhs. All this information has not been given. It is a vague report and it is an incomplete report. Why only these institutions will be developed and why not the other institutions ? It is the duty of the Government not only to protect the wakf properties but also the primary duty of the Government to develop and prevent its misuse by general public, mutuvallis and wakf committees. These are impor-feautures which I have brought to the notice of the Speaker and our Hon'ble Chief Minister. Such problems are very serious in nature and they should be attended to and solved. Then, provision of rent control has been not attracted to the wakf properties which are under the direct management under the wakf Control Act.

4-00 p. m.

All wakf properties are also public properties irrespective of they are under management of the Wakf Board or the management of committee or mutavalli. The public properties are exampted from the purview of the Rent Control Act. I urge the Government to exempt all the wakf properties from the purview of the Rent Control Act.

Further I submit Sir about the Language Policy of our State Government. After the implementation of the Gokak Committee Report, the Kannada laguage has been made the official langauge and now it is made compulsory that one should know Kannada to seek Government employment. The minorities are not opposed to the Kannada language. However, they want some concessions. Urdu language is also a Constitutional language. It is a minority langauge. The Hon. Chief Minister has promised that Urdu Directorate will be formed and many concessions will be extended to them. It is only a hollow promise. The promise has not been kept up. The Urdu Directorate has not yet been constituted. I would like to bring to your kind notice here Sir that the appointees to Class-I and Class-II are given some time limit after their selection to learn Kannada language. As regards the Class-III employees, it has been made compulsory that they must and should know the Kannada langauge at the time of their selection itself. Similar, concession as is given to Class-I and Class-II officers should be extended to Class-III employees belonging to minorities. Earlier there was a circular that the minority people may pass the Kannada language examination after 2 years of their appointment.

That two years was a reasonable period. There is no infrastructure or educational facilities to Marathi or minority people in schools and colleges. At this crucial juncture, the minority people are denied the employment opportunities. I would request the Government to give a chance to the minorities to learn Kannada language and pass the examination within a period of two years in respect of class-III employees.

Lastly, I would like to speak a few words about the communal riots. In these communal riots, victims are the minority people. In recent Siddalghatta riots, when the legislators went there for an on-the-spot assessment and to pacify the situation, they were beaten up severely. What is the security for a common man when the legislators were insecure? I appreciate the good zeal and the services rendered by the hon. Members Sri Ramesh Kumar and Sri Mahadevappa. They have saved the life of the hon. Member Sri Roshan Baig. I appeal the Government to create a secular environment. There should be perfect guarantee for the life and property of the minorities. The Police officers who are neglecting and who are indulging in creating disturbances should be punished.

With these few words, I conclude my speech and thank the Chair for giving me an opportunity to speak.

† ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನಹಳ್ಳಿ).—ಸನ್ಮಾನ್ಯ ಅಧ್ಯಕ್ಷರೆ, ಈ ರಾಜ್ಯದಲ್ಲಿ ಆಡಳಿತ ಚೆನ್ನಾಗಿ ನಡೆಸುವುದರ ಪೂರ್ಣ ಫಲ ಈ ರಾಜ್ಯದ ಜನತೆಗೆ ಸಿಗಬೇಕಾದ ಹಣಕಾಸು, ರಕ್ಷಣೆ ಮತ್ತು ಆಡಳಿತ ಇವು ಸಮರ್ಪಕವಾಗಿ ನಡೆಯಬೇಕು. ಈ ರಾಜ್ಯದಲ್ಲಿ ಅವು ಚೆನ್ನಾಗಿ ನಡೆದು ಸಮರ್ಪಕವಾಗಿ ಕಾರ್ಯ ನಿರ್ವಹಿಸಿದರೆ ಜನರಿಗೆ ಸಿಗಬೇಕಾದ ಸೌಲಭ್ಯ, ನೆಮ್ಮದಿ ಸಿಗುವುದಕ್ಕೆ ಸಾಧ್ಯವಾಗುತ್ತದೆ. ಆದರೆ ಈ ದಿನ ಏನಾಗಿದೆ ಎಂದರೆ ಈ ಮೂರೂ ಸಹ ಈ ರಾಜ್ಯದಲ್ಲಿ ಸರಿಯಾಗಿ ಸಮರ್ಪಕವಾಗಿ ಕಾರ್ಯವನ್ನು ನಿರ್ವಹಿಸುತ್ತಿಲ್ಲ. ಅದಕ್ಕಾಗಿ ಈ ದಿನ ಹಣಕಾಸು, ರಕ್ಷಣೆ ಮತ್ತು ಆಡಳಿತ ಇವುಗಳಿಗೆ ಸಂಬಂಧಪಟ್ಟಂಥ ಬೇಡಿಕೆಗಳು ಏನಿವೆ ಅವನ್ನು ವಿರೋಧಿಸುತ್ತಾ ನನ್ನ ಮಾತನ್ನು ಪ್ರಾರಂಭಿಸುತ್ತೇನೆ. ಮೊದಲಿಗೆ ರಕ್ಷಣಾ ಇಲಾಖೆಯನ್ನು ಅಂದರೆ ಪೋಲೀಸ್ ಇಲಾಖೆಯನ್ನು ತೆಗೆದುಕೊಳ್ಳುವುದಾದರೆ, ಹೋದ ಸಾರಿ ಬೇಡಿಕೆ ಮೇಲೆ ಅವರು ಕೊಟ್ಟಿರತಕ್ಕ ವರದಿಯನ್ನು ಹಸಿರು ಹೊದಿಕೆಯುಳ್ಳ ಪುಸ್ತಕದಲ್ಲಿ ಅಚ್ಚು ಹಾಕಿಸಿ ಸಭೆಗೆ ನೀಡಿದ್ದರು. ಅದನ್ನು ನೋಡಿದಾಗ ಅಂದುಕೊಂಡಿದ್ದೆ, ೧೯೮೮-೮೯ನೇ ಸಾಲಿಗೆ ಬಹುಶಃ ಒಂದು ಶ್ವೇತ ವರದಿಯನ್ನು ಸಭೆಯ ಮುಂದಿಡುತ್ತಾರೆ ಎಂದು. ಅಂದರೆ ಯಾವುದೇ ಕಳಂಕ ಇಲ್ಲದಿರತಕ್ಕ ಶುದ್ಧವಾದ ಆಡಳಿತವನ್ನು ಒದಗಿಸಿದ ಯಾವುದೇ ಸಮಸ್ಯೆಗಳು ಇಲ್ಲದಿರತಕ್ಕ ಬಿಳಿಯ ವರದಿಯನ್ನು ಕೊಡುತ್ತಾರೆಂಬ ಭಾವನೆ ಇತ್ತು. ಆದರೆ ಇವತ್ತು ಕೆಂಪು ಹೊದಿಕೆಯನ್ನು ಹೊಂದಿರತಕ್ಕ ವರದಿಯನ್ನು ನೋಡಿದರೆ ಇಲಾಖೆಯಲ್ಲಿರತಕ್ಕ ಅವ್ಯವಹಾರಗಳು ದಿನೇ ದಿನೇ ಹೆಚ್ಚಾಗುತ್ತಿವೆ ಎಂಬುದರ ಸಂಕೇತವಾಗಿ ಈ ರೀತಿ ಪುಸ್ತಕದಲ್ಲಿ ವರದಿಯನ್ನು ಕೊಟ್ಟಿದ್ದಾರೆಂದು ಭಾವಿಸುತ್ತೇನೆ. ಮೊದಲನೆಯದಾಗಿ ಇಲಾಖೆಯಲ್ಲಿ ಅಧಿಕಾರಿಗಳು ಯಾವ ಯಾವ ವರ್ಗದವರಿದ್ದಾರೆ ಎಂಬ ಬಗ್ಗೆ ತಪ್ಪು ಮಾಹಿತಿ ಇದೆ. ಇನ್ಸ್‌ಪೆಕ್ಟರ್ ಜನರಲ್ ಒಂದು ಹುದ್ದೆ ಮತ್ತು ಪೋಲೀಸ್ ಡೈರೆಕ್ಟರ್ ಜನರಲ್ (ತರಬೇತಿ ಮತ್ತು ವಿಶೇಷ ಘಟಕ) ಒಂದು ಹುದ್ದೆ ಅಲ್ಲಿಗೆ ಎರಡು ಹುದ್ದೆಗಳಾಯಿತು, ಆದರೆ ವಾಸ್ತವವಾಗಿ ಈ ಕೇಡರಿನ ಹುದ್ದೆಗಳು ೪ ಇವೆ. ಎನ್. ಶ್ರೀನಿವಾಸನ್ ಎಂದು ಡಿ. ಜಿ. ಪಿ. ಗ್ರೇಡ್‌ನವರು ಪೋಲೀಸ್ ಹೌಸಿಂಗ್ ಕಾರ್ಪೋರೇಷನ್ನಿಗೆ ಸಂಬಂಧಪಟ್ಟವರು ಮತ್ತು ಬಾಲಕೃಷ್ಣರಾವ್ ಎಂದು ಡಿ, ಜಿ. ಪಿ, ಗ್ರೇಡ್‌ನವರು ಹೋಂ ಗಾರ್ಡ್ಸ್

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಸಿವಿಲ್ ಟ್ರೈಲ್ಸ್‌ಗೆ ಸಂಬಂಧಪಟ್ಟವರು. ಈ ಎರಡು ಹುದ್ದೆಗಳನ್ನು ವರದಿಯಲ್ಲಿ ನಮೂದಿಸಿಲ್ಲ. ಏತಕ್ಕೆ ಈ ಎರಡು ಹುದ್ದೆಗಳ ಬಗ್ಗೆ ತಪ್ಪು ಮಾಹಿತಿ ಕೊಟ್ಟಿದ್ದೀರೆಂದು ಅಧಿಕಾರಿಗಳನ್ನು ಈ ಸಭೆಯ ಮೂಲಕ ಕೇಳುವುದಕ್ಕೆ ಇಷ್ಟಪಡುತ್ತೇನೆ. ಕೆ. ಸಿ. ಕೆ. ರಾಜುರವರ ಕಾಲದಲ್ಲಿ ಒಂದೇ ಒಂದು ಡಿ. ಜಿ. ಪಿ. ಹುದ್ದೆ ಇತ್ತು. ಈಗ ೪ ಹುದ್ದೆಗಳನ್ನು ಸೃಷ್ಟಿ ಮಾಡಿದ್ದಾರೆ. ಇಲಾಖೆಯಲ್ಲಿ ಈ ರೀತಿ ಉನ್ನತ ಹುದ್ದೆಗಳನ್ನು ಸೃಷ್ಟಿ ಮಾಡುತ್ತಾ, ರಾಜ್ಯದ ಬೊಕ್ಕಸದ ಹಣವನ್ನು ಖರ್ಚು ಮಾಡತಕ್ಕ ಕಾರ್ಯಕ್ರಮ ನಡೆಯುತ್ತಿವೆ, ಈ ಪ್ರಕಾರ ಆಡಳಿತ ನಡೆಯುತ್ತಿದೆ ಎಂಬುದಕ್ಕೆ ಇದು ಒಂದೇ ಒಂದು ನಿದರ್ಶನ ಸಾಕು. ಈ ಎರಡು ಅಧಿಕಾರಿಗಳ ಹುದ್ದೆಗಳು ಯಾವುವು ? ಅವರ ಕೆಲಸ ಏನು ಎಂಬುದನ್ನು ಸರ್ಕಾರದ ವತಿಯಿಂದ ತಿಳಿಯಬಯಸುತ್ತೇನೆ. ಇನ್ನೂ ಮುಂದುವರಿದರೆ, ಪೋಲೀಸ್ ಇಲಾಖೆಯಲ್ಲಿ ಡಿ. ಜಿ. ಪಿ. ಯಿಂದ ಹಿಡಿದು ಸರ್ಕಲ್ ಇನ್ಸ್‌ಪೆಕ್ಟರ್ ಹುದ್ದೆಗಳವರೆಗೆ ವಾಹನ ಕೊಡತಕ್ಕ ವ್ಯವಸ್ಥೆ ಇದೆ. ಎಸ್. ಪಿ. ಮೇಲಿರತಕ್ಕವರಿಗೆ ಕಾರುಗಳು, ಸರ್ಕಲ್ ಇನ್ಸ್‌ಪೆಕ್ಟರ್‌ವರೆಗೆ ಜೀಪುಗಳನ್ನು ಕೊಡತಕ್ಕ ವ್ಯವಸ್ಥೆ ಇದೆ. ಅದು ಎಷ್ಟು ತಪ್ಪಾಗಿದೆ ಎಂಬುದನ್ನು ನೋಡಿದರೆ, ೭೭ ಮಂದಿ ಡಿ. ವೈ. ಎಸ್. ಪಿ. ಗಳು ಇದ್ದಾರೆ ಅಂದಮೇಲೆ ೭೭ ಕಾರುಗಳನ್ನು ಕೊಡಬಹುದು. ಆದರೆ ಕಾರುಗಳ ಸಂಖ್ಯೆ ಇಲ್ಲಿ ಕೊಟ್ಟಿರುವುದನ್ನು ನೋಡಿದರೆ ಒಂದಕ್ಕೆ ಎರಡರಷ್ಟಿದೆ. ಇಲ್ಲಿ ತಪ್ಪು ವರದಿಯನ್ನು ಕೊಟ್ಟಿದ್ದಾರೆ, ೭೭ ಹುದ್ದೆಗಳಿಗೆ ೧೭೭ ವಲಯಗಳು ಇವೆ. ಈ ಜೀಪುಗಳ ಸಂಖ್ಯೆ ೫೩೩ ಇದೆ. ಅಲ್ಲಿ ಬೇಕಾಗಿರತಕ್ಕದ್ದು ೨೫೪ ಜೀಪುಗಳು, ಆದರೆ ಇನ್ನು ಉಳಿದ ಜೀಪುಗಳು ಎಲ್ಲಿ ಕೆಲಸ ಮಾಡುತ್ತಿದ್ದಾರೆ. ಮನೆಯಲ್ಲಿರತಕ್ಕ ಹೆಂಗಸರು ಮಕ್ಕಳು ತರಕಾರಿಯನ್ನು ತೆಗೆದುಕೊಂಡು ಬರುವುದಕ್ಕೆ ಉಪಯೋಗಿಸುತ್ತಿದ್ದಾರೋ ಅಥವಾ ಸಿನಿಮಾಗಳಿಗೆ ಹೋಗುವುದಕ್ಕೆ ಉಪಯೋಗಿಸುತ್ತಿದ್ದಾರೋ ಗೊತ್ತಿಲ್ಲ. ಸಾರ್ಕ್ ಕಾನ್‌ಫರನ್ಸ್ ನಡೆದಾಗ ಈ ಇಲಾಖೆಗಳಿಗೆ ಕೆಲವು ಜೀಪುಗಳನ್ನು ಕೊಡಲಾಗಿತ್ತು, ಅದು ಅವರ ಹತ್ತಿರವೇ ಇದೆ. ಈ ವಾಹನಗಳಿಂದ ವರ್ಷಕ್ಕೆ ಸುಮಾರು ಕೋಟಿಗಟ್ಟಲೆ ಹಣ ನಷ್ಟವಾಗುತ್ತದೆ. ಈ ವಾಹನಗಳನ್ನು ಇವರು ಎಲ್ಲಿ ಇಟ್ಟಿದ್ದಾರೆ ? ಇಲ್ಲಿ ಕೊಟ್ಟಿರುವ ವಾಹನಗಳು ಅಗತ್ಯಕ್ಕಿಂತ ಹೆಚ್ಚಾಗಿ ಇದೆ. ಒಬ್ಬೊಬ್ಬರಿಗೆ ಎರಡೆರಡು ಕಾರು, ಎರಡೆರಡು ಜೀಪು ಇವೆ. ಈ ರೀತಿ ವಾಹನಗಳನ್ನು ಹೆಚ್ಚಾಗಿ ಇಟ್ಟುಕೊಂಡಿರುವುದಕ್ಕೆ ಕಾರಣವೇನು ಎಂಬುದನ್ನು ಮಾನ್ಯ ಗೃಹಮಂತ್ರಿಗಳು ಮಾಹಿತಿಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಈ ಇಲಾಖೆಯ ಶಿಸ್ತಿನ ಬಗ್ಗೆ ಹೇಳುವುದಾದರೆ, ಶಿಸ್ತು ಎನ್ನತಕ್ಕದ್ದು ಈ ಇಲಾಖೆಯಲ್ಲಿ ಇಲ್ಲ. ೧೯೮೬-೮೭ರಲ್ಲಿ ೪೮ ಮಂದಿಯನ್ನು ಕೆಲಸದಿಂದ ವಜಾ ಮಾಡಿದ್ದಾರೆ. ಇವರು ಯಾವ ವರ್ಗದವರೆಂದು ನಾನು ಕೇಳುವುದಕ್ಕೆ ಇಚ್ಛೆಪಡುತ್ತೇನೆ. ಉನ್ನತ ಹುದ್ದೆಯಲ್ಲಿರುವವರನ್ನು ತೆಗೆದು ಹಾಕಿದ್ದೀರಾ, ಅಥವಾ ೪೮ ಜನ ಪೋಲೀಸಿನವರನ್ನು ತೆಗೆದುಹಾಕಿದ್ದೀರಾ ? ೪೮ ಜನರನ್ನು ಇಲಾಖೆಯಿಂದ ತೆಗೆದು ಹಾಕಿಬಿಟ್ಟಿದ್ದೇವೆಂದು ಒಂದು ಹೆಗ್ಗಳಿಕೆಯನ್ನು ಈ ಸದನದ ಮುಂದೆ ಹಾಗೂ ಈ ದೇಶದ ಜನರ ಮುಂದೆ ಹೇಳಿಕೊಳ್ಳಲು ಹಾಗೆ ಮಾಡಿಕೊಂಡಿದ್ದೀರಾ ? ಇವರಲ್ಲಿ ಯಾವ ಯಾವ ಹುದ್ದೆಗಳಿಂದ ಎಷ್ಟೆಷ್ಟು ಜನರನ್ನು ತೆಗೆದು ಹಾಕಿದ್ದೀರೆಂದು ನಾನು ಕೇಳುತ್ತೇನೆ. ಏಕೆಂದರೆ ಈ ಇಲಾಖೆಯಲ್ಲಿ ಶಿಸ್ತು ಎನ್ನುವುದೇ ಇಲ್ಲ. ಈ ಸದನದಲ್ಲಿ ನಾನು ಒಂದು ವಿಚಾರವನ್ನು ಎರಡು ಬಾರಿ ಎತ್ತಿದ್ದೇನೆ. ಈ ಇಲಾಖೆಯಲ್ಲಿ ರಿಸರ್ವ್ ಪೋಲೀಸಿನಲ್ಲಿ ಕೆ. ಕೆ. ಮುತ್ತಪ್ಪ ಎನ್ನುವ ಕಮಾಂಡೆಂಟ್ ಒಬ್ಬರು ಇದ್ದಾರೆ. ಅವರು ಜವಾಬ್ದಾರಿಯುಳ್ಳವರಾಗಿದ್ದಾರೆ. ಅಲ್ಲಿ ಒಂದು ಲಕ್ಷ ರೂಪಾಯಿಯ ದುರ್ವ್ಯವಹಾರ ನಡೆದಿದೆ. ನಾನು ಈ ಸದನದಲ್ಲಿ ಕೇಳಿದಾಗ ಹೌದು ಆಡಿಟ್ ವರದಿಯ ಪ್ರಕಾರ ಒಂದು ಲಕ್ಷ ರೂಪಾಯಿಯ ದುರ್ವ್ಯವಹಾರ ನಡೆದಿದೆ ಎಂದು ಹೇಳಿದರು. ನಾನು ಸದನದಲ್ಲಿ ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಾ ಎಂದು ಕೇಳಿದಾಗ ಮಾನ್ಯ ಸಚಿವರು ಕ್ರಮತೆಗೆದುಕೊಂಡಿದ್ದೇವೆಂದು ಉತ್ತರ ಹೇಳಿದರು. ನಾನು ಪುನಃ ಕಳೆದ ೮ ದಿನಗಳ ಹಿಂದೆ ಕೇಳಿದಾಗ, ಇದರ ಬಗ್ಗೆ ಸಂಬಂಧಪಟ್ಟ ಒಬ್ಬ ನಾರಾಯಣಮೂರ್ತಿ ಎಂಬ ಕ್ಯಾಷಿಯರ್ ಮೇಲೆ ಕ್ರಮ ತೆಗೆದುಕೊಂಡಿದ್ದೇವೆಂದು ಹೇಳಿದರು. ಕ್ಯಾಷಿಯರ್ ಇಡತಕ್ಕ ಲೆಕ್ಕಪತ್ರವನ್ನು ಪ್ರತಿದಿನ ನೋಡತಕ್ಕದ್ದು ಮೇಲಿನ ಅಧಿಕಾರಿಯ ಕರ್ತವ್ಯ. ವರ್ಷಗಟ್ಟಲೆ ಕಳೆದು ಆಡಿಟ್ ವರದಿಯಲ್ಲಿ ಬರುವವರೆಗೂ ಈ ಅಧಿಕಾರಿ ಸುಮ್ಮನೆ ಇರಬೇಕಾದರೆ ಇವಕ್ಕೆ ಇವರು ಶಾಮೀಲಾಗಿದ್ದಾರೆಂದು ಭಾವಿಸಬೇಕಾಗುತ್ತದೆ. ಆ ಅಧಿಕಾರಿಯ ಮೇಲೆ ಕ್ರಮ ತೆಗೆದುಕೊಳ್ಳದೇ ಅವರಿಗೆ ಮುಂಬಡ್ತಿ ನೀಡಿ ಈದಿನ ಅವರಿಗೆ ಗೌರವಿಸಲಾಗುತ್ತಿದೆ. ಇದರ ಬಗ್ಗೆ ಕ್ರಮ ತೆಗೆದುಕೊಂಡಿರುವುದು ಒಬ್ಬ ಕ್ಯಾಷಿಯರ್ ಮೇಲೆ ಈ ಇಲಾಖೆಯಲ್ಲಿ ಉನ್ನತಾಧಿಕಾರದಲ್ಲಿರುವ ಒಬ್ಬ ಎಸ್. ಐ. ಒಬ್ಬ ಸರ್ಕಲ್ ಇನ್‌ಸ್ಪೆಕ್ಟರ್ ಅಪರಾಧವನ್ನು ಮಾಡಿದ್ದಾರೆ. '' ಕೋತಿ ತಿಂದು ಮೇಕೆ ಮೂತಿಗೆ ಒರಸಿತು '' ಎಂಬ ರೀತಿಯಲ್ಲಿ ಕಡಿಮೆ ದರ್ಜೆ ನೌಕರರ ಮೇಲೆ ಈ ರೀತಿ ಹೇಳುವುದು ಸರಿಯಲ್ಲ. ಈ ಒಂದು ಲಕ್ಷ ರೂಪಾಯಿ ದುರುಪಯೋಗ

ವಾಗಿರುವ ಬಗ್ಗೆ ಮೇಲಾಧಿಕಾರಿಯವರಿಗೆ ಜವಾಬ್ದಾರಿ ಇದೆಯೋ ಇಲ್ಲವೋ ಎಂಬುದನ್ನು ತಾವು ಹೇಳಬೇಕು. ಇಲ್ಲವೆಂದು ಹೇಳಿದರೆ ನಾನು ಕೇಳುವುದಿಲ್ಲ. ಕ್ಯಾಷಿಯರ್ ಇಡುವ ಲೆಕ್ಕ ಪತ್ರವನ್ನು ಪರಿಶೋಧನೆ ಮಾಡಿ ನೋಡಿ ಅದಕ್ಕೆ ಸಹಿ ಹಾಕತಕ್ಕ ಅಧಿಕಾರಿಗೆ ಜವಾಬ್ದಾರಿ ಇದೆಯೋ ಇಲ್ಲವೋ ಎನ್ನತಕ್ಕದ್ದನ್ನು ನೀವು ಹೇಳಬೇಕು. ಅವರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರೆಂದು ನಾನು ಪುನಃ ಮತ್ತೊಮ್ಮೆ ಕೇಳುವುದಕ್ಕೆ ಇಚ್ಛೆ ಪಡುತ್ತೇನೆ.

ಇದರ ಜೊತೆಗೆ ೧೯೮೫–೮೬ರಲ್ಲಿ ಒಂದು ಕಳ್ಳತನದ ಆರೋಪ ತಿಪಟೂರು ರೂರಲ್ ಪೋಲೀಸ್ ಠಾಣೆಯಲ್ಲಿ ಬಂತು, ಕಳ್ಳರು ಸಿಕ್ಕಿ ಆಯಿತು, ಮಾಲು ಸಿಕ್ಕಿತು, ಅವರ ಮೇಲೆ ಚಾರ್ಜ್ ಶೀಟು ಕೊಡುವ್ಯಾ ಆಯಿತು. ಒಬ್ಬ ಮರ್ಯಾದಸ್ಥನನ್ನು ಪೋಲೀಸ್ ಸ್ಟೇಷನ್ನಿಗೆ ಕರೆದುಕೊಂಡು ಹೋಗಿ ನೀನೇ ಕಳ್ಳತನ ಮಾಡಿದ್ದೀಯ, ಒಡವೆ ತೆಗೆದುಕೊಂಡಿದ್ದೀಯ ಎಂದು ಗುಮಾನಿ ಬಂದಿದೆ ಎಂದು ಹೇಳಿದ್ದಾರೆ. ಅವರ ಮೇಲೆ ಕಂಪ್ಲೇಂಟ್ ಇಲ್ಲ, ಕೇಸ್ ರಿಜಿಸ್ಟರ್ ಮಾಡಿಲ್ಲ. ಆದರೂ ೪೦ ಸಾವಿರ ರೂಪಾಯಿ ಕೊಡಬೇಕು ಎಂದು ಸಬ್–ಇನ್‌ಸ್ಪೆಕ್ಟರ್ ರಂಗನಾಥ್ ಎನ್ನುವವರು ಹೇಳಿದ್ದಾರೆ. ಹತ್ತಾರು ಲಕ್ಷ ರೂಪಾಯಿ ಆಸ್ತಿ ಇರತಕ್ಕ ಮನುಷ್ಯ ಮರ್ಯಾದೆಗೆ ಹೆದರಿ ಬ್ಯಾಂಕಿನಲ್ಲಿದ್ದಂಥ ಹಣವನ್ನು ಕೊಟ್ಟಿದ್ದಾರೆ. ಸದನದಲ್ಲಿ ಈ ವಿಷಯವನ್ನು ಪ್ರಸ್ತಾಪ ಮಾಡಿದಾಗ ಬ್ಯಾಂಕಿಗೆ ಕೊಟ್ಟ ಚೆಕ್ ನಂಬರ್ ಎಲ್ಲಾ ವಿವರಗಳನ್ನು ಕೊಟ್ಟಾಗ ಎನ್‌ಕ್ವೈರಿ ಕಂಡಕ್ಟ್ ಮಾಡುತ್ತೇವೆ ಎಂದು ಹೇಳಿದರು.

ಶ್ರೀ ಎಸ್. ಬಂಗಾರಪ್ಪ.—ಚೆಕ್ ಕೊಟ್ಟಿದ್ದಾರೋ ಕ್ಯಾಷ್ ಕೊಟ್ಟಿದ್ದಾರೊ ?

ಶ್ರೀ ಬಿ. ಲಕ್ಕಪ್ಪ.—ಕ್ಯಾಷ್ ಕೊಟ್ಟಿದ್ದಾರೆ. ಕ್ಯಾಷ್ ತೆಗೆದುಕೊಂಡು ಹೋದಮೇಲೆ ಯಾರಿಗೂ ಹೇಳಕೂಡದು ಎಂದು ಹಾಲು ಮುಟ್ಟಿ ಪ್ರಮಾಣ ಮಾಡಿಸಿ ಕೊಂಡಿದ್ದಾರೆ. ಈ ವಿಚಾರವನ್ನು ಸದನದಲ್ಲಿ ಪ್ರಸ್ತಾಪ ಮಾಡಿದಾಗ ಪೋಲೀಸ್ ಎನ್‌ಕ್ವೈರಿ ಕಂಡಕ್ಟ್ ಮಾಡಿದರು. ಆ ವರದಲ್ಲಿ ಎನ್‌ಕ್ವೈರಿ ಆಫೀಸರ್ ಏನು ಕೊಟ್ಟಿದ್ದಾರೆ ? ಅವರು ಕೊಟ್ಟಿರತಕ್ಕ ವರದಿಯ ಪ್ರತಿ ನನ್ನ ಹತ್ತಿರವೂ ಇದೆ. ಆ ವರದಿಯ ಪ್ರಕಾರ ಅವರನ್ನು ಈಗಲೇ ಡಿಸ್‌ಮಿಸ್ ಮಾಡುವುದಕ್ಕೆ ಸಾಧ್ಯ ಇದೆ. ಆದರೂ ಅವರು ಏನೂ ಅಪರಾಧ ಮಾಡಿಲ್ಲ, ೪೦ ಸಾವಿರ ರೂಪಾಯಿ ತೆಗೆದುಕೊಂಡಿರುವುದು ಸುಳ್ಳು ಎಂದು ಮಂತ್ರಿಗಳಾದ ಲಕ್ಷ್ಮೀಸಾಗರ್ ಅವರಿಂದ ಸದನದಲ್ಲಿ ಉತ್ತರ ಓದಿಸಿಬಿಟ್ಟರು. ಈ ದೇಶದ ಭವಿಷ್ಯತ್ತನ್ನು, ಜನರ ಹಣೆಬರಹವನ್ನು ಬರೆಯುತಕ್ಕದ್ದು ಜನರ ಪ್ರತಿನಿಧಿಯಾದ ನಮ್ಮ ಕೈಯಲ್ಲಿಲ್ಲ. ಆ ಅಧಿಕಾರ ಇರತಕ್ಕದ್ದು ಅಧಿಕಾರಿವರ್ಗದವರ ಕೈಯಲ್ಲಿ ಅವರು ಅಧಿಕಾರಿ ಮಾಡತಕ್ಕ ರೀತಿಯನ್ನು ನೋಡಿದರೆ ಆಶ್ಚರ್ಯವಾಗುತ್ತದೆ. ಅವರು ತಪ್ಪು ವರದಿ ಕೊಟ್ಟಿದ್ದಾರೆ. ನನ್ನ ಹತ್ತಿರ ವರದಿ ಇದೆ. ಈ ರೀತಿ ಆದರೆ ಯಾವರೀತಿ ನ್ಯಾಯ ಕೇಳಬೇಕು ? ಎಲ್ಲಿ ಸಿಗುತ್ತದೆ ನ್ಯಾಯ ? ನಿರಪರಾಧಿಯನ್ನು ಸ್ಟೇಷನ್ನಿಗೆ ಕರೆದು ಈ ರೀತಿ ಮಾಡಿದ್ದಾರೆ. ನಡೆದಿರುವುದು ನೂರಕ್ಕೆ ನೂರರಷ್ಟು ಸತ್ಯ. ಅವರು ನನ್ನ ಹತ್ತಿರ ಬಂದು ರಾಜಿ ಮಾಡಿಸಿ ೨೦ ಸಾವಿರ ರೂಪಾಯಿ ಕೊಡಿಸುತ್ತೇವೆಂದು ಹೇಳಿದಾಗ ಆಗುವುದಿಲ್ಲ. ಎನ್‌ಕ್ವೈರಿ ನಡೆಯಲಿ ಎಂದು ವಾಪಸ್ ಕಳುಹಿಸಿದೆವು. ನಂತರ ರಿಪೋರ್ಟ್ ನಿರಪರಾಧಿ ಯಾರಿದ್ದಾರೆ ಅವರಿಗೆ ಫೇವರಬಲ್ ಆಗಿ ಬಂದರೂ ಈ ಸದನದಲ್ಲಿ ಏನೂ ನಡೆದಿಲ್ಲ ಎಂದು ತಪ್ಪು ವರದಿ ನೀಡಿದಂಥ ಇಲಾಖೆಯ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ? ಇದರ ಬಗ್ಗೆ ಮತ್ತೊಮ್ಮೆ ವಿಚಾರಣೆ ಮಾಡಿ ಏನು ರಿಪೋರ್ಟ್ ಬಂದಿದೆ ನೋಡಿ, ಅಥವಾ ಬೇಕಾದರೆ ನನ್ನ ಹತ್ತಿರ ಇರುವುದನ್ನು ಮುಖ್ಯಮಂತ್ರಿಗಳಿಗೆ ತಂದು ಕೊಡುತ್ತೇನೆ. ಒಟ್ಟಿನಲ್ಲಿ ಕ್ರಮ ತೆಗೆದು ಕೊಳ್ಳಲೇಬೇಕು. ಇಲ್ಲದೇಹೋದರೆ ಪೋಲೀಸ್ ರಾಜ್ಯ ಇದು, ಏನು ಬೇಕಾದರೂ ಮಾಡಬಹುದು, ಜನರ ಸುಲಿಗೆ ಮಾಡಬಹುದು ಎನ್ನುವ ಅಭಿಪ್ರಾಯ ಇದ್ದರೆ ಕ್ರಮ ತೆಗೆದುಕೊಳ್ಳುವುದು ಬೇಡ. ಅಧ್ಯಕ್ಷರೇ, ಇಷ್ಟೇ ಅಲ್ಲ. ಮುಂದೆ ಹೋದರೆ ಗುಪ್ತಚಾರ ದಳ, ಸಿ. ಒ. ಡಿ. ಎಂದಿದೆ. ಸಿ. ಒ. ಡಿ ಹಣೆ ಬರಹ ನೋಡಿದರೆ, ಸಿ. ಒ. ಡಿ. ಗೆ ರೆಫರ್ ಮಾಡಿ ಎಂದು ಕೇಳತಕ್ಕ ಪರಿಸ್ಥಿತಿಯೇ ಬರಬಾರದು ಅನ್ನಿಸುತ್ತದೆ. ಪೋಲೀಸ್ ಡಿಪಾರ್ಟ್‌ಮೆಂಟಿನಲ್ಲಿ ಎಗ್ಸಿಕ್ಯುಟೀವ್ ಲೈನ್‌ನಲ್ಲಿ ಸಬ್–ಇನ್‌ಸ್ಪೆಕ್ಟರ್, ಸರ್ಕಲ್ ಇನ್‌ಸ್ಪೆಕ್ಟರ್, ಡಿ. ವೈ. ಎಸ್. ಪಿ. ಯಾರಿರುತ್ತಾರೆ ಅವರಲ್ಲಿ ಕಂಡಮ್ ಆದವರನ್ನು, ಅಪರಾಧ ಮಾಡಿದ್ದು ಯಾರನ್ನು ಇಟ್ಟುಕೊಳ್ಳುವುದಕ್ಕಾಗುವುದಿಲ್ಲ ಅಂಥವರನ್ನು ಪನಿಷ್‌ಮೆಂಟ್ ರೂಪದಲ್ಲಿ ಸಿ. ಒ. ಡಿ. ಗೆ ಹಾಕುತ್ತಾರೆ. ಸಿ. ಒ. ಡಿ. ಅಂದರೆ ಹೇಗಿರಬೇಕು. ಸಬ್‌ಇನ್‌ಸ್ಪೆಕ್ಟರ್, ಸರ್ಕಲ್ ಇನ್‌ಸ್ಪೆಕ್ಟರ್ ಬೇರೆ ಇಲಾಖೆಯಲ್ಲಿ ಏನು ತಪ್ಪು ಮಾಡಿರುತ್ತಾರೆ ಅಥವಾ ಯಾವುದಾದರೂ ವಿಚಾರವನ್ನು ಮಾಡುವುದರಲ್ಲಿ ಏನು ವಿಫಲರಾಗಿರುತ್ತಾರೆ ಅಂಥ ಅಪರಾಧವನ್ನು ಕೂಲಂಕಷವಾಗಿ ತನಿಖೆ ನಡೆಸಿ ಸತ್ಯಾಂಶವನ್ನು ಹೊರಗೆ ಕೊಡುವಂತ ಇಲಾಖೆಗೆ ಇಂಥ ಅಸಮರ್ಪಕವಾದ ಅಧಿಕಾರಿ ಗಳನ್ನು ಹಾಕುತ್ತಿದ್ದಾರೆ. ಈ ರೀತಿ ಏತಕ್ಕೆ ಹಾಕಬೇಕು ? ನಾನು ಕಣ್ಣಾರೆ ಕಂಡಿರುವ ಸತ್ಯವನ್ನು

ಹೇಳುತ್ತೇನೆ. ಹೀಗಾದರೆ ರಾಜ್ಯದಲ್ಲಿ ಜನರ ಮಾನ ಪ್ರಾಣ ಹೇಗೆ ಉಳಿಯತಕ್ಕದ್ದು ಎಂಬ ಬಗ್ಗೆ ಕೇಳುತ್ತೇನೆ. ರಾತ್ರಿ ೧ ಗಂಟೆಯಲ್ಲಿ ಒಬ್ಬ ಕಡುಬಡವ, ಹಂಗಾಮಿ ಜಮೀನನ್ನು ಸಾಗುವಳಿ ಮಾಡುತ್ತಿದ್ದವನು ಶೆಡ್ಡಿನಲ್ಲಿ ಮಲಗಿದ್ದ. ಅವನನ್ನು ಖಾಲಿ ಮಾಡುವುದಕ್ಕೆ ಶೆಡ್‌ಗೆ ಬೆಂಕಿ ಹಾಕುವುದಕ್ಕೆ ಪ್ರಯತ್ನ ಪಟ್ಟಾಗ ಅವನು ಅವನ ಮನೆಯವರನ್ನು ಜನರನ್ನು ಕರೆದುಕೊಂಡು ಬಾ ಎಂದು ಊರಿಗೆ ಕಳುಹಿಸಿದ. ನಂತರ ೧೦ ಗಂಟೆಗೆ ಅವನ ಕತ್ತು ಕುಯ್ದರು. ಈ ವಿಷಯದಲ್ಲಿ ದೂರಿದವರೆಲ್ಲಾ ಒಂದಾದರೂ ಪ್ರಯೋಜನ ಆಗಲಿಲ್ಲ. ಈ ಕೇಸನ್ನು ಸಿ. ಒ. ಡಿ. ಗೆ ರೆಫರ್ ಮಾಡಿದರು. ನಂತರ ರಿಸಲ್ಟ್ ಏನು ಬಂತು ಗೊತ್ತಾ ? ಯಾರು ಹಂಗಾಮಿ ಜಮೀನಿನಲ್ಲಿ ಸಾಗುವಳಿ ಮಾಡುತ್ತಿದ್ದ, ಅವನಿಗೆ ಆ ಜಮೀನನ್ನು ಕೊಡಿಸಬೇಕು ಎಂದು ಸಹಾಯ ಮಾಡುವುದಕ್ಕೆ ಹೋದಂಥ ಮನುಷ್ಯನನ್ನು ಜೈಲಿಗೆ ಹಾಕಿದರು. ಮತ್ತೆ ಯಾರು ಅಪರಾಧ ಮಾಡಿದ್ದಾರೋ ಅವರಿಗೆ ರಕ್ಷಣೆ ಸಿಕ್ಕಿತು. ಇದಕ್ಕೆ ಏನು ಕಾರಣವೆಂದರೆ ಅವನಿಂದ ೨೫ ಸಾವಿರ ರೂಪಾಯಿಗಳ ಹಣವನ್ನು ತೆಗೆದುಕೊಂಡರು. ಏನೇ ತಪ್ಪು ಮಾಡಿದರೂ ಹಣವನ್ನು ಕೊಟ್ಟರೆ ಮಾಡಿದ ಅಪರಾಧ ಇಲ್ಲದಂತಾಗುತ್ತದೆ ಎಂಬುದು ಇವರಿಂದ ಅರ್ಥವಾಗುತ್ತದೆ. ಇದರ ಬಗ್ಗೆ ನಾವೇ ಇಲ್ಲಿ ಮುಖ್ಯಮಂತ್ರಿಯವರಿಗೆ ಹೇಳಿ ಸಿ. ಓ. ಡಿ. ಗೆ ಹಾಕಿಸಿದ್ದೇವೆ. ಕೆಳಗಿನ ಮಟ್ಟದಲ್ಲಿ ಬೇರೆ ಕಡೆ ಆಗಿರತಕ್ಕ ಅನ್ಯಾಯವನ್ನು ಪತ್ತೆ ಮಾಡುವುದಕ್ಕೆ ಸತ್ಯವನ್ನು ಶೋಧನೆ ಮಾಡಿ, ಅದರ ಬಗ್ಗೆ ಮಾಹಿತಿಯನ್ನು ಕೊಟ್ಟು ಸಮಾಜದಲ್ಲಿರತಕ್ಕ ಅನ್ಯಾಯಗಳನ್ನು ತಡೆಗಟ್ಟತಕ್ಕ ನಿಮ್ಮ ಈ ಇಲಾಖೆ ಎಷ್ಟೊಂದು ಭ್ರಷ್ಟಾಚಾರವಾಗಿದೆ, ಇಷ್ಟೊಂದು ಅಸಮರ್ಥವಾಗಿದ್ದೇ ಆದರೆ, ಮತ್ತೆ ಇನ್ಯಾವ ರೀತಿಯಲ್ಲಿ ಅಪರಾಧಗಳನ್ನು ತಡೆಗಟ್ಟುವಂತಹದು ? ಇಲ್ಲಿ ನಾವು ಏನಾದರೂ ವಿಷಯವನ್ನು ಹೇಳಿದರೆ ಸಿ. ಓ. ಡಿ.ಗೆ ಕೊಡುತ್ತಾರೆ. ಆದರೆ ಸಿ. ಓ. ಡಿ ಕೆಲಸ ಮಾಡುತ್ತಿರುವುದು ಹೀಗೆ ಎತಕ್ಕೆ ಹೀಗೆ ಮಾಡಿದಿರಿ ಎಂಬುದಾಗಿ ಕೇಳಿದರೆ, ಅಲ್ಲಿರತಕ್ಕ ಸರ್ಕಲ್ ಇನ್‌ಸ್ಪೆಕ್ಟರ್ ನನ್ನ ಸ್ನೇಹಿತನನ್ನು ಅವನಿಗೆ ರಿಟೈರ್ ಆಗುವುದಕ್ಕೆ ಹತ್ತಿರ ಬಂದಿದೆ. ಅವರಿಗೆ ತೊಂದರೆಯಾಗುತ್ತದೆಂದು ಹೇಳಿ ಆ ರೀತಿ ವರದಿಯನ್ನು ಕೊಡಲಾಯಿತೆಂದು. ೬ ತಿಂಗಳಾದ ಮೇಲೆ ನನಗೆ ತಿಳಿಸಿದರು. ಆದ್ದರಿಂದ ಈ ಇಲಾಖೆಯನ್ನು ನಿಜವಾಗಿಯೂ ಸರಿಯಾದ ರೀತಿಯಲ್ಲಿ ಕೆಲಸ ಮಾಡಬೇಕೆಂಬ ಉದ್ದೇಶ ನಿಮಗೆ ಇದ್ದರೆ, ಇದಕ್ಕೆ ಪ್ರತ್ಯೇಕವಾದ ವ್ಯವಸ್ಥೆಯನ್ನು ಮಾಡಬೇಕು. ಪೋಲೀಸ್‌ನವರಿಗೂ ಇದಕ್ಕೂ ಯಾವುದೇ ಸಂಬಂಧ ಇರಕೂಡದು. ಪ್ರತ್ಯೇಕವಾದ ವ್ಯವಸ್ಥೆಯನ್ನು ಮಾಡಿ, ಇದೊಂದು ಸ್ವತಂತ್ರ ಸಂಸ್ಥೆಯಾಗಿ ತನ್ನ ಕಾರ್ಯವನ್ನು ನಿರ್ವಹಿಸುವಂತೆ ಮಾಡದಿದ್ದರೆ ಪ್ರಯೋಜನವಿಲ್ಲ. ಒಬ್ಬ ಪೋಲೀಸ್ ಪೇದೆ ತಪ್ಪು ಮಾಡಿದರೆ ಅದು ಡಿ. ಜಿ. ಪಿ. ಯವರ ಮಟ್ಟಕ್ಕೂ ಕ್ಲೇಂ ಬರುತ್ತದೆಂದು ತಿಳಿದುಕೊಳ್ಳಬೇಕು. ಕಾಕಿ ಬಟ್ಟೆಯವರು ಮಹಾ ಅಪರಾಧವನ್ನು ಮಾಡಿದರೂ, ಕೊಲೆಯನ್ನು ಮಾಡಿದರೂ ಪೋಲೀಸ್ ಠಾಣೆಯಲ್ಲೇ ಸಾಯಿಸಿದರೂ ಅವರು ಅವರ ಸಿಬ್ಬಂದಿಯನ್ನು ಬಿಟ್ಟು ಕೊಡುವುದಿಲ್ಲ. ಅಂದರೆ ಯಾವ ರೀತಿ ಈ ರಾಜ್ಯದ ಜನರಿಗೆ ಇವರಿಂದ ರಕ್ಷಣೆ ಸಿಕ್ಕುತ್ತದೆಂಬುದನ್ನು ನಾವೇ ಯೋಚನೆ ಮಾಡಬೇಕು. ಈಗ ಇರತಕ್ಕಂತಹ ಪರಿಸ್ಥಿತಿಯಲ್ಲಿ ಯಾರು ಏನೇ ತಪ್ಪು ಮಾಡಿದರೂ ತಪ್ಪು ಮಾಡಿದವನು ಹಣವನ್ನು ಕೊಟ್ಟರೆ ಅವನಿಂದ ಯಾರು ಏನನ್ನು ತಿಂದಿರುತ್ತಾರೋ ಅವರನ್ನೇ ಎಳೆದು ಒಳಗೆ ಹಾಕುತ್ತಾರೆ. ಈ ರೀತಿ ಕೆಲಸ ಮಾಡುವುದಾದರೆ ಈ ರಾಜ್ಯದ ಪ್ರಗತಿ ಯಾವ ರೀತಿ ಆಗುತ್ತದೆ ? ನಮ್ಮ ಈ ರೀತಿಯ ಕೃತ್ಯಗಳಿಂದಾಗಿ ಇಲಾಖೆಯಮೇಲೆ ಜನರಲ್ಲಿ ಇರತಕ್ಕ ನಂಬಿಕೆಯೇ ಹೊರಟು ಹೋಗಿದೆ. ಆ ನಂಬಿಕೆ ಪುನಃ ಉಂಟಾಗಬೇಕಾದರೆ ಇದರಲ್ಲಿರತಕ್ಕ ಅಧಿಕಾರಿಗಳ ಮನೋಭಾವ ಬದಲಾವಣೆಯಾಗಬೇಕು. ಅದಕ್ಕೆ ಮಾನ್ಯ ಗೃಹ ಮಂತ್ರಿಗಳು ಸರಿಯಾದ ನಿಲುವನ್ನು ತೆಗೆದುಕೊಳ್ಳಬೇಕು. ಅವರು ಕೊಟ್ಟಂತಹ ವರದಿಯನ್ನು ಇಲ್ಲಿ ಲೌಡ್‌ಸ್ಪೀಕರ್ ಹೇಳುವಂತೆ ಹೇಳುವಂತಹ ಮಂತ್ರಿಗಳೇ ಇದ್ದಾರೆ. ಒಂದು ವಿಚಾರದಲ್ಲಿ ಅವರು ಕೊಟ್ಟಂತಹ ವರದಿಯು ಸರಿಯಾಗಿದೆಯೋ ಅಥವಾ ಇಲ್ಲವೇ ಎಂಬುದನ್ನು ಆ ವರದಿಯಮೇಲೆ ಹೋಗಿ ಸ್ಥಳ ಪರಿಶೀಲನೆ ಮಾಡತಕ್ಕಂತಹ ಮಂತ್ರಿಗಳು ಎಷ್ಟು ಜನ ಇದ್ದಾರೆ ? ಅವರು ಕೊಟ್ಟಂತಹ ವರದಿ ಸರಿಯೇ ತಪ್ಪೇ ಎಂಬುದನ್ನು ನೋಡತಕ್ಕ ಶಕ್ತಿ ಯಾರಿಗಿದೆ? ಒಂದು ವೇಳೆ ಸ್ಥಳ ಪರಿಶೀಲನೆ ಮಾಡಿ ತಾನೇ ಖುದ್ದು ವಿಚಾರ ಮಾಡಿ, ಅದು ಸತ್ಯವೇ ಎಂಬುದನ್ನು ನೋಡಿ, ತಪ್ಪಾಗಿದ್ದರೆ ಅವರ ಮೇಲೆ ಕ್ರಮ ತೆಗೆದುಕೊಂಡಿದ್ದಂತಹ ಮಂತ್ರಿಗಳು ಹಿಂದೆ ಇದ್ದರು. ಆದ್ದರಿಂದ ಈ ಇಲಾಖೆಯ ಮೇಲೆ ಸರಿಯಾದ ಕ್ರಮ ತೆಗೆದುಕೊಳ್ಳದಿದ್ದರೆ, ಈ ಇಲಾಖೆ ಇದ್ದೂ ಏನೂ ಪ್ರಯೋಜನವಾಗುವುದಿಲ್ಲ.

ಇನ್ನು ಆರಣ್ಯ ಗುಪ್ತಚಾರ ದಳ ಎಂಬುದಾಗಿ ಇದೆ. ೧೯೮೬-೮೭ರಲ್ಲಿ ೧೦೫೩ ಕೇಸ್ ಹಾಕಿದ್ದರೆ. ೧೯೮೭-೮೮ರಲ್ಲಿ ೧೨೪೦ ಕೇಸ್‌ಗಳನ್ನು ಹಾಕಿದ್ದಾರೆ. ಅಂದರೆ ಅಪರಾಧಗಳು ಕಡಿಮೆ ಆಗಲಿಲ್ಲ ಎಂಬುದು ಇದರಿಂದ ಅರ್ಥವಾಗುತ್ತದೆ. ಕಳೆದ ವರ್ಷಕ್ಕಿಂತ ಈ ವರ್ಷ ಹೆಚ್ಚು ಅಪರಾಧಗಳು ಬಂದಮೇಲೆ ಇದರಿಂದ ಇಲಾಖೆಗೆ ಕೆಟ್ಟ ಹೆಸರು ಬರುತ್ತದೆ. ಎಲ್ಲೋ ಲೋಪ ಇದೆ. ಅದನ್ನು ಸರಿ ಮಾಡಿ ಇಲಾಖೆಯ ಕಾರ್ಯದಕ್ಷತೆಯನ್ನು ಹೆಚ್ಚಿಸದ್ದೇ ಆದರೆ, ಅದರ ಬಗ್ಗೆ ಹೆಚ್ಚು ಆಸಕ್ತಿ ವಹಿಸಿದ್ದೇ

ಆದರೆ ಈ ರೀತಿ ಅಪರಾಧಗಳ ಸಂಖ್ಯೆ ಹೆಚ್ಚಾಗುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ. ಆದರೂ ಕೂಡ ಇವರು ತಮ್ಮ ವರದಿಯಲ್ಲಿ ಸರಿಯಾದ ರೀತಿಯಲ್ಲಿ ಕೆಲಸ ನಿರ್ವಹಿಸುತ್ತದೆ ಎಂಬುದಾಗಿ ಹೇಳಿರುವುದು ಸರಿಯಲ್ಲ. ಆದ್ದರಿಂದ ಇದು ತನ್ನ ಕಾರ್ಯವನ್ನು ಇಂಪ್ರೂವ್ ಮಾಡಿಕೊಳ್ಳಬೇಕಾಗಿದೆ.

ಇನ್ನು ಅಪರಾಧಗಳು. ಅಪರಾಧಗಳ ಬಗ್ಗೆ ಹೇಳುವುದಾದರೆ, ಇದು ದಿನೇ ದಿನೇ ಜಾಸ್ತಿಯಾಗುತ್ತಿವೆ. ಕಡಿಮೆಯಾಗತಕ್ಕ ಲಕ್ಷಣಗಳು ನಮಗೆ ಕಾಣುತ್ತಿಲ್ಲ. ಎಷ್ಟು ಜಾಸ್ತಿಆಗಿದೆ ಎಂದರೆ. ಇಲ್ಲೇ ಅವರೇ ಕೊಟ್ಟಿರತಕ್ಕ ಅಂಕಿ ಅಂಶಗಳ ಪ್ರಕಾರ ೧೯೮೭ರಲ್ಲಿ ಆಗಿರತಕ್ಕ ಕೊಲೆ ೧೦೭೧, ೧೯೮೭ರಲ್ಲಿ ೧೪೬೩ ನಡೆದಿವೆ. ೧೯೮೬-೮೭ಕ್ಕೆ ಕಡಿಮೆ ಆಗಿದ್ದು ಈಗ ಅದು ಜಾಸ್ತಿಯಾಗಿದೆ. ಮತ್ತೆ ಇವುಗಳನ್ನು ತಡೆಯುವುದು ಹೇಗೆ ? ನಿಮ್ಮ ಇಂಟೆಲಿಜೆನ್ಸ್ ಏನು ಮಾಡುತ್ತಿದೆ ? ನಿಮ್ಮ ಗುಪ್ತದಳ ಇರುವುದು ಏಕೆ ? ಇವತ್ತು ೨ಸಾವಿರ ಜನ ಇಂಟೆಲಿಜೆನ್ಸ್‌ನಲ್ಲಿ ಇದ್ದು ಏಕೆ ನೀವು ಅವರಿಂದ ಕೆಲಸ ತೆಗೆದುಕೊಂಡಿಲ್ಲ ? ಇವರಿಗೆ ಎಷ್ಟು ಹಣ ಖರ್ಚು ಆಗುತ್ತಿದೆ ? ಇವತ್ತು ತಡೆಗಟ್ಟುವಂತಹ ಕೆಲಸವನ್ನು ಸರಿಯಾಗಿ ನಿರ್ವಹಿಸುತ್ತಿಲ್ಲ ಎನ್ನುವುದಕ್ಕೆ ಇದೂ ಕೂಡ ಜಾಸ್ತಿ ಆಗಿರುವುದರಿಂದಲೇ ನಾವು ತಿಳಿದು ಕೊಳ್ಳಬಹುದು. ಮತ್ತೆ ದರೋಡೆ ೨೪೯ ಇದ್ದುದು ೨೧೦ ಆಗಿದೆ. ನಿಮ್ಮ ಅಂಕಿ ಅಂಶಗಳನ್ನು ನಾನು ಹೇಳುತ್ತಿದ್ದೇನೆ. ಸುಲಿಗೆ ೪೭೫ ಇದ್ದುದು ೬೫೬ ಆಗಿದೆ. ಮತ್ತೆ ಕಳ್ಳತನದ ಕೇಸುಗಳು ೧೬,೩೯೬ ಇದ್ದುದು ೧೮,೯೫೫ ಕ್ಕೆ ಏರಿದೆ. ಕಡಿಮೆ ಆಗತಕ್ಕ ಪರಿಸ್ಥಿತಿಯಲ್ಲೇ ಇಲ್ಲ. ಇದು ಏಕೆ ? ಮತ್ತೆ ಇದರಲ್ಲಿ ನಿಮ್ಮ ಎಫರ್ಟ್ಸ್ ಏನೂ ಇಲ್ಲ. ಹಿಂದಿನ ವರ್ಷದ ಮಾಹಿತಿ ಬಂದಮೇಲೆ ಇವನ್ನು ತಡೆ ಹಿಡಿಯುವುದಕ್ಕೆ ಪ್ರಯತ್ನವನೇನಾದರೂ ಮಾಡಿದ್ದೀರಾ ? ಹೋಗುವವರು ಹೋಗಲಿ, ಬರುವವರು ಬರಲಿ ಸಂಬಳವನ್ನು ಎಣಿಸಿಕೊಂಡು ಸುಖವಾಗಿ ಇರೋಣ ಎಂದರೆ ಆಗುವುದಿಲ್ಲ. ಇವತ್ತು ಜನತೆಗೆ ರಕ್ಷಣೆ ಕೊಡತಕ್ಕ ಪ್ರಯತ್ನ ನಡೆದೇ ಇಲ್ಲ. ಇನ್ನು ಕೊನೆಯದಾಗಿ ಅಪರಾಧಗಳ ಸಂಖ್ಯೆ ನೋಡಿ ೧೯೮೬-೮೭ರಲ್ಲಿ ೮೧, ೫೪೦ ಇದ್ದುದು ಈಗ ೧, ೦೩, ೯೫೨ ಅಪರಾಧಗಳು ನಡೆದಿವೆ ? ಎಷ್ಟು ಜಾಸ್ತಿಯಾಯಿತು ? ಇದರಲ್ಲಿ ನಿಮ್ಮ ಪ್ರಯತ್ನ ಏನೂ ಇಲ್ಲ, ನೀವು ಎಲ್ಲವನ್ನೂ ಕೈಬಿಟ್ಟಿದ್ದೀರಿ ಏನೂ ಇಲ್ಲ, ಏನರೂ ಇಲ್ಲ. ಅಪರಾಧಗಳ ಪತ್ತೆ ಕೆಲಸ ಇಲ್ಲವೇ ಇಲ್ಲ, ಇನ್ನೂ ತಡೆಗಟ್ಟುವುದಾದರು ಎಲ್ಲಿ ? ಆದ ಅಪರಾಧವನ್ನು ಪತ್ತೆಹಚ್ಚತಕ್ಕದ್ದು ಇಲಾಖೆಯ ಮುಖ್ಯ ಕರ್ತವ್ಯ. ಇವತ್ತು ಎಷ್ಟು ಅಪರಾಧಗಳನ್ನು ಪತ್ತೆಹಚ್ಚಿದ್ದೀರಿ ಎಂದು ಕೇಳಿದರೆ ಅದಕ್ಕೆ ಸಂಶಯಾಸ್ಪದ ಉತ್ತರ ಬರುತ್ತದೆ. ಇವತ್ತು ೧೦೦ ಕೊಲೆಯಲ್ಲಿ ೧ ಅಥವಾ ೨ಕ್ಕೆ ಕನ್ವಿಕ್ಷನ್ ಸಿಗುತ್ತದೆ. ಎಷ್ಟೋ ಕೇಸುಗಳು ಸಾಕ್ಷಿ ಸಿಗದೇ ಹೋಗುತ್ತವೆ, ಹಳ್ಳಿಗಾಡಿನಲ್ಲಿ ೧೦ ಕೊಲೆಯಾದರೆ ಒಂದಕ್ಕೂ ಕನ್ವಿಕ್ಷನ್ ಸಿಗುವುದಿಲ್ಲ. ಕೊಲೆ ಮಾಡಿದವರು ಒಂದು ಇವರನ್ನೇ ಹಿಡಿಯುತ್ತಾರೆ. ಪೋಲಿಸಿನವರು ಜೊತೆ ಇವರ ಕಾಂಟ್ರಾಕ್ಟ್ ಹೀಗಾಗಿ ಅವರು ಸರಿಯಾದ ರಿಪೋರ್ಟ್ ಕೊಡುವುದಿಲ್ಲ. ಮತ್ತೆ ಸರಿಯಾದ ಇನ್‌ವೆಸ್ಟಿಗೇಷನ್ ಮಾಡುವುದಿಲ್ಲ. ರಿಪೋರ್ಟ್‌ನಲ್ಲಿ ಎಲ್ಲಾ ಸರಿ ಮಾಡುತ್ತಾರೆ. ನಮ್ಮ ತುರುವೆಕೆರೆಯಲ್ಲಿ ಒಬ್ಬ ಸಬ್-ಇನ್ಸ್‌ಪೆಕ್ಟರ್ ಇದ್ದಾರೆ. ಅಲ್ಲಿ ಕಳೆದ ೩ ವರ್ಷಗಳಿಂದ ೧೪ ಕೊಲೆಗಳು ನಡೆದಿದ್ದರೂ ಕೇವಲ ಒಂದೆರಡರಲ್ಲಿ ಇನ್ವೆಸ್ಟಿಗೇಷನ್ ಮಾಡಿರಬಹುದು. ಇಲ್ಲಿ ಮರ್ಡರ್ ಕೇಸುಗಳೆಲ್ಲಾ ರಾಜಿ. ಇಲ್ಲಿ ಡೌರಿ ಕೇಸಿನಲ್ಲಿ ಅತ್ಯಾಚಾರ ಮಾಡಿ. ಹೆಣವನ್ನು ಮರಕ್ಕೆ ನೇತುಹಾಕಿದ್ದಾರೆ. ಇದರಲ್ಲೂ ಕೂಡ ರಾಜಿ. ಕಳೆದ ೩ ವರ್ಷದಲ್ಲಿ ಅಲ್ಲಿ ೧೩ ಕೊಲೆಗಳು ನಡೆದಿವೆ. ಈ ಪೋಲೀಸ್ ಇಲಾಖೆಯಲ್ಲಿ ಕುಮ್ಮಕ್ಕು ಇಲ್ಲದೇ ಇಂತಹ ಕೊಲೆಗಳ ಸಂಖ್ಯೆ ಜಾಸ್ತಿ ಆಗುವುದಕ್ಕೆ ಸಾಧ್ಯವಿಲ್ಲ ಇವತ್ತು ಸದರ ತೋರಿಸದೇ ಇದರ ಮೇಲೆ. ಕ್ರಮ ತೆಗೆದು ಕೊಂಡಿದ್ದರೆ ಇಂತಹದ್ದೆಲ್ಲಾ ಆಗುವುದಕ್ಕೆ ಸಾಧ್ಯವಿರಲಿಲ್ಲ. ಈ ಇಲಾಖೆ ಯಲ್ಲಿ ಈ ಬಗ್ಗೆ ಯಾವುದೇ ಒಂದು ನಿಲುವನ್ನು ತೆಗೆದುಕೊಂಡಿಲ್ಲ ಎಂದು ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಇನ್ನು ರಿಸರ್ವ್ ಪೋಲೀಸ್ ಬಗ್ಗೆ ಹೇಳುತ್ತೇನೆ. ಇದನೆಲ್ಲಾ ಏಕೆ ಹೇಳುತ್ತಿದ್ದೇನೆಂದರೆ ಹಣವನ್ನು ಖರ್ಚು ಮಾಡಿ. ಇವರೆಲ್ಲರಿಗೂ ಒಂದೊಂದು ಪದವಿಯನ್ನು. ರ್‍ಯಾಂಕ್‌ಗಳನ್ನು ಕೊಟ್ಟು ಕೂರಿಸುವುದಕೋಸ್ಕರ ಈ ಇಲಾಖೆ ಇದೆಯೇ ಎಂದು ಕೇಳುತ್ತೇನೆ. ಈ ರಿಸರ್ವ್ ಪೋಲೀಸಿನಲ್ಲಿ ೫ ಬೆಟಾಲಿಯನ್‌ನಲ್ಲೂ ಒಬೊಬ್ಬ ಎಸ್. ಪಿ. ಗ್ರೇಡಿನ ಅಧಿಕಾರಿಗಳು ಇದ್ದಾರೆ. ಇವರ ಕೆಲಸ ಏನು ? ಎಲ್ಲಾದರೂ ಗಲಾಟೆ ಆದರೆ ಅಲ್ಲಿಗೆ ಹೋಗಿ ಬಂದೋಬಸ್ತು ನೋಡಿಕೊಳ್ಳುವುದು. ಒಂದೊಂದು ಜಿಲ್ಲೆಯಲ್ಲಿ ಕೂಡ ಎಷ್ಟು ಜವಬ್ದಾರಿ ಹೊತ್ತ ಕೆಲಸ ಮಾಡುವಂತಹ ಎಸ್. ಪಿ.ಗ್ರೇಡಿನ

ಅಧಿಕಾರಿಗಳು ಈ ರಿಸರ್ವ್ ಪೋಲೀಸಿನಲ್ಲಿದ್ದಾರೆ. ಇವರಿಗೆ ಸಂಬಳ ಸಾರಿಗೆ ಹಾಗೂ ಇತರ ಸೌಲಭ್ಯ ಗಳಿಗಾಗಿ ಎಷ್ಟು ವೆಚ್ಚ ? ಇಷ್ಟು ಉನ್ನತ ಮಟ್ಟದ ಅಧಿಕಾರಿಗಳು ಅಲ್ಲಿಗೆ ಅವಶ್ಯಕವೇ ? ಈ ರೀತಿ ಹುದ್ದೆಗಳು ಇರತಕ್ಕದು ಸರಿಯಲ್ಲವೆಂದು ಹೇಳುತ್ತೇನೆ. ಅಧ್ಯಕ್ಷರೇ, ಪೋಲೀಸ್ ಇಲಾಖೆಯಲ್ಲಿನ ವಸತಿ ಗೃಹಗಳ ಬಗ್ಗೆ ಹೇಳುತ್ತೇನೆ. ಈ ಇಲಾಖೆಯ ಪೇದೆಗಳು ಬಡನೌಕರರಿಗೆ ಗೃಹ ನಿರ್ಮಾಣ ಮಾಡತಕ್ಕ... —

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.— ಯಾರು ಇದನ್ನೆಲ್ಲಾ ಆ ಕಡೆ ಕೇಳುತ್ತಿದ್ದಾರೆ ?

ಶ್ರೀ ಬಿ. ಲಕ್ಕಪ್ಪ.—ಅಲ್ಲಿ ಇದ್ದಾರಲ್ಲಾ ಮಾನ್ಯ ಲಕ್ಷ್ಮಿಸಾಗರ್ ಅವರು ನಾನು ಹೇಳಿದ್ದೆಲ್ಲಾ ಅವರ ಕಿವಿಯೊಳಕ್ಕೆ ಹೋಗುತ್ತಿದೆ.

ವಿಚಾರಣೆ ಮಾಡಿ ಯಾರು ಹೊಡೆದಿದ್ದಾರೆಂದು ಪತ್ತೆಹಚ್ಚಬೇಕು. ನಿಮ್ಮ ಅಧಿಕಾರಿಗಳನ್ನು ಅಲ್ಲಿಗೆ ಕಳುಹಿಸಿಕೊಟ್ಟು ಶಿವಶಂಕರ್‌ರವರಿಗೆ ಯಾರು ಹೊಡೆದಿದ್ದಾರೆಂದು ತಿಳಿದುಕೊಂಡು ಅವರ ಮೇಲೆ ಶಿಸ್ತಿನ ಕ್ರಮ ಕೈಗೊಳ್ಳುವುದರ ಮೂಲಕ ಶಿಕ್ಷೆಯನ್ನು ಕೊಡಬೇಕೆಂದು ನಾನು ತಮ್ಮಲ್ಲಿ ಕೇಳಿ ಕೊಳ್ಳುತ್ತೇನೆ. ಇಷ್ಟು ಹೇಳುತ್ತಾ ಮಾನ್ಯ ಅಧ್ಯಕ್ಷರೇ, ನಾನು ಹೆಚ್ಚು ಹೊತ್ತು ಮಾತನಾಡುವುದಕ್ಕೆ ಹೋಗುವುದಿಲ್ಲ. ವಿಶ್ರಾಂತಿ ವೇತನದ ಬಗ್ಗೆ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಅನೇಕ ನಗರಸಭೆಗಳಲ್ಲಿ ಸರ್ವೀಸ್ ರಿಜಿಸ್ಟರ್‌ಗಳು ಸರಿಯಾಗಿ ಮೇನ್‌ಟೇನ್ ಮಾಡಿಲ್ಲ. ೩೦–೩೫ ವರ್ಷಗಳ ಕಾಲ ಸರ್ವೀಸ್ ಮಾಡಿದ ನೌಕರರು ನಿವೃತ್ತಿ ಹೊಂದಿದ ಮೇಲೆ ಅವರಿಗೆ ಸಿಗತಕ್ಕಂಥ ಸೌಲಭ್ಯಗಳನು ಪಡೆಯುವುದಕ್ಕಾಗಿ ಅಲೆದಾಡುತ್ತಾರೆ. ಆ ಬಗ್ಗೆ ತಾವು ಯೋಚನೆ ಮಾಡಬೇಕು. ಸರ್ಕಾರದ ಇಲಾಖೆ ಗಳಲ್ಲೂ ಈ ತರಹ ಅನೇಕ ತೊಂದರೆಗಳು ಆಗುತ್ತಿರುತ್ತವೆ. ಸರ್ಕಾರದಲ್ಲಿ ೩೫ ವರ್ಷಗಳ ಕಾಲ ಸರ್ವೀಸ್ ಮಾಡಿರುವವರು ಅವರಿಗೆ ಸಿಕ್ಕಬೇಕಾದ ಸೌಲಭ್ಯಗಳಿಗಾಗಿ ಮತ್ತು ಅನುಕೂಲಕ್ಕಾಗಿ ಬೆಂಗಳೂರಿಗೆ ಬಂದು ಕಚೇರಿಯಿಂದ ಕಛೇರಿಗೆ, ಟೇಬಲ್‌ನಿಂದ ಟೇಬಲ್‌ಗೆ ತಿರುಗಾಡುವುದನ್ನು ನಾವು ನೋಡಿದ್ದೇವೆ. ಇಂಥ ಅವ್ಯವಸ್ಥೆ ಮೊದಲು ಹೋಗಬೇಕು. ೩೫ ವರ್ಷಗಳ ಸರ್ಕಾರದಲ್ಲಿ ಸೇವೆ ಮಾಡಿ ನಿವೃತ್ತಿಯಾದ ಮೇಲೆ ಬರತಕ್ಕ ಸೌಲಭ್ಯವನ್ನು ಪಡೆಯುವುದಕ್ಕಾಗಿ ಹೊಸದಾಗಿ ಕೆಲಸಕ್ಕೆ ಬಂದಿರತಕ್ಕ ಹುಡುಗನಿಗೆ ಕೈಮುಗಿದು ನಿಂತುಕೊಳ್ಳ ಬೇಕಾದ ಪರಿಸ್ಥಿತಿ ಇವತ್ತು ಇದೆ. ೩೫ ವರ್ಷಗಳ ಕಾಲ ಸೇವೆ ಮಾಡಿದ ಒಬ್ಬ ನೌಕರನಿಗೆ ನಾವು ಕೊಡತಕ್ಕಂಥ ಗೌರವ ಇದೇನಾ ಎಂದು ನಾವು ಯೋಚನೆ ಮಾಡಬೇಕಾಗು ತ್ತದೆ. ಆದ್ದರಿಂದ, ಸರ್ವೀಸ್ ರಿಜಿಸ್ಟರ್ ಸರಿಯಾಗಿ ಇಟ್ಟು ಯಾವ ನೌಕರನು ನಿವೃತ್ತಿ ಹೊಂದು ತ್ತಾನೋ ಅವನಿಗೆ ಸಂಬಂಧಪಟ್ಟ ಎಲ್ಲಾ ಲೆಕ್ಕಪತ್ರಗಳನ್ನು ಸರಿಯಾಗಿ ನೋಡಿ ನೌಕರನು ನಿವೃತ್ತಿ ಹೊಂದುವ ದಿನ ಎಲ್ಲಾ ಸೌಲಭ್ಯಗಳನ್ನು ಕೊಟ್ಟು ಕಳುಹಿಸುವ ವ್ಯವಸ್ಥೆಯನ್ನು ಮಾಡಬೇಕು. ನಿವೃತ್ತಿಯಾದ ಮೇಲೆ ಇನ್ನೊಬ್ಬ ನೌಕರನ ಹತ್ತಿರ ಹೋಗಿ ಕೈಮುಗಿದು ನಿಲ್ಲತಕ್ಕಂಥ ಪರಿಸ್ಥಿತಿ ಬಾರದು. ಈ ರೀತಿ ಒಳ್ಳೆಯ ವ್ಯವಸ್ಥೆಯನ್ನು ಮಾಡುವುದಕ್ಕೆ ತಮ್ಮಲ್ಲಿ ಅಧಿಕಾರಿಗಳು ಇಲ್ಲವಾ ? ಬೇಕಾದಷ್ಟು ಅಧಿಕಾರಿಗಳು ಇದ್ದಾರೆ. ಈ ಅಧಿಕಾರಿಗಳಿಗೆ ತಾವು ಸರಿಯಾದ ತಾಕೀತನ್ನು ಮಾಡಬೇಕು ಹಾಗೂ ಅವರ ಕಾರ್ಯಗಳನ್ನು ತಾವು ಗಮನಿಸಬೇಕು. ತಮ್ಮ ಗಮನಕ್ಕೆ ಯಾವುದೇ ವಿಷಯ ಬಂದರೂ ಕೂಡ ತಾವು ಅದರ ಕಡೆ ವಿಶೇಷ ಗಮನ ಇಟ್ಟು ನೋಡಬೇಕು. ಅದು ಬಿಟ್ಟು ಏನೋ ಕೊಟ್ಟಿದ್ದಾರೆ. ಆ ಕಡೆ ಟೇಬಲ್ ಮೇಲೆ ಹಾಕೋಣ ಎಂದು ತಾವು ಮಾಡಿದರೆ ಏನೂ ಪ್ರಯೋಜನ ವಾಗುವುದಿಲ್ಲ. ಯಾರಾದರು ಏನಾದರೂ ಹೇಳಿದರೆ ಅದರಲ್ಲಿ ಸತ್ಯಾಂಶ ಏನಿದೆ ಎಂಬುದನ್ನು ತಾವು ಗಮನಕ್ಕೆ ತೆಗೆದುಕೊಳ್ಳದೇ ಇರುವುದರಿಂದಲೇ ಆಡಳಿತ ವ್ಯವಸ್ಥೆ ಕುಸಿದುಬಿದ್ದಿದೆ ಎಂದು ಹೇಳಿದರೆ ತಪ್ಪಾಗುವುದಿಲ್ಲ. ಇನ್ನು ಅಧ್ಯಕ್ಷರೇ ಚುನಾವಣೆ ಬಗ್ಗೆ ಹೇಳುವುದಾದರೆ, ಒಬ್ಬ ಶಾಸಕ ಚುನಾವಣೆ ಯಲ್ಲಿ ಗೆದ್ದು ಬಂದರೆ, ಖರ್ಚು ಮಾಡಿದ ಬಗ್ಗೆ ಎಲ್ಲಾ ವಿವರಗಳನ್ನು ಸರ್ಕಾರಕ್ಕೆ ಕೊಡಬೇಕಾಗುತ್ತದೆ. ೩೫ ಸಾವಿರ ರೂಪಾಯಿಗಳಿಂತ ಹೆಚ್ಚಿಗೆ ಖರ್ಚು ಮಾಡಬಾರದೆಂದು ನಿಯಮ ಇದೆ. ಬರೀ ೩೫ ಸಾವಿರ ರೂಪಾಯಿಗಳನ್ನು ಮಾತ್ರ ಯಾರು ಖರ್ಚು ಮಾಡುತ್ತಾರೆ ? ಒಬ್ಬೊಬ್ಬ ಶಾಸಕನೂ ೩ ಲಕ್ಷ ೪ ಲಕ್ಷ ೫ ಲಕ್ಷ ರೂಪಾಯಿಗಳನ್ನು ಚುನಾವಣೆಗಾಗಿ ಖರ್ಚು ಮಾಡುತ್ತಾನೆ. ಚುನಾವಣೆಯಾದ ಮೇಲೆ ಶಾಸಕನು ಪ್ರಮಾಣವಚನ ಸ್ವೀಕಾರ ಮಾಡಬೇಕಾಗುತ್ತದೆ. ಪ್ರಮಾಣ ವಚನ ತೆಗೆದುಕೊಳ್ಳುವ ಮೊದಲನೇ ದಿವಸವೇ ಸುಳ್ಳು ಹೇಳುವ ಕಾರ್ಯ ನಮ್ಮಿಂದ ಪ್ರಾರಂಭವಾಗುತ್ತದೆ. ೩೫ ಸಾವಿರ ರೂಪಾಯಿಗಳನ್ನು ಮಾತ್ರ ಖರ್ಚು ಮಾಡಬೇಕೆಂದು ಏಕೆ ಮಿತಿ ಹಾಕಬೇಕು ? ಮಿತಿಯನ್ನು ತೆಗೆದುಹಾಕಿ. ಇಲ್ಲಾ ಅಂದರೆ ಚುನಾವಣೆಗೆ ಬೇಕಾದಂಥ ಅನುಕೂಲಗಳನ್ನು ಒದಗಿಸಿಕೊಡತಕ್ಕ ವ್ಯವಸ್ಥೆ ಮಾಡಿ. ನೀವೂ ನೋಡಿದ್ದೀರಿ, ಹಣ ಇದ್ದಂಥವರು ಏನು ಖರ್ಚು ಮಾಡುತ್ತಾರೆಂದು, ಅದಕ್ಕೆ ಅಳೆ ಲೆಕ್ಕವೇ ಇರುವುದಿಲ್ಲ. ಇಷ್ಟು ಹಣ ಖರ್ಚು ಮಾಡಿದವರೂ ಕೂಡ ೩೫ ಸಾವಿರ ರೂಪಾಯಿ ಮಾತ್ರ ಖರ್ಚು ಮಾಡಲಾಗಿದೆ ಎಂದು ಸರ್ಕಾರಕ್ಕೆ ಲೆಕ್ಕ ಕೊಡುತ್ತಾರೆ. ಅವರು ಕೊಡತಕ್ಕಂಥ ಲೆಕ್ಕ ಸರಿ ಎನಿಸುತ್ತದೆಯೋ ? ಏಕೆ ಇವರ ಬಗ್ಗೆ ಕ್ರಮ ತೆಗೆದುಕೊಳ್ಳುವುದಿಲ್ಲ ? ಎರಡೂವರೆ ಲಕ್ಷ ಖರ್ಚು ಮಾಡಿರುತ್ತಾರೆ. ೨೫ ಸಾವಿರಕ್ಕೆ ಮಾತ್ರ ಲೆಕ್ಕ ತೋರಿಸುತ್ತಾರೆ. ಪ್ರಜಾಪ್ರಭುತ್ವದ

೪.೩೦. ಪಿ. ಎಂ.

ಗತಿ ಹೇಗಾಗಿದೆ ಅಂದರೆ ನಿಮ್ಮನ್ನು ನಂಬಿಕೊಂಡು ಜನರು ಹಾಳಾಗಿ ಹೋಗಿದ್ದಾರೆ. ಈ ದೇಶದಲ್ಲಿ ಪ್ರಜಾಪ್ರಭುತ್ವ ಇದೆಯೋ ಎಂದು ಹುಡುಕಬೇಕಾಗಿದೆ. ಜನರಿಗೆ ರಾಜ್ಯದಲ್ಲಿ ಯಾವ ಸೌಲಭ್ಯ ಸಿಕ್ಕಿದೆ?

ಶ್ರೀ ಬಿ. ರಾಚಯ್ಯ.—ಮಾನ್ಯ ಬಂಗಾರಪ್ಪನವರೇನೋ ಒಂದಿಷ್ಟು ವಿಷಯಗಳನ್ನು ಹೇಳಿದರು ಅದೇ ಲೈನಿನಲ್ಲಿ ಹೋಗಿ.

ಶ್ರೀ ಆರ್ ಎನ್. ನಾಯಕ್.—ಅವರು ಹೇಳಿದ್ದು ಅರ್ಥವಾಗಬೇಕಾದರೆ ನಿಮಗೆ ಇನ್ನೂ ೧೦ ವರ್ಷಬೇಕು.

ಶ್ರೀ ಬಿ. ರಾಚಯ್ಯ.—ನಾನು ಮಾನ್ಯ ಬಂಗಾರಪ್ಪನವರನ್ನು ಅರ್ಥಮಾಡಿಕೊಂಡಿದ್ದೇನೆ. ಇವತ್ತು ಅವರು ಹೊರಟ ಲೈನು ಹಾಗೆ ಇದೆ. ಡೀಟೈಲ್ಸ್ ಆಗಿ ಓದಿಕೊಂಡು ರೆಫರೆನ್ಸ್ ಹೇಳಿದರು ವಾಯ್ಸ್ ಸ್ವಲ್ಪ ಜಾಸ್ತಿಯಿತ್ತು ಇದ್ದುದರಲ್ಲಿ ಬಹಳ ಚೆನ್ನಾಗಿತ್ತುಯೆಂದು ಹೇಳುತ್ತೇನೆ.

ಶ್ರೀ ಆರ್. ಎನ್. ನಾಯಕ್.—ನಿಮ್ಮದು ಮೂರು ತಾಸು ಭಾಷಣ ಹೇಗಿತ್ತು ? ಕತೆ ಇದ್ದ ಹಾಗೆ ಇತ್ತು.

ಪ್ರೊ॥ ಎ. ಲಕ್ಷ್ಮೀಸಾಗರ್.—ಮಾನ್ಯ ಲಕ್ಕಪ್ಪನವರು ಪ್ರಜಾಪ್ರಭುತ್ವ ಹೊರಟು ಹೋಗಿದೆ ಎನ್ನುವ ರೀತಿಯಲ್ಲಿ ಹೇಳಿದರು. ಪ್ರಜಾಪ್ರಭುತ್ವ ಎನ್ನುವುದು ಬರೀ ಕರ್ನಾಟಕ ರಾಜ್ಯದ ಗಡಿ ರೇಷೆಯೊಳಗೆ ಇಲ್ಲ. ನಾನು ಬೇರೆ ಕಡೆ ಈ ವಿಷಯ ಹೇಳಿದರೆ ನನ್ನ ಮೇಲೆ ಪ್ರಿವಿಲೇಜ್ ಮೋಷನ್ ಮೂವ್ ಮಾಡುತ್ತಾರೆ. ಮಾನ್ಯ ಲಕ್ಕಪ್ಪನವರು ಲೋಕಸಭೆಯಲ್ಲಿ ಡಿಬೇಟ್ ಹೇಗೆ ನಡೆಯುತ್ತದೆ, ಅಲ್ಲಿನ ಪರಿಸ್ಥಿತಿ ಹೇಗಿದೆ, ಅಲ್ಲಿ ಏನು ಹೇಳುತ್ತಾರೆನ್ನುವುದನ್ನು ಹೋಗಿ ನೋಡಿಕೊಂಡು ಬನ್ನಿ. ಇಬ್ಬರು ಹೋಗೋಣ ಬನ್ನಿ.

ಅಧ್ಯಕ್ಷರು.—ಶ್ರೀ ಆರ್. ಎನ್. ನಾಯಕ್‌ರವರನ್ನು ಕರೆದುಕೊಂಡು ಹೋಗಿ.

ಪ್ರೊ॥ ಎ. ಲಕ್ಷ್ಮೀಸಾಗರ್.—ನಾನು ಬೆಳಿಗ್ಗೆನೇ ಹೇಳಿದ್ದೇನೆ "ನಾಯಕಂ ವಿನಾಯಕಂ ಅನಾಯಕಂ" ಎಂದು ಹೇಳಿದ್ದೇನೆ.

ಶ್ರೀ ಆರ್. ಎನ್. ನಾಯಕ್.—ಯಾರ ಸಂಗಡ ಬೇಕಾದರೂ ಹೋಗುತ್ತೇನೆ ಆದರೆ ಇವರ ಸಂಗಡ ಹೋಗುವುದಿಲ್ಲ.

ಅಧ್ಯಕ್ಷರು.—ಅವರು ನಿಮ್ಮ ಗುರು ಅಲ್ಲವೋ, ಹೌದೋ ಇಲ್ಲವೋ ?

ಶ್ರೀ ಆರ್. ಎನ್. ನಾಯಕ್.—ನಾನು ಅವರ ಜೊತೆ ಹೋಗುವುದಿಲ್ಲ.

ಪ್ರೊ॥ ಎ. ಲಕ್ಷ್ಮೀಸಾಗರ್.—ನಾನು ಗುರು ಪರಮಾನಂದ.

ಶ್ರೀ ಎಸ್. ಬಂಗಾರಪ್ಪ.—ಪ್ರಜಾಪ್ರಭುತ್ವ ರಕ್ಷಣೆ ಪುಣ್ಯಕ್ಕೆ ಇಲ್ಲೇ ಇದೆ, ಯಾರು ಹೇಳಿ ?

ಪ್ರೊ॥ ಎ. ಲಕ್ಷ್ಮೀಸಾಗರ್.—ನಾವೂ ನೀವೂ ಎಲ್ಲಾ ಪ್ರಜಾಪ್ರಭುತ್ವದಲ್ಲಿರುವವರು.

ಶ್ರೀ ಎಸ್, ಬಂಗಾರಪ್ಪ.—ಮೌಲ್ಯಾಧಾರಿತ ರಾಜಕಾರಣವನ್ನು ಯಾರು ಹೇಳಿದರು ? ನೀವು ಆ ಸೀಟಿನ ಕಡೆ ಕೈತೋರಿಸಿದಿರಿ ಅದಕ್ಕೆ ಹೇಳಿದೆ.

ಪ್ರೊ॥ ಎ. ಲಕ್ಷ್ಮೀಸಾಗರ್.—ಮೌಲ್ಯಾಧಾರಿತ ರಾಜಕಾರಣವನ್ನು ಬರೀ ಅವರು ಒಬ್ಬರೇ ಹೇಳಲಿಲ್ಲ. ಅದು ನಮ್ಮ ಪಕ್ಷದ ನೀತಿ.

ಶ್ರೀ ಎಸ್. ಬಂಗಾರಪ್ಪ.—ಹಿರಿಯಕ್ಕನ ಚಾಳಿ ಮನೆಮಂದಿಗೆಲ್ಲಾ ಎನ್ನುವ ಹಾಗೆ ನೀವೂ ಅದನ್ನೇ ಹೇಳುತ್ತೀರಿ.

ಪ್ರೊ॥ ಎ. ಲಕ್ಷ್ಮೀಸಾಗರ್.—ಚಾಳಿ ಬೇರೆ, ಇದು ನೀತಿ.

ಶ್ರೀ ಎಸ್ ಬಂಗಾರಪ್ಪ.—ಒಂದು ಖುಷಿ ಎನಪ್ಪಾ ಅಂದರೆ ಇವರ ಮೌಲ್ಯಾಧಾರಿತ ಪಾರ್ಲಿಮೆಂಟ್‌ನವರೆಗೆ ಬರಲಿಲ್ಲ. ಮೊದಲು ಇದ್ದರು, ಇತ್ತೀಚೆಗೆ ಬರಲಿಲ್ಲ. ಅದೊಂದೇ ಖುಷಿ ನಮಗೆ

ಪ್ರೊ॥ ಎ, ಲಕ್ಷ್ಮೀಸಾಗರ್.—ನಿಮ್ಮದೂ ತಲುಪಲಿ, ನಮ್ಮದೂ ತಲುಪಲಿ.

ಶ್ರೀ ಎಸ್. ಬಂಗಾರಪ್ಪ.—ಬೇಡ ಬೇಡಾ ಕರ್ನಾಟಕದೊಳಗೆ ಇರಲಿ. ಇವರು ಯಾವ ಕಡೆಗೆ ಹೋಗುತ್ತಾರೋ ಅಲ್ಲಿ ಏನಾದರೂ ಆಗುತ್ತದೆ, ಇವರು ಸನ್ಯಾಸಿ ಇದ್ದಹಾಗೆ, ಇವರು ಕಾಲಿಟ್ಟ ಕಡೆ ಏನಾದರೂ ಒಂದು ಆಗುತ್ತದೆ.

ಪ್ರೊ॥ ಎ. ಲಕ್ಷ್ಮೀಸಾಗರ್.—ಒಬ್ಬೊಬ್ಬರು ಕಾಲಿಟ್ಟಾಗ ಒಂದೊಂದು ಆಗುತ್ತದೆ. ಋಷ್ಯಶೃಂಗ ಅವರನ್ನು ಕರೆದುಕೊಂಡು ಬಂದರು ಮಳೆ ಬಂತು.

ಶ್ರೀ ಎಸ್. ಬಂಗಾರಪ್ಪ.—ನಿಮ್ಮ ಮುಖ್ಯಮಂತ್ರಿಗಳು ಬಂದರೆ ಮಳೆಗಾಲ ಹೋಗಿ ಬರಗಾಲ ಬಂತು ? ಋಷ್ಯಶೃಂಗ ಅವರು ಮಹಾನ್ ನಾಯಕರಾಗಿದ್ದರು, ನಿಮ್ಮ ನಾಯಕರು ಬರಗಾಲ ತರುವ ನಾಯಕರು. ಇವರು ಯಾವಾಗ ಕರ್ನಾಟಕಕ್ಕೆ ಬಂದರೋ ಬೆನ್ನಲ್ಲಿ ಭೂತ ಹಿಡಿದಹಾಗೆ ಮಳೆ ಬಾರದೆ ಭೂಮಿಯೆಲ್ಲಾ ಒಣಗಿ ಹೋಯಿತು, ಕರ್ನಾಟಕವನ್ನು ಅದು ಇನ್ನೂ ಬಿಟ್ಟಿಲ್ಲ ಅವರ ಪರಿಸ್ಥಿತಿ ಸರಿಯಾಗುವುದಿಲ್ಲ.

ಪ್ರೊ॥ ಎ. ಲಕ್ಷ್ಮೀಸಾಗರ್.—ಮಳೆ ಬಗ್ಗೆ ಹೇಳುವುದಾದರೆ ಒಂದು ಕಡೆ ನಾಲ್ಕು ವರ್ಷದಿಂದ ಮಳೆ ಬಾರದೇ ಇರುವುದರಿಂದ ನಾವು ಜಾಗೃತರಾಗಿ ಕೆಲಸ ಮಾಡಿದೆವು. ನಾಗರಿಕರ ಕಷ್ಟದ ಪರಿಸ್ಥಿತಿಯಲ್ಲಿ ನಾವು ಸರಿಯಾಗಿ ನೋಡಿಕೊಂಡು ಬಂದಿದ್ದೇವೆ. ಒಂದು ವರ್ಷ ಇವರ ರಾಜ್ಯದಲ್ಲಿ ಮಳೆ ಬಾರದ್ದಕ್ಕೆ ತತ್ತರಿಸಿ ಹೋಗಿದ್ದಾರೆ ಭೂಮಿಗೆ ಅಂಟಿಕೊಂಡಿದ್ದಾರೆ, ಅವರು ಏಳುವುದೇ ಕಷ್ಟವಾಗಿದೆ.

ಶ್ರೀ ಎಸ್. ಬಂಗಾರಪ್ಪ.—ನಿಮ್ಮ ಪ್ರಭಾವ ಆಂಧ್ರಪ್ರದೇಶ, ತಮಿಳುನಾಡುಗಳಲ್ಲಿ ಇದೆ. ಸೆಂಟ್ರಲ್ ಇಂಡಿಯಾದಲ್ಲಿ ಕರ್ನಾಟಕ ಏನಾದರೂ ಇದಿದ್ದರೆ ಇಡೀ ದೇಶವನ್ನು ತಿನ್ನುತ್ತಿತ್ತು.

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರೇ ಇದು ಸಾಕು. ಈಗ ಮಾನ್ಯ ಲಕ್ಕಪ್ಪನವರೇ, ಇನ್ನು ಐದು ನಿಮಿಷಗಳಲ್ಲಿ ತಮ್ಮ ಭಾಷಣ ಮುಗಿಸಿ.

ಶ್ರೀ ಬಿ. ಲಕ್ಕಪ್ಪ.—ಈಗ ಗೋಲಿಬಾರ್‌ಗಳು. ಇನ್ನು ಗೋಲಿಬಾರ್ ಮಾಡುವುದಿಲ್ಲ, ಅದಕ್ಕೆ ಬದಲಾಗಿ ರಬ್ಬರ್ ಗುಂಡುಗಳನ್ನು ಹಾಕಿ ಹೊಡೆಯುತ್ತೇವೆ, ಗೋಲಿಬಾರ್ ಮಾಡಬೇಕಾದ ಸಂದರ್ಭದಲ್ಲಿ ಲೋಹದ ಗುಂಡುಗಳನ್ನು ಬಳಸುವುದಿಲ್ಲ, ಮತ್ತು ಈ ರೀತಿಯಾಗಿ ಆಡಳಿತ ನಡೆಸುತ್ತೇವೆ ಎಂದು ಹೇಳಿದರು. ಬಹುಶಃ ಗೋಲಿಬಾರ್ ನಿಂತು ಹೋಗಿ ಬಿಡುತ್ತದೆ ಅಂದರೆ ಇಷ್ಟು ಒಳ್ಳೆಯ ಆಡಳಿತ ಸಿಕ್ಕಿದಂತಾಗುತ್ತದೆ ಎಂದು ಹೇಳಿ ಆ ಜನರು ನಿಮಗೆ ಅಧಿಕಾರವನ್ನು ಕೊಟ್ಟರು. ಈ ಗೋಲಿಬಾರಿನ ಸಂಖ್ಯೆಗಳು ಎಷ್ಟರ ಮಟ್ಟಿಗೆ ಹೆಚ್ಚುತ್ತಾ ಹೋಗುತ್ತಿದೆ ಎಂದರೆ ೮೬-೮೭ರಲ್ಲಿ ಗೋಲಿಬಾರ್ ಮಾಡಿದ ಘಟನೆಗಳನ್ನು ಹೋಲಿಸಿದರೆ ೮೬-೮೭ರಲ್ಲಿ ೨೮ ಸ್ಥಳಗಳಲ್ಲಿ ಗೋಲಿಬಾರ್ ಆಯಿತು. ಇವರು ಕೊಟ್ಟಿರತಕ್ಕಂಥ ವರದಿಯ ಪ್ರಕಾರವೇ ೮೭-೮೮ರಲ್ಲಿ ಎಷ್ಟು ಆಗಿದೆ ಎಂದರೆ ೪೦ ಸ್ಥಳಗಳಲ್ಲಿ ಆಗಿದೆ. ಏತಕ್ಕೆ ಆಯಿತು ? ಈ ಗೋಲಿಬಾರ್‌ಗಳನ್ನು ತಡೆಯತಕ್ಕಂಥ ಒಂದು ಶಕ್ತಿ, ಕುಶಲತೆ ಮುಂಜಾಗರೂಕತೆ ಈ ಅಧಿಕಾರಿಗಳಿಗೆ ಇದ್ದಿದ್ದರೆ ಗೋಲಿಬಾರ್ ಆಗುವುದಕ್ಕೆ ಅವಕಾಶವೇ ಇರುತ್ತಿರಲಿಲ್ಲ. ಪಾವಗಡದಲ್ಲಿ ಗೋಲಿಬಾರ್ ಆಯಿತು. ಮಧ್ಯಾಹ್ನ ಒಂದು-ಎರಡು ಗಂಟೆಗೆ ಗೋಲಿಬಾರ್ ಆಗಿ ಜನರು ಸತ್ತು ಹೋದರೆ, ಅಲ್ಲಿಗೆ ಎಸ್.ಪಿ. ಯವರು ಹೋಗಿದ್ದು ಸಾಯಂಕಾಲ ಆರು ಗಂಟೆಗೆ, ಅಧಿಕಾರಿಗಳು ತಮಗೆ ವಹಿಸಿರತಕ್ಕಂಥ ಜವಾಬ್ದಾರಿಯನ್ನು ಪ್ರಾಮಾಣಿಕವಾಗಿ; ಅವರು ಪಡೆಯುತಕ್ಕಂಥ ಸಂಬಳ ಸಾರಿಗೆ ಸೌಲಭ್ಯಕ್ಕೆ ತಮ್ಮ ಋಣವನ್ನು ತೀರಿಸುವುದಕ್ಕಾದರೂ ಈ ಸಮಾಜದಲ್ಲಿ ಒಳ್ಳೆಯ ಶಾಂತಿಯನ್ನು ಸ್ಥಾಪನೆ ಮಾಡುವುದಕ್ಕೆ ಅಧಿಕಾರಿಗಳು ಮುಂಜಾಗರೂಕತೆ ಕ್ರಮವನ್ನು ತೆಗೆದುಕೊಂಡಿದ್ದರೆ ಬಹುಶಃ ಈ ಗೋಲಿಬಾರ್‌ಗಳ ಸಂಖ್ಯೆಯನ್ನು ಕಡಿಮೆ ಮಾಡಬಹುದಿತ್ತು. ಈಗಂತೂ ಗೋಲಿಬಾರ್‌ಗಳು ನಡೆಯುತ್ತಲೇ ಹೋಗುತ್ತಿವೆ. ಮುಂದಿನ ಸಾರಿ ರಿಪೋರ್ಟನ್ನು ಕೊಟ್ಟರೆ ಈ ಸಂಖ್ಯೆ ಇನ್ನೂ ಜಾಸ್ತಿಯಾಗಬಹುದೇನೋ. ಕಡಿಮೆಯಾಗತಕ್ಕಂಥಾದ್ದು ಇಲ್ಲವೇ ಇಲ್ಲ. ೮೬-೮೭ರದ್ದು ನೋಡಿದರೆ ೮೭-೮೮ ರಲ್ಲಿ ಜಾಸ್ತಿಯಾಗಿದೆ. ಇನ್ನೂ ಇದು ೮೮-೮೯ಕ್ಕೆ ಜಾಸ್ತಿಯಾಗುತ್ತಲೇ ಹೋಗುತ್ತದೆ. ಈ ಕೋಮು ಗಲಭೆಗಳು ಬಹಳ ಪ್ರಮುಖವಾದಂಥ ವಿಚಾರ. ಅನೇಕ ಜಾತಿಗಳು, ಮತ್ತು ಅನೇಕ ಧರ್ಮೀಯರು, ಅನೇಕ ಅಲ್ಪಸಂಖ್ಯಾತರು ಇರತಕ್ಕಂಥ ಈ ರಾಜ್ಯದಲ್ಲಿ ಮತೀಯ ಗಲಭೆಗಳು ಸ್ವಾಭಾವಿಕವಾಗಿ ಇರುತ್ತವೆ. ಇವರ ಗುಪ್ತದಳವನ್ನು ಇಟ್ಟುಕೊಂಡಿದ್ದಾರಲ್ಲ ? ಈ ಗುಪ್ತದಳದವರು ಏನು ಕೆಲಸ ಮಾಡುತ್ತಾರೆ ? ಎಲ್ಲಿಯಾದರೂ ಮತೀಯ ಗಲಭೆಗಳ ಆಗುತ್ತವೆಯೆಂದು ತಿಳಿದು ಬಂದರೆ ಅವುಗಳನ್ನು ಮೊಳಕೆಯಲ್ಲೇ ತಡೆಯು

ವಂತಹದ್ದು ಅಥವಾ ಯಾವುದಾದರೂ ಒಂದು ಘಟನೆ, ಅನ್ಯಾಯ ನಡೆಯುವಂತಹದ್ದು ಇದ್ದರೆ ಅದು ನಡೆಯುವುದಕ್ಕೆ ಪೂರ್ವಭಾವಿಯಾಗಿ ಮುಂಚೆಯೇ ತಿಳಿಸುವಂಥ ಇಂಟಲಿಜೆನ್ಸ್ ವ್ಯವಸ್ಥೆ ನಿಮ್ಮಲ್ಲಿ ಇಲ್ಲವೇನು ? ಗುಪ್ತ ವಾರ್ತಾದಳದವರು ಏನು ಮಾಡಿದ್ದಾರೆ ? ಒಂದು ವೇಳೆ ಇಷ್ಟು ಜಾಗ್ರತೆ ಯಿಂದ ಕೆಲಸ ಮಾಡದಿದ್ದರೆ ಹೋದ ಸಾರಿಗಿಂತ ಇಷ್ಟು ಹೆಚ್ಚು ಪ್ರಮಾಣದಲ್ಲಿ ಗೋಲಿಬಾರ್ ಆಗುವುದಕ್ಕೆ ಅವಕಾಶ ಆಗುತ್ತಿರಲಿಲ್ಲ. ಆದ್ದರಿಂದ ಈ ಮತೀಯ ಗಲಭೆಗಳು ಏನಿವೆ, ಅವುಗಳನ್ನು ನಿಲ್ಲಿಸತಕ್ಕಂಥ ಕೆಲಸವನ್ನು ನೀವು ಮಾಡಿಲ್ಲ. ಅಲ್ಲಿಗೆ ಈ ರಾಜ್ಯದಲ್ಲಿ ಕಾನೂನು ವ್ಯವಸ್ಥೆಯನ್ನು ಎಷ್ಟರ ಮಟ್ಟಿಗೆ ನೀವು ಪಾಲನೆ ಮಾಡುತ್ತಿದ್ದೀರಿ ಈ ಇಲಾಖೆಯಿಂದ ಎನ್ನುವುದಕ್ಕೆ ಇದು ಒಂದು ನಿದರ್ಶನ. ಇನ್ನು ಹರಿಜನರಿಗ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟವರ್ಗದವರ ಮೇಲೆ ನಡೆಯು ತಕ್ಕಂಥ ದೌರ್ಜನ್ಯಗಳು, ಈ ಬಗ್ಗೆ ಇಲ್ಲಿ ೧೯೮೭–೮೮ಕ್ಕೆ ತಾವು ಇಲ್ಲಿ ವರದಿಯಲ್ಲಿ ಕೊಟ್ಟಿರತಕ್ಕಂಥ ರೀತಿಯಲ್ಲಿ ಎಷ್ಟು ನಡೆದಿವೆ ಎಂದರೆ ೮೭ ನಡೆದಿವೆ. ಆದರೆ ೧೯೮೭–೮೮ಕ್ಕೆ ಈ ಸಂಖ್ಯೆ ಎಷ್ಟು ಎಂದು ಈ ವರದಿಯಲ್ಲಿ ಕೊಟ್ಟಿಲ್ಲ. ಬಹುಶಃ ಇದರ ಉದ್ದೇಶವನ್ನು ನಾವು ಏನೆಂದು ಅರ್ಥ ಮಾಡಿಕೊಳ್ಳ ಬೇಕು ? ಒಂದು ವೇಳೆ ಈ ಪ್ರಮಾಣ ಕಡಿಮೆಯಾಗಿದ್ದರೆ ೮೭–೮೮ಕ್ಕಿಂತ ಈ ದೌರ್ಜನ್ಯದ ಘಟನೆ ಗಳು ಕಡಿಮೆಯಾಗಿದ್ದರೆ ಬಹುಶಃ ಆ ವಿವರಗಳನ್ನು ಇಲ್ಲಿ ಕೊಡುತ್ತಿದ್ದರು. ಆದರೆ ಇದರ ಮೂರ ರಷ್ಟು, ನಾಲ್ಕರಷ್ಟು, ಆರರಷ್ಟು ಈ ಹರಿಜನರ ಮೇಲೆ, ಪರಿಶಿಷ್ಟ ವರ್ಗದವರ ಮೇಲೆ ನಡೆಯು ತಕ್ಕಂಥ ದೌರ್ಜನ್ಯಗಳು ಜಾಸ್ತಿಯಾಗುತ್ತಿರುವಾಗ ಇದರ ಸಂಖ್ಯೆಯನ್ನು ಕೊಟ್ಟರೆ ಗೌರವ ಬರುವುದಿಲ್ಲ ವೆಂದು ಈ ಸಂಖ್ಯೆಯನ್ನು ಕೊಟ್ಟಿಲ್ಲವೇನು ? ದಯವಿಟ್ಟು ಎಷ್ಟು ದೌರ್ಜನ್ಯಗಳು ಈ ಪರಿಶಿಷ್ಟ ವರ್ಗ ಮತ್ತು ಪರಿಶಿಷ್ಟ ಜನಾಂಗದವರ ಮೇಲೆ ೮೭-೮೮ಕ್ಕೆ ಆಗಿದೆ ಎನ್ನುವುದರ ಪೂರ್ಣ ಮಾಹಿತಿ ಯನ್ನು ತಮ್ಮ ಇಲಾಖೆಯವರು ಕೊಡಬೇಕು.

ಅಧ್ಯಕ್ಷರೇ, ಲಾ ಅಂಡ್ ಆರ್ಡರ್ ಪರಿಸ್ಥಿತಿ ಈ ರಾಜ್ಯದಲ್ಲಿ ಏನೂ ಇಲ್ಲ. ಮತ್ತೆ ಜನರಲ್ ಆಡ್ಮಿನಿಸ್ಟ್ರೇಷನ್ ಬಹಳ ಕುಸಿದು ಹೋಗಿದೆ. ಶಾಸಕಾಂಗ, ನ್ಯಾಯಾಂಗ, ಮತ್ತು ಕಾರ್ಯಾಂಗ ಮಾಡಿದಂಥ ಶಾಸನ ಕಾರ್ಯಕ್ರಮಗಳನ್ನು ಸರಿಯಾದ ರೀತಿಯಲ್ಲಿ ಕಾರ್ಯಾಂಗದ ಮುಖ್ಯಸ್ಥರು ಜವಾಬ್ದಾರಿ ವಹಿಸದೆ ಈ ರಾಜ್ಯದಲ್ಲಿ ಅವು ನಡೆಯುವುದಕ್ಕೆ ಸಾಧ್ಯವಾಗುತ್ತಿಲ್ಲ. ಹಣಕಾಸಿನ ಪರಿಸ್ಥಿತಿ ಕುಸಿದು ಹೋಗಿದೆ. ಡೆವಲಪ್‌ಮೆಂಟ್ ಕೆಲಸಗಳಿಗೆ ಹಣ ಇಲ್ಲ. ಇರತಕ್ಕಂಥ ಹಣವನ್ನು ಸಂಬಳ ಸಾರಿಗೆಗೆ ಕೊಟ್ಟು, ಅಧಿಕಾರಿವರ್ಗದವರನ್ನು ಸಾಕತಕ್ಕ ಕೆಲಸ ನಡೆದಿದೆ. ಸಂಬಳ ಒಂದನ್ನು ಬಿಟ್ಟು ಯಾವುದೇ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಹಣ ಇಲ್ಲ. ಆಡಳಿತ ಕುಸಿದು ಹೋಗಿದೆ. ಇವತ್ತು ಆರಿಸಿ ಬಂದಿರತಕ್ಕ ಸದಸ್ಯರು ಯಾವುದೇ ವಿಚಾರವನ್ನು ಸರ್ಕಾರದ ಗಮನಕ್ಕೆ ತಂದರೂ ಅದರ ಬಗ್ಗೆ ಹೆಚ್ಚು ನಿಗಾ ಕೊಡುವುದಿಲ್ಲ, ಅದೇ ಅಧಿಕಾರಿಗಳು ಕೊಡುತ್ತಿರುವ ವರದಿ ಬಗ್ಗೆ ಹೆಚ್ಚು ನಿಗಾ ಕೊಡುತ್ತಾರೆ ಮತ್ತು ನಂಬುತ್ತಾರೆ. ನಾವು ಏನು ಹೇಳಿದರೂ ಬೇಜವಾಬ್ದಾರಿಯಿಂದ ಹೇಳುತ್ತಾರೆಂಬ ಭಾವನೆ ಬಂದಿದೆ. ೧೯೮೭–೮೮ರಲ್ಲಿ ಒಬ್ಬರು ಪ್ರಿನ್ಸಿಪಾಲರಾಗಿ ಗವರ್ನಮೆಂಟ್ ಸೈನ್ಸ್ ಕಾಲೇಜಿನಲ್ಲಿ ಕೆಲಸ ಮಾಡುತ್ತಿದ್ದರು. ಇವರು ರಾಷ್ಟ್ರೀಯ ಉಳಿತಾಯ ಹಣವನ್ನು ದುರುಪಯೋಗ ಮಾಡಿದು ಸಾಬೀತಾಗಿದೆ. ಯಾವುದೇ ಕ್ರಮವನ್ನು ಇವರ ಮೇಲೆ ತೆಗೆದುಕೊಂಡಿಲ್ಲ. ಇವರು ಲಕ್ಷಾಂತರ ರೂಪಾಯಿಗಳ ಹಣವನ್ನು ದುರುಪಯೋಗ ಮಾಡಿರುವುದು ಸರ್ಕಾರದ ಗಮನಕ್ಕೂ ಬಂದಿದೆ. ಇದರ ಬಗ್ಗೆ ಆಡಿಟ್ ವರದಿ ಇದೆ, ಇತರೇ ಮಾಹಿತಿಗಳು ಇದೆ. ಆದರೆ ಏನೂ ಕ್ರಮ ಇಲ್ಲ, ವರ್ಗ ಮಾಡಿದ್ದಾರೆ ಅಷ್ಟೆ. ಯಾವುದೇ ಉನ್ನತ ಅಧಿಕಾರಿಗಳು ಇರಲಿ, ಏನಾದರೂ ಅಪರಾಧ ಮಾಡಿ ದ್ದಾರೆಂದು ಹೇಳಿದರೆ, ಕಂಡಿರತಕ್ಕಂಥವರು ದೂರನ್ನು ಕೊಟ್ಟರೆ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಅಧಿಕಾರಿಗಳಿಗೆ, ಸರ್ಕಾರದ ಭಯ ಇಲ್ಲ. ಮನೆಯಲ್ಲಿ ಯಜಮಾನಿಕೆ ವಹಿಸಿರುವ ವ್ಯಕ್ತಿಯ ಭಯ ಇಡೀ ಕುಟುಂಬಕ್ಕೆ ಹೇಗಿರಬೇಕೋ ಹಾಗೆ ಅದೇ ರೀತಿ ಸರ್ಕಾರ ನಡೆಸತಕ್ಕಂಥವರ ಮತ್ತು ಮಂತ್ರಿಗಳ ಭಯ ಈ ಅಧಿಕಾರಿಗಳಿಗೂ ಇರಬೇಕು. ಆದರೆ ಆ ಭಯ ಇವತ್ತು ಅಧಿಕಾರಿಗಳಿಗೆ ಇಲ್ಲ. ಈ ರೀತಿ ಭಯ ಇಲ್ಲದೇ ಹೋದರೆ, ಏನೂ ಆಗುವುದಿಲ್ಲ. ಇವರ ಕೈಯಲ್ಲಿ ಅಧಿಕಾರಶಾಹಿ ವ್ಯವಸ್ಥೆ ಈ ರಾಜ್ಯ ದಲ್ಲಿ ಬೆಳೆದಿರುವುದಕ್ಕೆ ಮೂಲವಾಗಿದೆ ಮತ್ತು ಇದು ನಡೆದುಕೊಂಡು ಬಂದಿದೆ. ಈ ರಾಜ್ಯದಲ್ಲಿ ಇವತ್ತು ಏನಾಗಿದೆ ಎಂದು ಹೇಳಿದರೆ, ಬಹುಶಃ ಜನಗಳನ್ನು ನಂಬದೇ ಇರತಕ್ಕ ಕಂಪ್ಯೂಟರ್ ಸಿಸ್ಟಂನ್ನು ತಂದಿದ್ದಾರೆ. ನಾನು ಮುಖ್ಯಮಂತ್ರಿಗಳಿಗೆ ಯಾವುದೋ ಒಂದು ಪತ್ರವನ್ನು ವರ್ಗಮಾಡಿಕೊಡಿ ಎಂದು ಕೊಟ್ಟೆ. ಅವರು ನನ್ನ ಮಾತಿಗೆ ಬೆಲೆಕೊಟ್ಟು ವರ್ಗ ಮಾಡಿದರು. ಓ. ಕೆ. ಎಂದು ಬರೆದರು. ಆದರೆ ಆಫೀಸಿಗೆ ಹೋಗಿ ಕೇಳಿದರೆ, ನಿಲ್ ಎಂದು ಬಂತು. ನಿಲ್ ಎಂದು ಬಂದಿದೆ, ಇದು ಆಗುವುದಿಲ್ಲ ಎಂದರು. ಮುಖ್ಯಮಂತ್ರಿಗಳು ಓ.ಕೆ. ಎಂದು ಬರೆದಿದ್ದಾರೆ. ಇದು ಹೇಗೆ ಬಂತು ? ಇದನ್ನು ನಾನು ಮತ್ತೆ ಪಂಪ್ ಮಾಡಿದರೆ. ಆಗ ಅದು ಓ.ಕೆ. ಆಯಿತು. ಈಗ ಮೆಡಿಕಲ್ ಕಾಲೇಜುಗಳಿಗೆ ಎಂಟ್ರೆನ್ಸ್ ಎಕ್ಸಾಮಿನೇಷನ್ ನಡೆಯುತ್ತದೆ.

ಅದನ್ನು ಕಂಪ್ಯೂಟರ್ ಕೂತ, ಅವನ ದಾರಿಯಲ್ಲೇ ಹೋಗುತ್ತದೆ. ಅಂದರೆ, ಅವನು ಭ್ರಷ್ಟಾಚಾರಿಯಾಗುವುದರ ಜೊತೆಗೆ, ಕಂಪ್ಯೂಟರನ್ನು ಪ್ರಾಮಾಣಿಕವಾಗಿ ಕೆಲಸ ಮಾಡುವುದಕ್ಕೆ ಬಿಟ್ಟಿಲ್ಲ.....

ಅಧ್ಯಕ್ಷರು.—ಮಾನ್ಯ ಲಕ್ಕಪ್ಪನವರೇ ಬೇಗ ಮುಗಿಸಿ. ನೀವು ಟೈಮಿಗೆ ಸರಿಯಾಗಿ ಮುಗಿಸುತ್ತೀರಿ. ಎಂದು ನಿಮಗೆ ಅವಕಾಶ ಕೊಟ್ಟೆ ಈಗಾಗಲೇ ೪೦ ನಿಮಿಷವಾಗಿದೆ, ಲಾಸ್ಟ್ ವಿಷಯ ಹೇಳಿ ಮುಗಿಸಿ

ಶ್ರೀ ಬಿ. ಲಕ್ಕಪ್ಪ.—ಇನ್ನು ಸರ್ಕಾರಕ್ಕೆ ಹೆಚ್ಚು ಆದಾಯ ಬರತಕ್ಕಂಥ ಇಲಾಖೆ ವಾಣಿಜ್ಯ ತೆರಿಗೆ ಇಲಾಖೆ. ಈ ರಾಜ್ಯಕ್ಕೆ ಹೆಚ್ಚು ಹಣ ಸಂಗ್ರಹಣೆ ಮಾಡತಕ್ಕ ಕೆಲಸ ಈ ಇಲಾಖೆ ಮಾಡಬೇಕು.

ಅಧ್ಯಕ್ಷರೇ, ಇದು ಸರಿಯಾದ ರೀತಿಯಲ್ಲಿ ಕೆಲಸ ಮಾಡಿದರೆ, ನಮ್ಮ ಸರ್ಕಾರದ ಹಣಕಾಸಿನ ವ್ಯವಹಾರಗಳಿಗೆ ಸಹಾಯವಾಗುತ್ತದೆ. ಇದರಲ್ಲೂ ಕೂಡ ಅನೇಕ ಲೋಪ ದೋಷಗಳು ಇವೆ. ಉತ್ತಮವಾದ ರೀತಿಯಲ್ಲಿ ದಕ್ಷತೆಯಿಂದ ಕೆಲಸ ಮಾಡಿ ಸರ್ಕಾರಕ್ಕೆ ಹೆಚ್ಚು ಹಣವನ್ನು ಗಳಿಸಬೇಕಾದರೆ, ಕರ ನಿರ್ಧಾರಣೆ ಬೇಗ ಇತ್ಯರ್ಥ ಆಗಬೇಕು. ಜೊತೆಗೆ ಕರ ನಿರ್ಧಾರಣೆಯನ್ನು ವಸೂಲ್ಮಾಡತಕ್ಕಂಥ ಕೆಲಸವೂ ಕೂಡ ಬೇಗ ಆಗಬೇಕು. ೧೯೫೭ನೇ ಇಸವಿಯಲ್ಲಿ ಏನಿತ್ತೋ, ಈ ಕರ ನಿರ್ಧಾರಣೆ ಮಾಡತಕ್ಕದ್ದು, ಅದನ್ನು ವಸೂಲು ಮಾಡತಕ್ಕದು ಮತ್ತು ಅದು ನಿರ್ವಹಿಸುತ್ತಿದ್ದ ಕೆಲಸ ಇವತ್ತು ಅದು ಜಾಸ್ತಿಯಾಗಿದೆ. ಅದರ ಕಾರ್ಯಭಾರಗಳು ಜಾಸ್ತಿಯಾಗಿವೆ. ಈ ದೃಷ್ಟಿಯಿಂದ ಈ ಇಲಾಖೆ ಸಮರ್ಪಕವಾಗಿ ಕೆಲಸ ಮಾಡಬೇಕಾಗಿದ್ದರೆ ಸೂಕ್ತವಾದ ಕ್ರಮಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಇದು ಲಾಭವನ್ನು ತರತಕ್ಕ ಇಲಾಖೆ, ೧೦ ರೂಪಾಯಿ ಖರ್ಚು ಮಾಡಿದರೆ ೧೦೦ ರೂಪಾಯಿ ಲಾಭವನ್ನು ಸರಕಾರಕ್ಕೆ ಕೊಡತಕ್ಕ ಇಲಾಖೆ. ಇದರಲ್ಲಿರತಕ್ಕಂಥ ದಕ್ಷತೆಯನ್ನು ಹೆಚ್ಚಿಸಬೇಕಾದರೆ......

ಅಧ್ಯಕ್ಷರು.— ಮುಕ್ತಾಯ ಮಾಡಿರಿ. ಚೆನ್ನಾಗಿ ಮಾತನಾಡಿದ್ದೀರಿ ಎಂದು ಹತ್ತು ಮಿನಿಟ್ ಜಾಸ್ತಿ ಕೊಟ್ಟಿದ್ದೀನಿ.

ಶ್ರೀ ಬಿ. ಲಕ್ಕಪ್ಪ.—ಇದರಲ್ಲಿರತಕ್ಕಂಥ ಲೋಪ ದೋಷಗಳನ್ನು ತೆಗೆಯಬೇಕು. ಪಾವತಿ ಮಾಡುವ ತೆರಿಗೆಗಳನ್ನು ಪರಿಶೀಲಿಸುವುದು. ತೆರಿಗೆಗಳನ್ನು ನಿರ್ಧರಿಸುವುದು ಅಂಕಿ ಅಂಶಗಳನ್ನು ಪರಿಶೀಲಿಸುವುದು. ಮತ್ತು ನಿಯತಕಾಲಿಕಗಳನ್ನು ಪರಿಶೀಲಿಸುವುದು ಮುಂತಾದ ಕೆಲಸಗಳನ್ನು ಜಾಸ್ತಿ ಮಾಡಿರುತ್ತಾರೆ. ಈ ದೃಷ್ಟಿಯಿಂದ ಈ ಒಂದು ಇಲಾಖೆಯನ್ನು ನೋಡಿಕೊಳ್ಳುವುದಕ್ಕೆ ಸರಿಯಾದ ವ್ಯವಸ್ಥೆ ಮಾಡಿದರೆ ಇದು ಇನ್ನೂ ಹೆಚ್ಚು ಲಾಭವನ್ನು ತರಬಹುದಾಗಿದೆ. ಕೊನೆಯದಾಗಿ ಎಂಟರ್‌ಟೈನ್‌ಮೆಂಟ್ ಟ್ಯಾಕ್ಸ್ ಏನು ಹಾಕುತ್ತಾರೆ ಅದು ಸರಿಯಾಗಿ ವಸೂಲಾಗುತ್ತಿಲ್ಲ. ರೂರಲ್ ಪ್ರದೇಶಗಳಲ್ಲಿರತಕ್ಕಂಥ ಚಲನಚಿತ್ರ ಮಂದಿರಗಳಲ್ಲಿ ಮೊದಲನೇ ಶೋಗೆ ೧೦೦ ಟಿಕೆಟ್ ಕೊಟ್ಟರೆ, ಒಳಗಡೆ ಒಂದು ಸಾವಿರ ಜನ ಇರುತ್ತಾರೆ ಪುನಃ ಅದೇ ಟಿಕೆಟನ್ನು ವಾಪಸ್ ತೆಗೆದುಕೊಂಡು ಸೆಕೆಂಡ್ ಶೋಗೆ ಕೊಡುತ್ತಾರೆ. ಇದು ನಮ್ಮಲ್ಲೇ ನಡೆದಿದೆ. ನಮ್ಮ ಮಕ್ಕಳನ್ನೇ ಕಳುಹಿಸಿದಾಗ ಈ ರೀತಿ ಮಾಡಿದ್ದಾರೆ. ಅವರ ಹತ್ತಿರ ಟಿಕೆಟ್ ಹರಿಯದೇ ವಾಪಸ್ ಈಸಿಕೊಂಡಿರತಕ್ಕದ್ದು ನೂರಕ್ಕೆ ನೂರರಷ್ಟು ಸತ್ಯ. ಸಂಬಂಧಪಟ್ಟ ಅಧಿಕಾರಿಗಳು ಕಾಂಟ್ರಾಕ್ಟ್ ಹಿಡಿದು ಬಿಟ್ಟಿದ್ದಾರೆ. ಅವರಿಗೆ ಕೊಡುವುದನ್ನು ಕೊಟ್ಟುಬಿಟ್ಟರೆ ಅವರು ಈ ಕಡೆ ತಲೆ ಹಾಕಿಕೊಂಡು ಮಲಗುವುದಿಲ್ಲ. ಎಂಟರ್‌ಟೈನ್‌ಮೆಂಟ್ ಟ್ಯಾಕ್ಸ್‌ನಲ್ಲಿ ಇವತ್ತು ಅರ್ಧದಷ್ಟು ಜಾಸ್ತಿ ಹಣ ವಸೂಲಾಗಿದೇ ಮಾಲೀಕರ ಖಜಾನೆ ಸೇರಿ, ರಾಜ್ಯದ ಬೊಕ್ಕಸಕ್ಕೆ ನಷ್ಟವಾಗುತ್ತಿದೆ. ಅದಕ್ಕೋಸ್ಕರ ಈ ಎಂಟರ್‌ಟೈನ್‌ಮೆಂಟ್ ಟ್ಯಾಕ್ಸ್‌ನ್ನು ವಸೂಲು ಮಾಡತಕ್ಕ, ಚೆಕ್ ಮಾಡತಕ್ಕ ಅಧಿಕಾರಿಗಳ ಮೇಲೆ ಸರಿಯಾದ ಕ್ರಮ ತೆಗೆದುಕೊಂಡು ಇವರನ್ನು ಚುರುಕುಗೊಳಿಸದೇ ಹೋದರೆ ಏನು ಆಗುವುದಿಲ್ಲ, ಇದನ್ನು ಮಾಡಿದರೆ ಇದರಿಂದ ಹೆಚ್ಚು ಆದಾಯ ಬರುತ್ತದೆ. ಇದನ್ನೇ ಪುರಸಭೆಗಳಿಗೆ ಆತ್ತೊಂದು ಇದಕ್ಕೆ ಕೊಡಬಹುದು. ಇವತ್ತು ಅವರಿಗೆ ಅಕ್ಟ್ರಾಯ್ ನಿಂತು ಹೋಗಿದೆ. ಇದರಿಂದಲಾದರೂ ಹಣ ಬಂದರೆ ಅವರಿಗೆ ಉಪಯೋಗವಾಗುತ್ತದೆ. ಮಾನ್ಯ ಮುಖ್ಯ ಮಂತ್ರಿಗಳು ಇಲ್ಲಿ ಹೇಳಿರತಕ್ಕಂಥ ವಿಚಾರಗಳ ಬಗ್ಗೆ ಗಮನಹರಿಸಿ, ಒಂದೊಂದು ವಿಚಾರಕ್ಕೂ ಸರಿಯಾದ ಉತ್ತರವನ್ನು ಕೊಡುತ್ತಾರೆಂದು ಆಶಿಸಿ ಇಷ್ಟು ಕಾಲಾವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ. ಎಲ್. ಉಸ್ತಾದ್ (ಬಿಜಾಪುರ).—ಸನ್ಮಾನ್ಯ ಅಧ್ಯಕ್ಷರೇ, ನಮ್ಮ ನಾಯಕರು ಹಾಗೂ ಸನ್ಮಾನ್ಯ ಸದಸ್ಯರು ಜನರಲ್ ಅಡ್ಮಿನಿಸ್ಟ್ರೇಷನ್ ಡಿಪಾರ್ಟ್‌ಮೆಂಟ್ ಬಗ್ಗೆ ಹಲವಾರು ವಿಷಯಗಳನ್ನು ಪ್ರಸ್ತಾಪಿಸಿದ್ದಾರೆ. ನಾನೂ ಕೆಲವೊಂದು ವಿಷಯಗಳನ್ನು ಜನರಲ್ ಅಡ್ಮಿನಿಸ್ಟ್ರೇಷನ್ ಬಗ್ಗೆ, ಹೋಂ ಬಗ್ಗೆ ಹಾಗೂ ವಕ್ಫ್ ಬಗ್ಗೆ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಯಾವ ಕೆಲಸ

ಆಗುತ್ತದೆ ಅಷ್ಟು ಕೆಲಸ ಮಾಡುತ್ತೇನೆಂದು ಹೇಳಬೇಕು. ಸುಳ್ಳು ಹೇಳಿ ಕೊಳ್ಳುತ್ತಾ ಹೋಗಬಾರದು. ಏಕೆಕ್ಕೆಂದರೆ ನಮ್ಮ ಮಲ್ಲಿಕಾರ್ಜುನ ಖರ್ಗೆಯವರು ಹೇಳಿದಹಾಗೆ ನಮ್ಮ ರಾಜ್ಯದಲ್ಲಿ ಮೂರು ಸಾವಿರ ಅಡಿಗಲ್ಲು ಸಮಾರಂಭಗಳು ಆಗಿದೆ. ಮೂರು ಸಾವಿರ ಬಿಡಿ, ಅಟ್‌ಲೀಸ್ಟ್ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಎಷ್ಟು ದೊಡ್ಡದೊಡ್ಡ ಕಲ್ಲು ಹಾಕಿದ್ದಾರೆ, ಏನು ಅಡಿಗಲ್ಲು ಸಮಾರಂಭಗಳನ್ನು ಮಾಡಿದ್ದಾರೆ, ಅಷ್ಟಾದರೂ ಕೆಲಸ ಆಗಬೇಕೆಂದು ತಮ್ಮ ಮುಖೇನ ಮಾನ್ಯ ಮುಖ್ಯಮಂತ್ರಿಗಳನ್ನು ಕೇಳಿಕೊಳ್ಳುತ್ತಿದ್ದೇನೆ. ನಮಗೆ ಚಂದ್ರಲೋಕ ತೋರಿಸುತ್ತೇವೆ, ಇಂದ್ರಲೋಕ ತೋರಿಸುತ್ತೇವೆ ಎಂದು ಸುಳ್ಳು ಹೇಳಿ, ಅಧಿಕಾರಕ್ಕೆ ಬಂದು, ದೊಡ್ಡದೊಡ್ಡ ಕಲ್ಲು ಹಾಕಿದರು. ಆದರೆ ಕೆಲಸ ಮಾತ್ರ ಏನೂ ಇಲ್ಲ. ನಮ್ಮ ಜಿಲ್ಲೆಯ ವಿಷಯದ ಬಗ್ಗೆ ಹೇಳಬೇಕಾದರೆ, ನಾವು ಬರಗಾಲದ ಜನರು, ಹಲವಾರು ಸಲ ನಾನು ಈ ಸದನದಲ್ಲಿ ಪ್ರಸ್ತಾಪ ಮಾಡಿದ್ದೇನೆ. ಮುಳು ವಾದ ಲಿಫ್ಟ್ ಇರಿಗೇಷನ್ ಸಲುವಾಗಿ ಮಾನ್ಯ ಮುಖ್ಯಮಂತ್ರಿಗಳು ಬಂದು ಅಡಿಗಲ್ಲು ಹಾಕಿದರು. ಅವರಿಗೂ ಗೊತ್ತಿತ್ತು, ಈ ಕೆಲಸ ಆಗುವುದಿಲ್ಲ ಎಂದು, ಇವತ್ತು ಅದರ ಎಸ್ಟಿಮೇಟ್ ಐದುನೂರು ಕೋಟಿ ರೂಪಾಯಿಗಳು. ಇದು ಆಗುವುದಿಲ್ಲ. ಆದರೆ ಜೆದ್. ಪಿ. ಎಲೆಕ್ಷನ್ ಬಂದಾಗ ವೋಟು ಕಬಳಿಸುವುದಕ್ಕೆ ಕಲ್ಲು ಹಾಕಿದರು. ಇವತ್ತಿನದಿವಸ ಅಲ್ಲಿ ಆ ಕಲ್ಲೂ ಸಹಿತ ಇಲ್ಲ. ಈ ಜೆದ್. ಪಿ. ಮತ್ತು ಮಂಡಲ್ ಎಲೆಕ್ಷನ್ ಆದನಂತರ ನಮ್ಮ ಎಂ. ಎಲ್. ಎ. ಗಳ ಗತಿ ಏನಾಗಿದೆ ಎಂದು ಮಾನ್ಯ ಮುಖ್ಯಮಂತ್ರಿಗಳಿಗೂ ಗೊತ್ತಾಗಿದೆ. ಬಹಳಷ್ಟು ರಾಜ್ಯಗಳಲ್ಲಿ ಈ ಪ್ರಕಾರವಾಗಿ ಜೆದ್. ಪಿ. ಇದ್ದರೂ ಸಹ ಒಬ್ಬ ಎಂ. ಎಲ್. ಎ. ಆ ಭಾಗದ ಶಾಸಕ, ತನ್ನ ಭಾಗದಲ್ಲಿ ೧೦ ರಿಂದ ೧೫ ಲಕ್ಷ ರೂಪಾಯಿಗಳ ಕೆಲಸ ಮಾಡಿಸುತ್ತಾನೆ. ೧೦–೧೫ ಲಕ್ಷ ರೂಪಾಯಿಗಳ ಕೆಲಸ ಒಬ್ಬೊಬ್ಬ ಎಂ. ಎಲ್. ಎ. ಗಳು ಆ ಸರ್ಕಾರದ ವತಿಯಿಂದ ಮಾಡಿಸುತ್ತಿದ್ದಾರೆ. ಅದೇ ಪ್ರಕಾರವಾಗಿ ಮಾಡಿ ಎಂದು ನಮ್ಮ ಮಾನ್ಯ ಸದಸ್ಯರಾದ ಶ್ರೀ ಮಲ್ಲಾರಿ ಗೌಡ ಎಸ್. ಪಾಟೀಲ್ ನಮ್ಮ ಪಕ್ಷದ ಚೀಪ್ ವಿಪ್‌ರವರು ಮುಖ್ಯ ಮಂತ್ರಿಗಳಿಗೆ ಒಂದು ಲೆಟರ್ ಬರೆದರು. ಯಾವ ಪ್ರಕಾರವಾಗಿ ಮಹಾರಾಷ್ಟ್ರದಲ್ಲಿ ಒಬ್ಬ ಎಂ. ಎಲ್. ಎ. ೧೦–೧೫ ಲಕ್ಷ ರೂಪಾಯಿಗಳು ಅವರ ಕ್ಷೇತ್ರದಲ್ಲಿ ಆಗಬೇಕಾದ ಕೆಲಸಗಳು ಇರುತ್ತವೆಯೋ ಅವು ಗಳನ್ನು ಮಾಡಿಸುತ್ತಾರೆ ಅದೇ ಪ್ರಕಾರ ನಮ್ಮಲ್ಲಿ ಸಹ ಮಾಡಿ ಎಂದು ಲೆಟರ್ ಬರೆದಿದ್ದು ಪತ್ರಿಕೆಗಳಲ್ಲಿ ಸಹ ಬಂದಿದೆ. ಅದನ್ನು ನಾವೆಲ್ಲಾ ಓದಿದ್ದೇವೆ. ಆಗ ಮಾನ್ಯ ಮುಖ್ಯಮಂತ್ರಿಗಳು ಆಗಬಹುದು ಎಂದು ಮೂರು ಲಕ್ಷ ರೂಪಾಯಿಗಳ ಕೆಲಸ ಒಬ್ಬೊಬ್ಬ ಮಾನ್ಯ ಸದಸ್ಯರಿಗೆ ಕೊಡಬಹುದೆಂದು ಪತ್ರಿಕೆ ಗಳಿಗೆ ಹೇಳಿಕೆ ಕೊಟ್ಟರು ಅದನ್ನು ಸಹ ನಾವು ಓದಿದ್ದೇವೆ. ಆದರೆ ಅದು ಇವತ್ತಿನವರೆಗೂ ಜಾರಿಗೆ ಬಂದಿಲ್ಲ. ಆದರೆ ಈ ಎರಡು ಮೂರು ಲಕ್ಷರೂಪಾಯಿಗಳು ಬಹಳ ಕಡಿಮೆಯಾಗುತ್ತದೆ. ಆ ಸಲುವಾಗಿ ತಮ್ಮ ಮುಖಾಂತರ ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾನು ಕೇಳಿಕೊಳ್ಳುವುದೇನೆಂದರೆ, ಕನಿಷ್ಟ ಪಕ್ಷ ಒಂದು ಹತ್ತು ಲಕ್ಷ ರೂಪಾಯಿಗಳನ್ನಾದರೂ ಕೊಟ್ಟರೆ ಅಲ್ಲಿನ ಇರಿಗೇಷನ್ ಸಲುವಾಗಿ ಅಲ್ಲಿನ ಒಂದು ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಇದರ ಬಗ್ಗೆ ಸನ್ಮಾನ್ಯ ಮುಖ್ಯಮಂತ್ರಿಗಳು ಗಮನಹರಿಸಬೇಕೆಂದು ನಾನು ಕೇಳಿ ಕೊಳ್ಳುತ್ತೇನೆ. ಇನ್ನು ಮೈನಾರಿಟಿ ಬಗ್ಗೆ ಹೇಳಬೇಕೆಂದರೆ ಮಾನ

(ಮಾನ್ಯ ಅಧ್ಯಕ್ಷರು ಪೀಠವನ್ನಲಂಕರಿಸಿದರು)

ಅಧ್ಯಕ್ಷರೇ ಈ ಸರ್ಕಾರದಲ್ಲಿ ಅವರಿಗೆ ರಕ್ಷಣೆ ಇಲ್ಲ. ಮಾನ್ಯ ಮುಖ್ಯಮಂತ್ರಿಗಳು ಎಲ್ಲಿ ಈ ರಾಜ್ಯದಲ್ಲಿ ಗಲಾಟೆಯಾಗುತ್ತದೆಯೋ ಅಲ್ಲಿಗೆ ಹೋಗಲಿಕ್ಕಾಗಲಿಲ್ಲವೆಂದು ನಾನು ಹೇಳಬಯಸುತ್ತೇನೆ. ಮೊನ್ನೆ ಶಿಡ್ಲ ಘಟ್ಟದಲ್ಲಿ ಗಲಾಟೆ ಆಯಿತು. ತಕ್ಷಣ ಅಲ್ಲಿಗೆ ಮೂರು ಜನ ನಮ್ಮ ಮಾನ್ಯ ಸದಸ್ಯರುಗಳಾದ ರೋಷನ್ ಬೇಗ್, ರಮೇಶ್‌ಕುಮಾರ್, ಮತ್ತು ಮಹದೇವಪ್ಪ ಮೂರು ಜನರು ಹೋದಾಗ ಏನೇನು ಆಯಿತು ಎನ್ನುವುದನ್ನು ನಾವೆಲ್ಲಾ ಪತ್ರಿಕೆಗಳಲ್ಲಿ ಓದಿದ್ದೇವೆ. ನಾನು ಲಂಕೇಶ್ ಪತ್ರಿಕೆಯಲ್ಲಿ ಬಂದಿರ ತಕ್ಕಂಥಾದ್ದನ್ನು ಇಲ್ಲಿ ಹೇಳುವುದಾದರೆ ಅವತ್ತು ಆ ಮೂರು ಜನರು ಹೋಗುವುದಕ್ಕಿಂತ ಮುಂಚಿತ ವಾಗಿ ಮಾನ್ಯ ಮಂತ್ರಿಗಳಾದ ಶ್ರೀ ವೀರಣ್ಣನವರು ಮತ್ತು ಶ್ರೀ ಮಹಮದ್ ಮೊಹಿನುದ್ದೀನ್‌ರವರು ಒಂದು ಗಂಟೆ ಮುಂಚಿತವಾಗಿ ಹೋದರು. ಅವರು ಅಲ್ಲಿಗೆ ಹೋದಾಗ ಕಾರನ್ನು ನಿಲ್ಲಿಸಿ ಮಾನ್ಯ ವೀರಣ್ಣನವರು ತಲೆಗೆ ಟೋಪಿಯನ್ನು ಹಾಕಿದ್ದರಿಂದ ನೀವು ರೋಷನ್ ಬೇಗ್ ಎಂದು ಕೇಳಿದರು ಆಗ ಮಾನ್ಯ ವೀರಣ್ಣನವರು ಇಲ್ಲ ನಾನು ವೀರಣ್ಣ ಎಂದು ಹೇಳಿದ್ದಾರೆ ಅದಕ್ಕೆ ಅವರು ಅವರನ್ನು ಬಿಟ್ಟುಬಿಡಿಯೋ ಎಂದು ಹೇಳಿದ್ದರಿಂದ ಕಾರು ಮುಂದಕ್ಕೆ ಹೋಯಿತೆಂದು ಲಂಕೇಶ್ ಪತ್ರಿಕೆಯಲ್ಲಿ ಅಪಿಯರ್ ಆಗಿದೆ. ಒಂದು ವಿಷಯವೆಂದರೆ...

ಶ್ರೀ ವೀರಣ್ಣ.—ನಾನು ವೀರಣ್ಣ ಇಲ್ಲೇ ಇದ್ದೇನೆ ಕೇಳಿ ಸ್ವಲ್ಪ. ನಾವು ಹೋದ ದಿವಸ ಏನಾಯಿತು ಎಂದರೆ ಅವರು ಹೇಳಿದಹಾಗೆ ಅಲ್ಲಿ ನಮ್ಮ ಕಾರು ನಿಲ್ಲಿಸಲಿಲ್ಲ. ನಿನ್ನ ಹೆಸರು ರೋಷನ್ ಬೇಗ್ ಅಂತ ಯಾರೂ ಕೇಳಲಿಲ್ಲ. ಇದೆಲ್ಲಾ ಒಂದು ಕಟ್ಟು ಕಥೆ ಎಲ್ಲಾ ಹುಟ್ಟಿಸಿಕೊಂಡಿದ್ದಾರೆ.

ಶ್ರೀ ಎಂ. ಎಲ್. ಉಸ್ತಾದ್.—ಲಂಕೇಶ್ ಪತ್ರಿಕೆಯಲ್ಲಿ ಬಂದಿದೆ. ಆ ವಿಚಾರವನ್ನು ನಾನು ಪ್ರಸ್ತಾಪ ಮಾಡುತ್ತಿದ್ದೇನೆ. ಇವರು ಹೋದಾಗ ಕಾರು ನಿಲ್ಲಿಸಿ ಕರೆದು ನಿಮ್ಮ ಹೆಸರು ರೋಷನ್ ಬೇಗ್ ಎಂದು ಕೇಳಿದ್ದಾರೆ, ಆಗ ಅವರು ಪೋಲೀಸಿನವರಿಗೆ ಹೇಳಬಹುದಾಗಿತ್ತು. ಆದರೆ ಅವರು ಹೇಳಲಿಲ್ಲ...

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಇವರ ಜೊತೆಯಲ್ಲಿ ಹೋಗಿದ್ದಂತಹ ಒಬ್ಬ ಪ್ರೊಫೆಸರ್ ಸ್ವತಃ ನನ್ನ ಮುಂದೆ ಒಪ್ಪಿಕೊಂಡಿದ್ದಾರೆ. ನಾವು ಅವರನ್ನು ನೋಡಲು ಆಸ್ಪತ್ರೆಗೆ ಹೋದಾಗ ಸ್ವತಃ ಅವರೇ ಹೇಳಿದರು, ಅವರನ್ನು ಸಹ ನಿಮ್ಮ ಹೆಸರೇನು ಎಂದು ಕೇಳಿದರು ಆಗ ನಾನು ನನ್ನ ಹೆಸರು ಭಾಸ್ಕರ್ ಎಂದು ಹೇಳಿದ್ದರಿಂದ ಬಿಟ್ಟರು ಎಂದು.

ಶ್ರೀ ಎಂ. ಎಲ್. ಉಸ್ತಾದ್.—ಮಾನ್ಯ ಅಧ್ಯಕ್ಷರೇ, ಆ ಗಲಾಟೆಯಲ್ಲಿ ಆವತ್ತು ಮಾನ್ಯ ಸದಸ್ಯರಾದ ಮಹದೇವಪ್ಪ ಮತ್ತು ರಮೇಶ್‌ಕುಮಾರ್‌ರವರು ಇಲ್ಲದಿದ್ದರೆ ಆ ದಿವಸ ರೋಷನ್ ಬೇಗ್‌ರವರನ್ನು ಅವರು ಕೊಲೆ ಮಾಡುತ್ತಿದ್ದರು. ಆಸಂದರ್ಭದಲ್ಲಿ ಅವರು ರೋಷನ್ ಬೇಗ್ ರವರನ್ನು ಅಲ್ಲಿನ ಒಂದು ಸಿಲ್ಕ್ ಸೊಸೈಟಿಗೆ ಕರೆದುಕೊಂಡು ಹೋಗಿದ್ದಾರೆ. ಆಗ ಅಲ್ಲಿನ ಲೋಕಲ್ ಹಿಂದೂಗಳು ಜೊತೆಯಲ್ಲಿ ರಮೇಶ್‌ಕುಮಾರ್ ಮತ್ತು ಮಹದೇವಪ್ಪ ಸೆಣಸಾಡಿದ್ದಾರೆ. ಅವರಿಗೆ ತಾವು ಇವತ್ತು ಥ್ಯಾಂಕ್ಸ್ ಹೇಳಬೇಕು. ಅವರಿಲ್ಲದಿದ್ದರೆ ನಾವು ಇವತ್ತು ರೋಷನ್‌ಬೇಗ್‌ರವರನ್ನು ಜೀವಸಹಿತ ಕಾಣುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ. ಇಂತಹ ಸಂದರ್ಭದಲ್ಲಿ ನಮ್ಮ ಮಾನ್ಯ ಸದಸ್ಯರಿಗೆ ಅಂದರೆ ಎಂ. ಎಲ್. ಎ. ಗಳಿಗೆ ಈ ರೀತಿ ಆದರೆ ಇನ್ನು ಕಾಮನ್ ಮ್ಯಾನ್‌ಗಳಿಗೆ ಯಾವ ರೀತಿ ಆಗುತ್ತದೆ. ಇವತ್ತಿನವರೆವಿಗೂ ಆ ಕಲ್‌ಪ್ರಿಟ್ಸ್‌ಗಳನ್ನು ಅರೆಸ್ಟ್ ಮಾಡಿಲ್ಲ. ಇನ್ನು ನಮ್ಮ ಮಾನ್ಯ ಮುಖ್ಯಮಂತ್ರಿಗಳು ಅಲ್ಪ ಸಂಖ್ಯಾತರ ಬಗ್ಗೆ ಏನೋ ಹೇಳಿಕೊಳ್ಳುತ್ತಾ ಬಂದಿದ್ದಾರೆ. ಮುಖ್ಯವಾಗಿ ಏನೋ ಅಲ್ಪಸಂಖ್ಯಾತರನ್ನು ಪುಶ್ ಮಾಡುವುದಕ್ಕೆ ಮೈನಾರಿಟಿ ಡೆವಲಪ್‌ಮೆಂಟ್ ಕಾರ್ಪೊರೇಷನ್ ಮಾಡಿದರು. ಅದನ್ನು ಕ್ಲೋಜ್ ಮಾಡಿ. ಆದರಿಂದ ನಮಗೇನೂ ಉಪಯೋಗವಾಗಿಲ್ಲ. ನಮ್ಮ ಮಾನ್ಯ ಜನಾರ್ಧನಪೂಜಾರಿಯವರು ಲೋನ್ ಮೇಳ ಮಾಡುತ್ತಿದ್ದರು. ಅದನ್ನು ತಾವು ಆಗ ಕ್ರಿಟಿಸೈಜ್ ಮಾಡಿದಿರಿ. ಎಷ್ಟೋ ಜನ ಅಲ್ಪಸಂಖ್ಯಾತರಿಗೆ ಲೋನಮೇಳದಿಂದ ಅನುಕೂಲ ಆಗಿದೆ. ಆಮೇಲೆ ಪತ್ರಿಕೆಗಳಲ್ಲಿ ದೊಡ್ಡದಾಗಿ ಬಂತು. ಮೈನಾರಿಟಿ ಡೆವಲಪ್‌ಮೆಂಟ್ ಕಾರ್ಪೊರೇಷನ್‌ಗೆ ಒಂದು ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆಂದು ಪತ್ರಿಕೆಗಳಲ್ಲಿ ಅಷ್ಟೇ ಮಾತ್ರ ಬಂತು. ಅದರಿಂದ ಏನು ಉಪಯೋಗವಾಗಿದೆ ? ಅಧ್ಯಕ್ಷರೇ, ಮೈನಾರಟೀಸ್ ಬಗ್ಗೆ ಇಂಡಿಯಾ ಟುಡೆಯಲ್ಲಿ ಮತ್ತು ವೀಕ್ಲಿ ಮ್ಯಾಗ್ಸೈನ್‌ಗಳಲ್ಲಿ ಸಹ ಬಂದಿದೆ.

ಶ್ರೀ ಜಿ. ಬಸವಣ್ಣಪ್ಪ.—ಮೈನಾರಟೀಸ್‌ಗಾಗಿಯೇ ಒಂದು ಕಾರ್ಪೊರೇಷನ್ ಮಾಡಿದ್ದೇವೆ. ಈ ಕಾರ್ಪೊರೇಷನ್ ೧೯೮೬ ಇಸವಿಯಲ್ಲೇ ಪ್ರಾರಂಭವಾಗಿದೆ. Authorised Share Capital 3 crores, paid up share Capital – 1.10 crores. We have already helped about 18,000 families ಸ್ವಾವಲಂಬನ ಯೋಜನೆಯ ಮೂಲಕ ೨೦೦ ಜನಗಳಿಗೆ ಡ್ರೈವಿಂಗ್ ಬಗ್ಗೆ ಟ್ರೈನಿಂಗ್ ಕೊಟ್ಟಿದ್ದೇವೆ.

ಶ್ರೀ ಎಂ. ಎಲ್. ಉಸ್ತಾದ್.—೨೦೦ ಜನಕ್ಕೆ ಡ್ರೈವಿಂಗ್ ಲೈಸನ್ಸ್ ಕೊಟ್ಟಿದ್ದೇವೆ, ೧೮ ಸಾವಿರ ಜನರಿಗೆ ಸಹಾಯ ಮಾಡಿದ್ದೇವೆಂದು ಮಾತ್ರ ತಾವು ಹೇಳುತ್ತೀರಿ. ಲೋನ್ ಮೇಳದಿಂದ ಲಕ್ಷಾಂತರ ಜನಕ್ಕೆ ಫಾಯಿದೆ (ಲಾಭ) ಆಗಿದೆ ಎಂಬುದು ತಮಗೆ ಗೊತ್ತೇ ? ಅಧ್ಯಕ್ಷರೇ ಇಂಡಿಯಾ ಟುಡೇ ಮತ್ತು ವೀಕ್ಲಿ ಮ್ಯಾಗ್ಸೈನ್‌ಗಳಲ್ಲಿ ಈ ಮೈನಾರಟೀಸ್ ಬಗ್ಗೆ ಬಂದಿದೆ. ಈ ಮ್ಯಾಗ್ಸೈನ್‌ಗಳಲ್ಲಿ ಟಿಪ್ಪು ಸುಲ್ತಾನ್‌ರ ಮೊಮ್ಮಕ್ಕಳು ಏನು ಇದ್ದಾರೆ ಅವರ ಫೋಟೋ ಸಹಿತ ಬಂದಿವೆ. ಒಬ್ಬ ಹುಡುಗ ಸೈಕಲ್ ರಿಕ್ಷಾ ಹೊಡೆಯುತ್ತಿದ್ದಾನೆ. ಇನ್ನೊಬ್ಬ ಹುಡುಗ ಕೆರೋಸಿನ್ ವೆಂಡಾರ್ ಆಗಿದ್ದಾನೆ. Their condition is very pitfable. Why don't you call them to karnataka and see that they are settled...ಟಿಪ್ಪು ಸುಲ್ತಾನರು ಕೋಟ್ಯಾಂತರ ರೂಪಾಯಿಗಳ ಆಸ್ತಿಯನ್ನು ಹೊಂದಿದ್ದರು. ಅಂಥವರ ಮೊಮ್ಮಕ್ಕಳು ಎರಡು ಹೊತ್ತು ಊಟಕ್ಕಾಗಿ ಕಷ್ಟಪಡುವಂತ ಪರಿಸ್ಥಿತಿಯಲ್ಲಿ ಇರುತ್ತಾರೆ. ಇವರು ಪಶ್ಚಿಮ ಬಂಗಾಳದಲ್ಲಿ ಇರುವುದರಿಂದ ನಮ್ಮ ಮಾನ್ಯ ಮುಖ್ಯ ಮಂತ್ರಿಯವರು ಅಲ್ಲಿನ ಮುಖ್ಯ ಮಂತ್ರಿಯವರಾದ ಜ್ಯೋತಿ ಬಸು ಅವರನ್ನು ಕಂಡು ಅವರೊಡನೆ ಸಮಾಲೋಚನೆ ಮಾಡಿ ಟಿಪ್ಪು ಸುಲ್ತಾನರ ಮೊಮ್ಮಕ್ಕಳಿಗೆ ಸಹಾಯ ಮಾಡಬೇಕು. ಅವರು ಕರ್ನಾಟಕ ರಾಜ್ಯಕ್ಕೆ ಬರುವ ಹಾಗಿದ್ದರೆ ಅವರು ಕರ್ನಾಟಕ

ರಾಜ್ಯದಲ್ಲಿ ಸೆಟ್ಲ್ ಆಗುವುದಕ್ಕೆ ಹೆಲ್ಪ್ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ನೀವು ಬರೀ ಶೋ ಮಾಡುವುದು ಬೇಡ. ನಾನು ಇದನ್ನು ಏಕೆ ಹೇಳುತ್ತೇನೆ ಎಂದರೆ, ಮಾನ್ಯ ಮಂತ್ರಿಯವರಾದ ಮೊಯಿನುದ್ದೀನ್‌ರವರು ಸಹ ಫಾರಿನ್‌ಗೆ ಹೋಗಿ ಬಂದರು. ಅಲ್ಲಿಂದ ಅವರು ಟಿಪ್ಪುವಿನ ಫೋಟೋಗಳನ್ನು ತೆಗೆದುಕೊಂಡು ಬಂದಿದ್ದರು. ಬರೀ ಫೋಟೋಗಳನ್ನು ತೆಗೆದುಕೊಂಡು ಬಂದರೆ ಏನು ಫಾಯಿದೆಯೆಂದು ನಾನು ಕೇಳುತ್ತೇನೆ. ಆ ಫೋಟೋಗಳು ಯಾರಿಗೆ ಬೇಕು ? ಟಿಪ್ಪು ಸುಲ್ತಾನರು ಬ್ರಿಟೀಷರ ವಿರುದ್ಧ ಹೋರಾಡಿ ತಮ್ಮ ಜೀವವನ್ನೇ ಬಲಿದಾನ ಮಾಡಿದರು. ಅಂಥವರ ವಂಶಾವಳಿಗೆ ಸೇರಿರುವ ಅವರ ಮೊಮ್ಮಕ್ಕಳು ಇವತ್ತು ಪಿಟಿಯಬಲ್ ಕಂಡೀಷನ್‌ನಲ್ಲಿ ಇರುತ್ತಾರೆ. ಅವರನ್ನು ಕರ್ನಾಟಕ ರಾಜ್ಯಕ್ಕೆ ಕರೆದು ಇಲ್ಲಿ ಅವರು ಸೆಟಲ್ ಆಗುವುದಕ್ಕೆ ತಾವು ಸಹಾಯ ಮಾಡಬೇಕು. ಟಿಪ್ಪು ಸುಲ್ತಾನರ ಫೋಟೋ ತಂದು ಇಡುವುದರಿಂದ ಏನೂ ಪ್ರಯೋಜನವಾಗುವುದಿಲ್ಲ. ಫೋಟೋ ತೋರಿಸುವ ನಾಟಕ ಬೇಡ. ಟಿಪ್ಪು ಸುಲ್ತಾನರು ಮಹಾಪುರುಷರಾಗಿ ಹೋಗಿದ್ದಾರೆ. ಅವರ ಕಡೆಯವರಿಗೆ ಸಹಾಯ ಮಾಡಿದರೆ ಅವರ ಸೋಲ್ (ಆತ್ಮ) ನಿಮಗೆ ಆಶೀರ್ವಾದ ಮಾಡುತ್ತದೆ.

ಶ್ರೀ ಬಿ. ಡಿ. ಬಸವರಾಜು.—ನೀವೇ ಅವರಿಗೆ ಸಹಾಯ ಮಾಡಬಹುದಲವೇ ?

ಶ್ರೀ ಎಂ. ಎಲ್. ಉಸ್ತಾದ್.—ನೀವು ಏನಾದರೂ ಹೇಳುವುದಿದ್ದರೆ ನೀವು ಮಾತನಾಡುವಾಗ ಹೇಳಿ. ಸುಮ್ಮನೆ ಮಧ್ಯದಲ್ಲಿ ಹೇಳಬೇಡಿ.

ಶ್ರೀ ಬಿ. ಡಿ. ಬಸವರಾಜು.—ನಾವು ಮಾತನಾಡುವಾಗ ನೀವು ಸುಮ್ಮನೆ ಕುಳಿತಿರುತ್ತೀರಾ ?

† ಶ್ರೀ ಎಂ. ಎಲ್. ಉಸ್ತಾದ್.—ಮಾನ್ಯ ಅಧ್ಯಕ್ಷರೇ, ಮೈನಾರಟೀಸ್‌ಗೆ ಎಷ್ಟು ಅನ್ಯಾಯ ಆಗಿದೆ ಎಂದು ಹೇಳುತ್ತೇನೆ. ಸರ್ಕಾರದಲ್ಲಿ ನೇಮಕ ಮಾಡಿಕೊಳ್ಳುವ ಕ್ಲಾಸ್ ಫೋರ್ ಸರ್‌ವೆಂಟ್ಸ್‌ಗಳಿಗೆ ಕನ್ನಡ ಪಾಸ್ ಆಗಬೇಕೆಂಬ ರೂಲ್ ಮಾಡಿದ್ದಾರೆ. ಇದರಿಂದ ಮುಸ್ಲೀಮರಿಗೆ ಸರ್ಕಾರದಲ್ಲಿ ಪ್ಯೂನ್ ಕೆಲಸ ಕೂಡ ಸಿಕ್ಕುತ್ತಿಲ್ಲ. ಮೈನಾರಟೀಸ್‌ಗೆ ಅನುಕೂಲ ಮಾಡಿಕೊಡುತ್ತೇವೆಂದು ಇನ್ನೆಷ್ಟು ದಿನ ನೀವು ಸುಳ್ಳು ಹೇಳಿ ಇರುವುದಕ್ಕೆ ಆಗುತ್ತದೆಂದು ನೋಡುತ್ತೇವೆ. ನೀವು ನಾಟಕ ಮಾಡುವುದು ಬೇಡ. ನಿಮ್ಮ ನಾಟಕ ಬಹಳ ದಿವಸ ನಡೆಯುವುದಿಲ್ಲ: ಈ ದಿವಸ ಎಷ್ಟು ಜನ ತಹಶೀಲ್ದಾರ್‌ಗಳು, ಎಷ್ಟು ಜನ ಅಸಿಸ್ಟೆಂಟ್ ಕಮಿಷನರುಗಳು, ಎಷ್ಟು ಜನ ಪೋಲೀಸ್ ಆಫೀಸರ್ಸ್‌ಗಳು ಮೈನಾರಟೀಸ್ ಗುಂಪಿಗೆ ಸೇರಿದವರು ಇದ್ದಾರೆ ? ಬಹಳ ಜನ ಬರೀ ಎಕ್ಸಿಕ್ಯುಟಿವ್ ಫೋರ್ಸ್‌ನಲ್ಲಿ ಇದ್ದಾರೆ ಅಧ್ಯಕ್ಷರೇ. ಮೈನಾರಟೀಸ್ ಬಗ್ಗೆ ಇಷ್ಟು ಹೇಳಿ ಸನ್ಮಾನ್ಯ ಅಧ್ಯಕ್ಷರೇ, ಕರ್ನಾಟಕ ವಕ್ಫ್ ಬೋರ್ಡ್ ಬಗ್ಗೆ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಬಯಸುತ್ತೇನೆ.

5-00ಪಿ.ಎಂ.

ಒಬ್ಬ ಮಾನ್ಯ ಸದಸ್ಯರು.—ಮಾನ್ಯ ಸದಸ್ಯರು ಎಕ್ಸಿಕ್ಯೂಟಿವ್ ಫೋರ್ಸ್‌ನಲ್ಲಿ ಅಲ್ಪಸಂಖ್ಯಾತರು ಯಾರೂ ಇಲ್ಲ ಎಂದು ಹೇಳುತ್ತಿದ್ದಾರೆ. ಅದು ಸತ್ಯಕ್ಕೆ ದೂರವಾದ ವಿಷಯ ನಮ್ಮ ಕೊಪ್ಪಳ ತಾಲ್ಲೂಕಿನಲ್ಲಿ ಇದ್ದಾರೆ. ಹೀಗೆ ತಪ್ಪು ಮಾಹಿತಿಯನ್ನು ಸದನದಲ್ಲಿ ಹೇಳುವುದು ಸರಿಯಲ್ಲ ...

ಶ್ರೀ ಎಂ. ಎಲ್. ಉಸ್ತಾದ್.—ಈ ವಕ್ಫ್ ಬೋರ್ಡ್‌ಗೆ ಛೇರಮನ್‌ರನ್ನು ಇವೊತ್ತಿನವರೆಗೂ ಏತಕ್ಕಾಗಿ ನೇಮಕ ಮಾಡಿಲ್ಲ ? ಏತಕ್ಕಾಗಿ ಅವರನ್ನು ನಾಮಿನೇಟ್ ಮಾಡಿಲ್ಲ ? ಆ ಬಗ್ಗೆ ಚುನಾವಣೆ ಏಕೆ ಆಗಿಲ್ಲ ? ಹೀಗೆ ಮಾಡುವಾಗ ಛೇರ್‌ಮನರು ಎಂತಹ ವ್ಯಕ್ತಿ ಇರಬೇಕು ಎಂಬ ಬಗ್ಗೆ ಗಮನಹರಿಸಬೇಕು. ಛೇರ್‌ಮನ್ ಆಗುವವರು ಪ್ರತಿಯೊಂದು ತಾಲ್ಲೂಕು ಮಟ್ಟದಲ್ಲಿ ಹಾಗೂ ಜಿಲ್ಲಾ ಮಟ್ಟದಲ್ಲಿ ತಿರುಗಾಡಿ ಜನರ ಸಮಸ್ಯೆಗಳು ಏನಿವೆ ಅದನ್ನು ಕೇಳಿಕೊಂಡು ಬರುವವರು ಇರಬೇಕು. ಒಟ್ಟಿಗೆ ನಮ್ಮ ರಾಜ್ಯದಲ್ಲಿ ೨೦ ಸಾವಿರ ವಕ್ಫ್ ಇನ್ಸ್ಟಿಟ್ಯೂಷನ್ಸ್ ಇವೆ ಎಂದು ಹೇಳಿದ್ದಾರೆ. ಅದನ್ನು ನಿಮ್ಮ ವಾರ್ಷಿಕ ವರದಿಯಲ್ಲಿ ಹೇಳಿದ್ದೀರಿ. ಅವರಲ್ಲಿ ೫೩ direct control of the Board ಎಂದು ಹೇಳಿದ್ದಾರೆ, ಅದು ಯಾವುವು ಎಂದು ಈ ಮಾನ್ಯ ಸದನಕ್ಕೆ ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ. Recovery and construction of wakf propeties. ೮೧ ಲಕ್ಷ. ೭೫ ಸಾವಿರದ ೪೨೫ ಪೈಸೆಗಳ ಹಣವನ್ನು ಇನ್ನೂ ರಿಕವರಿ ಮಾಡಿಲ್ಲ. ಸರಕಾರದವರು ಈ ಬಗ್ಗೆ ಏನು

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಕ್ರಮವನ್ನು ತೆಗೆದುಕೊಳ್ಳುತ್ತಾರೆ ಎಂಬ ಬಗ್ಗೆ ತಿಳಿಸಬೇಕು. Recovery and disposal of enquiry cases pending before the Board of wakfs. ಬಗ್ಗೆ ಹೇಳಬೇಕಾಗಿದ್ದರೆ, ೧೯೮೭ನೇ ಇಸವಿಯಲ್ಲಿ ಸುಮಾರು ೪೮ ಕೇಸ್‌ಗಳು ಇದ್ದವು, ಅದರಲ್ಲಿ ೧೭ fresh casesincluided decided 17 penqing is 48 why those cases are pending ? ೧-೪-೧೯೮೭ ರಿಂದ ೩೧-೩-೮೮ರ ವರೆಗೆ ೫೧ ವಕ್ಫ್ ಇನ್‌ಸ್ಟಿಟ್ಯೂಷನ್‌ಗಳಿಗೆ ಸರಕಾರದ ವತಿಯಿಂದ ಫೈನಾನ್ಸಿಯಲ್ ಅಸಿಸ್ಟೆಂಟ್ ಎಷ್ಟು ಕೊಟ್ಟಿದ್ದೀರಿ ಎಂದು ತಿಳಿಸಬೇಕು. Grant in aid ಗೆ ಎಂದು ೬೦ ಲಕ್ಷ ರೂ ೧೯೮೭-೮೮ನೇ ಇಸವಿಯಲ್ಲಿ ಬಜೆಟ್‌ನಲ್ಲಿ ಪ್ರೊವೈಡ್ ಮಾಡಿದ್ದು, ಅದನ್ನು ಸೂಕ್ತರೀತಿಯಲ್ಲಿ ಯುಟಿಲೈಸ್ ಮಾಡಿದ್ದಾರೋ ಇಲ್ಲವೋ ಎಂಬುದರ ಬಗ್ಗೆ ತಿಳಿಸಬೇಕು Maintenance of Grant and Board of wakfsಗಾಗಿ ೧೩ ಲಕ್ಷ ರೂ. ಗಳು ಬಿಡುಗಡೆಯಾಗಿದೆ ಎಂದು ಹೇಳಿದ್ದಾರೆ. ಅದರಲ್ಲಿ ಆಫೀಸ್ ಮೈಂಟೇನೆನ್ಸ್ ಸಲುವಾಗಿ ಎಷ್ಟು ಖರ್ಚು ಮಾಡಿದ್ದೀರಿ ? ವಕ್ಫ್‌ಬೋರ್ಡ್ ಮೆಂಬರ್ಸ್ ಸಲುವಾಗಿ ಎಷ್ಟು ಖರ್ಚು ಮಾಡಿದ್ದೀರಿ ಎಂದು ಹೇಳಬೇಕು. Development of urban wakf properties ಬಗ್ಗೆ ಹೇಳಬೇಕಾಗಿದೆ. ಇಡೀ ನಮ್ಮ ರಾಜ್ಯದಲ್ಲಿ ಬೀದರ್ ಗುಲ್ಬರ್ಗ ಬಿಜಾಪುರ ಜಿಲ್ಲೆಗಳಲ್ಲಿ ವಕ್ಫ್‌ಬೋರ್ಡ್ ಆಸ್ತಿಗಳು ಹೆಚ್ಚಿಗೆ ಇವೆ. ಬಿಜಾಪುರದಲ್ಲಿ ೩೦೦ ವರ್ಷಗಳಿಂದ ಆ ವಕ್ಫ್‌ಬೋರ್ಡ್ ಆಸ್ತಿಯಲ್ಲಿ ಯಾರೂ ಜನರು ಇರುತ್ತಿದ್ದರೋ ಅವರನ್ನು ಇವೊತ್ತು ಹೊಡೆದು ಹೊರಗೆ ಹಾಕಿಬಿಟ್ಟಿದ್ದಾರೆ. ಹೀಗೆ ಬೋರ್ಡ್‌ನವರು ಯಾವುದೇ ಪ್ರಾಪರ್ಟಿ ಬಗ್ಗೆ ವಿಚಾರಣೆ ಮಾಡುವುದಕ್ಕಿಂತ ಮೊದಲು ಅಲ್ಲಿಯ ಲೋಕಲ್ ವ್ಯಕ್ತಿಗಳನ್ನು ಕೇಳಿ ತಿಳಿದುಕೊಳ್ಳಬೇಕು. ಒಂದುವೇಳೆ ಆ ಜನರು ಸರಿಯಾಗಿ ಮ್ಯಾನೇಜ್‌ಮೆಂಟ್ ಮಾಡುತ್ತಿಲ್ಲವಾದಲ್ಲಿ ಮಾತ್ರ ಅಂತಹವರನ್ನು ಹೊರಗೆ ಹಾಕಬೇಕು. ಈ ಒಂದು ವಿಷಯದಲ್ಲಿ ನಮ್ಮ ಡಿಸ್ಟ್ರಿಕ್ಟ್ ವಕ್ಫ್ ಮುತುವಲ್ಲಿಯವರಾದ ಶ್ರೀ ಮಣಿಯಾರ್ ರವರು ಕೂಡ ಪೆಟ್ಟು ತಿಂದು ಆಸ್ಪತ್ರೆಯಲ್ಲಿ ಇದ್ದರು. ಅಂತಹ ಒಂದು ಕೆಲಸವನ್ನು ತಾವು ಮಾಡಬಾರದು. ಈ ಕುರಿತು ಬೋರ್ಡ್‌ನವರಿಗೆ ಸರಿಯಾದ ಡೈರೆಕ್ಷನ್ಸ್ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ

ಇದೇ ಸದನದಲ್ಲಿ ಮಾನ್ಯ ಎಂ. ಎಸ್. ಪಾಟೀಲ್‌ರವರು ಎರಡು ವರ್ಷಗಳ ಹಿಂದೆ ವಕ್ಫ್‌ಪ್ರಾಪರ್ಟಿ ಬಗ್ಗೆ ಅಲ್ಲಿ ಮಿಸ್‌ಯೂಸ್ ಆಗುತ್ತಿರುವ ಬಗ್ಗೆ ವಿಚಾರಣೆ ನಡೆಸಬೇಕು, ಒಂದು ಕಮಿಷನ್ ನೇಮಕ ಮಾಡಬೇಕು ಎಂದು ಹೇಳಿದಾಗ ಒಬ್ಬ ಹೈಕೋರ್ಟ್ ಜಡ್ಜ್‌ರವರನ್ನು ಕಮಿಷನ್‌ಗೆ ನೇಮಿಸಿ ವಿಚಾರಣೆ ಮಾಡಿಸುತ್ತೇವೆ ಎಂದು ಮಾನ್ಯ ನಜೀರ್‌ಸಾಬ್‌ರವರು ಹೇಳಿದ್ದರು. ಅದರೆ ಇದುವರೆಗೆ ಯಾವುದೇ ಕಮೀಷನ್ ಆಗಲಿ, ವಿಚಾರಣೆಯಾಗಲಿ ಆಗಲಿಲ್ಲ. ಈ ಬಗ್ಗೆ ಒಂದು ಸ್ಪಷ್ಟವಾದ ಹೇಳಿಕೆಯನ್ನು ಸದನದ ಮುಖಾಂತರ ಜನರಿಗೆ ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಕರ್ನಾಟಕ ಸ್ಟೇಟ್ ಹಜ್ ಕಮಿಟಿ ಬಗ್ಗೆ ಹೇಳಬೇಕಾದರೆ, ಈ ವರ್ಷ ಥ್ರೂ ಸೀ ಹೋಗುವವರು ೨೨೭ ಔಟಾಫ್ ೯೩೧, ಥ್ರೂ ಏರ್ ಹೋಗುವವರು ೯೯೨ ಔಟಾಫ್ ೧೦೫೪. ಇದರಲ್ಲಿ ಏನಾಗುತ್ತದೆಂದರೆ ದುಡ್ಡಿದ್ದವರೇ ಹೋಗುತ್ತಾರೆ. ಯಾರು ಮನೆಯಲ್ಲಿ ಫೈನಾನ್ಸಿಯಲಿ ಚಲೋ ಇದ್ದಾರೋ ಅವರೂ ಹೋಗುವುದಕ್ಕೆ ಸಾಧ್ಯವೇ ಹೊರತು ಯಾರು ಬಡವರಿದ್ದಾರೆ ಸಮಾಜದೊಳಗೆ ಒಳ್ಳೆ ವ್ಯಕ್ತಿ ಇದ್ದಾರೆ ಅವರು ಅವರು ಹೋಗುವುದು ಸಾಧ್ಯವಾಗುತ್ತಿಲ್ಲ. ಇದರ ಬಗ್ಗೆ ಸರ್ಕಾರದ ವತಿಯಿಂದ ಏನಾದರೂ ಸಹಾಯ ಮಾಡಿ ಕಳಿಸುವುದಕ್ಕೆ ಯೋಜನೆ ಹಾಕಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಅಧ್ಯಕ್ಷರೇ ಬಾಂಬೆಯಲ್ಲಿ ಯಾರು ಹಜ್‌ಗೆ ಹೋಗುತ್ತಾರೋ ಅವರಿಗಾಗಿ ಕಟ್ಟಿರುವಂತೆ ಅವರಂತೆ ಕಟ್ಟಡ ಕಟ್ಟಲು ೬-೧೦-೮೭ರಂದು ೩೦ ಲಕ್ಷ ರೂ.ಗಳ ಪ್ರಪೋಸಲ್ ಮಾಡಿ ಕಟ್ಟಡ ಕಟ್ಟಿಸುದಾಗಿ ಹೇಳಿದ್ದೀರಿ: What is total estimate of this building and how much amount has been spent and how much of amount already released when it will be completed ಎಂಬುದನ್ನು ಈ ಸದನದ ಮುಖಾಂತರ ರಾಜ್ಯದ ಮುಸ್ಲಿಂ ಜನಾಂಗಕ್ಕೆ ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ, ನಿಮ್ಮ ಪೋಲೀಸ್ ಇಲಾಖೆ ಬಗ್ಗೆ ಕೆಲವೊಂದು ಮಾತನ್ನು ಆಡುತ್ತೇನೆ. ನಮ್ಮ ಪೋಲೀಸರ ಸೈಜ್, ಅವರ ಹೊಟ್ಟೆ, ಡ್ರೆಸ್ ಎಲ್ಲಾ ನೋಡಿದರೆ ಅವರು ಸೀಟಿ ಊದಿ ಹೋಗುವುದರೊಳಗೆ ಕ್ರಿಮಿನಲ್ ಓಡಿಬಿಟ್ಟಿರುತ್ತಾನೆ. ಆಫೀಸರ್‌ಗಳು ಜೀಪ್ ಸ್ಟಾರ್ಟ್ ಮಾಡಬೇಕಾದರೆ ಹತ್ತಾರು ಮಂದಿ ತಳ್ಳಬೇಕು, ಅದು ಸ್ಟಾರ್ಟ್ ಆಗುವುದರಲ್ಲಿ ಕ್ರಿಮಿನಲ್ ಓಡಿಹೋಗಿರುತ್ತಾನೆ. ಈ ಇಲಾಖೆಯಿಂದಲೂ ಕ್ರೈಮ್ಸನ್ನು ತಡೆಯಲು ಆಗಿಲ್ಲ. ಹೀಗೇಕೆ ಆಯಿತು ? ನಿಜವಾಗಿ ಅವರಿಗೆ ಏನೇನು ಫೆಸಿಲಿಟಿ ಕೊಡಬೇಕೋ ಅವೆಲ್ಲಾ ಸರ್ಕಾರದ ವತಿಯಿಂದ ಲಭ್ಯವಾಗಬೇಕು. ಇದಕ್ಕೆ ಒಂದೇ ಉತ್ತರ ನಿಮ್ಮದು ಅದೇನೆಂದರೆ ಫೈನಾನ್ಸಿಯಲ್ ಕ್ರೈಸಿಸ್, ಅಂತ ಎಷ್ಟು ದಿವಸ ಅದು, ಯಾವಾಗ ಹೋಗುತ್ತದೆ ? ಏನಾದರೂ ದುರ್ಭಾವ ಕಲಿಯಬೇಕೆನ್ನುವವರು

ಡಿಕ್ಷನರಿ ಮಾಡಬೇಕೆನ್ನುವವರು ಪೋಲೀಸರಲ್ಲಿಗೆ ಹೋಗಬೇಕು. ಅಧ್ಯಕ್ಷರೇ, ಇಡೀ ರಾಜ್ಯದಲ್ಲಿ ಪೋಲೀಸ್ ಇಲಾಖೆಗೆ ಆಂಬ್ಯುಲೆನ್ಸ್ ಎಷ್ಟಿದೆ ಎಂದರೆ ಮೂರು ಇವೆ. ಎಲ್ಲಾದರೂ ಒಂದು ಕೊಲೆ ಆಯಿತು ಎಂದರೆ ಅವರು ಪಾಪ ಬಾಡಿಗೆ ವಾಹನದ ಮೇಲೆ ಹೋಗಬೇಕು. ಆದ್ದರಿಂದ ಕನಿಷ್ಠ ಒಂದು ಜಿಲ್ಲೆಗಾದರೂ ಒಂದರಂತೆ ಆಂಬ್ಯುಲೆನ್ಸ್ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಮಳೆ ಬಂದಾಗ ಕಪ್ಪೆಗಳು ಹೇಗೆ ರೊಕ್ ರೊಕ್ ಎಂದು ನೀರು ಬರಲಿ ಮಳೆ ಬರಲಿ ಎಂದು ಒದರುವಂತೆ ಪೋಲೀಸರು ರೊಕ್ಕ ರೊಕ್ಕ ಎಂದು ಒದರುತ್ತಾರೆ. ಅಧ್ಯಕ್ಷರೇ ಈ ಆನ್ಯುಯಲ್ ರಿಪೋರ್ಟ್‌ನಲ್ಲಿ ಮಾನ್ಯ ಮಲ್ಲಾರಿಗೌಡ ಪಾಟೀಲರು ಸಂಕೇಶ್ವರದಲ್ಲಿ ಐದಾರು ದಿವಸ ಉಪವಾಸ ಮಾಡಿದ್ದರ ಬಗ್ಗೆ ಒಂದು ಶಬ್ದವೂ ಇಲ್ಲ. ಯಾವ ಜನರ ಸಲುವಾಗಿ ಹೋರಾಟ ಮಾಡಿ ಆಪತ್ತಿನಲ್ಲಿದ್ದ ೭೦ ಜನರ ಜೀವ ಉಳಿಸಿದರೋ ಅವರ ಬಗ್ಗೆ ಒಂದು ಶಬ್ದವೂ ಇಲ್ಲ. ಅಟ್‌ಲೀಸ್ಟ್ ಒಂದು ರೆಫರೆನ್ಸ್ ಆದರೂ ಕೊಡಬೇಕಾಗಿತ್ತು. ಇಂತಹ ವರದಿ ಏಕೆ ಬೇಕು ? ನಾನು ತಮ್ಮನ್ನು ಕೇಳಿಕೊಳ್ಳುತ್ತೇನೆ ಅಟ್‌ಲೀಸ್ಟ್ ಶಾಸಕರು ಇಂತಹ ಒಂದು ಕೆಲಸ ಮಾಡಿದಾಗ ಅವರ ಬಗ್ಗೆ ಸಹಾನುಭೂತಿಯಿಂದ ಈ ವರದಿಯಲ್ಲಿ ನಮೂದು ಮಾಡಬೇಕು. ಮುಂದಿನ ಸಲ ಇದನ್ನು ಮಾಡಿ. ಹಿಂದೆ ಮಾನ್ಯ ಮುಖ್ಯ ಮಂತ್ರಿಗಳು ತಾಲ್ಲೂಕುಗಳಲ್ಲಿ ಪ್ರವಾಸ ಮಾಡುತ್ತೇನೆ ಹಾಗೂ ರಾಜ್ಯದಲ್ಲಿ ಪ್ರವಾಸ ಮಾಡುತ್ತೇನೆಂದು ಹೇಳಿದರು. ಎಷ್ಟು ತಾಲ್ಲೂಕಿನಲ್ಲಿ ತಿರುಗಾಡಿದ್ದೀರಿ ? ಸುಳ್ಳು ಏಕೆ ಹೇಳುತ್ತೀರಿ ! ಎಷ್ಟು ಕೆಲಸ ಮಾಡಲು ಸಾಧ್ಯವಾಗುತ್ತದೆಯೋ ಅಷ್ಟನ್ನು ಹೇಳಬೇಕು ಅದು ಬಿಟ್ಟು ಇದು ಮಾಡುತ್ತೇವೆ ಅದು ಮಾಡುತ್ತೇವೆಂದು ಹೇಳಬಾರದು. ಮತ್ತು ಎಲ್ಲಿ ಗಲಭೆಯಾಗುತ್ತದೆ ಎಲ್ಲಿ ತೊಂದರೆಗಳಾಗುತ್ತವೆ ಅಲ್ಲಿಗೆ ಹೋಗಿ ಅದನ್ನು ಪರಿಹರಿಸಲಿಕ್ಕೆ ತಾವು ಕಾರಣೀಭೂತರಾಗದ ಹೊರತಾಗಿ ನಾವು ಅದನ್ನು ಮಾಡುತ್ತೇವೆ ಇದನ್ನು ಮಾಡುತ್ತೇವೆಂದು ಹೇಳುವುದು ಸರಿಯಲ್ಲ. ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಈಗ ನಿಯಮ ೬೯ರ ಪ್ರಕಾರ ಅಲ್ಪಕಾಲವಧಿ ಚರ್ಚೆ.

ನಿಯಮ ೬೯ರ ಮೇರೆಗೆ ಅಲ್ಪ ಕಾಲಾವಧಿ ಚರ್ಚೆ

ರೇವಜೀತ್ ಬಿಲ್ಡರ್ಸ್ ಸಂಸ್ಥೆಯವರು ಬೆಂಗಳೂರಿನ ಜಯನಗರದಲ್ಲಿ ಕಡಿಮೆ ಬೆಲೆ ತೋರಿಸಿ ಜಮೀನು ಖರೀದಿ ಮಾಡಿ ಸರ್ಕಾರೀ ಬೊಕ್ಕಸಕ್ಕೆ ನಷ್ಟ ಉಂಟು ಮಾಡಿರುವ ಬಗ್ಗೆ

† ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಮಾನ್ಯ ಅಧ್ಯಕ್ಷರೇ, ನಾವು ಅಡ್ಜರ್ನ್‌ಮೆಂಟ್ ಮೋಷನ್‌ಗೆ ನೋಟೀಸ್ ಕೊಟ್ಟಿದ್ದು ತಾವು ಅದನ್ನು ನಿಯಮ ೬೯ಕ್ಕೆ ಕನ್‌ವರ್ಟ್ ಮಾಡಿ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಿ ತಮಗೆ ಧನ್ಯವಾದಗಳು. ಇದು ಒಂದು ಪಬ್ಲಿಕ್ ಇಂಟರೆಸ್ಟ್‌ಗೆ ಸಂಬಂಧಪಟ್ಟ ವಿಷಯವಾದುದರಿಂದ ಮತ್ತು ಈ ವಿಚಾರ ಸ್ವಲ್ಪ ಗಡಿಬಿಡಿಯಾಗಿರುವುದರಿಂದ ಇದಕ್ಕೆ ಇಷ್ಟೊಂದು ಇಂಪಾರ್ಟೆನ್ಸ್ ಬಂದಿದೆ. ರೇವಜೀತ್ ಎನ್ನುವ ಕಂಪನಿ. ಬೆಂಗಳೂರು ಸೌತ್ ತಾಲ್ಲೂಕು, ದಾಸರಹಳ್ಳಿ ವಿಲೇಜ್ ಜಯನಗರದ ಹತ್ತಿರ ಏನು ಭೂಮಿಯನ್ನು ಕೊಂಡು ಕೊಂಡಿದೆ ಸರ್ವೆ ನಂ. ೬/೧ ಮತ್ತು ಸರ್ವೆ ನಂ, ೬/೨ ಮೊಹರ್‌ಮೆಂಟ್ ೫, ೨೪. ನಾರಾಯಣಸ್ವಾಮಿ ಅಂಡ್ ಸನ್ಸ್ ಎಂಬುವವರಿಂದ ಜಯನಗರ ಸೌತ್ ಎಂಡ್ ಸರ್ಕಲ್‌ನಲ್ಲಿರತಕ್ಕಂತಹ ರೆವಿನ್ಯೂ ಲ್ಯಾಂಡ್ ಅನ್ನು ಕೊಂಡು ಕೊಂಡಿದ್ದಾರೆ. It was sold and registered on 30th September 1987 after office hours. ಅದಕೋಸ್ಕರ ಇದಕ್ಕೆ ಇಷ್ಟೊಂದು ಮಹತ್ವ ಬಂದಿರುವುದು. ಇದನ್ನು ಕೊಂಡು ಕೊಂಡಿರುವವರು ಯಾರು ಎಂದರೆ ರೇವಜೀತ್ ಬಿಲ್ಡರ್ಸ್ ಅಂಡ್ ಡೆವಲಪರ್ಸ್. Executed by Smt: Shobha Makheeja *i. e.* the sister of the first son-in-law of the Chief Minister.

SRI VEDANTA HEMMIGE.—I am on a point of order. Allow me to raise my point of order. Point allow me to speak. A writ petition has been filed before the Karnataka High Court.

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.